₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಭಾನುವಾರ 04.08.2024 ಸಂಪುಟ: 67 ಸಂಚಿಕೆ: 88 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಮನು ಹ್ಯಾಟ್ರಿಕ್ ಪದಕ ಕನಸು ಭಗ್ನ

ಶನಿವಾರ ನಡೆದ ಮಹಿಳೆಯರ 25 ಮೀಟರ್ ಪಿಸ್ತೂಲ್ ಫೈನಲ್‌ನಲ್ಲಿ ಒಟ್ಟು 28 ಅಂಕಗಳೊಂದಿಗೆ ಮನು ಭಾಕರ್ ನಾಲ್ಕನೇ ಸ್ಥಾನ ಗಳಿಸಿ ಅಲ್ಪ ಅಂತರದಲ್ಲೇ ಪದಕ ಕಳೆದುಕೊಂಡಿದ್ದಾರೆ. ಮೊದಲ ಸುತ್ತಿನ ನಂತರ ಎರಡನೇ ಸ್ಥಾನದಲ್ಲಿದ್ದ ಭಾಕರ್, ಟಾಪ್3 ನಲ್ಲಿ ಉಳಿಯಲು ಶೂಟ್-ಆಫ್‌ಗೆ ಹೋದರು. ಆದರೆ ಹಂಗೇರಿಯ ಶೂಟರ್ ವೆರೋನಿಕಾ ಮೇಜರ್, ಮನು ಭಾಕರ್ ಅವರನ್ನು ಹಿಂದಿಕ್ಕಿ ಕಂಚಿನ ಪದಕ ಗೆದ್ದರು.

ಪುಟ ತೆರೆದಂತೆ...

ಸುರಿಯುವ ಎಲ್ಲ ಧಾರಾಕಾರ ಮಳೆಯೂ ಕುಂಭದ್ರೋಣವಲ್ಲ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ರಕ್ಷಣಾ ವಲಯದಲ್ಲಿ ಆತ್ಮನಿರ್ಭರದ ಅನಿವಾರ್ಯತೆ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು

ನಮ್ಮ ಪಕ್ಷದ ಹೈಕಮಾಂಡ್ ಒಂದೋ ವಿಜಯೇಂದ್ರ ವಿರುದ್ಧ ಕ್ರಮ ಕೈಗೊಳ್ಳಲಿ. ಇಲ್ಲಾ ನಮ್ಮ ವಿರುದ್ಧವಾದರೂ ಕ್ರಮ ಕೈಗೊಳ್ಳಲಿ. ಅಪ್ಪ-ಮಕ್ಕಳ ವಿರುದ್ಧ ಬಿಜೆಪಿಯ ಶೇ. 90ರಷ್ಟು ಕಾರ್ಯಕರ್ತರು ಆಕ್ರೋಶಭರಿತ ರಾಗಿದ್ದಾರೆ. ಕುಮಾರ ಸ್ವಾಮಿ ಮಾನ ಮರ್ಯಾದೆ ಹೋಗಲು ಕಾರಣನೇ ವಿಜಯೇಂದ್ರ. ಪೆನ್ ಡ್ರೈವ್ ಮಾಡಿ ಹಂಚಿದ್ದೇ ವಿಜಯೇಂದ್ರ. ನೆಪಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದಾರೆ. ಇನ್ನೊಂದು ವಾರದಲ್ಲಿ ಅಸಮಾಧಾನಿತರ ಸಭೆ ನಡೆಸಿ, ನಾವು ಮತ್ತೆ ಸಭೆ ಸೇರ್ತಿವಿ.

ಬಸನಗೌಡ ಪಾಟೀಲ್ ಯತ್ನಾಳ್
ಬಿಜೆಪಿ ಶಾಸಕ

ದಾರಿದೀಪೋಕ್ತಿ

ಕೆಲವರು ಜೀವನದಲ್ಲಿ ಯಶಸ್ಸು ಸಾಧಿಸುವ ಕನಸು ಕಾಣುತ್ತಾರೆ. ಇನ್ನು ಕೆಲವರು ಎಚ್ಚರವಾಗಿದ್ದು ತಾವು ಕಂಡ ಕನಸನ್ನು ನನಸು ಮಾಡುತ್ತಾರೆ. ಕನಸು ಕಾಣುವುದು ಮುಖ್ಯವಲ್ಲ, ಆದರೆ ಅದನ್ನು ನನಸು ಮಾಡುವುದು ಮುಖ್ಯ.

ವಕ್ರತುಂಡೋಕ್ತಿ

ಕೆಲವರಿಗೆ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ಬರುವುದಿಲ್ಲ. ಅಂಥವರು ಪಿಜ್ಜಾ ಆರ್ಡರ್ ಮಾಡ್ತಾರೆ.

ಎಕ್ಸ್‌ಪ್ರೆಸ್ ರೈಲುಗಳಿಗೆ ಸಾಮಾನ್ಯ ಬೋಗಿ ಹೆಚ್ಚಳ

ದೆಹಲಿ: ಕೋಟ್ಯಂತರ ರೈಲು ಪ್ರಯಾಣಿಕರಿಗೆ ಸಂತಸ ಸುದ್ದಿಯನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಲೋಕಸಭೆಯಲ್ಲಿ ಶನಿವಾರ ಪ್ರಕಟಿಸಿದ್ದಾರೆ. ದೇಶದ ವಿವಿಧೆಡೆ ಸಂಚರಿಸುತ್ತಿರುವ ಎಕ್ಸ್‌ಪ್ರೆಸ್ ರೈಲುಗಳಿಗೆ ಕೆಲವೇ ತಿಂಗಳಲ್ಲಿ 2500 ಸಾಮಾನ್ಯ ಬೋಗಿಗಳನ್ನು ಅಳವಡಿಸಲು ರೈಲ್ವೆ ಇಲಾಖೆ ಸಿದ್ಧತೆ ನಡೆಸಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಭಾರತೀಯ ರೈಲ್ವೆ ಸಾಮಾನ್ಯ ಬೋಗಿಗಳ ಸಂಖ್ಯೆಯನ್ನು ಹೆಚ್ಚಿಸಲಿದೆ.

ಆಡಿ ಕಾರು ಮರಕ್ಕೆ ಡಿಕ್ಕಿ 3 ವಿದ್ಯಾರ್ಥಿಗಳ ದುರ್ಮರಣ

ಕೋಲಾರ: ನಗರದ ಹೊರವಲಯದಲ್ಲಿ ಶನಿವಾರ ಮುಂಜಾನೆ ಸಂಭವಿಸಿದ ಆಡಿ ಕಾರು ಅಪಘಾತದಲ್ಲಿ ಮೂವರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಹಾಸನದ ಹರ್ಷವರ್ಧನ್(21), ಬಳ್ಳಾರಿ ಬಸವರಾಜ್(21), ಬಂಗಾರಪೇಟೆ ಪ್ರಜ್ವಲ್(21) ಮೃತರು. ಬಂಗಾರಪೇಟೆ ಗಗನ್(21) ಅಪಘಾತದಿಂದ ಪಾರಾಗಿದ್ದು ಸಣ್ಣಪುಟ್ಟ ಗಾಯಗಳಾಗಿವೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ತನ್ನ ಟೊಮೆಟೊ ತೋಟಕ್ಕೆ ಯಾರ ದೃಷ್ಟಿ ಬೀಳ ಬಾರದೆಂದು ನಟಿಯರ ಫೋಟೋ ಹಾಕಿದ ರೈತ
ಸುದ್ದಿ



ಗೊಂದಲದ ನಡುವೆಯೇ ಬಿಜೆಪಿ-ಜೆಡಿಎಸ್ ಮೈಸೂರು ಚಲೋ ಪಾದಯಾತ್ರೆಗೆ ಚಾಲನೆ । ಬಿಎಸ್‌ವೈ, ಎಚ್‌ಡಿಕೆ, ಜೋಷಿ ಸೇರಿ ಹಿರಿಯ ನಾಯಕರು ಭಾಗಿ । ಮೈಸೂರು ರಸ್ತೆಯಲ್ಲಿ ಟ್ರಾಫಿಕ್ ಜಾಮ್ । ಯತ್ನಾಳ್, ಜಾರಕಿಹೊಳಿ ಸೇರಿ ಭಿನ್ನರ ಗೈರು

ಸರಕಾರದ ವಿರುದ್ಧ ದೋಸ್ತಿಗಳ ರಣಕಹಳೆ

ಬೆಂಗಳೂರು: ಸ್ವಪಕ್ಷೀಯರ ವಿರೋಧ, ದೋಸ್ತಿಗಳಲ್ಲಿನ ಗೊಂದಲ ಸೇರಿದಂತೆ ಹಲವು ಸವಾಲುಗಳ ಹೊರತಾಗಿಯೂ, ಮುಡಾ, ವಾಲ್ಮೀಕಿ ಹಗರಣ ಸೇರಿ ವಿವಿಧ ಆರೋಪಗಳನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ- ಜೆಡಿಎಸ್ ಮೈತ್ರಿಕೂಟ ಆರಂಭಿಸಿರುವ ಮೈಸೂರು ಚಲೋಗೆ ಶನಿವಾರ ಕೆಂಗೇರಿಯಲ್ಲಿ ಚಾಲನೆ ನೀಡಿದ್ದು, ಮೊದಲ ದಿನದ ಪಾದಯಾತ್ರೆ ಯಶಸ್ವಿಯಾಗಿ ಪೂರ್ಣಗೊಂಡು, ಬಿಡದಿಯಲ್ಲಿ ಮೈತ್ರಿ ನಾಯಕರು ವಾಸ್ತವ್ಯ ಹೂಡಿದ್ದಾರೆ.

ಶನಿವಾರ ಬೆಳಗ್ಗೆ ಕೆಂಗೇರಿ ಬಳಿಕ ಕಹಳೆ ಊದಿ, ನಗಾರಿ ಬಾರಿಸುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ಅಪಸ್ವರದ ನಡುವೆಯೂ ಜೆಡಿಎಸ್‌ನಿಂದ ಕೇಂದ್ರ ಸಚಿವ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಪ್ರಮುಖ ನಾಯಕರು ಉದ್ಘಾಟನೆಯಲ್ಲಿ ಭಾಗವಹಿಸಿದ್ದರು. ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ಅವರು ತುಸು ದೂರ ನಡೆದು ನಗರಕ್ಕೆ ಹಿಂತಿರುಗಿದರು. ಬಿಜೆಪಿ ರಾಜ್ಯಾಧ್ಯಕ್ಷ ವಿ.ವೈ . ವಿಜಯೇಂದ್ರ, ಪ್ರತಿಪಕ್ಷ ನಾಯಕ ಆರ್. ಅಶೋಕ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವರು ಸುಮಾರು 12ರಿಂದ 13 ಕಿಮೀ ಪಾದಯಾತ್ರೆಯನ್ನು ಪೂರ್ಣಗೊಳಿಸಿದರು. ಶನಿವಾರದಿಂದ ಆರಂಭವಾಗಿರುವ ಮೈಸೂರು ಚಲೋ ಪಾದಯಾತ್ರೆ ಒಟ್ಟು 8 ದಿನಗಳ ಕಾಲ ನಡೆಯಲಿದ್ದು, ಆ. 10 ರಂದು ಮೈಸೂರಿನಲ್ಲಿ ಪಾದ ಯಾತ್ರೆಯ ಸಮಾರೋಪ ನಡೆಯಲಿದೆ.

ಮೊದಲ ದಿನದ ಮೈಸೂರು ಚಲೋ ಪಾದಯಾತ್ರೆಯಲ್ಲಿ ಬಿಜೆಪಿ-ಜೆಡಿಎಸ್‌ನ ಎಲ್ಲ ಶಾಸಕರು, ಸಂಸದರು, ಮುಖಂಡರು. ಕಾರ್ಯಕರ್ತರು ಉತ್ಸಾಹದಿಂದ ಹೆಜ್ಜೆ ಹಾಕಿದ್ದು, ಮೊದಲ ದಿನ ಪಾದಯಾತ್ರೆ 16 ಕಿ.ಮೀ ಕ್ರಮಿಸಿ ಬಿಡದಿ ತಲುಪಲಿದ್ದು, ಅಲ್ಲಿಯೇ ವಾಸ್ತವ್ಯ ಹೂಡಿದ್ದಾರೆ. → 4



ಬಿಜೆಪಿ- ಜೆಡಿಎಸ್ ಮೈತ್ರಿಕೂಟ ಆರಂಭಿಸಿರುವ ಮೈಸೂರು ಚಲೋಗೆ ಶನಿವಾರ ಬೆಳಗ್ಗೆ ಕೆಂಗೇರಿ ಬಳಿ ಹಿರಿಯ ನಾಯಕರು ಚಾಲನೆ ನೀಡಿದರು.

- ಪಾದಯಾತ್ರೆಯಲ್ಲಿ ಸರಕಾರದ ವಿರುದ್ಧ ಧಿಕ್ಕಾರದ ಘೋಷಣೆ
- ಕೆಂಗೇರಿ ಕೆಂಪಮ್ಮದೇವಿ ದೇಗುಲದಿಂದ ಪಾದಯಾತ್ರೆಗೆ ಚಾಲನೆ
- ಚಾಮುಂಡಿ ಬೆಟ್ಟದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ವಿಶೇಷ ಪೂಜೆ
- ಜಿಟಿ-ಜಿಟಿ ಮಳೆಯ ನಡುವೆ ಉತ್ಸಾಹದಿಂದ ಹೆಜ್ಜೆಹಾಕಿದ ದೋಸ್ತಿ ನಾಯಕರು
- ಅನಾರೋಗ್ಯದ ಕಾರಣಕ್ಕೆ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕದ ಕುಮಾರಸ್ವಾಮಿ
- 'ನಾವು ಉರಿಗೌಡ; ನಂಜೇಗೌಡ' ಎಂದು ಹೇಳುತ್ತಾ ಒಟ್ಟಿಗೆ ನಡೆದ ಅಶೋಕ್, ಅಶ್ವತ್ಥನಾರಾಯಣ
- ಮೈಸೂರು ರಸ್ತೆಯಲ್ಲಿ ಭಾರಿ ಸಂಚಾರ ದಟ್ಟಣೆ, ವಾಹನ ಸವಾರರ ಪರದಾಟ
- ಪಾದಯಾತ್ರೆ ಮಾರ್ಗದುದ್ದಕ್ಕೂ ಬ್ಯಾನರ್, ಬಂಟಿಂಗ್ಸ್‌ಗಳ ಭರಾಟೆ

ಅತೃಪ್ತರ ಗೈರು

ಪಾದಯಾತ್ರೆಗೂ ಮೊದಲೇ ಬಿಜೆಪಿಯಲ್ಲಿ ಭಿನ್ನಮತ ಕಾಣಿಸಿಕೊಂಡಿದೆ. ವಿಜಯೇಂದ್ರ ವಿರುದ್ಧ ಕಿಡಿಕಾರುತ್ತಿರುವ ಸ್ವಪಕ್ಷೀಯರೂ, ಪಾದಯಾತ್ರೆಯಿಂದ ದೂರ ಉಳಿದರು. ಬಹಿರಂಗವಾಗಿಯೇ ವಿಜಯೇಂದ್ರ ಅವರನ್ನು ಟೀಕಿಸಿದ್ದ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ್ ಜಾರಕಿಹೊಳಿ, ಅರವಿಂದ ಲಿಂಬಾವಳಿ, ಕುಮಾರ್ ಬಂಗಾರಪ್ಪ, ಎಸ್.ಟಿ. ಸೋಮಶೇಖರ್ ಗೈರುಹಾಜರಾಗುವ ಮೂಲಕ ಅಂತರ ಕಾಯ್ದುಕೊಂಡರು.

ರಾಮನಗರದಲ್ಲಿ ಜನಾಂದೋಲನ, ದೋಸ್ತಿಗಳ ವಿರುದ್ಧ ಡಿಕೆಶಿ ವಾಗ್ದಾಳಿ

ಯಾತ್ರೆ ವಿರುದ್ಧ ಕೈ ಆಂದೋಲನ

ಬೆಂಗಳೂರು: ರಾಜ್ಯ ಸರಕಾರದ ವಿರುದ್ಧ ತೊಡೆತಟ್ಟಿ ಬಿಜೆಪಿ-ಜೆಡಿಎಸ್ ನಾಯಕರು ಆರಂಭಿಸಿರುವ ಪಾದಯಾತ್ರೆಗೆ ಪ್ರತಿಯಾಗಿ ಕಾಂಗ್ರೆಸ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ರಾಮನಗರದಲ್ಲಿ ಜನಾಂದೋಲನ ಕಾರ್ಯಕ್ರಮ ನಡೆಸಿ ದೋಸ್ತಿ ನಾಯಕರ ವಿರುದ್ಧ ಸಮರ ಸಾರಿದೆ. ಜನಾಂದೋಲನ ಸಭೆಯಲ್ಲಿ ದೋಸ್ತಿಗಳ ವಿರುದ್ಧ ವಾಗ್ದಾಳಿ ನಡೆಸಿದ ಡಿ.ಕೆ.ಶಿವಕುಮಾರ್, ಬಿಜೆಪಿ-ಜೆಡಿಎಸ್ ನಾಯಕರಿಗೆ ಭ್ರಷ್ಟಾಚಾರವೇ ತಾಯಿ ತಂದೆ, ಭ್ರಷ್ಟಾಚಾರವೇ ಬಂಧು ಬಳಗ, ಭ್ರಷ್ಟಾಚಾರ ಮಾಡಿರುವ ನಿಮ್ಮನ್ನು ಮೆಚ್ಚನಾ ಪರಮಾತ್ಮನು ಎಂದು ವಾಗ್ದಾಳಿ ನಡೆಸಿದರು.

''ನಾನು ಶುಕ್ರವಾರ ಬಿಡದಿಯಲ್ಲಿ ಬೇಕಂತಲೇ ಕುಮಾರಸ್ವಾಮಿ ಅವರಿಗೆ ಕೆಲವು ಪ್ರಶ್ನೆ ಕೇಳಿದೆ. ನನ್ನನ್ನು ಜೈಲಿಗೆ ಹಾಕಲು ಮಿಲಿಟರಿ ಬಂದು ಕರೆದುಕೊಂಡು ಹೋಗಲಿದೆ ಎಂದು ಕುಮಾರಸ್ವಾಮಿ ಅವರು ಹಿಂದೆ ಹೇಳಿಕೆ ನೀಡಿದ್ದರು. ನಾನು ಕೇಂದ್ರ ಮಂತ್ರಿಯಾಗಿದ್ದು, ನಿಮ್ಮನ್ನು ತಿಹಾರ್ ಜೈಲಿಗೆ ಕಳಿಸುತ್ತೇನೆ ಎಂಬ ಅರ್ಥದಲ್ಲಿ ಆ ಮಾತು ಹೇಳಿದ್ದರು. ಮಿಸ್ಟರ್ ಕುಮಾರಸ್ವಾಮಿ, ನಾನು ತಿಹಾರ್ ಜೈಲನ್ನೂ ನೋಡಿಯಾಗಿದೆ. ನೀವು ನನ್ನ ಹಾಗೂ ನನ್ನ ಕುಟುಂಬದ ಮೇಲೆ ಹಾಕಿರುವ ಕೇಸ್‌ಗಳನ್ನು ನೋಡಿ ಆಯಿತು. → 4

ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರಕಾರ, ಪರಿಶಿಷ್ಟ ಜಾತಿ, ಪಂಗಡಕ್ಕೆ ಮೀಸಲು ಹಣವನ್ನು ಲೂಟಿ ಹೊಡೆದಿದೆ. ಇವರು ಅಹಿಂದ ರಕ್ಷಕರೇ? ಇದಕ್ಕೆ ನಾವು ಹೊಟ್ಟೆಯುರಿ ಪಡುತ್ತಿದ್ದೇವೆಯೇ? ಹೊಟ್ಟೆಯುರಿ ಪಡಬೇಕಾದವರು ಅಹಿಂದ ವರ್ಗ.
- **ಎಚ್.ಡಿ. ಕುಮಾರಸ್ವಾಮಿ**, ಕೇಂದ್ರ ಸಚಿವ

ಭ್ರಷ್ಟಾಚಾರದಲ್ಲಿ ಸಿಲುಕಿದ ಸಿದ್ದರಾಮಯ್ಯ ಗೌರವಯುತವಾಗಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ನಿರ್ಗಮಿಸಲಿ. ಈ ಪಾದಯಾತ್ರೆ ಮುಗಿಯುವ ವೇಳೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಲಿದ್ದಾರೆ.
-**ಬಿ.ಎಸ್.ಯಡಿಯೂರಪ್ಪ**, ಮಾಜಿ ಮುಖ್ಯಮಂತ್ರಿ

ಕಾಂಗ್ರೆಸ್ ಪಕ್ಷದಲ್ಲಿ ಭ್ರಷ್ಟಾಚಾರ ಎನ್ನುವುದು ಹಾಸುಹೊಕ್ಕಾಗಿದೆ. ಭ್ರಷ್ಟಾಚಾರ ಪ್ರಕರಣಗಳಲ್ಲಿ ಜಾಮೀನು ಮೇಲಿರುವ ನಾಯಕರು ಈಗ, ಸರಕಾರದ ವಿರುದ್ಧ ಹೋರಾಟಕ್ಕಿಳಿದಿರುವ ಮೈತ್ರಿ ಪಕ್ಷಗಳ ನಾಯಕರನ್ನು ತಡೆಯಲು ಹೊರಟಿದ್ದಾರೆ.
- **ಪ್ರಹ್ಲಾದ ಜೋಶಿ**, ಕೇಂದ್ರ ಸಚಿವ

ಕಾಂಗ್ರೆಸ್ ಭ್ರಷ್ಟಾಚಾರ ಮಿತಿಮೀರಿದ್ದು, ಈ ಭ್ರಷ್ಟ ಸರಕಾರವನ್ನು ಕಿತ್ತೊಗೆಯುವವರೆಗೂ ಹೋರಾಟ ನಿಲ್ಲದು. ಮುಡಾ ಮತ್ತು ವಾಲ್ಮೀಕಿ ಹಗರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಪಾದಯಾತ್ರೆ ನಡೆಸಿದ್ದೇವೆ.
- **ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಪೆನ್‌ಡ್ರೈವ್ ಪ್ರಕರಣ ಹೊರಬಂದಾಗ, ನನಗೂ ಪ್ರಜ್ವಲ್ ರೇವಣ್ಣಗೂ ಸಂಬಂಧವಿಲ್ಲ, ನನಗೂ ರೇವಣ್ಣ ಕುಟುಂಬಕ್ಕೂ ಸಂಬಂಧವಿಲ್ಲ. ಅವರ ಕುಟುಂಬವೇ ಬೇರೆ, ನಮ್ಮ ಕುಟುಂಬವೇ ಬೇರೆ ಎಂದು ಹೇಳಿದ್ದರು. ಈಗ ನಿಮ್ಮ ಮಾತು ಎಲ್ಲಿ ಹೋಯ್ತು? ನೀವು ಒಂದಾಗಿ ಯೇ ಇರಿ. ನಿಮ್ಮನ್ನು ಬೇರೆ ಮಾಡುವ ಉದ್ದೇಶ ನನ್ನದಲ್ಲ. ಆದರೆ ನಿಮ್ಮ ಮಾತು ಕಾಲಕ್ಕೆ ತಕ್ಕಂತೆ ಬದಲಾಗದಿರಲಿ.
- **ಡಿ.ಕೆ.ಶಿವಕುಮಾರ್**, ಉಪಮುಖ್ಯಮಂತ್ರಿ

ಶಿರಾಡಿಗೆ ಸಿಎಂ ಭೇಟಿ ಅಧಿಕಾರಿಗಳಿಗೆ ಕ್ಲಾಸ್

ಅವೈಜ್ಞಾನಿಕ ಕಾಮಗಾರಿ ಸಂಬಂಧ ಗಡ್ಕರಿಗೆ ಪತ್ರ

ಸಕಲೇಶಪುರ: ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಶಿರಾಡಿ ಘಾಟಿನಲ್ಲಿ ಪದೇ ಪದೇ ಭೂ ಕುಸಿತ ಸಂಭವಿಸುತ್ತಿರುವ ದೊಡ್ಡತಪ್ಲು ಪ್ರದೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಶಿರಾಡಿ ಘಾಟಿಯ ಹಲವೆಡೆ ಗುಡ್ಡ ಕುಸಿತ ಪ್ರದೇಶಗಳನ್ನು ಪರಿಶೀಲಿಸಿದ ಸಿಎಂ ಸಿದ್ದರಾಮಯ್ಯ, ಅಧಿಕಾರಿಗಳಿಂದ ಹೆಚ್ಚಿನ ಮಾಹಿತಿ ಪಡೆದರು. ಬಳಿಕ ದೊಡ್ಡತಪ್ಲುವಿನಲ್ಲಿ ಮಾತನಾಡಿ, . ಸಕಲೇಶಪುರ ಭಾಗದಲ್ಲಿ ವಾಡಿಕೆಗಿಂತ ಶೇ.65ರಷ್ಟು ಹೆಚ್ಚು ಮಳೆ ಆಗಿದೆ. ರಾಷ್ಟ್ರೀಯ ಹೆದ್ದಾರಿ 75ರ ಮೇಲ್ಭಾಗದಲ್ಲಿ ಮಣ್ಣು ಸಡಿಲವಾಗಿದೆ. ಹೀಗಾಗಿ ಪದೇ ಪದೇ ಕುಸಿಯುತ್ತಿದೆ. ರಸ್ತೆ ನಿರ್ಮಾಣಕ್ಕಾಗಿ ಗುಡ್ಡಗಳನ್ನು 90 ಡಿಗ್ರಿಯಲ್ಲಿ ನೇರವಾಗಿ ಸೀಳಿರುವುದೇ ಗುಡ್ಡ ಕುಸಿತಕ್ಕೆ ಪ್ರಮುಖ ಕಾರಣವಾಗಿದೆ. ಒಟ್ಟು 45 ಕಿ.ಮೀ. ನಲ್ಲಿ 35 ಕಿ. ಮೀ. ಹೆದ್ದಾರಿ ಕಾಮಗಾರಿ ಮುಗಿದಿದೆ. ಆದರೆ ಇಲ್ಲಿಯವರೆಗೂ ಎಲ್ಲೂ ತಡೆಗೋಡೆಗಳನ್ನು ನಿರ್ಮಿಸಿಲ್ಲ, ಮಣ್ಣಿನ ಗುಣಮಟ್ಟ ಪರೀಕ್ಷೆ ನಡೆಸಿ ಅದರ ಆಧಾರದಲ್ಲಿ ಸುರಕ್ಷತಾ ಮುಂಜಾಗ್ರತಾ ಕ್ರಮಗಳ ಕೈಗೊಂಡಿಲ್ಲ ಎಂದು ಹೇಳಿದರು.

ಹಣ ಉಳಿಸುವ ಉದ್ದೇಶದಿಂದ ಕಡಿಮೆ ಭೂಮಿ ಸ್ವಾಧೀನಪಡಿಸಿಕೊಂಡು, ಬಳಿಕ ಖರ್ಚು ಉಳಿಸಲು 90 ಡಿಗ್ರಿಯಲ್ಲಿ ಗುಡ್ಡಗಳನ್ನು ಕತ್ತರಿಸಲಾಗಿದೆ. ಗುಡ್ಡಗಳನ್ನು 30 ರಿಂದ 45 ಡಿಗ್ರಿಯಲ್ಲಿ ಕತ್ತರಿಸಿ ತಡೆಗೋಡೆ ನಿರ್ಮಿಸಿದ್ದರೆ ಮಣ್ಣು ಕುಸಿತವನ್ನು ತಡೆಯಬಹುದಿತ್ತು. ಕಾಮಗಾರಿ ಆರಂಭಿಸುವ ಮೊದಲು ಮಣ್ಣಿನ ಗುಣಮಟ್ಟ ಪರೀಕ್ಷೆ ನಡೆಸಿದ್ದೀರಾ ಎಂದವರು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಪ್ರಶ್ನಿಸಿದರು.

100 ಮನೆಗಳ ನಿರ್ಮಾಣ

ವಯನಾಡಿನಲ್ಲಿ ಸಂಭವಿಸಿದ ಭೂ ಕುಸಿತದಿಂದ ತತ್ತರಿಸಿರುವ ಕೇರಳದ ಜೊತೆ ಕರ್ನಾಟಕ ರಾಜ್ಯ ಸರ್ಕಾರ ನಿಂತಿದೆ. ಕೇರಳದಲ್ಲಿ ಭೂಕುಸಿತದಿಂದ ಸೂರು ಕಳೆದುಕೊಂಡವರಿಗೆ ನೂರು ಮನೆ ನಿರ್ಮಿಸಿ ಕೊಡುತ್ತೇವೆ. ಈ ಸಂಬಂಧ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಜೊತೆ ಮಾತನಾಡಿದ್ದೇನೆ. ಹತ್ತು ಕೋಟಿ ರೂ. ವೆಚ್ಚದಲ್ಲಿ ಮನೆ ನಿರ್ಮಾಣ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಶಿರಾಡಿ ಘಾಟ್‌ನಲ್ಲಿ ಹೆದ್ದಾರಿ ಸರಿಪಡಿಸುವಂತೆ ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರಿಗೆ ಪತ್ರ ಬರೆಯುವೆ ಎಂದ ಅವರು ಸ್ಥಳೀಯರ ಅಭಿಪ್ರಾಯವನ್ನು ಕೇಂದ್ರ ಸಚಿವರಿಗೆ ತಿಳಿಸುತ್ತೇನೆ. ಒಂದು ಎನ್‌ಡಿಆರ್‌ಎಫ್ ತಂಡ ಇಲ್ಲೇ ನಿಯೋಜನೆ ಮಾಡಿದ್ದೇವೆ ಎಂದರು.

ಯಾದಗಿರಿ ಎಂಎಲ್‌ಎ, ಪುತ್ರನ ವಿರುದ್ಧ ಲಂಚಕ್ಕಾಗಿ ಪೀಡಿಸಿದ ಆರೋಪ, ಸಿಐಡಿ ತನಿಖೆಗೆ ಆದೇಶ

ಎಸ್‌ಐ ಸಾವು: ಶಾಸಕ, ಪುತ್ರನ ವಿರುದ್ಧ ದೂರು

ಯಾದಗಿರಿ: ಇಲ್ಲಿನ ಸೈಬರ್ ಠಾಣೆಯ ಪಿಎಸ್‌ಐ ಪರಶುರಾಮ್ ಅವರ ಅನುಮಾನಾಸ್ಪದ ಸಾವಿನ ಸಂಬಂಧ ಯಾದಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಚೆನ್ನಾರೆಡ್ಡಿ ಪಾಟೀಲ್ ಹಾಗೂ ಅವರ ಪುತ್ರ ಪಂಪನಗೌಡ ವಿರುದ್ಧ ಪ್ರಕರಣ ಎಫ್‌ಐಆರ್ ದಾಖಲಾಗಿದೆ. ಪ್ರಕರಣ ಸಂಬಂಧ ರಾಜ್ಯ ಸರಕಾರ ಸಿಐಡಿ ತನಿಖೆಗೆ ಆದೇಶಿಸಿದೆ.

ಯಾದಗಿರಿ ನಗರ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪರಶುರಾಮ್ ಸೈಬರ್ ಕ್ರೈಮ್ ಠಾಣೆಗೆ ವರ್ಗಾವಣೆಗೊಂಡು ಕರ್ತವ್ಯಕ್ಕೆ ಹಾಜರಾದ ದಿನವೇ ಶುಕ್ರವಾರ ತಮ್ಮ ಮನೆಯಲ್ಲಿ ಮೃತಪಟ್ಟಿದ್ದರು. ''ಪತಿಯ ಪರಶುರಾಮ್ ಅವರ ಸಾವಿಗೆ ಯಾದಗಿರಿ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ಪಾಟೀಲ್ ಹಾಗೂ ಅವರ ಮಗ ಪಂಪನ ಗೌಡ ಕಾರಣ. ವರ್ಗಾವಣೆ ಮತ್ತು ಸ್ಥಳ ನಿಯೋಜನೆಗಾಗಿ ಸ್ಥಳೀಯ ಶಾಸಕ ಮತ್ತು ಅವರ ಪುತ್ರ ಹಣದ ಬೇಡಿಕೆ ಇಟ್ಟಿದ್ದರು. ಇದರಿಂದ ಒತ್ತಡ ಹಾಗೂ ಮಾನಸಿಕ ಖಿನ್ನತೆಗೆ ಒಳಗಾದ ತಮ ಪತಿ ಮೃತಪಟ್ಟಿದ್ದಾರೆ ಎಂದು ಎಂಟು ತಿಂಗಳ ಗರ್ಭಿಣಿಯಾಗಿರುವ ಪತ್ನಿ ಶ್ವೇತಾ ಆರೋಪಿಸಿದ್ದಾರೆ. → 8

ಶಾಸಕ ಚೆನ್ನಾರೆಡ್ಡಿ ಪಾಟೀಲ್ | ಪಿಎಸ್‌ಐ ಪರಶುರಾಮ್ | ಶಾಸಕರ ಮಗ ಪಂಪನಗೌಡ

ಪೋಸ್ಟಿಂಗ್‌ಗಾಗಿ ನನ್ನ ಅಳಿಯನಿಗೆ ಕಾಂಗ್ರೆಸ್ ಶಾಸಕರು ಹಣ ಕೇಳಿದರು. ಹೆಚ್ಚು ಹಣ ಕೊಟ್ಟವರಿಗೆ ಪೋಸ್ಟಿಂಗ್ ಕೊಡಿಸುವ ಕೆಲಸ ಮಾಡಿದ್ದಾರೆ. ಅವರಿಗಿಂತ ಪರಶುರಾಮ್ ಹಣ ಜಾಸ್ತಿ ಕೊಟ್ಟಿದ್ದರೆ ಅವರಿಗೆ ಪೋಸ್ಟಿಂಗ್ ಆಗುತ್ತಿತ್ತು. ಯಾದಗಿರಿ ಜಿಲ್ಲೆಯಲ್ಲಿ ಪೊಲೀಸ್ ಠಾಣೆಗಳನ್ನು ಹರಾಜಿಗೆ ಇಟ್ಟಿದ್ದಾರೆ.
- **ವೆಂಕಟಸ್ವಾಮಿ**, ಪರಶುರಾಮ ಅವರ ಮಾವ

ಆತ್ಮಹತ್ಯೆ ಅಲ್ಲ: ಪರಂ

ವರ್ಗಾವಣೆಗಾಗಿ ಸ್ಥಳೀಯ ಶಾಸಕರಿಗೆ 30 ಲಕ್ಷ ರೂ. ಲಂಚ ನೀಡಿದ್ದರು ಎಂದು ಪರಶುರಾಮ್ ಕುಟುಂಬಸ್ಥರು ಆರೋಪ ಮಾಡಿದ್ದಾರೆ. ಅದು ಆರೋಪ ಮಾತ್ರ. ತನಿಖೆ ನಡೆಯಬೇಕು. ಆರೋಪ ಮಾಡಿದ ತಕ್ಷಣವೇ ಅದು ಸತ್ಯ ಎಂದಾಗಲೀ ಅಥವಾ ಸುಳ್ಳು ಎಂದಾಗಲೀ ಹೇಳಲಾಗುವುದಿಲ್ಲ. ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಸೂಚಿಸಿರುವುದಾಗಿ ಗೃಹಸಚಿವ ಡಾ.ಜಿ. ಪರಮೇಶ್ವರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಶುರಾಮ್ ಸಾವು ಸಹಜವಾಗಿದೆ. ಆತ್ಮಹತ್ಯೆ ಅಲ್ಲ. ಮರಣದ ಮುನ್ನ ಬರೆದಿರುವ ಯಾವುದೇ ಪತ್ರಗಳು ದೊರೆತಿಲ್ಲ. ಕುಟುಂಬದ ಸದಸ್ಯರು ವರ್ಗಾವಣೆ ಹಿನ್ನೆಲೆಯಲ್ಲಿ ಒತ್ತಡಕ್ಕೆ ಒಳಗಾಗಿ ಸಾವನ್ನಪ್ಪಿದ್ದಾರೆ ಎಂಬ ಆರೋಪ ಮಾಡಿದ್ದಾರೆ. ಅದನ್ನು ನಾವು ತಳ್ಳಿಹಾಕುವುದಿಲ್ಲ. ತನಿಖೆ ಮಾಡಲು ಸೂಚಿಸಿದ್ದೇನೆ ಎಂದು ಹೇಳಿದರು.

ಅಮೆರಿಕ ಅಧ್ಯಕ್ಷ ಚುನಾವಣೆ ಕಮಲಾ ಹ್ಯಾರಿಸ್ ಕಣಕ್ಕೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಸ್ಥಾನದ ಚುನಾವಣೆಗೆ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರ ಉಮೇದುವಾರಿಕೆಯನ್ನು ಅಂತಿಮಗೊಳಿಸಲಾಗಿದೆ. ಅಧ್ಯಕ್ಷ ಜೋ ಬೈಡೆನ್ ಸ್ಪರ್ಧೆಯಿಂದ ಹಿಂದೆಸರಿದ ನಂತರ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಎದುರಾಳಿಯಾಗಿ ಕಮಲಾರನ್ನು ಕಣಕ್ಕಿಳಿಸಲು ನಿರ್ಧರಿಸಲಾಗಿದೆ.

ಭೂಕುಸಿತ ಸ್ಥಳ ಕಾಮಗಾರಿ ಎನ್‌ಜಿಟಿಎಸ್ ನೋಟಿಸ್

ವಯನಾಡು: ಪರಿಸರ ಸೂಕ್ಷ್ಮ ಮತ್ತು ಭೂಕುಸಿತದ ಅಪಾಯವಿರುವ ಸ್ಥಳಗಳೆಂದು ಗುರುತಿಸಿರುವ ಪಶ್ಚಿಮ ಘಟ್ಟಗಳ ಬೆಟ್ಟದ ಇಳಿಜಾರುಗಳಲ್ಲಿ ಕಾಮಗಾರಿಗಳಿಗೆ ಅವಕಾಶ ನೀಡಿದ್ದೇಕೆ ಎಂದು ಪ್ರಶ್ನೆ ಮಾಡಿರುವ ರಾಷ್ಟ್ರೀಯ ಪರಿಸರ ನ್ಯಾಯಮಂಡಳಿಯ ದಕ್ಷಿಣ ಪೀಠ, ಕೇರಳ, ತ.ನಾಡು ಸರಕಾರಗಳಿಗೆ ನೋಟಿಸ್ ಜಾರಿ ಮಾಡಿದೆ. ಎನ್‌ಜಿಟಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ.

ಶಾಸಕರ ವಾಹನ ಬಾಡಿಗೆ ವೇತನದಲ್ಲಿ ಕಡಿತ

ಬೆಂಗಳೂರು: ಶಾಸಕರ ಭವನದ ವಾಹನಗಳನ್ನು ಬಾಡಿಗೆ ಪಡೆಯುವ ಶಾಸಕರು, ಮಾಜಿ ಶಾಸಕರು ಇನ್ನು ಮುಂದೆ ನಗದು ರೂಪದಲ್ಲಿ ಬಾಡಿಗೆ ಹಣ ಪಾವತಿಸುವಂತಿಲ್ಲ. ಶಾಸಕರ ಭವನದ ವಾಹನಗಳನ್ನು ಶಾಸಕರು, ಮಾಜಿ ಶಾಸಕರಿಗೆ ಬಾಡಿಗೆ ನೀಡುವ ಪದ್ಧತಿ ಜಾರಿಯಲ್ಲಿದೆ. ಬಾಡಿಗೆ ಮೊತ್ತವನ್ನು ನಗದು ರೂಪದಲ್ಲಿ ನೀಡುವ ವ್ಯವಸ್ಥೆಯನ್ನು ಆಗಸ್ಟ್ ಒಂದರಿಂದ ಸ್ಥಗಿತಗೊಳಿಸಲಾಗಿದೆ.

ಐದನೇ ದಿನಕ್ಕೆ ಕಾಲಿರಿಸಿದ ರಕ್ಷಣಾ ಕಾರ್ಯ, 206 ಮಂದಿ ಇನ್ನೂ ನಾಪತ್ತೆ

ವಯನಾಡು: ಮೃತರ ಸಂಖ್ಯೆ 360ಕ್ಕೆ

ತಿರುವನಂತಪುರ: ಭೂಕುಸಿತ ಸಂಭವಿಸಿದ ಕೇರಳದ ವಯನಾಡು ಜಿಲ್ಲೆಯ ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳ ಸುತ್ತಮುತ್ತಲ ಪ್ರದೇಶದಲ್ಲಿನ ರಕ್ಷಣಾ ಕಾರ್ಯಾಚರಣೆ 5ನೇ ದಿನವಾದ ಶನಿವಾರವೂ ಮುಂದುವರಿದಿದೆ. ಭೂಕುಸಿತದಲ್ಲಿ ಮೃತಪಟ್ಟವರ ಸಂಖ್ಯೆ 360ರ ಗಡಿದಾಟಿದೆ. ನಾಪತ್ತೆಯಾಗಿರುವ 200ಕ್ಕೂ ಹೆಚ್ಚು ಮಂದಿಗಾಗಿ ಶೋಧ ಕಾರ್ಯಾಚರಣೆ ಮುಂದುವರಿದಿದೆ.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಭೂಕುಸಿತ ಪ್ರದೇಶದಲ್ಲಿನ ರಕ್ಷಣಾ ಕಾರ್ಯಾಚರಣೆಯ ಕಾರ್ಯ ಈಗ ಕೊನೆ ಹಂತಕ್ಕೆ ಬಂದಿದೆ. ಕಣ್ಮರೆಯಾಗಿರುವ 206 ಜನರ ಸುಳಿವು ಈವರೆಗೂ ಲಭ್ಯವಾಗಿಲ್ಲ ಎಂದರು. ಕಳೆದ 5 ದಿನಗಳಲ್ಲಿ 30 ಮಕ್ಕಳು, 98 ಪುರುಷರು, 87 ಮಹಿಳೆಯರ ಮೃತದೇಹ ಸೇರಿದಂತೆ ಒಟ್ಟು 215 ಶವಗಳನ್ನು ಪತ್ತೆ ಮಾಡಿ ಅವಶೇಷಗಳಡಿಯಿಂದ ಹೊರತೆಗೆಯಲಾಗಿದೆ. ಗುರುತು ಖಾತರಿಯಾದ ಬಳಿಕ 148 ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿ ಸಲಾಗಿದೆ. 67 ಮೃತದೇಹಗಳ ಗುರುತು ಪತ್ತೆಗೆ ಯತ್ನಿಸಲಾಗುತ್ತಿದೆ. ಗುರುತು ಖಚಿತವಾಗದಿದ್ದಲ್ಲಿ ಪಂಚಾ ಯಿತಿ ನೆರವಿನಿಂದ ಅಂತಿಮ ಸಂಸ್ಕಾರ ನಡೆಸಲಾ ಗುವುದು ಎಂದರು.

ಮೋಹನ್‌ಲಾಲ್ 3 ಕೋಟಿ ನೆರವು

ಭೂಕುಸಿತ ಸಂತ್ರಸ್ತ ಮುಂಡಕ್ಕೈ ಮತ್ತು ಚೂರಲ್‌ಮಲಾ ಪ್ರದೇಶಗಳಿಗೆ ಖ್ಯಾತ ಬಹುಭಾಷಾ ನಟ ಮೋಹನ್‌ಲಾಲ್ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಭಾರತೀಯ ಪ್ರಾದೇಶಿಕ ಸೇನೆ(ಬಿಟಿಎ)ಯಲ್ಲಿ ಗೌರವಾರ್ಥ ಲೆಫ್ಟಿನೆಂಟ್ ಕರ್ನಲ್ ಹುದ್ದೆ ಅಲಂಕರಿಸಿರುವ ಮೋಹನ್ ಲಾಲ್, ಸಮವಸ್ತ್ರದಲ್ಲೇ ರಕ್ಷಣಾ ಕಾರ್ಯಾ ಚರಣೆಯ ಮಾಹಿತಿ ಪಡೆದುಕೊಂಡರು. ಸಂತ್ರಸ್ತ ಪ್ರದೇಶ ದಲ್ಲಿ ಪುನರ್ವಸತಿ ಕಾರ್ಯಕ್ಕಾಗಿ ತಮ್ಮ ತಂದೆ-ತಾಯಿ ಹೆಸರಲ್ಲಿ ಸ್ಥಾಪಿಸಿರುವ ಪ್ರತಿಷ್ಠಾನದಿಂದ 3 ಕೋಟಿ ರು. ನೆರವು ನೀಡುವುದಾಗಿ ಪ್ರಕಟಿಸಿದರು.

ಆ.9ರಂದು ಸಿಎಂ ತವರಿನಲ್ಲಿ ಬೃಹತ್ ಸಭೆ, ಮೈಸೂರು, ಕೊಡಗು, ಚಾ.ನಗರ ಶಾಸಕರ ಸಿಎಂ ಸಭೆ

ಪಾದಯಾತ್ರೆಗೆ ಸಮಾವೇಶದ ಮೂಲಕ ಉತ್ತರ

ಬೆಂಗಳೂರು/ಮೈಸೂರು: ಬಿಜೆಪಿಯ ಪಾದಯಾತ್ರೆಗೆ ಪ್ರತ್ಯುತ್ತರ ನೀಡಲು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಜನಾಂದೋಲನ ಯಾತ್ರೆ ಆರಂಭವಾಗಿದ್ದರೆ, ಬಿಜೆಪಿ-ಜೆಡಿಎಸ್ ಪಾದಯಾತ್ರೆ ಮೈಸೂರು ತಲುಪುವ ಮೊದಲೇ ಆ ಭಾಗದ ಶಾಸಕರ ಮೂಲಕ ದೋಸ್ತಿಗಳ ಮೇಲೆ ಮುಗಿಬೀಳುವ ತಯಾರಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಆರಂಭಿಸಿದ್ದಾರೆ.

ಮೈಸೂರಿನಲ್ಲಿಯೇ ವಾಸ್ತವ್ಯ ಹೂಡಿದ್ದ ಸಿದ್ದರಾಮಯ್ಯ ಅವರು ಶನಿವಾರ ಬೆಳಗ್ಗೆ ಮೈಸೂರಿನ ತಮ್ಮ ನಿವಾಸದಲ್ಲಿ ಚಾಮರಾಜನಗರ, ಮಡಿಕೇರಿ ಹಾಗೂ ಮೈಸೂರು ಜಿಲ್ಲೆಯ ಸಚಿವರು, ಶಾಸಕರು ಹಾಗೂ ಪ್ರಮುಖ ಮುಖಂಡರೊಂದಿಗೆ ಸಭೆ ನಡೆಸಿದರು. ಪಾದಯಾತ್ರೆ ಮೈಸೂರು ಗಡಿ ಪ್ರವೇಶಿಸುತ್ತಿದ್ದಂತೆ, ಬಿಜೆಪಿ-ಜೆಡಿಎಸ್ ಅವಧಿಯ ಭ್ರಷ್ಟಾಚಾರದ ಬಗ್ಗೆ ಶಾಸಕರು ಹಾಗೂ ನಾಯಕರು ಧ್ವನಿ ಎತ್ತಬೇಕು. ಅದರಲ್ಲಿಯೂ ಮೈಸೂರು ಭಾಗದ ಶಾಸಕರು, ಮುಡಾ ಪ್ರಕರಣದಲ್ಲಿ ಆಗಿರುವ ನೈಜತೆಯನ್ನು ಜನರಿಗೆ ತಿಳಿಸುವ ಕೆಲಸವನ್ನು ಮಾಡಬೇಕು ಎಂದು ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಮುಡಾ ಪ್ರಕರಣದಲ್ಲಿ ಬಿಜೆಪಿಯ ಟೀಕೆಗೆ ಪ್ರತ್ಯುತ್ತರ ನೀಡಲು ಈಗಾಗಲೇ ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಉಪಾಹಾರ ಸಭೆ ನಡೆಸಿ ವಿವರಣೆ ನೀಡಿದ್ದರು.



ಕುಮಾರಸ್ವಾಮಿ, ಅಶೋಕ್ , ವಿಜಯೇಂದ್ರ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ. ಅವರ ಕಾಲದ ಎಲ್ಲ ಹಗರಣ ಬಯಲಿಗೆಳೆಯುತ್ತೇವೆ. ಶುಕ್ರವಾರ ಬಿಡದಿಯಲ್ಲಿ ಸಭೆ ಮಾಡಿದ್ದೇವೆ, ಶನಿವಾರ ರಾಮನಗರದಲ್ಲಿ ಸಭೆ ನಡೆದಿದೆ, ನಾಳೆ ಚನ್ನಪಟ್ಟಣ, ನಾಡಿದ್ದು ಮಂಡ್ಯ, ಬಳಿಕ ಮದ್ದೂರು, ಶ್ರೀರಂಗಪಟ್ಟಣ, ಕೊನೆಯದಾಗಿ ಆಗಸ್ಟ್ 9 ರಂದು ಮೈಸೂರಿನಲ್ಲಿ ಬೃಹತ್ ಸಮಾವೇಶ ಮಾಡುತ್ತೇವೆ. ಅವರ ಕಾಲದ ಎಲ್ಲಾ ಹಗರಣಗಳನ್ನು ಬಿಚ್ಚಿಡುತ್ತೇವೆ.
ಸಿಎಂ ಸಿದ್ದರಾಮಯ್ಯ

ಮೈಸೂರಿನಲ್ಲಿ ಸಮಾವೇಶ

ಒಂದು ವಾರ ಕಾಲ ಬಿಜೆಪಿ ನಾಯಕರಿಂದ ಪಾದಯಾತ್ರೆ ನಡೆಯಲಿದ್ದು, ಸಮಾರೋಪ ಸಮಾವೇಶವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಸಮಾರೋಪಕ್ಕೆ ಗೃಹಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಮಾಜಿ ಪ್ರಧಾನಿ ದೇವೇಗೌಡ ಸೇರಿದಂತೆ ಪ್ರಮುಖರು ಭಾಗವಹಿಸುವ ಸಾಧ್ಯತೆಯಿದೆ. ಆದ್ದರಿಂದ ಈ ಸಮಾವೇಶಕ್ಕೆ ಪ್ರತ್ಯುತ್ತರವಾಗಿ, ಕಾಂಗ್ರೆಸ್ ಬೃಹತ್ ಸಮಾವೇಶ ನಡೆಸಲು ಸಿದ್ಧತೆ ನಡೆಸಿದೆ. ಈಗಾಗಲೇ ಬಿಡದಿ, ರಾಮನಗರದಲ್ಲಿ ಎರಡು ದಿನ ಕಾಂಗ್ರೆಸ್ ಸಮಾವೇಶ ನಡೆಸಿದೆ.

ಸಮಾಚಾರ ಸಣ್ಣದಲ್ಲ

ಪ್ರವಾಹಪೀಡಿತ: ಸಿಎಂ ಬೆಳಗಾವಿಗೆ 5ರಂದು

ಗೋಕಾಕ್: ಘಟಪ್ರಭಾ ನದಿ ಪ್ರವಾಹಕ್ಕೆ ನಲುಗಿರುವ ಗೋಕಾಕ್ ಹಾಗೂ ಕೃಷ್ಣ ನದಿ ಪಾತ್ರದ ಹಳ್ಳಿಗಳ ವೀಕ್ಷಣೆಗೆ ಸಿಎಂ ಸಿದ್ದರಾಮಯ್ಯ ಸೋಮವಾರ ಬೆಳಗಾವಿಗೆ ಆಗಮಿಸಲಿದ್ದಾರೆ. ಆ.5 ರಂದು ಬೆಂಗಳೂರಿನಿಂದ ಬೆಳಗಾವಿಗೆ ಆಗಮಿಸಲಿರುವ ಸಿಎಂ ಮಧ್ಯಾಹ್ನ ಗೋಕಾಕ್ ಪ್ರವಾಹ ಪೀಡಿತ ಪ್ರದೇಶಕ್ಕೆ ಭೇಟಿ ನೀಡುವರು. ನಂತರ ಕೃಷ್ಣ ನದಿ ಪ್ರವಾಹಕ್ಕೆ ಒಳಗಾದ ಕಾಗವಾಡ ತಾಲೂಕಿನ ಜೂಗಳ ಗ್ರಾಮಕ್ಕೆ ಭೇಟಿ ನೀಡಲಿದ್ದು, ನಂತರ ಚಿಕ್ಕೋಡಿ ತಾಲೂಕಿನ ಮಾಂಜರಿ ಸೇತುವೆ ವೀಕ್ಷಣೆ ಮಾಡಲಿದ್ದಾರೆ.

ಗ್ರಾಪಂ. ಅಧ್ಯಕ್ಷೆ ಲಕ್ಕವ್ವ, ಸದಸ್ಯರಿಗೆ ಸತ್ಕಾರ

ಹುಕ್ಕೇರಿ: ಗ್ರಾಮ ಪಂಚಾಯತ್ ಎಲ್ಲ ಸದಸ್ಯ ಹಾಗೂ ಮುಖಂಡರು ನೂತನವಾಗಿ ಆಯ್ಕೆಯಾದ ಅಧ್ಯಕ್ಷ, ಆಡಳಿತ ಮಂಡಳಿಯವರಿಗೆ ಸಹಕಾರ ನೀಡದರೇ ಮಾತ್ರ ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತಿದೆ.ಎಂದು ಮಾಜಿ ಸಂಸದ ಬಿಡಿಸಿ ಬ್ಯಾಂಕ ಅಧ್ಯಕ್ಷ ರಮೇಶ ಕತ್ತಿ ಹೇಳಿದರು. ನೂತನವಾಗಿ ಮದಿಹಳ್ಳಿ ಗ್ರಾಮ ಪಂಚಾಯತ್ ಆಯ್ಕೆಯಾದ ಅಧ್ಯಕ್ಷೆ ಲಕ್ಕವ್ವ ಬಾಗಿ ಹಾಗೂ ಸದಸ್ಯರು ಹಮ್ಮಿಕೊಂಡ ಸತ್ಕಾರ ಸ್ವೀಕರಿ ಮಾತನಾಡಿದರು. ಸರಕಾರದ ಯೋಜನೆಗಳನ್ನು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ಗ್ರಾಮಕ್ಕೆ ಶುದ್ದ ಕುಡಿಯುವ ನೀರು, ಚರಂಡಿ, ಘನತಾಜ್ಯ ವಿಲೇವಾರಿ ಇನ್ನಿತರ ಮೂಲಭೂತ ಸೌಕರ್ಯ ಸಮರ್ಪ ಕವಾಗಿ ಸದ್ಬಳಕೆಯಾಬೇಕು. ಎಲ್ಲ ಸದಸ್ಯರ ವಿಶ್ವಾಸಕ್ಕೆ ಪಾತ್ರರಾಗಿ ಕಾರ್ಯನಿರ್ವಹಿಸಬೇಕೆಂದು ಸೂಚಿಸಿದರು.

ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ

ರಾಮದುರ್ಗ: ಯುವಜನತೆ ಮಾದಕದ್ರವ್ಯ ಮತ್ತು ಮದ್ಯಪಾನ ವ್ಯಸಗಳಂತಹ ದುಶ್ಚಟಕ್ಕೆ ಬಲಿಯಾಗುತ್ತಿದ್ದು, ಸಮಾಜ ಬೆಳವಣಿಗೆಯಲ್ಲಿ ಬಹು ದೊಡ್ಡ ಹೊಡೆತ ಬಿಳ್ಳುತ್ತಿದೆ ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಸಚಿನ್ ಕೆ. ಕಳವಳ ವ್ಯಕ್ತಪಡಿಸಿದರು. ತಾಲೂಕಿನ ರಾಮಾಪುರ ವಲಯದಎಂ.ಎಸ್.ಎಸ್. ಸರಕಾರಿ ಪ್ರೌಢ ಶಾಲೆಯಲ್ಲಿ ಇತ್ತೀಚೆಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹಾಗೂ ಜಿಲ್ಲಾ ಜನ ಜಾಗೃತಿ ವೇದಿಕೆ ಆಶ್ರಯದಲ್ಲಿ ನಡೆದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ, ದೇಶದ ಪ್ರಗತಿಯಲ್ಲಿ ಸ್ವಸ್ಥ ಜನರ ಅವಶ್ಯಕತೆ ಇದೆ. ವಿದ್ಯಾರ್ಥಿ ದೆಶೆಯಲ್ಲಿ ಉತ್ತಮ ಶಿಕ್ಷಣ ಪಡೆಯುವ ಮೂಲಕ ಶಿಕ್ಷಕ ಮತ್ತು ತಂದೆ ತಾಯಿಗಳ ಹೆಸರುಗಳಿಸುವಂತೆ ಕರೆ ನೀಡಿದರು.

ಉದ್ಯೋಗಾವಕಾಶಕ್ಕೆ ಉಪನ್ಯಾಸ ಕಾರ್ಯಕ್ರಮ

ರಾಮದುರ್ಗ: ಇಲ್ಲಿನ ವಿದ್ಯಾ ಪ್ರಸಾರಕ ಸಮಿತಿಯ ಸಿ.ಎಸ್.ಬೆಂಬಳಗಿ ಕಲಾ, ಶಾ.ಎಂ.ಆರ್.ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದವಾಣಿಜ್ಯ ಸಂಘ ಹಾಗೂ ಆಯ್.ಕ್ಯೂ.ಎ.ಸಿ.ಅಡಿಯಲ್ಲಿಉನ್ನತ ಶಿಕ್ಷಣ ಬಿ.ಕಾಂ.ನಂತರ ವೃತ್ತಿಪರ ಕೋರ್ಸಗಳಲ್ಲಿ ಉದ್ಯೋಗಾವಕಾಶಗಳು ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಜರುಗಿತು. ಈ ವೇಳೆ ಶಿಗ್ಗಾವಿ ಸರಕಾರಿ ಪ್ರಥಮದರ್ಜೆಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಶೈಲಜಾ ಹುದ್ದಾರಅವರು, ವಿದ್ಯಾರ್ಥಿಗಳು ಮೊದಲುತಮ್ಮ ಪದವಿ ಶಿಕ್ಷಣವನ್ನು ಪೂರ್ಣಗೊಳಿಸಿಕೊಳ್ಳಬೇಕು. ನಂತರ ಹಲವು ವೃತ್ತಿ ಪರಕೋರ್ಸ್ ಮೂಲಕ ಉದ್ಯೋಗಾವಕಾಶಗಳು ಲಭ್ಯವಿವೆ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಟಿ.ದಾಮೋದರ ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥ ಎಮ್.ಎನ್. ಭಜಂತ್ರಿ ಮಾತನಾಡಿದರು. ಈ ಸಂದರ್ಭದಲ್ಲಿ ಬಿ.ಕಾಂ. ವಿದ್ಯಾರ್ಥಿಗಳ ಕೈಬರಹದ ಲೇಖನನ್ನೊಳಗೊಂಡ ಕಾಮರ್ಸ ನಿಘಂಟು, ಮಹಿಳಾ ಉದ್ಯಮ ಶೀಲತೆ ಹಾಗೂ ಮಹಾವಿದ್ಯಾಲಯದ ಹಿಂದಿನ ವಿದ್ಯಾರ್ಥಿಗಳ ಸಾಧಕರ ಕೈಪಿಡಿಗಳನ್ನು ಬಿಡುಗಡೆ ಮಾಡಲಾಯಿತು. ವಿದ್ಯಾರ್ಥಿಗಳಾದ ಸಹನಾ ದುರ್ಗನ್ನವರ, ಸಾವಿತ್ರಿಕಡ್ಡಿ ಹಾಗೂ ಲಕ್ಷ್ಮೀ ಬಡಿಗೇರತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಜಿಮಖಾನಾ ಉಪಾಧ್ಯಕ್ಷಡಾ. ಜಿ.ಬಿ. ಮುರಗೋಡ, ವಿದ್ಯಾ ಪ್ರಸಾರಕ ಸಮಿತಿಯ ಸದಸ್ಯ ವಿ.ಜಿ. ಬೈಲವಾಡ, ವಾಣಿಜ್ಯ ವಿಭಾಗದಪ್ರಾಧ್ಯಾಪಕಿ ಎಂ.ಡಿ.ಮೂಡ್ಲವರ್, ಡಾ.ಎಂ.ಸಿ.ಹೂಗಾರ ಹಾಗೂ ಎ.ಯು.ಬಸರಗಿ ಹಾಗೂ ಬಿ.ಕಾಂ.ವಿದ್ಯಾರ್ಥಿಗಳು ಹಾಜರಿದ್ದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಪಿ.ಬಿ.ತೆಗ್ಗಿಹಳ್ಳಿ ಸ್ವಾಗತಿಸಿದರು. ವಾತ್ಸಲ್ಯಕಾಮನ್ನ ವರಮತ್ತುಸುಪ್ರಿತಾಕುಲಗೋಡ ನಿರೂಪಿಸಿದರು. ರಶಿಕಾ ವಂದಿಸಿದರು.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ ದಿನೇಶ್ ಗುಂಡೂರಾವ್ } ಆರೋಗ್ಯ ಸಚಿವ

ಮುಡಾ ನಿವೇಶನಗಳು ಜೆಡಿಎಸ್ ಶಾಸಕರಿಗೂ ಹಂಚಿಕೆಯಾಗಿದೆ. ಅದಕ್ಕೆ ಹೋರಾಟದಿಂದ ಹಿಂದೆಟ್ಟು ಹಾಕಿದ್ದ ಜೆಡಿಎಸ್‌ಗೆ ಬಿಜೆಪಿ ಹೈಕಮಾಂಡ್ ಸೂಚನೆ ಮೆರೆಗೆ ಜೆಡಿಎಸ್ ಹೋರಾಟ ಮಾಡುತ್ತಿದೆ. ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯನವರನ್ನು ಸಿಲುಕಿಸುವ ಯತ್ನವನ್ನು ಬಿಜೆಪಿ ಮಾಡುತ್ತಿದೆ.

ಪ್ರಗತಿ ಪರಿಶೀಲನಾ ಸಭೆ | ಸಿಟಿಜನ್ ಪೋರ್ಟಲ್‌ನಲ್ಲಿ ಅರ್ಜಿ ಹಾಕಿಸಿ : ಜಿಪಂ ಸಿಇಒ ಸೂಚನೆ

ಶೌಚಾಲಯರಹಿತ ಕುಟುಂಬಗಳ ಗುರುತಿಸಿ

ಬೆಳಗಾವಿ: ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಯೋಜನೆಯಡಿ ಗ್ರಾಮ ಪಂಚಾಯತವಾರು ಶೌಚಾಲಯ ರಹಿತ ಕುಟುಂಬಗಳನ್ನು ಗುರುತಿಸಿ, ಅವರುಗಳಿಂದ ಸಿಟಿಜನ್ ಪೋರ್ಟಲ್‌ನಲ್ಲಿ ಅರ್ಜಿ ಹಾಕಿಸಬೇಕು. ಈ ಕುರಿತು ಗ್ರಾಮ ಪಂಚಾಯಗಳಲ್ಲಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಶಿಂಧೆ ಅವರು ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ವಿಡಿಯೋ ಸಂವಾದ ಮೂಲಕ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಡೆಸಿದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮನರೇಗಾ ಯೋಜನೆಯಡಿ ಕಡ್ಡಾಯವಾಗಿ ಜನರಿಗೆ ಕೆಲಸ ನೀಡಿ ತಾಲೂಕಾವಾರು ನೀಡಿರುವ ಗುರಿಗನುಗುಣವಾಗಿ ಪ್ರಗತಿ ಸಾಧಿಸುವುದು, 2023-24 ನೇ ಸಾಲಿನಡಿ ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾಮಗಾರಿಗಳು ಪೂರ್ಣಗೊಳಿಸದೇ ಹಾಗೇ ಉಳಿದುಕೊಂಡಿವೆ.



ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ವಿಡಿಯೋ ಸಂವಾದ ಮೂಲಕ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ವೈಯಕ್ತಿಕ ಗೃಹ ಶೌಚಾಲಯ: ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ವೈಯಕ್ತಿಕ ಗೃಹ ಶೌಚಾಲಯಕ್ಕೆ ಸಂಬಂಧಿಸಿದಂತೆ ಶೌಚಾಲಯ ರಹಿತ ಕುಟುಂಬಗಳನ್ನು ಗುರುತಿಸಿ ಸಿಟಿಜನ್ ಪೋರ್ಟಲ್ ನಲ್ಲಿ ಅರ್ಜಿ ಹಾಕಿಸಲು ವ್ಯಾಪಕ ಪ್ರಚಾರ ಕೈಗೊಳ್ಳಲು ತಿಳಿಸಿದರು.

ಘನ ತ್ಯಾಜ್ಯ ನಿರ್ವಹಣೆ : ಘನ ತ್ಯಾಜ್ಯ ನಿರ್ವಹಣೆ ಗೆ ಸಂಬಂಧಿಸಿದಂತೆ ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಪ್ರತಿ ದಿನ ಕಸ ನಿರ್ವಹಣೆ ಕಾರ್ಯ ಪ್ರಗತಿಯಲ್ಲಿರಬೇಕು. ಬೆಳಗಾವಿ ಮತ್ತು ಖಾನಾಪೂರ ತಾಲೂಕುಗಳಲ್ಲಿ ಕಸ ಸಂಗ್ರಹಣೆ ಕಾರ್ಯ ಸರಿಯಾದ ರೀತಿಯಲ್ಲಿ ನಡಿಯುತ್ತಿಲ್ಲ ಎಂದು ದೂರುಗಳು ಬರುತ್ತಿದ್ದು, ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಿ ಕಾರ್ಯ ನಿರ್ವಹಿಸಬೇಕೆಂದು ನಿರ್ದೇಶನ ನೀಡಿದರು ಹಾಗೂ ಪ್ರಗತಿ ಹಂತದಲ್ಲಿರುವ ಎಸ್.ಡಬ್ಲ್ಯೂ.ಎಮ್ ಶೆಡ್ಗಳ ಕಾಮಗಾರಿ ಆದಷ್ಟು ಬೇಗ ಪೂರ್ಣಗೊಳಿಸಲು ಸೂಚಿಸಿದರು.

> ಕಾಮಗಾರಿಗಳಿಗೆ ಸಂಬಂಧಿಸಿದ ಅಧಿಕಾರಿಗಳು ಪೂರ್ಣಗೊಳಿಸಬೇಕು ಅದೇ ರೀತಿ 2024-25ನೇ ಸಾಲಿನ ನರೇಗಾ ಯೋಜನೆಯಡಿ ಆದ್ಯತೆ ಕಾಮಗಾರಿಗಳಾದ ಶಾಲಾ ಶೌಚಾಲಯ, ಶಾಲಾ ಆಟದ ಮೈದಾನ, ಶಾಲಾ ಅಡುಗೆ ಕೋಣೆ, ಎಸ್.ಡಬ್ಲ್ಯೂ.ಎಮ್ ಕಟ್ಟಡ ಹಾಗೂ ಗ್ರಾಮ ಪಂಚಾಯತ ಕಟ್ಟಡಗಳನ್ನು ಆದ್ಯತೆ ಮೇರಗೆ ಕೈಗೊಳ್ಳುವಂತೆ ಸೂಚಿಸಿದರು. ಓಂಬಡ್ಸಮೆನ್ ವಸೂಲಾತಿ ಮೇಲೆ ಬಾಕಿ ಇರುವ ಮೊತ್ತವನ್ನು ಆದಷ್ಟು ಬೇಗ ವಸೂಲಾತಿ ಮಾಡಿ ಜಿಲ್ಲಾ ಪಂಚಾಯತಗೆ ವರದಿ ಸಲ್ಲಿಸಲು ಸೂಚಿಸಿದರು.
> -ರಾಹುಲ್ ಶಿಂಧೆ, ಜಿಪಂ ಸಿಇಓ

ದ್ರವ ತ್ಯಾಜ್ಯ ನಿರ್ವಹಣೆ : ಸ್ಥಗಿತಗೊಂಡ ಘಟಕಗಳ ಕಾಮಗಾರಿಗಳನ್ನು ಪ್ರಾರಂಭಿಸಿ ಆದಷ್ಟು ಬೇಗ ಮುಕ್ತಾಯಗೊಳಿಸಲು ಸೂಚಿಸಿದರು.

ಮಲ ತ್ಯಾಜ್ಯ ನಿರ್ವಹಣೆ: ಚಿಕ್ಕೋಡಿ ತಾಲೂಕಿನ ಕರೋಶಿ ಗ್ರಾಮ ಪಂಚಾಯತಿಯ ಮಲ ತ್ಯಾಜ್ಯ ನಿರ್ವಹಣೆ ಘಟಕ ಕಾಮಗಾರಿಯ ಕಾರ್ಯ ಮುಕ್ತಾಯಗೊಂಡಿದ್ದು ಅದನ್ನು ಅತೀ ತುರ್ತಾಗಿ ಕಾರ್ಯಗತಗೊಳಿಸಲು ಸೂಚಿಸಿದರು.

ಈ ಸಂದರ್ಭದಲ್ಲಿ ಜಿ.ಪಂ, ಯೋಜನಾ ನಿರ್ದೇಶಕ(ಡಿ.ಆರ್.ಡಿ.ಎ) ರವಿ ಬಂಗಾರೆಪ್ಪನವರ, ಮುಖ್ಯ ಲೆಕ್ಕಾಧಿಕಾರಿ ಪರಶುರಾಮ ದುಡಗುಂಟಿ, ಮುಖ್ಯ ಯೋಜನಾಧಿಕಾರಿ ಗಂಗಾಧರ ದಿವಟರ, ಲೆಕ್ಕಾಧಿಕಾರಿ ಗಂಗಾ ಹಿರೇಮಠ, ಸಹಾಯಕ ಕಾರ್ಯದರ್ಶಿ ರಾಹುಲ್ ಕಾಂಬಳೆ, ಜಿಲ್ಲೆಯ ಎಲ್ಲ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನೆರೆ ಗ್ರಾಮಗಳಿಗೆ ಜಾರಕಿಹೊಳಿ ಭೇಟಿ

ಗೋಕಾಕ: ಘಟಪ್ರಭಾ ನದಿ ಆರ್ಭಟಕ್ಕೆ ಗೋಕಾಕ್ ಜನತೆ ತತ್ತರಿಸಿದ್ದು, ಶನಿವಾರ ಬೆಳ್ಳಂಬೆಳಗ್ಗೆ ಲೋಕೋಪಯೋಗಿ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ಲೋಳಸೂರು ಸೇತುವೆ ಸೇರಿದಂತೆ ನಗರದ ಹಲವು ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಮಟನ್ ಮಾರುಕಟ್ಟೆ, ಕುಂಬಾರ ಗಲ್ಲಿ, ಹಳೆ ದನಗಳ ಮಾರುಕಟ್ಟೆಯಲ್ಲಿ ಪ್ರವಾಹದಿಂದ ಉಂಟಾದ ಅವಾಂತರಗಳ ಬಗ್ಗೆ ಮಾಹಿತಿ ಪಡೆದು, ಪಟ್ಟಣದ ಹೊರವಲಯದಲ್ಲಿರುವ ಲೋಳಸೂರು ಸೇತುವೆಯ ಸ್ಥಿತಿಗತಿ ಅವಲೋಕಿಸಿದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಲೋಳಸೂರು ಬಳಿ ಹೊಸ ಸೇತುವೆ ನಿರ್ಮಾಣಕ್ಕೆ ಅನುಮೋದನೆ ಸಿಕ್ಕಿದ್ದು, ಶೀಘ್ರವೇ ಎಸ್ಟಿಮೇಂಟ್ ಮಾಡಿ ಟೆಂಡರ್ ಕರೆಯುತ್ತೇವೆ. ಆದರೆ ನೂತನ ಸೇತುವೆ ನಿರ್ಮಾಣಕ್ಕೆ ಎರಡು ವರ್ಷ ಅವಧಿ ಬೇಕಾಗುತ್ತದೆ ಎಂದು ತಿಳಿಸಿದರು. ಲೋಳಸೂರು ಸೇತುವೆ ಮುಳುಗಡೆಯಾಗಿ ಸಾರ್ವಜನಿಕರು ಸೇರಿದಂತೆ ವಿದ್ಯಾರ್ಥಿಗಳಿಗೆ ತೊಂದರೆ ಆಗಿತ್ತು. ಈಗ ನೀರಿನ ಮಟ್ಟ ಕಡಿಮೆಯಾಗಿದೆ. ವಿದ್ಯಾರ್ಥಿಗಳ ಅನುಕೂಲ ದೃಷ್ಟಿಯಿಂದ ಅಧಿಕಾರಿಗಳಿಗೆ ಲೋಳಸೂರು ಸೇತುವೆಯನ್ನು ಶೀಘ್ರವೇ ಪರಿಶೀಲಿಸಿ ತಾತ್ಕಾಲಿಕ ಬಸ್ ಸಂಚಾರ ಆರಂಭಿಸುವಂತೆ ಸೂಚನೆ ನೀಡಿದ್ದೇನೆ ಎಂದರು.

ನಂತರ ನೂತನವಾಗಿ ನಿರ್ಮಿಸಿರುವ ಗೋಕಾಕ-ಶಿಂಗಳಾಪುರ ಸೇತುವೆಗೂ ಭೇಟಿ ಪರಿಶೀಲನೆ ನಡೆಸಿದ ಸಚಿವ ಸತೀಶ್ ಜಾರಕಿಹೊಳಿ ಅವರು, ಗೋಕಾಕ ಪಟ್ಟಣದ ಹೊರ ವಲಯದ ಮಾರ್ಕಂಡೇಯ ನದಿ ಪಕ್ಕದಲ್ಲಿರುವ ಪ್ರವಾಸಿ ತಾಣ ಯೋಗಿಕೊಳ್ಳಕ್ಕೂ ಭೇಟಿ ನೀಡಿದರು.

ಸಚಿವ ಸತೀಶ ಜಾರಕಿಹೊಳಿ ಅವರು ಬೆಳ್ಳಬೆಳಿಗ್ಗೆ ಲೋಳಸೂರ ಸೇತುವೆ ವೀಕ್ಷಣೆ ನಡೆಸಿರುವುದು.

ಬೆಳ್ಳಂಬೆಳಗ್ಗೆಯೇ ಪ್ರವಾಹ ಪೀಡಿತ ಪ್ರದೇಶ ವೀಕ್ಷಿಸಲು ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕಂಡ ಗೋಕಾಕ ಪಟ್ಟಣದ ಜನತೆ ಖುಷಿ ವ್ಯಕ್ತಪಡಿಸಿ, ತಮ್ಮ ಸಮಸ್ಯೆಗಳನ್ನು ಸಚಿವರ ಬಳಿ ತೊಡಿಕೊಂಡರು. ಇದೇ ವೇಳೆ ಜನತೆ ಮನವಿಗೆ ಸ್ಪಂದಿಸಿದ ಸಚಿವ ಸತೀಶ್ ಜಾರಕಿಹೊಳಿ, ತಮ್ಮ ಸಮಸ್ಯೆಗಳನ್ನು ನಿವಾರಿಸುವ ಕೆಲಸ ಮಾಡುತ್ತೇನೆ. ಪ್ರವಾಹದಿಂದ ಯಾರು ಭಯಭೀತರಾಗಬೇಡಿ ಎಂದು ಸಾರ್ವಜನಿಕರಿಗೆ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಸಿಪಿಐ ಗೋಪಾಲ ರಾಠೋಡ, ಕಾಂಗ್ರೆಸ್ ಮುಖಂಡರಾದ ಶಿವನಗೌಡ ಪಾಟೀಲ್, ಆರೀಫ್ ಪಿರ್ಜಾದೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಹಲವು ಮುಖಂಡರು ಇದ್ದರು.

ಪ್ರವಾಹ ಪೀಡಿತ ಪ್ರದೇಶ ವೀಕ್ಷಿಸಿದ ಶೆಟ್ಟರ್

ಗೋಕಾಕ: ನಗರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಶನಿವಾರದಂದು ಬೆಳಗಾವಿ ಲೋಕ ಸಭಾ ಸದಸ್ಯ ಜಗದೀಶ್ ಶೆಟ್ಟರ್ ಭೇಟಿನೀಡಿ ಪರಿಶೀಲನೆ ನಡೆಸಿ, ಕಾಳಜಿ ಕೇಂದ್ರಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದರು.

ನಗರದ ಲೋಳಸೂರ, ಸೇತುವೆ, ಶಿಂಗಾಪೂರ ಸೇತುವೆ, ಚಿಕ್ಕೋಳಿ ಸೇತುವೆಗೆ ಭೇಟಿ ನೀಡಿ ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಘಟಪ್ರಭಾ ನದಿಗೆ ಬಂದ ಪ್ರವಾಹದಿಂದ ನಗರದಲ್ಲಿ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಗಿದ್ದು, ಪ್ರವಾಹ ಪೀಡಿತ ಜನರು ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾರೆ. ತಾಲೂಕು ಆಡಳಿತದಿಂದ ಮುತುವರ್ಜಿ ವಹಿಸಿ ಕಾರ್ಯಮಾಡಲಾಗುತ್ತಿದೆ. ನಗರದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮತ್ತೆ ನೀರು ಬರದಂತೆ ಶಾಶ್ವತ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿ ಅವರೊಂದಿದೆ ಚರ್ಚಿಸಲಾಗಿದ್ದು, ಆದಷ್ಟು ಬೇಗ ಅದನ್ನು ಅನುಷ್ಠಾನಗೊಳಿಸಲಾಗುವುದು. ಈಗಾಗಲೇ ಹಲವು ಸರಕಾರಗಳು ಪ್ರವಾಹ ಪೀಡಿತ ಜನರಿಗೆ ಪುನರ್ವಸತಿ ಕಲ್ಪಿಸಿದರು ಸಹ ಯಾರು ಅಲ್ಲಿ ಶಾಶ್ವತವಾಗಿ ವಾಸವಾಗಿಲ್ಲ ಬದಲಾಗಿ ಪ್ರವಾಹ ಬತ್ತಿದ ಕೂಡಲೇ ಮತ್ತೆ ಅದೇ ಜಾಗದಲ್ಲಿ ವಾಸಿಸುವದರಿಂದ ಶಾಶ್ವತ ಪುನರ್ವಸತಿ ಕಷ್ಟಸಾಧ್ಯ. ಅದರ ಬದಲಾಗಿ ಆ ಪ್ರದೇಶದಲ್ಲಿ ನೀರು ನುಗ್ಗದಂತೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದ ಅವರು ಲೋಳಸೂರ ಮತ್ತು ಚಿಕ್ಕೋಳಿ ಸೇತುವೆಗಳು ಮುಳುಗಡೆಯಾಗದಂತೆ ಎತ್ತರಕ್ಕೆ ಏರಿಸಲು ಜಿಲ್ಲಾಧಿಕಾರಿಗಳ ಜತೆ ಚರ್ಚಿಸಿ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು. ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ನೇರ ಆರೋಪಿಗಳು: ಮುಡಾ ಜಾಗೆ ಹಂಚಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಪತ್ನಿ ಅವರ ನೇರ ಆರೋಪಿಗಳು ಮುಖ್ಯಮಂತ್ರಿ ನೈತಿಕತೆ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಸಂಸದ ಜಗದೀಶ್ ಶೆಟ್ಟರ್ ಅವರು ಒತ್ತಾಯಿಸಿದರು. ಮುಡಾ ಹಗರಣವನ್ನು ಮುಚ್ಚಿಹಾಕಲು ಕಾಂಗ್ರೆಸ್ ಪಕ್ಷದವರು ಸಮಾವೇಶಗಳನ್ನು ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಪಕ್ಷದ ಕ್ರಮವನ್ನು ಟೀಕಿಸಿದರು. ವಾಲ್ಮೀಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಸಕ ರಮೇಶ್ ಹಾಗೂ ಶಾಸಕ ಯತ್ನಾಳ ಅವರು ಪ್ರತ್ಯೇಕ ಪಾದ ಯಾತ್ರೆ ಕೈಗೊಳ್ಳುತ್ತಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಶೆಟ್ಟರ್ ಇಬ್ಬರು ಶಾಸಕರುಗಳು ಹೈಕಮಾಂಡ್ ಒಪ್ಪಿಗೆ ಕೇಳಿದ್ದಾರೆ. ಅವರು ಒಪ್ಪಿಗೆ ಕೊಟ್ಟ ಮೇಲೆ ಮುಂದಿನ ನಡೆ ಎಂದರು. ಶಾಸಕ ರಮೇಶ ಜಾರಕಿಹೊಳಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ನಾಯಕತ್ವವನ್ನು ಒಪ್ಪಿಕೊಂಡಿಲ್ಲ ಎಂದ ಕೇಳಿದ ಪ್ರಶ್ನೆಗೆ ಅದು ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ ಎಂದು ಜಾರಿಕೊಂಡರು.

ಸಂಸದ ಜಗದೀಶ ಶೆಟ್ಟರ ಲೋಳಸೂರ ಸೇತುವೆ ವೀಕ್ಷಿಸುತ್ತಿರುವುದು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಡಾ. ಮೋಹನ ಭಸ್ಮೆ, ಡಿ.ವಾಯ.ಎಸ್.ಪಿ ಡಿ.ಎಚ್.ಮುಲ್ಲಾ, ಸಿಪಿಐ ಗೋಪಾಲ ರಾಠೋಡ, ಇಇಓ ಉದಯಕುಮಾರ್ ಕಾಂಬ್ಳೆ, ಪೌರಾಯುಕ್ತ ರಮೇಶ ಜಾಧವ್, ಎಸ್.ಪಿ. ವರಾಳೆ, ಮುಖಂಡರುಗಳಾದ ಭೀಮಗೌಡ ಪೊಲೀಸ್ ಗೌಡರ, ಸುರೇಶ ಸನದಿ, ರಾಜೇಂದ್ರ ಗೌಡಪ್ಪಗೋಳ, ಎಸ್.ವ್ಹಿ.ದೇಮಶೆಟ್ಟಿ, ಮಹಾಂತೇಶ ತಾವಂಶಿ, ಅಬ್ಬಾಸ್ ದೇಸಾಯಿ ಸೇರಿದಂತೆ ನಗರಸಭೆ ಉಪಸ್ಥಿತರಿದ್ದರು.

ಮಳೆಯಿಂದ ಮನೆ ಕುಸಿದು ಮಹಿಳೆಗೆ ಗಾಯ

ಬೆಳಗಾವಿ: ನಿರಂತರ ಮಳೆಯಿಂದಾಗಿ ಬೆಳಗಾವಿ ತಾಲೂಕಿನ ಬಡಾಲ ಅಂಕಲಗಿ ಗ್ರಾಮದಲ್ಲಿ ಮನೆಯೊಂದು ಕುಸಿದು ಮಹಿಳೆಯೋರ್ವಳು ಗಾಯಗೊಂಡಿದ್ದು, ಸಚಿವೆ ಹೆಬ್ಬಾಳ್ಕರ್ ಅವರು ಆಸ್ಪತ್ರೆಗೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು.

ಪಾರ್ವತಿ ಹೊದೆಪ್ಪ ಹುದಲಿ (31) ಎಂಬ ಮಹಿಳೆ ಮನೆ ಗೋಡೆ ಕುಸಿದ ಘಟನೆಯಲ್ಲಿ ಗಾಯಗೊಂಡಿದ್ದಾಳೆ. ಆಕೆಯ ಕೈಕಾಲು ಹಾಗೂ ಸೊಂಟಕ್ಕೆ ತೀವ್ರ ಗಾಯಗಳಾಗಿವೆ. ಚಿಕಿತ್ಸೆಗಾಗಿ ಬೆಳಗಾವಿಯ ಜಿಲ್ಲಾ ಆಸ್ಪತ್ರೆಗೆ ಅವರನ್ನು ದಾಖಲಿಸಲಾಗಿದೆ. ಮಾಹಿತಿ ತಿಳಿಯುತ್ತಿದ್ದಂತೆ ಮಹಿಳಾ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಜಿಲ್ಲಾಸ್ಪತ್ರೆಗೆ ದೌಡಾಯಿಸಿ ಗಾಯಾಳು ಮಹಿಳೆಯ ಪರಿಸ್ಥಿತಿಯನ್ನು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು, ಮನೆ ಕಳೆದುಕೊಂಡ ಕುಟುಂಬದವರಿಗೆ ಸರಕಾರದಿಂದ ಪರಿಹಾರ ವಿತರಿಸಲಾಗುವುದು. ಈಗಾಗಲೇ ಅಧಿಕಾರಿಗಳೊಂದಿಗೆ ಹಾನಿಗೊಳಗಾದ ಮನೆಗಳ ಪರಿಶೀಲನೆಯನ್ನು ನಡೆಸಲಾಗಿದೆ ಎಂದು ತಿಳಿಸಿದರು. ಇನ್ನು ಬಡಾಲ ಅಂಕಲಗಿಯಲ್ಲಿ ಮನೆ ಬಿದ್ದು ಗಾಯಗೊಂಡ ಮಹಿಳೆಯ ಚಿಕಿತ್ಸೆ ವೆಚ್ಚವನ್ನು ಸರಕಾ ಭರಿಸಲಿದ್ದು, ವೈಯಕ್ತಿಕವಾಗಿಯೂ ಆರ್ಥಿಕ ಸಹಾಯ ಮಾಡಿರುವುದಾಗಿ ತಿಳಿಸಿದರು.

ಪ್ರವಾಹ ಸಂಕಷ್ಟ ತೋಡಿಕೊಂಡ ಗ್ರಾಮಸ್ಥರು

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಶನಿವಾರ ಬೆಳಗಾವಿ ಗ್ರಾಮೀಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಪ್ರವಾಹ ಪರಿಸ್ಥಿತಿಯ ಅವಲೋಕನ ನಡೆಸಿದ್ದು, ಜನರ ಸಂಕಷ್ಟಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದಾರೆ. ಜತೆಗೆ, ತಮ್ಮ ಲಕ್ಷ್ಮೀ ತಾಯಿ ಫೌಂಡೇಶನ್ ನಿಂದ ನೊಂದವರಿಗೆ ಆರ್ಥಿಕ ನೆರವನ್ನೂ ನೀಡುತ್ತಿದ್ದಾರೆ.

ಶನಿವಾರ ಬೆಳಗ್ಗೆ ಪ್ರವಾಹಪೀಡಿತ ಬಸುರ್ತೆ ಗ್ರಾಮಕ್ಕೆ ಭೇಟಿ ನೀಡಿ, ಹಾನಿಗೊಳಗಾಗಿರುವ ಸ್ಥಳಗಳ ಪರಿಶೀಲನೆ ನಡೆಸಿದರು. ಸಂತ್ರಸ್ತರ ಕಷ್ಟಗಳನ್ನು ಆಲಿಸಿದರು. ಸರಕಾರದಿಂದ ಸೂಕ್ತ ಪರಿಹಾರ ಒದಗಿಸಲಾಗುವುದು. ಯಾರೂ ಧರ್ಯಗುಂದುವುದು ಬೇಡ ಎಂದು ಧೈರ್ಯ ತುಂಬಿದರು. ನಂತರ ಕೆಲವು ಸಂತ್ರಸ್ತರಿಗೆ ಲಕ್ಷ್ಮೀತಾಯಿ ಫೌಂಡೇಷನ್ ವತಿಯಿಂದ ಆರ್ಥಿಕವಾಗಿ ಸಹಾಯ ಮಾಡಿದರು. ನಂತರ ಸತತ ಸುರಿಯುತ್ತಿರವ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿರುವ ಹಿನ್ನೆಲೆಯಲ್ಲಿ ಬೆಕ್ಕಿನಕೇರಿ ಗ್ರಾಮಕ್ಕೆ ಭೇಟಿ ನೀಡಿ, ಹಾನಿಗೊಳಗಾಗಿರುವ ಸ್ಥಳಗಳ ಬಗ್ಗೆ ಮಾಹಿತಿ ಪಡೆದರು. ಎಲ್ಲವನ್ನೂ ಪರಿಶೀಲನೆ ನಡೆಸಿದ ಸಚಿವರು, ಸಂತ್ರಸ್ತರ ಸಂಕಷ್ಟಕ್ಕೆ ಸ್ಪಂದಿಸಿದರು. ಕೆಲವು ಸಂತ್ರಸ್ತರಿಗೆ ಲಕ್ಷ್ಮೀತಾಯಿ ಫೌಂಡೇಷನ್ ವತಿಯಿಂದ ಆರ್ಥಿಕ ನೆರವು ನೀಡಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಹಾಗೂ ಇನ್ನಿತರ ಇಲಾಖೆಯ ಅಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್

ಎಡೆಬಿಡದೆ ಮಳೆಯಲ್ಲೂ ನಿರಂತರವಾಗಿ ಜನರೆಡೆಗೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ನಡೆಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ. ಜನರ ಕಷ್ಟಕ್ಕೆ ಸ್ಪಂದಿಸುವ ಮೂಲಕ ಎಲ್ಲ ಸಂದರ್ಭದಲ್ಲೂ ಜನರ ಜೊತೆ ನಾನಿದ್ದೇನೆ ಎನ್ನುವ ಸಂದೇಶವನ್ನು ಸಚಿವರು ನೀಡುತ್ತಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಗೆ ಪೂರ್ವ ಸಿದ್ಧತೆ

ಸವದತ್ತಿ: ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ದತೆ ಮಾಡಿಕೊಳ್ಳಬೇಕೆಂದು ಶಾಸಕ ವಿಶ್ವಾಸ ವೈದ್ಯ ಅಧಿಕಾರಿಗಳಿಗೆ ಸೂಚಿಸಿದರು.

ಇಲ್ಲಿನ ತಾಪಂ ಸಭಾಂಗಣದಲ್ಲಿ ಶನಿವಾರ ಸ್ವಾತಂತ್ರ್ಯ ದಿನಾಚರಣೆ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯೋತ್ಸವದ ದಿನ ಎಲ್ಲಾ ಸರಕಾರಿ ಕಚೇರಿ, ಶಾಲಾ-ಕಾಲೇಜು, ಆರೋಗ್ಯ ಕೇಂದ್ರ, ಅಂಗನವಾಡಿ ಕೇಂದ್ರಗಳಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಮತ್ತು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವಿಟ್ಟು ಪೂಜೆ ಸಲ್ಲಿಸಬೇಕು. ಮೈದಾನದಲ್ಲಿ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಪ್ರತ್ಯೇಕವಾಗಿ ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ, ಪೆಂಡಾಲ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಹಾಗೂ ಎಸ್ ಎಸ್ ಎಲ್ ಸಿ, ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ತಾಲೂಕಿನ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕಾರ್ಯೋನ್ಮುಖರಾಗಿ ಸ್ವಾತಂತ್ರ್ಯೋತ್ಸವದ ಎಲ್ಲ ಕಾರ್ಯಕ್ರಮಗಳನ್ನು ಯೋಜಿತವಾಗಿ ರೂಪಿಸಿಕೊಂಡು ತಮಗೆ ವಹಿಸಲಾದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.ತಹಸೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ ಮಾತನಾಡಿ, ಆ.15 ರಂದು ಬೆಳಿಗ್ಗೆ 8:30ಕ್ಕೆ ತಹಸೀಲ್ದಾರ್ ಕಚೇರಿಯಲ್ಲಿ ಧ್ವಜಾರೋಹಣ ನೆರವೇರಿಸಲಾಗುವದು. ನಂತರ ಎಸ್ ಕೆ ಹೈಸ್ಕೂಲ್ ಮೈದಾನದಲ್ಲಿ ಬೆಳಿಗ್ಗೆ 9:30ಕ್ಕೆ ಶಾಸಕರು ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿ, ಸ್ವಾತಂತ್ರ್ಯೋತ್ಸವದ ಸಂದೇಶ ನೀಡುವರು. 78ನೇ ಸ್ವಾತಂತ್ರ್ಯೋತ್ಸವದ ದಿನಾಚರಣೆಯ ದಿನ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಎಲ್ಲ ಇಲಾಖೆ ಅಧಿಕಾರಿಗಳು, ಸಿಬ್ಬಂದಿಗಳು ತಪ್ಪದೇ ನಿಗದಿತ ಸ್ಥಾನದಲ್ಲಿ ಉಪಸ್ಥಿತರಿರಬೇಕು. ರಾಷ್ಟ್ರೀಯ ಹಬ್ಬವಾದ ಸ್ವಾತಂತ್ರ್ಯೋತ್ಸವ ಸಮಾರಂಭವನ್ನು ಅರ್ಥಪೂರ್ಣವಾಗಿ ಆಚರಿಸಿ ಯಶಸ್ವಿಗೊಳಿಸೋಣ ಎಂದರು.

ಇಲ್ಲಿನ ತಾಪಂ ಸಭಾಂಗಣದಲ್ಲಿ ಸ್ವಾತಂತ್ರ್ಯ ದಿನಾಚರಣೆ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಶಾಸಕ ವಿಶ್ವಾಸ ವೈದ್ಯ ಮಾತನಾಡಿದರು.

ಗೋಕಾಕ ಸೈಕಲ್ ಮೂಲಕ 1111 ದಿನಗಳ ಕಾಲ ಜಗತ್ತು ಸುತ್ತಿ ಅಭಿಮಾನ ಮೆರೆದ ತಮಿಳುನಾಡಿನ ಪುನೀತ್ ರಾಜಕುಮಾರ ಅಭಿಮಾನಿ ರಾಜ್ ಸೇಲ್ವನ್ ಶುಕ್ರವಾರದಂದು ಸಂಜೆ ಭಾರತ ರಾಜ್ಯಗಳು ಸೇರಿದಂತೆ ದೇಶವನ್ನು ಸುತ್ತುತ್ತ ಗೋಕಾಕ ನಗರಕ್ಕೆ ಆಗಮಿಸಿದ ಅವರನ್ನು ಶಾಸಕ ರಮೇಶ ಜಾರಕಿಹೊಳಿ ಅವರ ಗೃಹಕಚೇರಿ ಮುಂಭಾಗ ಸಹಾಯಧನ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಗುರು ಪವಾಡೆ, ಎಮ್ ಎಲ್ ತೋಳಿನವರ, ಶಾಸಕರ ಕಚೇರಿ ಸಹಾಯಕರಾದ ಸುರೇಶ ಸನದಿ ಇದ್ದರು.

ಕುಸಿದ ಗೋಪುರ ಸ್ಥಳಕ್ಕೆ ಶಾಸಕ ಭೇಟಿ

ಚನ್ನಮ್ಮನ ಕಿತ್ತೂರು : ಇಲ್ಲಿಯ ಐತಿಹಾಸಿಕ ಗಡಾದ ಮರಡಿಯ ಮೇಲೆ ಇರುವ ಕಾವಲು ಗೋಪುರ ಮಳೆಯಿಂದ ಕುಸಿದ ಬಿದ್ದ ಸ್ಥಳವನ್ನು ಶಾಸಕ ಬಾಬಾಸಾಹೇಬ ಪಾಟೀಲ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಇದೆ ಕಾವಲು ಗೋಪುರದ ಮೇಲೆ ಮೇಲೆ ಆ.15 ರಂದು ಧ್ವಜಾರೋಹಣ ನೆರವೇರಿಸಲಾಗುತ್ತಿತು. ಆದರೆ ಈ ಗೋಪುರವನ್ನು ಅಭಿವೃದ್ಧಿ ಪಡೆಸಲಾಗಿತ್ತು. ಆದರೆ ಗುತ್ತಿಗೆದಾರ ಕಾಮಗಾರಿಯನ್ನು ಅವೈಜ್ಞಾನಿಕವಾಗಿ ಕಟ್ಟಿದ್ದರಿಂದ ಮಳೆಗೆ ಕುಸಿದು ಬಿದ್ದಿದೆ. ಪರ್ಯಾಯವಾಗಿ ಪಕ್ಕದಲ್ಲಿರುವ ಗಡಾಡಮರಡಿ ಮೇಲೆ ಇರುವ ಇನ್ನೊಂದು ಧ್ವಜ ಸ್ತಂಭದ ಮೇಲೆ ಆ.15 ರಂದು ಧ್ವಜಾರೋಹಣ ನೆರವೇರಿಸಲಾಗುವುದು ಎಂದರು. ಗಡಾದ ಮರಡಿಯು ಐತಿಹಾಸಿಕ ತಾಣವಾಗಿದ್ದು, ಗಡಾದ ಮರಡಿ ಮಹತ್ವ ಕಾಪಾಡಲು ಮತ್ತೆ ಮರು ನಿರ್ಮಾಣ ಮಾಡುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದರು. ಲೋಕೋಪಯೋಗಿ ಸಹಾಯಕ ಕಾರ್ಯನಿವಾರ್ಹಕ ಅಭಿಯಂತರ ಸಂಜೀವ ಮಿರಜಕರ ಉಪಸ್ಥಿತರಿದ್ದರು.

ಮೂಢನಂಬಿಕೆ ತೊಡೆದು ದೇಹದಾನ ಮಾಡಿ

ಬೆಳಗಾವಿ: ಕೆಲವೊಮ್ಮೆ ಕಾನೂನು ಮಾಡದ ಜೀವ ಉಳಿಸುವ ಕಾರ್ಯವನ್ನು ಮಾನವೀಯತೆ ಮಾಡುತ್ತದೆ. ಆದ್ದರಿಂದ ಜೀವ ಉಳಿಸುವ ಈ ಮಹೊನ್ನತ ಕಾರ್ಯದಲ್ಲಿ ಭಾಗವಹಿಸುವ ಸಂಕಲ್ಪವನ್ನು ಜನರು ಮಾಡಬೇಕೆಂದು ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ವೈದ್ಯಕೀಯ ನಿರ್ದೇಶಕರಾದ ಡಾ. (ಕರ್ನಲ್) ಎಂ ದಯಾನಂದ ಅಭಿಪ್ರಾಯಪಟ್ಟರು.

ಶನಿವಾರ ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದಲ್ಲಿ ರಾಷ್ಟ್ರೀಯ ಅಂಗಾಂಗ ದಾನ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿಶ್ವದ ಅನೇಕ ದೇಶಗಳಲ್ಲಿ ಅಂಗಾಂಗ ಕಸಿ ಹಲವು ವರ್ಷಗಳಿಂದ ಮಾಡುತ್ತಿದ್ದಾರೆ. ಅದರಂತೆ ಆ ದೇಶದ ಜನ ಅಂಗಾಂಗಳನ್ನು ದಾನ ಮಾಡಲು ಮೊದಲೇ ನಿರ್ಧರಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಅದು ವ್ಯತಿರಿಕ್ತವಾಗಿದೆ ಜನ ಅಂಗಾಂಗ ದಾನ ಮಾಡಲು ಮುಂದೆ ಬರಬೇಕು ಎಂದರು. ಈ ಮೊದಲು ಕೇವಲ, ಕಿಡ್ನಿ, ಹೃದಯ, ಲೀವರ, ಕಣ್ಣು ಮಾತ್ರವೇ ಕಸಿ ಮಾಡುತ್ತಿದ್ದರು. ಈಗ ಕೈಗಳನ್ನು ಕೂಡ ಮಾಡುತ್ತಿದ್ದಾರೆ. ಅತೀ ಅಂಗಾಂಗ ಕಸಿ ಮಾಡಿದ ರಾಜ್ಯದ ಎರಡನೇ ಸ್ಥಾನದಲ್ಲಿ ನಮ್ಮ ಆಸ್ಪತ್ರೆ ಇದೆ. ಅತ್ಯಂತ ಕಠಿಣ ಕಾರ್ಯವಾಗಿದ್ದು, ಅರ್ಪಣಾ ಮನೋಭಾವದಿಂದ ಕೂಡಿದೆ. ಲಂಗ ಕಸಿ ಮಾಡಲು ತಯಾರಿದ್ದು, ಅದು ಶೀಘ್ರದಲ್ಲಿಯೇ ನೆರವೇರಲಿದೆ ಎಂದು ತಿಳಿಸಿದರು. ಡಾ. ಆರ್.ಬಿ.ನೇರ್ಲಿ ಮಾತನಾಡಿ, ಅಂಗಾಂಗ ದಾನದಲ್ಲಿ ಕಾನೂನಿನ ತೊಡಕು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ನಯನಾ ನೇರ್ಲಿ ಹೇಳಿದರು.

ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದಲ್ಲಿ ರಾಷ್ಟ್ರೀಯ ಅಂಗಾಂಗ ದಾನ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಡಾ. ಸಂತೋಷ ಪಾಟೀಲ, ಡಾ. ಸ್ನೇಹಾ ಚಿಕ್ಕೋಡಿ, ಡಾ. ಅಭಿಷೇಕ ಪಾಟೀಲ, ರುದ್ರಗೌಡ ಪಾಟೀಲ, ನರ್ಸಿಂಗ ಸಿಬ್ಬಂದಿ ಗಳಾದ ಸುಭೋದಕಾಂತ ದರಗಶಟ್ಟಿ, ಅನಿಲ ಥರ್ಥಾರೆ, ಅಂಗಾಂಗ ದಾನಿಗಳಾದ ಹಣ ಮಂತಪ್ಪ ಸಾರ್ವಿ, ರುದ್ರಪ್ಪ ಕುಮೋಜಿ, ಮುಕುಂದ ರತನ ಅವರ ಕುಟುಂಬ ಸದಸ್ಯ ರನ್ನು ಸತ್ಕರಿಸಲಾಯಿತು. ಈ ಸಂದರ್ಭದಲ್ಲಿ, ಡಾ. ಬಸವರಾಜ ಬಿಜ್ಜರಗಿ, ಡಾ. ಆರಿಫ್ ಮಾಲ್ದಾರ, ಡಾ. ಸುದರ್ಶನ ಚೌಗಲಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಕಾವ್ಯಾ ಪಾತ್ರೋಟ ನಿರೂಪಿಸಿದರು. ಡಾ. ರಾಜಶೇಖರ ಸೋಮನಟ್ಟಿ ವಂದಿಸಿದರು.

ವಿದ್ಯಾರ್ಥಿ ಜೀವನಕ್ಕೆ ಶ್ರದ್ಧೆ, ತಾಳ್ಮೆ ಬೇಕು

ಬೆಳಗಾವಿ: ತಾಳ್ಮೆ ಎಂಬುದು ದುರ್ಬಲತೆಯಲ್ಲ. ಅದು ವ್ಯಕ್ತಿಯನ್ನು ದೀರ್ಘಕಾಲ ಸ್ಥಿರವಾಗಿ ನಿಲ್ಲಿಸುವ ಪ್ರಬಲ ಶಕ್ತಿ. ಹಾಗೆಯೇ ಶ್ರದ್ಧೆ ಎಂಬುದು ಕೇವಲ ಭಕ್ತಿಗೆ ಸೀಮಿತವಾಗಿಲ್ಲ. ಮಾಡುವ ಕೆಲಸದಲ್ಲಿ ತನ್ನನ್ನು ತಾನು ತನ್ಮಯವಾಗಿ ತೊಡಗಿಸಿಕೊಳ್ಳುವುದು. ವಿದ್ಯಾರ್ಥಿ ಗಳ ಜೀವನ ಬಾಲ್ಯದಿಂದಲೇ ಶ್ರದ್ಧೆ ಮತ್ತು ತಾಳ್ಮೆಯಿಂದ ಕೂಡಿ ರಬೇಕೆಂದು ನಾಗನೂರು ರುದ್ರಾಕ್ಷಿ ಮಠದ ಡಾ. ಅಲ್ಲಮಪ್ರಭು ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು. ಶನಿವಾರ ನಾಗನೂರು ರುದ್ರಾಕ್ಷಿ ಮಠದ ಪ್ರಭುದೇವ ಸಭಾಗ್ರಹದಲ್ಲಿ ಜರುಗಿದ ಸಿದ್ಧರಾ ಮೇಶ್ವರ ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಹಾಗೂ ಪಠ್ಯೇತರ ಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಮುಂದುವರೆದು ಮಾತನಾಡಿದ ಅವರು ಸದೃಢ ಮನಸ್ಸು, ಏಕಾಗ್ರತೆ, ಪರಿಶ್ರಮ ಮತ್ತು ಮಾಡುವ ಕಾರ್ಯದಲ್ಲಿ ದೃಢತೆ ಇದ್ದರೆ ಯಾವ ಗುರಿಯೂ ಅಸಾಧ್ಯವಲ್ಲ ಎಂದರು. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕೆ.ಎಲ್.ಇ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಧ್ಯಾಪಕ ಸೌರಭ ಕುಲಕರ್ಣಿ ಮಾತನಾಡಿ, ಶಿಕ್ಷಣ ಪಡೆಯುವುದೆಂದರೆ ಒಂದು ರೀತಿಯ ತಪಸು ಮಾಡಿದಂತೆ. ಅದಕ್ಕಾಗಿ ವಿದ್ಯಾರ್ಥಿಗಳು ಅನೇಕ ರೀತಿಯ ತ್ಯಾಗಗಳನ್ನು ಮಾಡಬೇಕಾಗುತ್ತದೆ. ತ್ಯಾಗ, ಪರಿಶ್ರಮದ ಫಲವಾಗಿ ಉತ್ತಮ ಶಿಕ್ಷಣ ದೊರೆಯುತ್ತದೆ ಎಂದರು.

ಸಮಾಚಾರ ಸಣ್ಣದಲ್ಲ

ಡಿ.ಎನ್.ಅಕ್ಕಿ ಅವರ ಕೃತಿ ಬಿಡುಗಡೆ ಇಂದು

ಇಂಡಿ: ಆ. 4 ರಂದು ಬೆಳಿಗ್ಗೆ 10.30 ಗಂಟೆಗೆ ಬಿ.ಎಂ ಶ್ರೀಸ್ಮಾರಕ ಪ್ರತಿಷ್ಠಾನ ಎನ್.ಆರ್ ಕಾಲೋನಿ, ಬೆಂಗಳೂರು ನಗರದಲ್ಲಿ ಕವಿ ಕುಂಚ ಪ್ರಕಾಶನ ಇಂಡಿ,

ಕಲಾವಿದ ಡಿ.ಎನ್.ಅಕ್ಕಿ ಅವರ ಕೃತಿ ಪುಸ್ತಕ ಬಿಡುಗಡೆ ಸಮಾರಂಭ ಜರುಗಲ್ಲಿದ್ದು, ಕಾರ್ಯಕ್ರಮದ ಕೃತಿ ಬಿಡುಗಡೆ ನಾಡೋಜ ಪ್ರೊ. ಹಂಪ ನಾಗರಾಜಯ್ಯ, ಪುಸ್ತಕ ಕುರಿತು ತುಮಕೂರಿನ ಹಿರಿಯ ವಿದ್ವಾಂಸ ಡಾ.ಎಸ್.ಪಿ ಪದ್ಮಪ್ರಸಾದ.ಬೆಂಗಳೂರಿನ ನಿವೃತ್ತ ಪ್ರಾಚಾರ್ಯ ಟಿ.ಎಸ್ ಗೋಪಾಲ, ಗೌರವ ಉಪಸ್ಥಿತಿ ಡಾ.ಚನ್ನಪ್ಪ ಕಟ್ಟಿ , ಅಧ್ಯಕ್ಷತೆ ಖ್ಯಾತ ಬರಹಗಾರ ಸಂಗಮೇಶ ಬಾವಡಗಿ, ಮುಖ್ಯ ಅತಿಥಿಗಳಾಗಿ ನಿವೃತ್ತ ಎಸ್.ಪಿ ಸಿ.ಎನ್ ಭಂಡಾರೆ, ಡಾ.ಶಿವಶರಣ ಅರುಣಿ, ಸಂಪಾದಕ ದೇವು ಪತ್ತಾರ ವಿಶೇಷ ಅಹ್ವಾನಿತರಾಗಿ ಗಿರಿಧರ ವಸಂತರಾವ್ ಸರಾಫ್, ಶ್ರೀಧರ ವಸಂತರಾವ್ ಸರಾಫ ಶ್ರೀಧರ ಬನವಾಸಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಕನ್ನಡ ಸಾಹಿತ್ಯಮತ್ತು ಸಾಂಸ್ಕೃತಿಕ ಸಂಘ (ರಿ) ರುಕ್ಮಾಪೂರ ಅವರ ಸಹಕಾರ.

ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ವಿಜಯಪುರ: ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಡಿ ಸಾಲ-ಸೌಲಭ್ಯ ಪಡೆಯಲು ಆಸಕ್ತ ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಸಾಲ-ಸೌಲಭ್ಯ ಪಡೆಯಲಿಚ್ಛಿಸುವವರು ಸೇವಾ ಸಿಂಧು ಪೋರ್ಟಲ wwww. sevasindhu.karnataka.gov.in ಮೂಲಕ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಆ.31.2024 ಕೊನೆಯ ದಿನಾಂಕವಾಗಿದೆ. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್ ಸೈಟ್ www.kmmd. Karnataka.gov.in ಅಥವಾ ದೂರವಾಣಿ ಸಂಖ್ಯೆ 080-22374832, 805077004, 805077005 ಅಥವಾ ವಿಜಯಪುರ ಜಿಲ್ಲಾ ಕಚೇರಿ ದೂರವಾಣಿ 08352-258128 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ವಿಜಯಪುರ: 33 ಕೆವಿ ಹೊನ್ನುಟಗಿ ವಿದ್ಯುತ್ ವಿತರಣಾ ಕೇಂದ್ರದ ಹತ್ತಿರ ಎಚ್.ಟಿ ಲೈನ್ ಸ್ಥಳಾಂತರಣ ಕಾಮಗಾರಿ ಹಿನ್ನೆಲೆಯಲ್ಲಿ ಸುರಕ್ಷತಾ ದೃಷ್ಟಿಯಿಂದ ಎಫ್ 5 ಮದಬಾವಿ ಎನ್‌ಜೆವೈ ಫೀಡರ್ ಮೇಲೆ ಬರುವ ಕವಲಗಿ, ಕವಲಗಿ ತಾಂಡಾ, ಮದಬಾವಿ ಹಾಗೂ ಮದಬಾವಿ ತಾಂಡಾ ಮಾರ್ಗಗಳಲ್ಲಿ ಆ.5ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಹೆಸ್ಕಾಂನ ವಿಜಯಪುರ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮರಾಠ ನಿಗಮ : ಆನ್‌ಲೈನ್ ಅರ್ಜಿ

ವಿಜಯಪುರ: ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುವ ವಿವಿಧ ಯೋಜನೆಗಳಡಿ ಸಾಲ-ಸೌಲಭ್ಯ ಪಡೆಯಲು ಆಸಕ್ತ ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಮೃತ ಮಹೋತ್ಸವದ ಮುನ್ನಡೆ ಯೋಜನೆಯಡಿ ಸಾಲ-ಸೌಲಭ್ಯ ಪಡೆಯಲಿಚ್ಛಿಸುವವರು ಸೇವಾ ಸಿಂಧು ಪೋರ್ಟಲ್ www.sevasindhu.karntaka.gov.in ಮೂಲಕ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಆ. 31.2024 ಕೊನೆಯ ದಿನಾಂಕವಾಗಿದೆ. ಶೈಕ್ಷಣಿಕ ಸಾಲ ಯೋಜನೆಗಳಿಗೆ ಕೊನೆ ದಿನಾಂಕ ಇರುವುದಿಲ್ಲ. ಸ್ವಾತಂತ್ರ್ಯ ಮಹೋತ್ಸವದ ಅಮೃತ ಯೋಜನೆಯಡಿ www.kaushalkar.gov.inಮೂಲಕ ಅರ್ಜಿ ಸಲ್ಲಿಸಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್ ಸೈಟ್ kmcdc. Karnataka.gov.in ಅಥವಾ ದೂರವಾಣಿ ಸಂಖ್ಯೆ 080-29903994, 8867537799 ಅಥವಾ ವಿಜಯಪುರ ಜಿಲ್ಲಾ ಕಚೇರಿ ದೂರವಾಣಿ 08352-258128 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

{ಶಿವರಾಜ ತಂಗಡಗಿ } ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಬಿಜೆಪಿಗರು ತಮ್ಮ ಅಧಿಕಾರವಧಿಯಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆಸಿ ಪಾಪ ಮಾಡಿದ್ದಾರೆ. ಪಾದಯಾತ್ರೆ ಮಾಡಿ, ಪಾಪ ಪರಿಹಾರ ಮಾಡಿಕೊಳ್ಳಲಿ. ಇದರಿಂದ ಅವರ ಆರೋಗ್ಯ ಸುಧಾರಿಸುತ್ತದೆ. ನಮಗೆ ಏನೂ ಆಗುವುದಿಲ್ಲ. ಸಿಎಂ ಸಿದ್ದರಾಮಯ್ಯ ಪಾರದರ್ಶಕವಾಗಿದ್ದಾರೆ.

ಡಾ. ಅಂಬೇಡ್ಕರ್ ವಸತಿ ನಿಲಯದಲ್ಲಿ ಆಹಾರದಲ್ಲಿ, ಹುಳುಗಳು : ಅವ್ಯವಸ್ಥೆಗೆ ಆಕ್ರೋಶ

ಅಡುಗೆ ಸಿಬ್ಬಂದಿಯ ನಿರ್ಲಕ್ಷ್ಯ ಗ್ರಾಪಂ ಅಧ್ಯಕ್ಷ ಲಮಾಣಿ ತರಾಟೆ

ಮುದ್ದೇಬಿಹಾಳ: ಪಟ್ಟಣದ ಹುಡ್ಕೋದಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆಹಾರದಲ್ಲಿ ಶನಿವಾರ ಸತ್ತ ನೊಣಗಳು ಮತ್ತು ಹುಳುಗಳು ಕಂಡುಬಂದಿವೆ. ಇಲ್ಲಿನ ಮೇಲ್ವಿಚಾರಕರ ನಿರ್ಲಕ್ಷ್ಯ ಮತ್ತು ಅಡುಗೆ ಮಾಡುವವರ ಬೇಜವಾಬ್ದಾರಿಯೇ ಇದಕ್ಕೆಲ್ಲ ಕಾರಣ ಎಂದು ಕುಂಟೋಜಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಜಗದೀಶ ಲಮಾಣಿ ಆಕ್ರೋಶ ಹೊರಹಾಕಿದ್ದಾರೆ.

ಪರಿಶಿಷ್ಟ ಜಾತಿಯ ಮಕ್ಕಳು ಇರುವ ಈ ವಸತಿನಿಲಯದಲ್ಲಿ ಕಳೆದ ಅನೇಕ ದಿನಗಳಿಂದ ಆಹಾರದಲ್ಲಿ ಈ ರೀತಿಯ ಹುಳುಗಳು ಮತ್ತು ನೊಣಗಳು ಕಂಡು ಬಂದಿದ್ದು ಆಕಸ್ಮಿಕ ಎಂದು ಇಲ್ಲಿನ ವಿದ್ಯಾರ್ಥಿನಿಯರು ಸಹಿಸಿಕೊಂಡು ಬಂದಿದ್ದರು. ಒಂದೆರಡು ಬಾರಿ ಇಂತಹ ಆಹಾರ ಊಟ ಮಾಡಿ ಮಕ್ಕಳು ಅಸ್ವಸ್ಥಗೊಂಡು ಆಸ್ಪತ್ರೆಗೂ ಸೇರಿದ ಘಟನೆಗಳು ನಡೆದಿವೆ. ಇಷ್ಟೆಲ್ಲಾ ಆದಮೇಲೂ ಇಂತಹ ಘಟನೆಗಳು ಮೇಲಿಂದ ಮೇಲೆ ನಡೆದಿದ್ದರಿಂದ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದರು. ಈ ವಿಷಯವನ್ನು ಇಲ್ಲಿನ ವಿದ್ಯಾರ್ಥಿನಿಯೊಬ್ಬಳ ಪಾಲಕರು ನೀಡಿದ್ದ ಮಾಹಿತಿಯ ಮೇರೆಗೆ ಕುಂಟೋಜಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಜಗದೀಶ ಲಮಾಣಿ ಇವರು ವಸತಿ ನಿಲಯಕ್ಕೆ ಭೇಟಿ ನೀಡಿ ಮೇಲಾಧಿಕಾರಿ ಉಮೇಶ ಲಮಾಣೀ ಇವರನ್ನು ಪೋನ್ ಮಾಡಿದರು. ಅವರ ಪೋನನ್ನು ನಿರ್ಲಕ್ಷ್ಯ ಮಾಡಿದ್ದರಿಂದ ನಮ್ಮ ವರದಿಗಾರರಿಗೆ ಈ ವಿಷಯ ತಿಳಿಸಿ ನಮ್ಮ ವರದಿಗಾರರಿಂದ ಫೋನ್ ಮಾಡಿಸಿದಾಗ ಅಧಿಕಾರಿ ಉಮೇಶ ಲಮಾಣಿ ಸ್ಥಳಕ್ಕೆ ಬಂದರು.

ಇಷ್ಟೆಲ್ಲ ನಡೆದ ಮೇಲೆಯೂ ವಿದ್ಯಾರ್ಥಿನಿಯರು ಸುಮ್ಮನಾಗದೆ ಇಲ್ಲಿನ ಅಡುಗೆಯವರು ಸರಿಯಾಗಿ ಅಡುಗೆಯನ್ನು ಮಾಡುವದಿಲ್ಲ ತರಕಾರಿಗಳನ್ನು ಬಳಕೆಯೇ ಮಾಡುವದಿಲ್ಲ, ಉಪ್ಪು ಖಾರ ಜಾಸ್ತಿ ಹಾಕಿ ಅಡುಗೆ ಮಾಡುತ್ತಾರೆ. ಅಂತಹ ಅಡುಗೆಯನ್ನು ಊಟ ಮಾಡಲು ಅಸಾಧ್ಯವಾಗಿರುವದರಿಂದ ಮಾಡಿದ ಅಡಿಗೆಯಲ್ಲಿ ಶೇ.60 ರಷ್ಟು ಅಡುಗೆಯನ್ನು ಚರಂಡಿಗೆ

ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ಆಹಾರದಲ್ಲಿ ಕಂಡು ಬಂದ ನೊಣಗಳು ಮತ್ತು ಹುಳುಗಳು.

ಚಲ್ಲಲಾಗುತ್ತಿದೆ. ಕೆಲವು ಬಾರಿ ಊಟವನ್ನು ಮಾಡದೇ ಇರುವದರಿಂದ ವಿದ್ಯಾರ್ಥಿನಿಯರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದ್ದು ನೆಮ್ಮದಿಯಿಂದ ಊಟ ಮಾಡಿ ಅಭ್ಯಾಸ ಮಾಡಲು ಆಗುತ್ತಿಲ್ಲ ಎಂದು ತಮ್ಮ ಅಳಲನ್ನು ತೋಡಿಕೊಂಡ ಘಟನೆ ನಡೆಯಿತು.

ಈ ಸಂದರ್ಭದಲ್ಲಿ ಅಸಮಾಧಾನಗೊಂಡ ಕುಂಟೋಜಿ ಗ್ರಾಮ ಪಂಚಾಯತಿಯ ಅಧ್ಯಕ್ಷ ಜಗದೀಶ ಲಮಾಣಿ ಇಂತಹ ಘಟನೆಗಳು ಮತ್ತೊಮ್ಮೆ ಕಂಡು ಬರದಂತೆ ಎಚ್ಚರಿಕೆವಹಿಸಬೇಕೆಂದು ಹೇಳೀ ವಿದಾರ್ಥಿನಿಯರಿಗೆ ಆರೋಗ್ಯದ ಕಡೆಗೆ ಮತ್ತು ಅಭ್ಯಾಸದ ಕಡೆಗೆ ಹೆಚ್ಚಿನ ಗಮನಹರಿಸಬೇಕೆಂದು ಹೇಳಿದರು.

ಈ ಘಟನೆಗೆ ಕಾರಣರಾದವರನ್ನು ಬೇರೆಕಡೆಗೆ ಕಳಿಸಲಾಗಿದೆ. ಮತ್ತು ಅಡುಗೆಯ ಮೇಲ್ವಿಚಾರಕಿಯರನ್ನು ಕರೆದು ಎಚ್ಚರಿಕೆ ನೀಡಿಲಾಗಿದ್ದು. ಇಂತಹ ಪ್ರಕರಣ ಮರುಕಳಿಸದಂತೆ ಕ್ರಮಗಳನ್ನು ಮಕ್ಕಳ ಆರೋಗ್ಯದ ಕಡೆಗೂ ಹೆಚ್ಚಿನ ನಿಗಾವಹಿಸಲಾಗುವುದು.

ಅಧಿಕಾರಿಯ ಬೇಜವಾಬ್ದಾರಿ ವರ್ತನೆ

ಜಗದೀಶ ಲಮಾಣಿ ಅವರು ಅಧಿಕಾರಿಯ ಬೇಜವಾಬ್ದಾರಿ ವರ್ತನೆಯನ್ನು ಖಂಡಿಸಿದರು. ಅದೇ ಸಮಯದಲ್ಲಿ ಮದ್ಯಾಹ್ನದ ಊಟಕ್ಕೆ ಕುಳಿತಿದ್ದ ವಿದ್ಯಾರ್ಥಿನಿಯೊಬ್ಬಳ ತಟ್ಟೆಯಲ್ಲಿ ಮೂರು ಸತ್ತ ನೊಣಗಳು ಕಂಡು ಬಂದವು. ಇದನ್ನೇ ಆ ವಿದ್ಯಾರ್ಥಿನಿಯು ಅಧಿಕಾರಿಗೆ ಎಲ್ಲರ ಸಮ್ಮುಖದಲ್ಲಿ ತಂದು ತೋರಿಸಿದ ಘಟನೆಯು ನಡೆಯಿತು. ಇದನ್ನು ಕಂಡ ಅಧಿಕಾರಿ ಉಮೇಶ ಲಮಾಣಿಯವರು ಅಡುಗೆಯವರನ್ನು ಕರೆದು ತರಾಟೆಗೆ ತೆಗೆದುಕೊಂಡು ಎಚ್ಚರಿಕೆ ನೀಡಿದರು. ಮತ್ತು ಇದಕ್ಕೆ ಕಾರಣರಾದ ಅಡುಗೆಯವರನ್ನು ಸ್ಥಳದಲ್ಲಿಯೇ ಬೇರೆಕಡೆಗೆ ವರ್ಗಾವಣೆ ಮಾಡಿದರು.

ಸಮಾಜದ ಆರೋಗ್ಯ ರಕ್ಷಣೆ ಮಾಧ್ಯಮಗಳ ಪಾತ್ರ ಅನನ್ಯ

ಆಲಮಟ್ಟಿ: ದೇಶದಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗಗಳಿಗೆ ಜನರ ಧ್ವನಿಯಾಗಿ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಮಾಧ್ಯಮಗಳು ಪ್ರಮುಖ ಪಾತ್ರವಹಿಸುತ್ತಿರುವುದು ಶ್ಲಾಘನೀಯವಾಗಿದೆ. ಪತ್ರಕರ್ತರು ದಿನ ನಿತ್ಯ ಒತ್ತಡ, ಹೆದರಿಸುವವರ ಮಧ್ಯದಲ್ಲಿ ಯಾವುದಕ್ಕೂ ಅಂಜದೇ ಅಳುಕದೇ ಸುದ್ದಿ ಮಾಡುತ್ತಾರೆ ಎಂದು ತಹಸೀಲ್ದಾರ ಎ.ಡಿ. ಅಮರವಾದಗಿ ಹೇಳಿದರು.

ಇಲ್ಲಿನ ಮಂಜಪ್ಪ ಹರ್ಡೇಕರ ಅವರ ಸ್ಮಾರಕ ಭವನದಲ್ಲಿ ಕರ್ನಾಟಕ ರಾಜ್ಯಕಾರ್ಯನಿರತ ಪತ್ರಕರ್ತರ ಸಂಘ ನಿಡಗುಂದಿ ತಾಲೂಕು ಘಟಕದವತಿಯಿಂದ ನಡೆದ ಪತ್ರಿಕಾ ದಿನಾಚರಣೆ, ವಾರ್ಷಿಕ ಪ್ರಶಸ್ತಿ ಪ್ರದಾನ ಮತ್ತು ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ನಡೆದ ಘಟನೆಯನ್ನು ಕಣ್ಮುಂದೆಯೇ ನಡೆದಿದೆ ಎನ್ನುವಂತೆ ಪ್ರತಿಯೊಬ್ಬರಿಗೂ ಅರ್ಥವಾಗುವ ರೀತಿಯಲ್ಲಿ ತಿಳಿಸುವಲ್ಲಿ ಮಾಧ್ಯಮಗಳ ಪಾತ್ರ ಅತೀ ಮಹತ್ವದ್ದಾಗಿದೆ. ಆದರೆ ಇವರ ಬದುಕು ಅಷ್ಟೊಂದು ಸರಳವಾಗಿಲ್ಲ ಎಂದರು.

ವಿಶೇಷ ಉಪನ್ಯಾಸಕರಾಗಿ ಬಾಗಲಕೋಟ ಜಿಲ್ಲಾ ಉದಯವಾಣಿ ವರದಿಗಾರ ಶ್ರೀಶೈಲ ಬಿರಾದಾರ ಮಾತನಾಡಿ, ರಾಜ್ಯದಲ್ಲಿ ಪ್ರಪ್ರಥಮವಾಗಿ ಮಂಗಳೂರಿನಲ್ಲಿ 1843 ಜುಲೈ ಒಂದರಂದು ಮಂಗಳೂರು ಸಮಾಚಾರ ಎನ್ನುವ ಪತ್ರಿಕೆಯನ್ನು ಪಾದ್ರಿ, ಹಾರ್ಮನ್ ಮೊಗ್ಲಿಂಗ್ ಎನ್ನುವವರು ಆರಂಭಿಸಿದರು. ರಾಜ್ಯದ ಎರಡನೇ ಪತ್ರಿಕೆಯಾಗಿ ಬೆಳಗಾವಿಯ 1849 ಸೆ.1ರಂದು ಸುಬುದ್ಧಿ ಎನ್ನುವ ಪತ್ರಿಕೆ, ಮೂರನೇ ಪತ್ರಿಕೆಯಾಗಿ ವಿಜಯಪುರದ ದೇಶಾಭಿಮಾನ ಪತ್ರಿಕೆಯು 1874ರಲ್ಲಿ ಆರಂಭವಾಯಿತು. ಇದರಿಂದ ಮಂಗಳೂರು ಸಮಾಚಾರ ಪತ್ರಿಕೆಯ ಆರಂಭದ ದಿನದ ನೆನಪಿಗಾಗಿ ಪ್ರತಿ ವರ್ಷವೂ ಪತ್ರಿಕಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದರು.

ಅಧ್ಯಕ್ಷತೆಯನ್ನು ಕಾನಿಪ ಸಂಘ ನಿಡಗುಂದಿ ತಾಲ್ಲೂಕು ಅಧ್ಯಕ್ಷ ಮಲ್ಲಿಕಾರ್ಜುನಯ್ಯ ತೊರಗಲ್ಲಮಠ ವಹಿಸಿದ್ದರು. ವೇದಿಕೆಯಲ್ಲಿ ಕ.ರಾ.ಸ.ನೌ.ಸಂ. ಆಲಮಟ್ಟಿ ಯೋಜನಾ ಶಾಖೆ ಅಧ್ಯಕ್ಷ ಸದಾಶಿವ ದಳವಾಯಿ, ಕಾನಿಪ ಜಿಲ್ಲಾ ಪ್ರದಾನ ಕಾರ್ಯದರ್ಶಿ ಮೋಹನ್ ಕುಲಕರ್ಣಿ, ರಾಹುಲ್ ಆಪ್ಟೆ, ಗ್ರಾ.ಪಂ.ಅಧ್ಯಕ್ಷೆ ಕವಿತಾ ಬಡಿಗೇರ, ಪಿಎಸ್ಐ ಎಫ್.ಎಸ್.ಇಂಡಿಕರ, ಶಿಕ್ಷಣ ಸಂಯೋಜಕ ಯು.ವೈ.ಬಶೆಟ್ಟಿ, ಎಂ.ಎಚ್.ಎಂ. ಮುಖ್ಯೋಪಾಧ್ಯಾಯ ಎಸ್.ಐ. ಗಿಡ್ಡಪ್ಪಗೋಳ ಇದ್ದರು. ಪತ್ರಕರ್ತರಾದ ಶಂಕರ ಜಲ್ಲಿ ಸ್ವಾಗತಿಸಿದರು, ಹಿರೇಮಠ ಪ್ರಾರ್ಥಿಸಿದರು, ಮಹೇಶ ಅಡಾಳಿ ನಿರೂಪಿಸಿದರು, ಮಹ್ಮದಅಲಿ ಮಕಾನದಾರ ವಂದಿಸಿದರು. ಬೀರಪ್ಪ ಬೆ ನ್ನೂರ ಹಾಗೂ ಮಹಿಬೂಬ ವಾಲಿಕಾರ ಅವ ರಿಗೆ ತಾಲೂಕು ವಾರ್ಷಿಕ ಪ್ರಶಸ್ತಿ ನೀಡಿ ಗೌರ ವಿಸಲಾಯಿತು. ಎಸ್‌ಎಸ್‌ಎಲ್‌ಸಿ ಪರೀ ಕ್ಷೆಯಲ್ಲಿ ತಾಲೂಕಿನ ಕೀರ್ತಿ ಹೆಚ್ಚಿಸಿದ ಈರ ಮ್ಮ ಚಳಗೇರಿ ಹಾಗೂ ಸಿದ್ದು ಉಪ್ಪಲದಿನಿ ಸನ್ಮಾನಿಸಲಾಯಿತು.

ಪತ್ರಿಕಾ ದಿನಾಚರಣೆ, ವಾರ್ಷಿಕ ಪ್ರಶಸ್ತಿ ಪ್ರದಾನ ಮತ್ತು ಸನ್ಮಾನ ಸಮಾರಂಭವನ್ನು ಎ.ಡಿ.ಅಮರವಾದಗಿ ಉದ್ಘಾಟಿಸಿದರು.

ಸ್ವಾತಂತ್ರ್ಯೋತ್ಸವ: ಪೂರ್ವಭಾವಿ ಸಭೆ

ಬಸವನಬಾಗೇವಾಡಿ: ಪಟ್ಟಣದಲ್ಲಿ ಆ.15ರಂದು ಸ್ವಾತಂತ್ರ್ಯ ದಿನಾಚರಣೆ ನಿಮಿತ್ಯ ನಡೆಯುವ ಧ್ವಜಾರೋಹಣ ಕಾರ್ಯಕ್ರಮಕ್ಕೆ ಅಧಿಕಾರಿಗಳನ್ನೊಳಗೊಂಡು ಸಮಿತಿ ರಚಿಸಲಾಗಿದೆ. ಅಧಿಕಾರಿಗಳು ಅಗತ್ಯ ಸಿದ್ಧತೆ ಮಾಡಿಕೊಳ್ಳುವ ಮೂಲಕ ವಿಜೃಂಭಣೆ ಸ್ವಾತಂತ್ರ್ಯೋತ್ಸವ ಆಚರಣೆಗೆ ಮುಂದಾಗಬೇಕು ಎಂದು ತಹಸೀಲ್ದಾರ ಯಮನಪ್ಪ ಸೋಮನಕಟ್ಟಿ ಹೇಳಿದರು.

ಪಟ್ಟಣದ ತಹಸೀಲ್ದಾರ ಕಾರ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ ನಡೆದ ಸ್ವಾತಂತ್ರ್ಯೋತ್ಸವ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಸ್ವಾತಂತ್ರ್ಯೋತ್ಸವ ಆಚರಣೆಗೆ ತಾಲೂಕಾಡಳಿತ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಕಾರ್ಯಕ್ರಮದ ಸ್ಟೇಜ್ ಮೈಕ್ ಕುರ್ಚಿಗಳ ನಿರ್ಮಾಣದ ಜವಾಬ್ದಾರಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಎಂಜನಿಯರ ಉಪವಿಭಾಗ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈಮಲ್ಯ ಇಲಾಖೆ ಜವಾಬ್ದಾರಿ ನೀಡಿದ್ದು, ಪೊಲೀಸ್ ಇಲಾಖೆ ಹೋಮ್‌ಗಾಡ್ಸ್ ಹಾಗೂ ಭಾರತ ಸೇವಾದಳ ಸ್ಕೌಟ್ಸ ಮತ್ತು ಗೈಡ್ಸ್ ಅವರ ಸಹಭಾಗಿತ್ವದಲ್ಲಿ ಪಥಸಂಚಲನದ ನಿರ್ವಹಣೆ ಮಾಡುವ ಜವಾಬ್ದಾರಿ ನೀಡಲಾಗಿದೆ. ಅಲ್ಲದೇ ಪ್ಲಾಸ್ಟಿಕ್ ಪ್ಲಾಗ್‌ಗಳನ್ನ ನಿಷೇಧಿಸಲಾಗಿದ್ದು ಸಂಬಂಧಿಸಿದ ಅಧಿಕಾರಿಗಳು ಇದರ ಬಗ್ಗೆ ನಿಗಾ ವಹಿಸಬೇಕು ಹಾಗೂ ಇಂದಿನ ಸಭೆಗೆ ಹಾಜರಾಗದ ತಾಲೂಕಾ ಮಟ್ಟದ ಅಧಿಕಾರಿಗಳಿಗೆ ನೋಟಿಸ್ ನೀಡುವಂತೆ ಸೂಚನೆ ನೀಡಿದರು.

ಈ ಸಂಧರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ವಸಂತ ರಾಠೋಡ, ಪಿಐ ವಿಜಯ ಮುರಗುಂಡಿ, ಪುರಸಭೆ ಮುಖ್ಯಾಧಿಕಾರಿ ಎಚ್.ಎಸ್.ಚಿತ್ತರಗಿ, ಮುಖಂಡರಾದ ಶಂಕರಗೌಡ ಬಿರಾದಾರ, ಶಿವಾನಂದ ಮಂಗಾನವರ, ಮಹಾಂತೇಶ ಸಾಸಾಬಾಳ, ಖಾಜಂಬರ ನಧಾಪ್, ಸೇರಿದಂತೆ ವಿವಿಧ ಸಂಘಟನೆಯ ಮುಖಂಡರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸ್ವಾತಂತ್ರ್ಯೋತ್ಸವ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ ಯಮನಪ್ಪ ಸೋಮನಕಟ್ಟೆ ಮಾತನಾಡಿದರು.

ಪ್ಲಾಸ್ಟಿಕ್ ಪ್ಲ್ಯಾಗ್‌ಗಳು ನಿಷೇದ ಎನ್ನುವುದು ಕೇವಲ ಕಾಗದದಲ್ಲಿ ಮಾತ್ರ ಸೀಮಿತವಾಗಿದೆ, ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಪ್ಲ್ಯಾಗ್‌ಗಳು ರಾಜಾರೋಷವಾಗಿ ಮಾರಟವಾಗುತ್ತಿವೆ ಪುರಸಭೆ ಅಧಿಕಾರಿಗಳು ನಾಮಕಾವಾಸ್ತೇ ಎಂಭಂತೆ ಯಾವುದೋ ಒಂದು ಅಂಗಂಡಿ ಮುಂದೆ ನಿಂತು ಪೋಟೊ ಕ್ಲಿಕ್ಕಿಸಿಕೊಳ್ಳುತ್ತಾರೆ ಎಂದು ತಹಸೀಲ್ದಾರ ಅವರ ಗಮನಕ್ಕೆ ತಂದರು.

-ಮುಖಂಡ ಪರಶುರಾಮ ಅಡಗಿಮನಿ

ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆ ಇಂದು

ವಿಜಯಪುರ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ನಡೆಸುವ ಎಂ.ಬಿ.ಎ ಹಾಗೂ ಎಂ.ಸಿ.ಎ ಪ್ರವೇಶ ಪರೀಕ್ಷೆಗಳನ್ನು ಸುಸೂತ್ರವಾಗಿ ಹಾಗೂ ಸುಗಮವಾಗಿ ಜರುಗಿಸುವಂತೆ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಸೂಚನೆ ನೀಡಿದರು.

ಶುಕ್ರವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಎಂಬಿಎ ಹಾಗೂ ಎಂಸಿಎ ಪ್ರವೇಶ ಪರೀಕ್ಷೆಯ ಪೂರ್ವಭಾವಿ ಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ನಗರದ ಗಾಂಧಿ ವೃತ್ತದ ಸರಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಆ.4 ರಂದು ಪರೀಕ್ಷೆ ಜರುಗಲಿದ್ದು, ಅಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12 ಗಂಟೆಯವರೆಗೆ ನಡೆಯುವ ಎಂಸಿಎ ಪ್ರವೇಶಾತಿ ಪರೀಕ್ಷೆಗೆ 387 ಹಾಗೂ ಮಧ್ಯಾಹ್ನ 2.30 ರಿಂದ 4.30ರವರೆಗೆ ನಡೆಯುವ ಎಂಬಿಎ ಪರೀಕ್ಷೆಗೆ 637 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ.

ಒಂದು ಕೊಠಡಿಯಲ್ಲಿ 24 ಅಭ್ಯರ್ಥಿಗಳು ಸೇರಿಂದತೆ ಓರ್ವ ಮೇಲ್ವಿಚಾರಕರನ್ನು ನೇಮಿಸಿಕೊಳ್ಳಬೇಕು. ಮೇಲ್ವಿಚಾರಕರಿಗೆ ಹಾಗೂ ಪರೀಕ್ಷೆಯಲ್ಲಿ ತೊಡಗಿರುವ ಸಿಬ್ಬಂದಿಗಳಿಗೆ ಮುಂಚಿತವಾಗಿ ಪರೀಕ್ಷಾ ಸಿದ್ಧತಾ ತರಬೇತಿಯನ್ನು ನೀಡಬೇಕು. ವಿದ್ಯಾರ್ಥಿಗಳು ನಿಗದಿಪಡಿಸಿದ ಆಸನದಲ್ಲಿರುವ ಬಗ್ಗೆ ಮೇಲ್ವಿಚಾರಕರು ಖಚಿತಪಡಿಸಿಕೊಳ್ಳಬೇಕು. ಒಂದು ಬಾರಿ ಅಭ್ಯರ್ಥಿಗಳಿಗೆ ಓಎಂಆರ್ ಉತ್ತರ ಪತ್ರಿಕೆ ವಿತರಿಸಿದ ನಂತರ ಪರೀಕ್ಷೆ ಸಮಯ ಮುಗಿಯುವವರೆಗೂ ಹಿಂಪಡೆಯಬಾರದು. ಪರೀಕ್ಷಾ ಕೊಠಡಿಯಲ್ಲಿ ನೀರು, ಗಾಳಿ ಬೆಳಕಿನ ವ್ಯವಸ್ಥೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸಿ.ಕೆ. ಹೊಸಮನಿ, ಪ್ರಾಂಶುಪಾಲರಾದ ಬಸವರಾಜ ಗಂಗನಳ್ಳಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಎಂಬಿಎ ಹಾಗೂ ಎಂಸಿಎ ಪ್ರವೇಶ ಪರೀಕ್ಷೆಯ ಪೂರ್ವಭಾವಿ ಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಮಾತನಾಡಿದರು.

ಇಲಾಖೆಯ ಪರೀಕ್ಷಾ ಮಾರ್ಗಸೂಚಿಯಂತೆ ಪರೀಕ್ಷೆ ನಡೆಯುವ ದಿನದಂದು ಎಲ್ಲಾ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸಬೇಕು. ಪ್ರತಿ ಅಭ್ಯರ್ಥಿಯ ಗುರುತಿನ ಪತ್ರ ಪರಿಶೀಲಿಸಿ ಹಾಜರಾಗಿರುವ ಅಭ್ಯರ್ಥಿಯನ್ನು ತಾಳೆ ಮಾಡಿ ಪರೀಕ್ಷಾ ಕೊಠಡಿಗೆ ಪ್ರವೇಶ ಕಲ್ಪಿಸಬೇಕು. ಸ್ಮಾರ್ಟ್ ವಾಚ್, ಎಲೆಕ್ಟ್ರಾನಿಕ್ ಉಪಕರಣ, ಮೊಬೈಲ್ ಬಳಕೆ ನಿಷೇಧಿಸಿದ್ದು, ಕೊಠಡಿ ಮೇಲ್ವಿಚಾರಕರು ಕಟ್ಟುನಿಟ್ಟಾಗಿ ಪರೀಕ್ಷಾ ಕಾರ್ಯ ನಿರ್ವಹಿಸಬೇಕು.

-ಸೋಮಲಿಂಗ ಗೆಣ್ಣೂರ, ಅಪರ ಜಿಲ್ಲಾಧಿಕಾರಿ

20ನೇ ವರ್ಷದ ಶಿವಗಣರಾಧನೆ ಕಾರ್ಯಕ್ರಮ

ಇಂಡಿ: ಆಂಗ್ಲಮಾಧ್ಯಮ ಶಾಲೆಗಳು ಗಡಿಭಾಗದ ಕಬ್ಬಿಣದ ಕಡಲೆಯಂತಾಗಿತ್ತು 1971 ಇಂಡಿ ಭೀಕರ ಬರಗಾಲ ಸಂಭವಿಸಿದರೂ ಧೃತಿಗೆಡದೆ ದಿ.ಎಂ.ಡಿ ಶಿರೊಮಣಿಯವರು ಅಂದಿನ ಸರಕಾರದಲ್ಲಿ ಸಾಕಷ್ಟು ಶ್ರಮಪಟ್ಟು , ಈ ಭಾಗದಲ್ಲಿ ಶೈಕ್ಷಣಿಕ ಅಭಿವೃದ್ಧಿ ಜತೆ ಆಂಗ್ಲಭಾಷೆ ಪಸರಿಸಲಿ ಎಂಬ ಧ್ಯೇಯೋದ್ದೇಶ ಹೊಂದಿ ಆಂಗ್ಲಮಾಧ್ಯಮ ಶಿಕ್ಷಣ ಸಂಸ್ಥೆ ಕಟ್ಟಿ ಬೆಳೆಸಿದ ಕೀರ್ತಿ ಶಿರೋಮಣಿಯವರಿಗೆ ಸಲ್ಲುತ್ತದೆ ಎಂದು ನಿವೃತ್ತಿ ಪ್ರಾಚಾರ್ಯ ಆಯ್. ಸಿ.ಪೂಜಾರ ಹೇಳಿದರು.

ಎಂಜೇಲ್ಸ ಆಂಗ್ಲಮಾಧ್ಯಮ ಮತ್ತು ಕೃಸ್ಟಕನ್ನಡ ಮಾಧ್ಯಮ ಪ್ರಾಥಮಿಕ, ಪ್ರೌಢ ಶಾಲೆ ಆವಣರದಲ್ಲಿ ಹಮ್ಮಿಕೊಂಡ ದಿ. ಎಂ.ಶಿರೋಮಣಿಯವರ 20ನೇ ವರ್ಷದ ಶಿವಗಣರಾಧನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿಯೊಂದು ಜೀವಿಗಳು ಹುಟ್ಟು ಸಹಜ ಸಾವು ಶಾಶ್ವತ ಆದರೆ ಬದುಕಿನ ದಿನಗಳಲ್ಲಿ ಏನಾದರೂ ಸಾಧನೆ ಮಾಡಿ ಸಾರ್ಥಕ ಬದುಕು ಕಟ್ಟಿಕೊಳ್ಳಬೇಕು. ಇಂದು ದಿ.ಎಂ.ಡಿ ಶಿರೋಮಣಿಯವರು ಅಂದು ಕಟ್ಟಿದ ಶಿಕ್ಷಣ ಸಂಸ್ಥೆ ವಿವಿಧ ಶಾಖೆಗಳನ್ನು ತೆರೆದು ಉತ್ತುಂಗ ಶಿಖರಕ್ಕೆ ತಲುಪಿದೆ. ಸಂಸ್ಥೆ ಅಧ್ಯಕ್ಷ ಸ್ಟೀಫನ್ ಶಿರೋಮಣಿ, ಕಾರ್ಯದರ್ಶಿ ಡಿ. ಶಿರೋಮಣಿ, ಮುಖ್ಯೋಪಾಧ್ಯಾಯ ಮಹಮ್ಮದ ಗೌಸ, ಶಿಕ್ಷಕರಾದ ಎಸ್.ಬಿ ಗದ್ಯಾಳ, ಲಕ್ಷ್ಮೀ ಗೌರೀಶ, ರಾಜಕುಮಾರ ಮಂಗಳೂರ, ವಾಯ್.ಎಂ ಬಾಗೇವಾಡಿ, ಶಿವಾನಂದ ನಿವರಗಿ, ಮಲ್ಲು ಕೋರಣ್ಣವರ್, ಆನಂದ ಚವ್ಹಾಣ, ನೋಯಲ್ ಶಿರೋಮಣಿ ಸೇರಿದಂತೆ ಈ ಸಂಸ್ಥೆಗಳ ಅಡಿಯಲ್ಲಿ ನಡೆಯುವ ವಿವಿಧ ಶಾಲಾ ಶಿಕ್ಷಕರು ,ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ದಿ. ಎಂ.ಶಿರೋಮಣಿಯವರ 20ನೇ ವರ್ಷದ ಶಿವಗಣರಾಧನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ನಿವೃತ್ತಿ ಪ್ರಾಚಾರ್ಯ ಆಯ್. ಸಿ.ಪೂಜಾರ ಮಾತನಾಡುತ್ತಿರುವುದು.

ವಿದ್ಯಾರ್ಥಿಗಳಿಗೆ ರೋಗ ನಿರೋಧಕ ಲಸಿಕೆ

ತಾಳಿಕೋಟೆ: ಪಟ್ಟಣದ ಎಸ್ ಕೆ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಆರೋಗ್ಯ ಇಲಾಖೆಯಿಂದ ಟಿ.ಡಿ ಮತ್ತು ಡಿ.ಪಿ.ಟಿ ಗಂಟಲು ಮಾರಿ ಮತ್ತು ಧನುರ್ವಾಯು, ದಿಪತ್ತೆರಿಯಾ ರೋಗ ತಡೆಗಟ್ಟುವ ರೋಗನಿರೋಧಕ ಲಸಿಕೆಯನ್ನು ಹಾಕಲಾಯಿತು.

ಕಾರ್ಯಕ್ರಮಕ್ಕೆ ಆರೋಗ್ಯ ಇಲಾಖೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಶ್ರೀಶೈಲ ಹುಕ್ಕೇರಿ ಅವರು ಚಾಲನೆ ನೀಡಿದರು. ಆರೋಗ್ಯ ಇಲಾಖೆಯ ಸಿಬ್ಬಂಸಿಗಳಾದ ಎಂ.ಎಸ್ ಟಕ್ಕಳಕಿ, ಎನ್.ಎಚ್.ಬೋರಗಿ, ವಿಜಯಲಕ್ಷ್ಮಿ, ಬಿ.ಎಸ್. ಶಿವಯೋಮಠ, ಮಧು ಕೊಡೇಕಲ್ಲ, ಸೌಂದರ್ಯ ನಾಡಕರ್ಣಿ, ಉಪಪ್ರಾಚಾರ್ಯ ಜಗದೀಶ ಕಟ್ಟಿಮನಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಸಿನಿಮೀಯ ರೀತಿ ಗನ್ ತೋರಿಸಿ ಆರೋಪಿ ಬಂಧನ

ವಿಜಯಪುರ: ಹುಬ್ಬಳ್ಳಿ ಗ್ರಾಮೀಣ ಠಾಣೆಯ ಪೊಲೀಸರು ನಗರದಲ್ಲಿ ಸಿನಿಮೀಯ ರೀತಿಯಲ್ಲಿ ಪಿಸ್ತೂಲ್ ತೋರಿಸಿ ಆರೋಪಿಯನ್ನು ಬಂಧಿಸಿ ಕರೆದ್ಯೊದ ಘಟನೆ ಜರುಗಿದೆ.

ವಿಜಯಪುರ ನಗರದ ಡಾ. ಬಿ ಆರ್ ಅಂಬೇಡ್ಕರ್ ವೃತ್ತದಲ್ಲಿ ನಿನ್ನೆ ಮಧ್ಯಾಹ್ನ ಘಟನೆ ನಡೆದಿದೆ. ಮಹಾರಾಷ್ಟ್ರದ ಕೊಲ್ಲಾಪುರ ಮೂಲದ ಆರೋಪಿ ಅವಿನಾಶ್ ಮಚ್ಛಾಳೆ ಹುಬ್ಬಳ್ಳಿಯ ಕೈಗಾರಿ ಕಾ ಪ್ರದೇಶದಲ್ಲಿ ತಾಮ್ರದ ವೈರ್ ಕದ್ದು ಕುಟುಂಬಸ್ಥರೊಂದಿಗೆ ವಿಜಯಪುರದಲ್ಲಿದ್ದಾನೆ ಎಂಬ ಮಾಹಿತಿ ಆಧರಿಸಿ ವಿಜಯಪುರಕ್ಕೆ ಆಗಮಿದ್ದ ಹುಬ್ಬಳ್ಳಿ ಪೊಲೀಸರು ಆರೋಪಿ ಅವಿನಾಶ್ ಬಂಧನಕ್ಕೆ ಮುಷ್ಠಿಯಲ್ಲಿದ್ದ ಪೊಲೀಸರು ಮುಂದಾಗುತ್ತಿದ್ದಂತೆ ಆತನ ಕುಟುಂಬದ ಮಹಿಳೆಯರಿಂದ ಪೊಲೀಸರ ಮೇಲೆ ಹಲ್ಲೆಯತ್ನ ಹಾಗೂ ಗಲಾಟೆ ನಡೆದಿದೆ. ಗಲಾಟೆಯ ಕಾರಣ ಸ್ಥಳದಲ್ಲಿ ಜನ ಜಮಾ ಯಿಸಿದ ವೇಳೆ ಆರೋಪಿ ಅವಿನಾಶ್ ಪರಾರಿಯಾಗಲು ಯತ್ನಿಸಿದಾಗ ಆರೋಪಿ ಯನ್ನು ಹಿಡಿಯಲು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯ ಎಎಸ್ಐ ಹೊನ್ನಪ್ಪ ನವರ ಪಿಸ್ತೂಲ್ ಹೊರಗೆ ತೆಗೆದು ಆರೋಪಿಯನ್ನು ಬಂಧಿಸಿ ವಿಜಯಪುರ ನಗರದ ಗೋಲಗುಂಬಜ್ ಪೊಲೀಸ್ ಠಾಣೆಗೆ ಕರೆದೊಯ್ದರು.

ಶಿಕ್ಷಕ ದೇವರ ಪ್ರತಿರೂಪ: ಬಂಡಗಾರ

ಇಂಡಿ: ಸಮಾಜದಲ್ಲಿ ಶಿಕ್ಷಕರನ್ನು ಸಾಕಷ್ಟು ಅಭಿಮಾನದಿಂದ ಕಾಣುತ್ತಾರೆ, ಶಿಕ್ಷಕ ದೇವರ ಪ್ರತಿರೂಪ ಎಂದು ಗೌರವಿಸುತ್ತಾರೆ ,ಇಂದಿನ ದಿನಮಾನಗಳಲ್ಲಿ ನೌಕರಿ ಸಿಗುವುದು ಸುಲಭದ ಮಾತಲ್ಲ ಅದರಲ್ಲಿ ಶಿಕ್ಷಕನ ಸ್ಥಾನ ಅತ್ಯಂತ ಪವಿತ್ರವಾಗಿದ್ದು, ಒಳ್ಳೆಯ ಶಿಸ್ತು, ಬದ್ಧತೆಯಿಂದ ಕಾಯಕದಲ್ಲಿ ತೊಡಗಬೇಕು ಎಂದು ನಾದ ಗ್ರಾಮದ ಸರಕಾರಿ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಹಾಗೂ ಯುವ ಸಾಹಿತಿ ಸಿ. ಎಂ ಬಂಡಗಾರ ಹೇಳಿದರು. ಶ್ರೀಬಸವೇಶ್ವರ ಪ್ರೌಢ ಶಾಲೆಯಲ್ಲಿ ನಿವೃತ್ತ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರ ಶುಭ ಹಾರೈಕೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು ಶಿಕ್ಷಕ, ವಿದ್ಯಾರ್ಥಿ,ಬೋಧನೆ ಶಿಕ್ಷಣದಲ್ಲಿ ಬಹಳ ಪ್ರಮುಖವಾಗಿದೆ. ಪ್ರಾಚೀನ ಕಾಲದಿಂದ ಹಿಡಿದು ಇಂದಿನವರೆಗೂ ಶಿಕ್ಷಕರಿಗೆ ದೇವರ ಸ್ಥಾನದಲ್ಲಿಟ್ಟು ಗೌರವಿಸುವ ಸಂಸ್ಕೃತಿ ಭಾರತೀಯರದಾಗಿದೆ. ಬಸವೇಶ್ವರ ಪ್ರೌಢ ಶಾಲೆಯ ಮುಖ್ಯ ಗುರುಗಳು ಜೆ.ಟಿ ಕೊಟಗೊಂಡ ಹಾಗೂ ಶಿಕ್ಷಕರಾದಿಯಾಗಿ ಈ ಸಂಸ್ಥೆಯ ಬೆಳವಣಿಗೆಗೆ ಸಾಕಷ್ಟು ಶ್ರಮಿಸಿದ್ದಾರೆ ಅನುಧಾನಕ್ಕಿಂತ ಪೂರ್ವ ನಿಮ್ಮ ಸೇವೆ ಸಾಕಷ್ಟು ಮಾಡಿ ಇದಕ್ಕೊಂದು ಹೊಸ ಸ್ಪರ್ಶ ನೀಡಿ ಈ ಸಂಸ್ಥೆಯಲ್ಲಿ ಸುದೀರ್ಘ ದುಡಿದು ಇಂದು ನಿವೃತ್ತಿಯಾಗುತ್ತಿರುವುದು ಅತೀವ ದುಖಃದ ಸಂಗತಿ ಆದರೆ ಸರಕಾರ ವ್ಯವಸ್ಥೆಯಲ್ಲಿ 60 ವರ್ಷದ ನಂತರ ನಿವೃತ್ತಿ ಸಹಜ ನಿಮ್ಮ ಅವಧಿಯಲ್ಲಿ ಮಾಡಿದ ಕೆಲಸಗಳು ಜೀವಂತ ಇರುತ್ತವೆ. ಮುಂಬರುವ ದಿನಗಳಲ್ಲಿ ನಿವೃತ್ತಿಯ ನಂತರ ಸಮಾಜಿಕ ,ಅಧ್ಯಾತ್ಮಿಕ ,ಧಾರ್ಮಿಕ ಕ್ಷೇತ್ರಗಳಲ್ಲಿ ತೊಡಗಿ ಒಳ್ಳೇಯ ಕೆಲಸ ಮಾಡಿ ಎಂದರು.

ಒಳಮೀಸಲಾತಿ: ಹೋರಾಟಕ್ಕೆ ಜಯ

ಬಸವನಬಾಗೇವಾಡಿ: ಒಳಮೀಸಲಾತಿ ನ್ಯಾಯ ಬದ್ದವಾಗಿದೆ ಎಂದು ಸುಪ್ರೀಂ ಕೋರ್ಟ ತೀರ್ಪು ನೀಡಿರುವ ಹಿನ್ನಲೆಯಲ್ಲಿ ಪಟ್ಟಣದಲ್ಲಿ ದಲಿತ ಸಂಘಟನೆಯ ಪದಾಧಿಕಾರಿಗಳು ಸಿಹಿ ಹಂಚಿ ಪಟಾಕಿ ಸಿಡಿಸುವ ಮೂಲಕ ವಿಜಯೋತ್ಸವ ಆಚರಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಪುತ್ಥಳಿಗೆ ಹೂ ಮಾಲೆ ಅರ್ಪಿಸಿ ಮಾತನಾಡಿದ ಅವರು, ಡಿಎಸ್‌ಎಸ್ ಮುಖಂಡರಾದ ತಮ್ಮಣ್ಣ ಕಾನಾಗಡ್ಡಿ ಹಳೆಯ ತಲೆಮಾರಿನಿಂದ ತುಳಿತಕ್ಕೊಳಗಾಗಿ ಸರಕಾರದ ಮೀಸಲಾತಿಯ ಸರಿಯಾದ ಪ್ರಯೋಜನ ಪಡೆಯಲಾಗದೆ ನೋವು ಅನುಭವಿಸುತ್ತಿದ್ದ ಪರಿಶಿಷ್ಟ ಜಾತಿ, ಪಂಗಡದ ಜನಾಂಗ ಒಳಮೀಸಲಾತಿಗಾಗಿ ನಡೆದ ಸುದೀರ್ಘ ಹೋರಾಟದಲ್ಲಿ ಹಲವರ ತ್ಯಾಗ ಬಲಿದಾನದ ಫಲವಾಗಿ ಸುಪ್ರೀಂ ಕೋರ್ಟ್‌ನ ಸಿಜೆಐ ಚಂದ್ರಚೂಡ್ ನೇತೃತ್ವದ 7 ಸದಸ್ಯರ ಪೀಠವು ಒಳ ಮೀಸಲಾತಿ ನೀಡುವ ಪ್ರಸ್ತಾಪವನ್ನು ಎತ್ತಿ ಹಿಡಿದು ಒಳ ಮೀಸಲಾತಿ ಸಂವಿಧಾನ ಬಾಹಿರ ಕ್ರಮವಲ್ಲ, ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎನ್ನುವದು ಸಂವಿಧಾನದ ಮೂಲ ಮಂತ್ರ ಎಂದು ಐತಿಹಾಸಿಕ ತೀರ್ಪೂ ನೀಡುವ ಮೂಲಕ ನ್ಯಾಯ ಒದಗಿಸಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಹರೀಶ ಮ್ಯಾಗೇರಿ, ಯಮನಪ್ಪ ಮ್ಯಾಗೇರಿ, ಕನಕೇಶ ಬಾಗೇವಾಡಿ, ಸಂಗಮೇಶ ಕಳ್ಳಿಮನಿ, ಮಹೇಶ ಮ್ಯಾಗೇರಿ, ಗಂಗಾಧರ ಮ್ಯಾಗೇರಿ, ಶ್ರೀಶೈಲ ಬ್ಯಾಕೋಡ, ಹಣಮಂತ(ಹಯ್ಯಣ್ಣ) ಮ್ಯಾಗೇರಿ, ಭರತ್ ಉಕ್ಕಲಿ, ಬಸವರಾಜ ಅಂಬೇಡ್ಕರ್, ಅವ್ವಣ್ಣ ಅಂಬಾಗೋಳ ಸೇರಿದಂತೆ ಇತರರು ಇದ್ದರು.



ಒಳ ಮೀಸಲಾತಿ ನ್ಯಾಯಬದ್ಧವಾಗಿದೆ ಎಂದು ಸುಪ್ರೀಂಕೋರ್ಟ ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ದಲಿತ ಸಂಘಟನೆಯ ಪದಾಧಿಕಾರಿಗಳು ಸಿಹಿ ಹಂಚಿ ಪಟಾಕಿ ಸಿಡಿಸುವ ಮೂಲಕ ವಿಜಯೋತ್ಸವ ಆಚರಿಸಿದರು.

ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿ., ಬಸವನಬಾಗೇವಾಡಿ

ಸನ್ 2023-24 ನೇ ಸಾಲಿನ ವಾರ್ಷಿಕ ಸರ್ವ ಸಾಧಾರಣ ಸಭೆಯ ನೋಟಿಸು

ನಮ್ಮ ಸಂಘದ ಯಾವತ್ತು ಸದಸ್ಯರಿಗೆ ಈ ನೋಟೀಸು ಮೂಲಕ ತಿಳಿಸುವುದೇನೆಂದರೆ, ನಮ್ಮ ಸಂಘದ ಸನ್ 2023-24 ನೇ ಸಾಲಿನ ವಾರ್ಷಿಕ ಸರ್ವ ಸಾಧಾರಣ ಸಭೆಯು ದಿನಾಂಕ 17-8-2024 ರಂದು ಶನಿವಾರ ಬೆಳಿಗ್ಗೆ 11-00 ಘಂಟೆಗೆ ಸಂಘದ ಕಚೇರಿ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಂಗನಗೌಡ ಕ. ಚಿಕ್ಕೊಂಡ ಇವರ ಅಧ್ಯಕ್ಷತೆಯಲ್ಲಿ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಕರೆಯಲಾಗಿದೆ. ಆದ ಕಾರಣ ಎಲ್ಲ ಸದಸ್ಯರು ಸಕಾಲದಲ್ಲಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.

ಸಭೆಯ ನೋಟಿಸನ್ನು ಈಗಾಗಲೇ ಕಳುಹಿಸಲಾಗಿದೆ. ಕಾರಣಾಂತರದಿಂದ ಸಭೆಯ ನೋಟಿಸು ತಲುಪದಿದ್ದಲ್ಲಿ ಇದನ್ನೇ ಸಭೆಯ ನೋಟಿಸು ಎಂದು ಪರಿಗಣಿಸಿ ಸಭೆಗೆ ಹಾಜರಾಗಲು ವಿನಂತಿಸಲಾಗಿದೆ.

ಸಹಿ/-
ಶ್ರೀ ಪ್ರವೀಣ ಶಂ. ಚಿಕ್ಕೊಂಡ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಸಹಿ/-
ಶ್ರೀ ಸಂಗನಗೌಡ ಕ. ಚಿಕ್ಕೊಂಡ
ಅಧ್ಯಕ್ಷರು

ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ | ಅಂತಿಮ ದರ್ಶನ ಪಡೆದ ಮುಖಂಡರು

ಸ್ವಗ್ರಾಮದಲ್ಲಿ ಪಿಎಸ್‌ಐ ಪರಶುರಾಮ್ ಅಂತ್ಯ ಸಂಸ್ಕಾರ

ಕಾರಟಗಿ: ಹೃದಯಾಘಾತದಿಂದ ಮೃತಪಟ್ಟಿದ್ದ ಪಿಎಸ್‌ಐ ಪರಶುರಾಮ ಮೃತದೇಹದ ಅಂತ್ಯ ಸಂಸ್ಕಾರ ತಾಲೂಕಿನ ಸೋಮನಾಳ ಗ್ರಾಮದಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ಶನಿವಾರ ನೆರವೇರಿತು.

ಪೊಲೀಸ್ ಇಲಾಖೆಯ ಯಾದಗಿರಿ ಮತ್ತು ಕೊಪ್ಪಳ ಜಿಲ್ಲೆಯ ಅಧಿಕಾರಿಗಳು ಸೇರಿದಂತೆ ತಾಲೂಕಿನ ವಿವಿಧ ಸಂಘಟನೆಗಳು ಸುತ್ತಮುತ್ತಲಿನ ಗ್ರಾಮಗಳ ನೂರಾರು ಜನರು ಪಿಎಸ್‌ಐ ಪರಶುರಾಮ್ ಇವರ ಅಂತಿಮದರ್ಶನ ಪಡೆದರು. ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ, ಬಳ್ಳಾರಿ ಐಜಿ ಬಿ.ಜಿ.ಲೋಕೇಶ ಕುಮಾರ್, ಎಸ್ಪಿ ಡಾ. ರಾಮ್ ಅರಸಿದ್ದ, ಮಾಜಿ ಶಾಸಕ ಬಸವರಾಜ ದಢೇಸ್ಗೂರು ಇವರು ಮೃತಗೌರವಾರ್ಥ ಗೌರವ ವಂದನೆಗಳನ್ನು ಸಲ್ಲಿಸಿದರು. ಪೊಲೀಸ್ ಇಲಾಖೆಯಿಂದ ಮೃತರಿಗೆ ಗೌರವವಂದನೆ ಸಲ್ಲಿಸಿ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಲಾಯಿತು.

ಶನಿವಾರ ಸಂಜೆ 6ಗಂಟೆಗೆ ಸ್ವಗ್ರಾಮ ಸೋಮನಾಳ ಗ್ರಾಮಕ್ಕೆ ಪರಶುರಾಮ ಪಾರ್ಥಿವ ಶರೀರ ಆಗಮಿಸಿತು.

ಕಾರಟಗಿ ತಾಲೂಕಿನ ಸೋಮನಾಳ ಗ್ರಾಮದಲ್ಲಿ ಮೃತ ಪಿಎಸ್‌ಐ ಪರಶುರಾಮ್ ಇವರ ಅಂತಿಮ ದರ್ಶನ ಪಡೆದ ಜಿಲ್ಲಾಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ನಮನ ಸಲ್ಲಿಸಿದರು.

ಮೃತನ ಸ್ವಗ್ರಾಮದಲ್ಲಿ ನೀರವ ಮೌನ ಆವರಿಸಿತ್ತು. ಸಂಜೆ 6 ಗಂಟೆ ಸರಿಯಾಗಿ ಮೃತ ದೇಹ ಗ್ರಾಮಕ್ಕೆ ಆಗಮಿಸಿ ಮೊದಲಿಗೆ ನೇರವಾಗಿ ಅವರ ಸ್ವಗೃಹಕ್ಕೆ ತೆಗೆದುಕೊಂಡು ಹೋಗಲಾಯಿತು. ಸ್ವಗ್ರಾಮ ತಲುಪುತ್ತಿದ್ದಂತೆ ಕುಟುಂಬಸ್ಥರು ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಪ್ರತಿಭಟನೆ: ಘಟನೆ ಖಂಡಿಸಿ ಸೋಮನಾಳದಲ್ಲಿ ಛಲವಾದಿ ಸಂಘಟನೆಯಿಂದ ಪ್ರತಿಭಟನೆ ನಡೆಯಿತು. ಯಾದಗಿರಿ ಭ್ರಷ್ಟ ಶಾಸಕನಿಗೆ ಧಿಕ್ಕಾರ ಅಂತ ಘೋಷಣೆ ಕೂಗಿದ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಮೃತ ದೇಹ ಇಟ್ಟ ಮೈದಾನದಲ್ಲಿಯೇ ಸಂಘಟನೆ ಪ್ರತಿಭಟನೆ ನಡೆಯಿತು. ಯಾದಗಿರಿ ಶಾಸಕ ಚೆನ್ನಾರೆಡ್ಡಿ ಮತ್ತು ಆತನ ಪುತ್ರ ಬಂಧನಕ್ಕೆ ಮೃತ ಪಿಎಸ್‌ಐ ಪರಶುರಾಮ ಕುಟುಂಬಕ್ಕೆ ನ್ಯಾಯದೊರಕಿಸಿ ಕೊಡಬೇಕೆಂದು ಆಗ್ರಹಿಸಿ ರಸ್ತೆಯ ಮೇಲೆ ಕುಳಿತು ಪ್ರತಿಭಟನೆ ನಡೆಸಿದರು. ಮೃತರ ಕುಟುಂಬಕ್ಕೆ 2 ಕೋಟಿ ಪರಿಹಾರ ನೀಡಬೇಕು, ಅವರ ಪತ್ನಿಗೆ ಅದೇ ಹುದ್ದೆಯನ್ನೂ ನೀಡಬೇಕೆಂದು ಒತ್ತಾಯಿಸಿದರು.

ಕುಟುಂಬಸ್ಥರಿಗೆ ಸಾಂತ್ವನ

ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಗ್ರಾಮಕ್ಕೆ ಭೇಟಿ ನೀಡಿ ಮೃತ ಪಿಎಸ್‌ಐ ಪರಶುರಾಮ್ ಇವರ ಅಂತಿಮದರ್ಶನ ಪಡೆದರು. ಸಚಿವರು ಗ್ರಾಮದ ಪ್ರೌಢಶಾಲೆಗೆ ಭೇಟಿ ನೀಡುತ್ತಿದ್ದಂತೆ ದಲಿತ ಸಂಘಟನೆಗಳು ಮತ್ತು ಕುಟುಂಬದ ಸದಸ್ಯರು ಸಚಿವರನ್ನು ಭೇಟಿಯಾಗಿ ಪ್ರಕರಣವನ್ನು ಸಿಐಡಿಗೆ ತನಿಖೆಗೆ ನೀಡಬೇಕೆಂದು ಒತ್ತಾಯಿಸಿದರು. ಮೊದಲಿಗೆ ಕುಟುಂಬದ ಸದಸ್ಯರಿಗೆ ಸಾಂತ್ವನ ನೀಡಿದ ಸಚಿವರು ಪ್ರಕರಣದ ಕುರಿತು ಸಿಎಂ ಇವರ ಗಮನಕ್ಕೆ ತರುವೆ. ನನ್ನ ಕ್ಷೇತ್ರದ ವ್ಯಕ್ತಿಗೆ ಈ ರೀತಿಯಾಗಿದ್ದು, ಇದೆಲ್ಲವನ್ನೂ ಸಿಎಂ ಇವರೊಂದಿಗೆ ಚರ್ಚಿಸಿ ನ್ಯಾಯ ಒದಗಿಸುವೆ ಎಂದು ಭರವಸೆ ನೀಡಿದರು. ಈ ನಡುವೆ ನೆರೆದಿದ್ದ ಜನರು ಮೃತರ ಪತ್ನಿಗೆ ಪಿಎಸ್‌ಐ ಹುದ್ದೆಯನ್ನೇ ನೀಡಬೇಕೆಂದು ಆಗ್ರಹಿಸಿದರು.

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	123.27	73,500
2.	ಕಬಿನಿ	2284	2280.61	32,559
3.	ಹಾರಂಗಿ	2859	2854.33	10,214
4.	ಹೇಮಾವತಿ	2922	2920.05	24,100
5.	ಆಲಮಟ್ಟಿ	1704.81	1691.74	3,19,916
6.	ತುಂಗಭದ್ರಾ	1633	1631.14	1,71,353
7.	ನಾರಾಯಣಪುರ	1615	1607.76	2,98,585

ಪತ್ನಿಯ ಕೊಲೆ; ಆತ್ಮಹತ್ಯೆಗೆ ಯತ್ನಿಸಿದ್ದ ಪತಿ ಸಾವು

ದಾವಣಗೆರೆ: ಅನೈತಿಕ ಸಂಬಂಧ ಶಂಕಿಸಿ ಪತ್ನಿಯನ್ನು ಕೊಲೆಗೈದಿದ್ದ ಪತಿ ಸಾವನ್ನಪ್ಪಿದ್ದಾನೆ. ಪತ್ನಿ ನಾಗಮ್ಮ ಮಲಗಿರುವಾಗಲೇ ಕತ್ತು ಕೊಯ್ದು ಕೊಲೆ ಮಾಡಿದ್ದ ಪತಿ ಸತ್ಯಪ್ಪ ನಂತರ ತಾನು ಆತ್ಮಹತ್ಯೆಗೆ ಯತ್ನಿಸಿದ್ದ. ಅಸ್ವಸ್ಥನಾಗಿದ್ದ ಸತ್ಯಪ್ಪನನ್ನು ದಾವಣಗೆರೆ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಸತ್ಯಪ್ಪ ಸಾವನ್ನಪ್ಪಿದ್ದಾನೆ. ಜಗಳೂರು ತಾಲೂಕಿನ ಗೌರಿಪುರ ಗ್ರಾಮದಲ್ಲಿ ಕೊಲೆ ಪ್ರಕರಣ ನಡೆದಿತ್ತು. ಶಿಕ್ಷಕಿ ನಾಗಮ್ಮ (58) ಕೊಲೆಯಾದವರು. ಸತ್ಯಪ್ಪ ಆತ್ಮಹತ್ಯೆಗೆ ಯತ್ನಿಸಿದ್ದಾಗ ಸಂಬಂಧಿಕರು ತಕ್ಷಣವೇ ಆಸ್ಪತ್ರೆಗೆ ರವಾನಿಸಿದ್ದರು. ಮೃತ ನಾಗಮ್ಮ ಸಂತೆಮುದ್ದಾಪುರದಲ್ಲಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು.

ಸರಕಾರದ ವಿರುದ್ಧ ದೋಸ್ತಿಗಳ ರಣಕಹಳೆ

← ಮೊದಲಪುಟದಿಂದ

ಅಂತರ ಕಾಯ್ದುಕೊಂಡ ಪ್ರೀತಂಗೌಡ: ಪಾದಯಾತ್ರೆಯ ಸಿದ್ಧತೆಯಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಕಾಣಿಸಿಕೊಂಡಿರುವುದಕ್ಕೆ ಕುಮಾರಸ್ವಾಮಿ ಹಾಗೂ ಜೆಡಿಎಸ್ ಕಿಡಿಕಾರಿ, ಪಾದಯಾತ್ರೆಯಿಂದ ದೂರ ಉಳಿಯುವ ಮಾತನ್ನು ಹೇಳಿದ್ದರು. ಆದ್ದರಿಂದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರೀತಂಗೌಡ ಕಾಣಿಸಿಕೊಳ್ಳಲಿಲ್ಲ. ಆದರೆ ಬಳಿಕ ಪಾದಯಾತ್ರೆಯಲ್ಲಿ ವಿಜಯೇಂದ್ರ ಅವರೊಂದಿಗೆ ಪ್ರೀತಂಗೌಡ ಕಾಣಿಸಿಕೊಂಡರು. ಇನ್ನು ಆರಂಭದಲ್ಲಿ ಬಿಜೆಪಿ ನಾಯಕರೊಂದಿಗೆ ಹೆಜ್ಜೆ ಹಾಕಿದ ನಿಖಿಲ್ ಕುಮಾರಸ್ವಾಮಿ, ಬಳಿಕ ಪ್ರತ್ಯೇಕವಾಗಿ ಹೆಜ್ಜೆ ಹಾಕಿದರು. ಜೆಡಿಎಸ್ ಶಾಸಕರು ನಿಖಿಲ್‌ಗೆ ಸಾಥ್ ನೀಡಿದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ, ಪ್ರತಿಪಕ್ಷ ನಾಯಕ ಅಶೋಕ್, ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ , ವಿ. ಸೋಮಣ್ಣ, ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಡಿ.ವಿ ಸದಾನಂದಗೌಡ, ಬಸವರಾಜ ಬೊಮ್ಮಾಯಿ, ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ ದೇವೇಗೌಡ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಸೇರಿದಂತೆ ಐದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು, ವಿವಿಧ ಕ್ಷೇತ್ರಗಳ ಶಾಸಕರು, ಸಂಸದರಿದ್ದರು.

ಕೈ ಆಂದೋಲನ

← ಮೊದಲಪುಟದಿಂದ

ಇದಾದ ನಂತರವೇ ಜನ ಈ ಡಿ.ಕೆ. ಶಿವಕುಮಾರ್ ನಾಯಕತ್ವಕ್ಕೆ 135 ಸೀಟುಗಳನ್ನು ಕೊಟ್ಟು, ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ನಿಮ್ಮ ನಾಯಕತ್ವಕ್ಕೆ ಜನ ಬರೀ 19 ಸೀಟು ಕೊಟ್ಟಿದ್ದಾರೆ'' ಎಂದು ವಾಗ್ದಾಳಿ ನಡೆಸಿದರು.

ಬಿಎಸ್‌ವೈ ಕಣ್ಣೀರು ಹಾಕುತ್ತಾ ರಾಜೀನಾಮೆ ಕೊಟ್ಟಿದ್ದೇಕೆ?: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ನನ್ನನ್ನು ಭ್ರಷ್ಟಾಚಾರದ ಪಿತಾಮಹ ಎಂದು ಕರೆದಿದ್ದಾರೆ ಈ ಹಿಂದೆ ಯಡಿಯೂರಪ್ಪ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಜೈಲಿಗೆ ಹೋಗಿದ್ದೇಕೆ? ವಿಧಾನಸೌಧದಲ್ಲಿ ಕಣ್ಣೀರು ಹಾಕುತ್ತಾ ರಾಜೀನಾಮೆ ನೀಡಿದ್ದು ಏಕೆ? ಅವರ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡಿದ್ದೇಕೆ ಎಂದು ಪ್ರಶ್ನಿಸಿದ ಡಿಕೆಶಿ, ವಿಜಯೇಂದ್ರ ಪಾದಯಾತ್ರೆ ಮಾಡುವ ಬದಲು, ಬಿಎಸ್‌ವೈ ಜೈಲಿಗೆ ಹೋಗಲು ಜೆಡಿಎಸ್ ಕಾರಣವಾಗಿದ್ದರ ಬಗ್ಗೆಯೂ ಉತ್ತರ ನೀಡಬೇಕು ಎಂದು ಸವಾಲು ಹಾಕಿದರು.

ಎಸ್‌ಐ ಸಾವು: ಶಾಸಕ, ಪುತ್ರನ ವಿರುದ್ಧ ದೂರು

← ಮೊದಲಪುಟದಿಂದ

ಪತ್ನಿ ನೀಡಿದ ಮೂರು ಪುಟಗಳ ದೂರು ಆಧರಿಸಿ ಯಾದಗಿರಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಯಾದಗಿರಿ ನಗರ ಠಾಣೆಗೆ ಪೋಸ್ಟಿಂಗ್‌ಗಾಗಿ ಶಾಸಕ ಚನ್ನಾರೆಡ್ಡಿ ಪಾಟೀಲ್ 30 ಲಕ್ಷ ರೂ. ಹಣಕ್ಕೆ ಬೇಡಿಕೆ ಇಟ್ಟಿದ್ದರು. ಪರಶು ರಾಮ 30 ಲಕ್ಷ ರೂ. ನೀಡಿ, ಯಾದಗಿರಿ ನಗರಕ್ಕೆ ವರ್ಗಾವಣೆ ಯಾಗಿದ್ದರು. ಆದರೆ, ಒಂದು ವರ್ಷದ ಪೂರೈಸುವ ಮುನ್ನವೇ ಅವರನ್ನು ಮತ್ತೆ ಯಾದಗಿರಿ ಸೈಬರ್ ಕ್ರೈಮ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಇದರಿಂದ ಸಾಲದ ಸುಳಿಗೆ ಸಿಕ್ಕಿದ್ದ ಪರಶುರಾಮ ಒತ್ತಡಕ್ಕೆ ಒಳಗಾಗಿದ್ದರು. ಈ ಸಂಬಂಧ ಶುಕ್ರ ವಾರ ಸಚಿವ ಪ್ರಿಯಾಂಕ್ ಖರ್ಗೆ ಜೊತೆಗೆ ಅವರು ಫೋನ್‌ನಲ್ಲಿ ಮಾತನಾಡಿದ್ದರು ಎಂದು ಕುಟುಂಬಸ್ಥರು ಹೇಳಿದ್ದಾರೆ. ಶಾಸಕ ಚನ್ನಾರೆಡ್ಡಿ ಪಾಟೀಲ್ ಹಾಗೂ ಅವರ ಪುತ್ರನನ್ನು ಕೂಡಲೇ ಬಂಧಿಸುವಂತೆ ಆಗ್ರಹಿಸಿ ದಲಿತ ಪರ ಸಂಘಟನೆಗಳು ಮತ್ತು ಎಸ್‌ಐ ಪರಶುರಾಮ ಕುಟುಂಬಸ್ಥರು ಖಾಸಗಿ ಆಸ್ಪತ್ರೆಯಿಂದ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ರವಾನಿಸುವ ವೇಳೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಆ್ಯಂಬುಲೆನ್ಸ್ ತಡೆದು ಪ್ರತಿಭಟನೆ ನಡೆಸಿದರು.

ಮಹರ್ಷಿ ವಾಲ್ಮೀಕಿ ನಿಗಮದ ಹಗರಣದಲ್ಲಿ ಅಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಬೆನ್ನಲ್ಲೇ, ಆಡಳಿತ ಪಕ್ಷದ ಶಾಸಕರ ವಿರುದ್ಧ ಲಂಚ ಆರೋಪಕ್ಕೆ ಸಂಬಂಧ ದೂರು ದಾಖಲಾಗಿರುವುದು ಪ್ರತಿಪಕ್ಷಗಳಿಗೆ ರಾಜಕೀಯವಾಗಿ ಮತ್ತೊಂದು ಅಸ್ತ್ರ ಸಿಕ್ಕಂತಾಗಿದೆ.

ನಗರಸಭಾ ಕಾರ್ಯಾಲಯ, ಹಿರಿಯೂರು-577598
ಫೋನ್ ನಂ. 08193-263220, ಸಹಾಯವಾಣಿ: 08193-260020,
E-mail:tmchiriyur@yahoo.in Webist: hiriyurcity.gov.in
ನಂ.ನ.ಸ.ಹಿ/ತಾ.ವಿ/15ನೇ ಹ.ಕಾ.ನಿ/ಟೆಂ.ಸಿಆರ್:08/2024-25
ದಿನಾಂಕ:01/08/2024

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-3 ರ ನಿಬಂಧನೆಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ 2023-24ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನದಲ್ಲಿ ಇಂಡೆಂಟ್ ಸಂ:DMA/2024-25/OW/WORK_INDENT22277 (Reserved for SC) ಅಂದಾಜು ಮೊತ್ತ ರೂ.98.40 ಲಕ್ಷಗಳು, ಇಎಂಡಿ ಮೊತ್ತ ರೂ.83,142/-ಗಳು. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:17/08/2024ರ ಸಂಜೆ 05:00ರ ವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ:19/08/2024ರ ಬೆಳಿಗ್ಗೆ:10:30ರ ನಂತರ. ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಹಿರಿಯೂರು.
ಸಹಿ/- ಪೌರಾಯುಕ್ತರು, ನಗರಸಭೆ, ಹಿರಿಯೂರು.
DIPR/CTA/KSMCA/164/2024-25

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ ಬೈತ್‌ಖೋಲ್, ಕಾರವಾರ
ಕ್ರ.ಸಂ.ಕಜಮಂ-05/ಕಾಮಗಾರಿ-III/2024-25 ದಿನಾಂಕ: 02.08.2024

ಟೆಂಡರು ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ದ್ವಿ-ಲಕೋಟೆ ಪದ್ಧತಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ರನ್ವಯ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ, ESI ಮತ್ತು EPF ರಲ್ಲಿ ನೋಂದಾಯಿತ ಗುತ್ತಿಗೆದಾರ/ ಸಂಸ್ಥೆಗಳಿಂದ 'ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್' ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ನಿಗದಿತ ಸಿಬ್ಬಂದಿಗಳನ್ನು ಕರ್ನಾಟಕ ಜಲಸಾರಿಗೆ ಮಂಡಳಿಗೆ ಒದಗಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ಅನುಭವವುಳ್ಳ ಆಸಕ್ತ ನೋಂದಾಯಿತ ಸಂಸ್ಥೆ/ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್ ಡಾಕ್ಯೂಮೆಂಟ್ ಮತ್ತು ಇತರ ಷರತ್ತುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://kppp.karnataka.gov.in website ನಿಂದ (Download) ಪಡೆದುಕೊಳ್ಳಬಹುದಾಗಿದೆ.

ಕಾಮಗಾರಿಯ ಹೆಸರು: (1) Providing Data Entry Operator, Peon/Attender/ Defeder/ Watchman, Driver and Electrician on outsource basis for various offices under Karnataka Maritime Board. (From August-2024 to April-2025). **Service Estimate Number - (IDD/2024-25/SE0026)**

ಟೆಂಡರ್‌ನ ವೆಚ್ಚ **ರೂ. 1,27,89,819/-** (GST ಹೊರತು ಪಡಿಸಿ), ಇ.ಎಂ.ಡಿ: **ರೂ. 2,00,000/-**, ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: **12.08.2024 @ 17.30 hours**, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **23.08.2024 @17.30 hours**

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ ಹಾಗೂ ಸಾಮಾನ್ಯ ವಿಚಾರಣೆಗಾಗಿ ಟೆಂಡರ್‌ನ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕದೊಳಗೆ ಈ ಕಛೇರಿಯ **E-mail: piwtdev.wks@gmail.com** ಅಥವಾ ದೂರವಾಣಿ ಸಂ.: 08382-221035/221494ಕ್ಕೆ ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ
DIPR/KWR/KSMCA/213/24-25 Dt: 02.08.2024

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಪಿನ್‌ಕೋಡ್-561 208
ದೂರವಾಣಿ ಸಂಖ್ಯೆ: 08155-286550, ಇ-ಮೇಲ್ ವಿಳಾಸ: amoghgbnr123@gmail.com
ಸಂಖ್ಯೆ:ಸಾ.ಆ.ಗೌ/ಪಥ್ಯಾಹಾರ/ಟೆಂ/01/2024-25 ದಿನಾಂಕ:25.07.2024

-:ಇ-ಪ್ರಕ್ಯೂರ್‌ಮೆಂಟ್-ಟೆಂಡರ್ ಅಧಿಸೂಚನೆ:-

ಸಾರ್ವಜನಿಕ/ತಾಯಿ ಮತ್ತು ಮಕ್ಕಳ ಆಸ್ಪತ್ರೆ ಗೌರಿಬಿದನೂರು 2024-25ನೇ ಸಾಲಿನ ಒಳ ರೋಗಿಗಳಿಗೆ ಪಥ್ಯಾಹಾರ ತಯಾರಿಸಲು ಆಹಾರ ಪದಾರ್ಥಗಳು ಹಾಗೂ ಬ್ರೆಡ್ ಸರಬರಾಜು ಮಾಡಲು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್ ಫಾರ್ಮ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅವಧಿಯು ಆದೇಶ ನೀಡುವ ದಿನಾಂಕದಿಂದ 31.03.2025 ರವರೆಗೆ ಮಾತ್ರ ಇರುತ್ತದೆ. ಒಟ್ಟು ಟೆಂಡರಿನ **ಅಂದಾಜು ಮೌಲ್ಯ ವರ್ಷಕ್ಕೆ ರೂ. 47,00,000/-**. ಟೆಂಡರ್ ವಿವರಗಳು ಈ ಕೆಳಗಿನಂತಿರುತ್ತದೆ. ದ್ವಿ ಲಕೋಟೆ ಪದ್ಧತಿಯಲ್ಲಿ ಪಥ್ಯಾಹಾರ ಆಹಾರ ಸಾಮಾಗ್ರಿಗಳ ಹಾಗೂ ಬ್ರೆಡ್ ಪೂರೈಕೆಗಾಗಿ ಇ-ಪ್ರಕ್ಯೂರ್‌ಮೆಂಟ್ ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಸಾ.ಆ.ಗೌ/ ಪಥ್ಯಾಹಾರ/ ಟೆಂ/01/2024-25 (2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: **ವಿವರ: 1.Group A: ಟೆಂಡರ್ ಬಿಡ್ ಮೊತ್ತ (ರೂ.ಲಕ್ಷಗಳಲ್ಲಿ): 3687826.00** ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: **ವಿವರ: 2. Group B: ಟೆಂಡರ್ ಬಿಡ್ ಮೊತ್ತ (ರೂ.ಲಕ್ಷಗಳಲ್ಲಿ): 991850.00** (3) e-Portal ಮೂಲಕ ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **ದಿನಾಂಕ: 25.07.2024.** (4) e-Portal ಟೆಂಡರ್ ಲಕೋಟೆಗಳನ್ನು ಸಲ್ಲಿಸುವ ಅಂತಿಮ ದಿನಾಂಕ & ಸಮಯ: **ದಿನಾಂಕ: 26.08.2024 ರ ಸಂಜೆ 4.30 ಗಂಟೆ.** (5) Sample Submit ದಿನಾಂಕ: **ದಿನಾಂಕ 26.08.2024 ರಂದು ಬೆಳಿಗ್ಗೆ: 11: 00 ಗಂಟೆ.** (6) e-Portal ನ ಟೆಂಡರ್ ತಾಂತ್ರಿಕ ಲಕೋಟೆಗಳನ್ನು ಪರಿಶೀಲಿಸುವ ದಿನಾಂಕ & ವೇಳೆ: **ದಿನಾಂಕ: 27.08.2024 ರಂದು ಸಂಜೆ: 4:30 ಗಂಟೆ (ಇ-ಪ್ರಕ್ಯೂರ್‌ಮೆಂಟ್‌ನಲ್ಲಿ).** (7) e-Portal ಆರ್ಥಿಕ ಲಕೋಟೆಗಳನ್ನು ತೆರೆಯುವ ದಿನಾಂಕ & ವೇಳೆ: **ದಿನಾಂಕ: 30.08.2024 ರಂದು ಬೆಳಿಗ್ಗೆ: 11:00ಗಂಟೆ (ಇ-ಪ್ರಕ್ಯೂರ್‌ಮೆಂಟ್‌ನಲ್ಲಿ).** (8) ಇ.ಎಂ.ಡಿ: ಅನುಬಂಧ -1 ರ ನಮೂನೆಯಲ್ಲಿ EMD DECLARATION ಸಹಿಯೊಂದಿಗೆ ಸಲ್ಲಿಸುವುದು. (9) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ:**website:www.kppp.karnakata.gov.in** ಆಡಳಿತ ವೈದ್ಯಾಧಿಕಾರಿಗಳು. ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ.

ಸಹಿ/- ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:120/ಕೆಎಸ್‌ಎಂಸಿಎ/2024-25

ಮಹಾನಗರ ಪಾಲಿಕೆ, ವಿಜಯಪುರ
ಸಂಖ್ಯೆ: ಮನಪಾ/ಲೋವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೊ/2024-25
ದಿನಾಂಕ: 31.07.2024

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2024-25 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿ 04 ಕಾಮಗಾರಿಗಳು ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆವ್ಹಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.
ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
1. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 17-08-2024.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/151/ಕೆಎಸ್‌ಎಂಸಿಎ/2024-25

ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ ಮುಳಬಾಗಲು, ಕೋಲಾರ ಜಿಲ್ಲೆ.
ಎಂ.ಸಿ.ರೋಡ್ ಮುಳಬಾಗಲು, ಕೋಲಾರ ಜಿಲ್ಲೆ. ದೂರವಾಣಿ ಸಂಖ್ಯೆ: 08159-298914, Email:amomulbagal@gmail.com,
ಸಂಖ್ಯೆ:ಸಾಆಮು/ಪಥ್ಯಾಹಾರ/ಟೆಂಡರ್/03/2024-25
ದಿನಾಂಕ: 31.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ ಮುಳಬಾಗಿಲು ಇಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಅಧಿಸೂಚನೆಯಂತೆ ಆಸ್ಪತ್ರೆಗಳಿಗೆ ಪಥ್ಯಾಹಾರಕ್ಕೆ ಆಹಾರ ಪದಾರ್ಥಗಳು ಸರಬರಾಜು ಮಾಡಲು ಹಾಗೂ ಬ್ರೆಡ್ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್ ಭಾಗವಹಿಸುವ ಟೆಂಡರ್‌ದಾರರ ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಮುಖ್ಯ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ, ಮುಳಬಾಗಲು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:148/ಕೆಎಸ್‌ಎಂಸಿಎ/2024-25

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
ಟೆಂಡರ್ ಪ್ರಕಟಣೆ ಸಂಖ್ಯೆ: 26/2022-23, 3rd call, 22/2023-24 5th call Dtd: 2.8.2024

ಟೆಂಡರ್ ಅಹ್ವಾನ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ ಕಡೂರು & ಕೊಪ್ಪ, ತಾಲ್ಲೂಕಿನ 2 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕನಿಷ್ಠ ಮೊತ್ತ ರೂ 7.54 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 187.89 ಲಕ್ಷದ ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW1-2-3& 4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ:02.08.2024 ರಿಂದ 13.08.2024 ರವರೆಗೆ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬೇಕು. ಟೆಂಡರನ್ನು ದಿನಾಂಕ:14.08.2024 ರಂದು ಸಂಜೆ 05:31ಕ್ಕೆ ತೆರೆಯಲಾಗುವುದು.ಈ ದಿನಾಂಕದಂದು ಆಕಸ್ಮಿಕ, ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಪ್ರಕಟಣೆಯನ್ನು https://kppp. karnataka.gov.in/ ನಲ್ಲಿ ಓದಿಕೊಳ್ಳುವುದು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಚಿ/38/24-25/403

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳವರ ಕಾರ್ಯಾಲಯ, ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
E-mail: mohshikaripur@gmail.com
ದೂರವಾಣಿ ಸಂಖ್ಯೆ : 08187-222412
ಸಂಖ್ಯೆ:ಸಾಆಶಿ/ಡಯೆಟ್.ಟೆಂ/02/2024-25 ದಿನಾಂಕ: 01.08.2024

ಇ-ಟೆಂಡರ್ ಅಧಿಸೂಚನೆ

ವಿಷಯ:- 2024-25 ನೇ ಸಾಲಿಗೆ ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇಲ್ಲಿಗೆ ಸಿದ್ದಪಡಿಸಿದ ಪಥ್ಯಾಹಾರ, ಹೋಳುಮಾಡಿದ ಬ್ರೆಡ್ ಸರಬರಾಜಿನ ಇ-ಟೆಂಡರ್ ಪ್ರಕಟಣೆ.
ಉಲ್ಲೇಖ:-1)ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಲೆಪವಿ/ಪಥ್ಯಾಹಾರ/ಟೆಂ/10/2023-24 ದಿನಾಂಕ:12-03-2024

ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇಲ್ಲಿಗೆ 2024-25 ನೇ ಸಾಲಿಗಾಗಿ ಒಳರೋಗಿಗಳಿಗೆ ಸಿದ್ದಪಡಿಸಿದ ಪಥ್ಯಾಹಾರ, ಉತ್ತಮ ದರ್ಜೆಯ ಹೋಳುಮಾಡಿದ ಬ್ರೆಡ್ ಸರಬರಾಜು ಪಡೆಯಲು ಇ-ಪ್ರಕ್ಯೂರ್ ಮೆಂಟ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ಇ-ಪ್ರಕ್ಯೂರ್‌ಮೆಂಟ್ ವಿಳಾಸ http://eproc.karnataka.gov.in ರಲ್ಲಿ ಪರಿಶೀಲಿಸಬಹುದು., ಅರ್ಹರಿರುವ ಟೆಂಡರುದಾರರು ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸಬಹುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು ಮತ್ತು ಟೆಂಡರ್ ಇ.ಎಂ.ಡಿ. ವಿವರ ಹಾಗೂ ಇತರ ವಿವರಗಳನ್ನು ಟೆಂಡರು ಫಾರಂನಲ್ಲಿ ಲಭ್ಯವಿರುತ್ತದೆ. ಇಚ್ಛೆಯುಳ್ಳವರು ನಿಗಧಿತ ಸಮಯದೊಳಗೆ ಟೆಂಡರು ಸಲ್ಲಿಸಬಹುದು.

ಕ್ರ.ಸಂ. 1. ವಿವರಗಳು: ಇ-ಪೋರ್ಟಲ್ ಮೂಲಕ ಟೆಂಡರ್ ಫಾರಂ ಡೌನ್ ಲೋಡ್ ಮಾಡಿಕೊಳ್ಳುವ ದಿನಾಂಕ **ದಿನಾಂಕ:** As on e-portal **ಕ್ರ.ಸಂ. 2. ವಿವರಗಳು:** ಇ-ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು (ಅಪ್‌ಲೋಡ್) ಕೊನೆಯ ದಿನಾಂಕ **ದಿನಾಂಕ:** As on e-portal **ಕ್ರ.ಸಂ. 3. ವಿವರಗಳು:** ಇ-ಪೋರ್ಟಲ್ ಮೂಲಕ ಟೆಂಡರ್ ತೆರೆಯುವ ದಿನಾಂಕ **ದಿನಾಂಕ:** As on e-portal **ಕ್ರ.ಸಂ. 4. ವಿವರಗಳು:** ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ **ದಿನಾಂಕ:** As on e-portal **ಕ್ರ.ಸಂ. 5. ವಿವರಗಳು:** ಇ.ಎಂ.ಡಿ ಮೊತ್ತ (2.5) **ದಿನಾಂಕ:** As on e-portal

ಸಹಿ/- ಆಡಳಿತ ವೈದ್ಯಾದಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/13/08/395

ಕರ್ನಾಟಕ ನೀರಾವರಿ ನಿಗಮ ನಿಯಮಿತ
ಕಾರ್ಯಪಾಲಕ ಅಭಿಯಂತರರು ರವರ ಕಛೇರಿ, ಕ.ನೀ.ನಿ.ನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ-584135
ಸಂ:ಕಾ.ಅ-5/ಕ.ನೀ.ನಿ.ನಿ/ತಾ.ಶಾ-1/ಬ್ರಿಡ್ಜ್ ಕಂ.ಬ್ಯಾರೇಜ್‌ಟೆಂಡರ್/2024-25/610 ದಿನಾಂಕ:02.08.2024

ಟೆಂಡರ್ ಪ್ರಕಟಣೆ

ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆಯಲ್ಲಿ ಕರ್ನಾಟಕ ನೀರಾವರಿ ನಿಗಮ ನಿಯಮಿತದಲ್ಲಿ ನೊಂದಾಯಿಸಲ್ಪಟ್ಟ KPWD/ CPWD Class-1 registration enrolled Contractors /Firm/ individual ರವರಿಂದ "Construction of Bridge cum Barrage across Tungabadhra river near Chikkamanchale Village ,Raichur taluk and District and improvement & widening of approach roads for both sides" ಕಾಮಗಾರಿಯ ಟೆಂಡರ್‌ನ್ನು "Percentage" ಆಧಾರದ ಮೇಲೆ ನಿಯಾಮಾವಳಿಗಳಂತೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಇವರ ಪರವಾಗಿ ಕರೆಯಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ.138.56 ಕೋಟಿಗಳು ಮತ್ತು ಇ.ಎಂ.ಡಿ. ಮೊತ್ತ ರೂ. 1.40 ಕೋಟಿಗಳು, ವಿವರಗಳನ್ನು kppp.karnataka.gov.in ಜಾಲದಲ್ಲಿ ದಿನಾಂಕ: 12.08.2024 ನಂತರ ಅಥವಾ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಕೆಲಸದ ದಿನಗಳಲ್ಲಿ ಮಾಹಿತಿಯನ್ನು ಪಡೆಯಬಹುದು. ಈ ಕಛೇರಿಯ ಪೋ.ಸಂ:08532-251105 ಮತ್ತು email: ee5.divisionyer@gmail.com

ಸಹಿ/- ಕಾರ್ಯಪಾಲಕ ಅಭಿಯಂತರರು, ಕನೀನಿನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ.
DIP/RCR/166/KSMCA/165/2024-25

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436
ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/2024-25/22411-15 ದಿನಾಂಕ: 02.08.2024

:: ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ-1362:- ಟೈಪ್-II ಅನ್‌ಇನ್‌ಹೆಬಿಟೆಡ್ ವಿದ್ಯುತ್ ಪರಿವರ್ತಕದ ತೈಲವನ್ನು ಗು.ವಿ.ಸ.ಕಂ.ನಿ ತಾಂತ್ರಿಕ ನಿರ್ದಿಷ್ಟತೆಯಂತೆ ತಯಾರು ಮಾಡಿ ಸರಬರಾಜು ಮಾಡುವದು.
ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **03.08.2024** ರಂದು ಅಥವಾ ನಂತರ. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **03.09.2024 @ 17:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.09.2024 @ 11:00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **06.09.2024 @ 11:00 ಗಂಟೆಗೆ.**
ಟೆಂಡರ್ ಮೊತ್ತ: ರೂ. 1028 ಲಕ್ಷ
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: **https://kppp.karnataka.gov.in.**

ಸಹಿ/- ಅಧೀಕ್ಷಕ ಅಭಿಯಂತರರು (ವಿ)., ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/284/ಕೆ.ಎಸ್.ಎಂ.ಸಿ.&ಎ/2024-25

ಪುರಸಭಾ ಕಾರ್ಯಾಲಯ, ದೇವನಹಳ್ಳಿ
ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂರವಾಣಿ : 080-27682221, Email : itstaff_ulb_devanahalli@yahoo.co.in
ನಂ.ದೇಪು/ಕಂ.ಶಾ/ಹ.ಪ್ರ/ಸಿಆರ್/05/2024-25 ದಿನಾಂಕ: 02.08.2024

"ಬಹಿರಂಗ ಹರಾಜು ಪ್ರಕಟಣೆ"

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ದೇವನಹಳ್ಳಿ ಪುರಸಭಾ ವ್ಯಾಪ್ತಿ 10ನೇ ಹಣಕಾಸು ಯೋಜನೆಯಡಿ ಹೊಸಬಸ್ ನಿಲ್ದಾಣದಲ್ಲಿ ನಿರ್ಮಿಸಿ ಪುರಸಭೆ ಮಾಲೀಕತ್ವದಲ್ಲಿನ ಮಳಿಗೆಗಳ ಪೈಕಿ 07 ಅಂಗಡಿ ವಾಣಿಜ್ಯ ಮಳಿಗೆಗಳು, 01 ಹೋಟೆಲ್ ಹಾಲ್ ಹಾಗೂ ಹಳೇ ಪುರಸಭೆ ಕಟ್ಟಡದ ಆವರಣದಲ್ಲಿ ನಿರ್ಮಿಸಿರುವಂತಹ 09 ಅಂಗಡಿ ವಾಣಿಜ್ಯ ಮಳಿಗೆಗಳು ಒಟ್ಟು 17 ಅಂಗಡಿ ವಾಣಿಜ್ಯ ಮಳಿಗೆಗಳ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಕರ್ನಾಟಕ ಸಾರ್ವಜನಿಕ ಆವರಣ (ಅನಧಿಕೃತ ನಿವಾಸಿಗಳನ್ನು ಹೊರಹಾಕುವುದು) ಕಾಯಿದೆಯಡಿ ಹಾಲಿ ಬಾಡಿಗೆದಾರರನ್ನು ಖಲ್ಲಾಪಡಿಸಿ ಪುರಸಭೆ ವಶಕ್ಕೆ ಪಡೆದುಕೊಂಡು ಎರಡನೇ ಅವಧಿಗೆ ಗುತ್ತಿಗೆ ನೀಡಲು ಇ-ಹರಾಜು ಮೂಲಕ ವಿಲೇಪಡಿಸುವ ಸಂಬಂಧವಾಗಿ ಮಾನ್ಯ ಆಡಳಿತಾಧಿಕಾರಿಗಳು ಪುರಸಭೆ ದೇವನಹಳ್ಳಿ ರವರ ಅಧ್ಯಕ್ಷತೆಯಲ್ಲಿ **ದಿನಾಂಕ: 07.09.2023** ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:18 ರಲ್ಲಿ ನಿಗಧಿಪಡಿಸಿದ್ದ ಠೇವಣಿ ಮತ್ತು ಬಾಡಿಗೆ ಮೊತ್ತದ ತೀರ್ಮಾನದಂತೆ, ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ **ಸಂಖ್ಯೆ:ಜಿನಕೋ/ಸಿಬ್ಬಂದಿ(1)/ಇತರೆ/ಸಿಆರ್/80/2023-24 ದಿನಾಂಕ: 27.02.2024** ರ ಅನುಮೋದನೆ ಪ್ರಕಾರ ಹಾಗೂ ಸರ್ಕಾರದ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ಬೆಂಗಳೂರು ರವರ ಸುತ್ತೋಲೆ **ಸಂಖ್ಯೆ:ನಅಇ/301/ಜಿಇಎಲ್/2017 ದಿನಾಂಕ: 19.07.2019** ರ ಸಂದರ್ಭ-3 ರ ನಿಯಮಾವಳಿಗಳಂತೆ ಪ್ರಸ್ತಾಪಿತ ವಾಣಿಜ್ಯ ಮಳಿಗೆಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ವಿಲೇವಾರಿ ಮಾಡಲು ತೀರ್ಮಾನಿಸಿರುವಂತೆ **ದಿನಾಂಕ: 31.08.2024** ರಂದು ನಡೆಯುವ ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಿ ಮಳಿಗೆಗಳನ್ನು 12 ವರ್ಷ ಅವಧಿಗೆ ನಿಗಧಿಪಡಿಸಿರುವ ಬಡ್ಡಿ ರಹಿತವಾದ ಮರು ಪಾವತಿ ಠೇವಣಿಗೆ ಹಾಗೂ ಬಾಡಿಗೆ ಮೊತ್ತಕ್ಕೆ ಬಿಡ್ ಸಲ್ಲಿಸುವ ಮುಖಾಂತರ ಮಳಿಗೆಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ. ವಾಣಿಜ್ಯ ಮಳಿಗೆಗಳ ಹರಾಜಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಕಂದಾಯ ಶಾಖೆ ಹಾಗೂ ಪುರಸಭೆಯ ಅಧಿಕೃತ ವೆಬ್‌ಸೈಟ್ www.devanahallitown.mrc.gov.in ಹಾಗೂ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ದೇವನಹಳ್ಳಿ
ಸಹಿ/- ಮುಖ್ಯಾಧಿಕಾರಿ ಪುರಸಭೆ, ದೇವನಹಳ್ಳಿ
ವಾಸಾಸಂಇ/ವಾಪ್ರ/1259/ಎಸ್‌ಎಸ್‌ಸಿ/2024-25

ನಗರಸಭಾ ಕಾರ್ಯಾಲಯ, ಮಂಡ್ಯ
CITY MUNICIPAL COUNCIL MANDYA-571401
ದೂ ಸಂ :08232-226749, ಟಾಲ್ ಫೀ ನಂ :1800-4253795
ಫ್ಯಾಕ್ಸ್:08232-221617
Website:www.mandyacity.mrc.gov.in
Email: itstaff_ulb_mandya@yahoo.co.in
NO.CMC/Mandya/AEE(envi)/MRF/CR/04/2024-25
Date:01.08.2024

ಟೆಂಡರ್ ಪ್ರಕಟಣೆ (ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

ಸ್ವಚ್ಛ ಭಾರತ ಮಿಷನ್ 2.0 ಯೋಜನೆ ಅನುದಾನ ಮತ್ತು ಇತರೆ ಅನುದಾನಗಳಲ್ಲಿ ಮಂಡ್ಯ ನಗರಸಭೆಯ ಕಾಳೇನಹಳ್ಳಿ ಗ್ರಾಮದ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ 35 ಟಿಪಿಡಿ ಸಾಮರ್ಥ್ಯದ ಒಣತ್ಯಾಜ್ಯ ನಿರ್ವಹಣೆಗಾಗಿ ಮೆಟೀರಿಯಲ್ ರಿಕವರಿ (ಎಂ.ಆರ್.ಎಫ್) ಪಿ.ಇ.ಬಿ ಸ್ಟ್ರಕ್ಚರ್ ಘಟಕ [Construction of Proposed 35 TPD MRF centre (Material Recovery Facility) of PEB structure (primary & secondary shed) at Kalenahalli Land Fill Sitel ನಿರ್ಮಾಣ ಕಾಮಗಾರಿ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದ್ದೇಶ 1999-2000 ಪ್ರಕಾರ ಆಕ್ಟ್ 2000 ನಿಯಮದಂತೆ **KW4** ದಸ್ತಾವೇಜಿನ ಪ್ರಕಾರ ದ್ವಿ ಲೋಕೋಟೆ ಪದ್ಧತಿಯಲ್ಲಿ ಟೆಂಡನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಅರ್ಹ ಟೆಂಡರ್ದಾರರು ಇ-ಪೋರ್ಟಲ್ **http://kppp.karnataka.gov.in** ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರ & ಮಾಹಿತಿಯನ್ನು ಇ-ಪೋರ್ಟಲ್‌ನಲ್ಲಿ ಅಥವ ಈ ಕಾರ್ಯಾಲಯದ ಆರೋಗ್ಯ ಶಾಖೆಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಟೆಂಡರ್ ಷೆಡ್ಯುಲ್ ವಿವರ:- (1) ಇಂಡೆಂಟ್ ಸಂಖ್ಯೆ : **DMA/2024-25/BD/WORK_INDENT21730.** (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **:02.09.2024 ಸಂಜೆ 05.00 ಗಂಟೆಯವರೆಗೆ.** (3) ಟೆಂಡರ್ ಮೊತ್ತ : **ರೂ.284.00 ಲಕ್ಷ.** (4) ಇ.ಎಂ.ಡಿ ಮೊತ್ತ : **ರೂ.4.26 ಲಕ್ಷ.** (5) ಯಾವುದೇ ತಿದ್ದುಪಡಿ/ಅನುಬಂಧಗಳನ್ನು ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/-ಪೌರಾಯುಕ್ತರು, ನಗರಸಭೆ, ಮಂಡ್ಯ.
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/225/2024-25

ಟ್ವೀಟೂ-ಖಾರಾ

ಬಿಜೆಪಿ
ಕರ್ನಾಟಕ

ಬನ್ನಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಒಗ್ಗೂಡಿ ಹೋರಾಡೋಣ. ಲೂಟಿ ಸರಕಾರವನ್ನು ತೊಲಗಿಸಲು ಬೆಂಗಳೂರಿನಿಂದ ಮೈಸೂರುವರೆಗೆ ಹೆಜ್ಜೆ ಹಾಕೋಣ.

ರಮೇಶ್
ಬೆಂಗಳೂರು

ಈ ನಿಮ್ಮ ಪಾದಯಾತ್ರೆಯಿಂದ ರಾಜ್ಯಕ್ಕೆ ಯಾವ ಉಪಯೋಗ ಇಲ್ಲ. ಏಕೆಂದರೆ ನಿಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ಆ ಪಕ್ಷದವರು ಪಾದಯಾತ್ರೆ ಮಾಡಿದ್ದರು. ಆಗ ನಿಮ್ಮಲ್ಲಿ ಏನಾದರೂ ಬದಲಾವಣೆ ಆಯಿತೇ..? ಇಲ್ಲ. ಈ ರಾಜಕೀಯದವರ ನವರಂಗಿ ಆಟಗಳನ್ನು ಜನ ತುಂಬಾ ನೋಡಿದ್ದಾರೆ. ಇದರಿಂದ ನಿಮ್ಮ ದೇಹಕ್ಕೆ ತುಂಬಾ ವ್ಯಾಯಾಮ ಆಗುತ್ತದೆ, ಅಷ್ಟೇ.

ಗೊಡ್ಡು ಬೆದರಿಕೆಗೆ ಹೆದರುವ ಪ್ರಶ್ನೆಯೇ ಇಲ್ಲ। ಕಾಂಗ್ರೆಸ್‌ಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇರ ಎಚ್ಚರಿಕೆ

ಜನರಿಗೆ ನ್ಯಾಯ ಕೊಡಿಸಲು ಪಾದಯಾತ್ರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಲವು ಪಾದಯಾತ್ರೆಗಳನ್ನು ಕಂಡಿರುವ ಕರ್ನಾಟಕ ಇದೀಗ, ಮುಡಾ,ವಾಲ್ಮೀಕಿ ಹಗರಣಕ್ಕೆ ಸಂಬಂಧಿಸಿದಂತೆ ಮತ್ತೊಂದು ಪಾದಯಾತ್ರೆಗೆ ಸಾಕ್ಷಿಯಾಗಿದೆ.

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ-ಜೆಡಿಎಸ್ ಹಮ್ಮಿಕೊಂಡಿರುವ ಪಾದಯಾತ್ರೆ ಶನಿವಾರ ಚಾಲನೆ ಸಿಕ್ಕಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಉಸ್ತುವಾರಿ ಡಾ. ರಾಧಾ ಮೋಹನ್‌ದಾಸ್ ಅಗರ್ವಾಲ್, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ಪ್ರತಿಪಕ್ಷ ನಾಯಕ ಅಶೋಕ್, ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಹಲವರ ಸಮ್ಮುಖದಲ್ಲಿ, ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಅವರು ನಗಾರಿ ಬಾರಿಸುವ ಮೂಲಕ ಪಾದಯಾತ್ರೆಗೆ ಚಾಲನೆ ಕೊಟ್ಟರು.

ಶನಿವಾರದಿಂದ ಆರಂಭವಾಗಿರುವ ಪಾದಯಾತ್ರೆ ಆ.10ರಂದು ಮೈಸೂರಿನಲ್ಲಿ ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯಗೊಳ್ಳಲಿದೆ. ಒಟ್ಟು 140 ಕಿ.ಮೀ ಪಾದಯಾತ್ರೆ ಜರುಗಲಿದ್ದು, ಪ್ರತಿದಿನ 15ರಿಂದ 20 ಕಿ.ಮೀ ವರೆಗೂ ಶ್ರಮಿಸಲಿವೆ. ಬಿಜೆಪಿ ರಾಜ್ಯ ಪದಾಧಿಕಾರಿಗಳು ಆಂತರಿಕ ಸಭೆ ನಡೆಸಿದ್ದು, ಮತ್ತೊಂದು ತಂಡ ಪಾದಯಾತ್ರೆ ಮಾರ್ಗಪಥದ ಸಮೀಕ್ಷೆ, ವಸತಿ, ಉಟೋಪಚಾರ ಸ್ಥಳ, ಜತೆಗೆ ಬಹಿರಂಗ ಸಭೆಗಳಿಗೆ ಅಗತ್ಯ ಮೈದಾನ ಗುರುತಿಸಿ ಅಂತಿಮಗೊಳಸಲಾಗಿದೆ.

ನ್ಯಾಯ ಕೊಡಿಸಲು ಪಾದಯಾತ್ರೆ : ವಿಜಯೇಂದ್ರ

ಕಾರ್ಯಕ್ರಮದಲ್ಲಿ ಮಾತನಾಡಿದ ವಿಜಯೇಂದ್ರ, ಪೊಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷದ ಸರಕಾರ ಹಗರಣಗಳ ಸರಕಾರವಾಗಿ ಮಾರ್ಪಾಡಾಗಿದೆ. ವಾಲ್ಮೀಕಿ ನಿಗಮದ ಹಗರಣ ಸಂಬಂಧ ಸಚಿವ ನಾಗೇಂದ್ರ ಈಗಾಗಲೇ ರಾಜೀನಾಮೆ ಕೊಟ್ಟಿದ್ದಾರೆ. ಮೈಸೂರು ಮುಡಾದಲ್ಲಿ ನಿವೇಶನಕ್ಕಾಗಿ ಲಕ್ಷಾಂತರ ಜನರು ಕಾಯುತ್ತಿದ್ದಾರೆ. ಆದರೆ, ಸಿದ್ದರಾಮಯ್ಯ ಕುಟುಂಬಕ್ಕೆ 14 ನಿವೇಶನ ಕೊಟ್ಟಿದ್ದಾರೆ. ಅಲ್ಲದೆ, ನಿವೇಶನಗಳನ್ನು ಅವರ ಶಿಫಾರಸಿನಂತೆ ನೀಡಿದ್ದು, ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ನೀಡಲು ಆಗ್ರಹಿಸಿದರು.

ನಾವು ಬಡವರು, ಶೋಷಿತರು, ವಂಚಿತರಿಗೆ ನ್ಯಾಯ ದೊರಕಿಸಲು ಪಾದಯಾತ್ರೆ ಮಾಡುತ್ತಿದ್ದರೆ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಧಮ್ಕಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ. ಅವರ ಗೊಡ್ಡು ಬೆದರಿಕೆಗೆ ಹೆದರುವ ಪ್ರಶ್ನೆ ಇಲ್ಲ. ಮುಖ್ಯಮಂತ್ರಿಗಳು ರಾಜೀನಾಮೆ ಕೊಡುವವರೆಗೆ ಬಿಜೆಪಿ- ಜೆಡಿಎಸ್ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಸಿದರು.

ಹೊಟ್ಟೆ ಉರಿಗೆ ಔಷಧಿಯಿಲ್ಲ: ಎಚ್‌ಡಿಕೆ

ಕೇಂದ್ರ ಸಚಿವ ಕುಮಾರಸ್ವಾಮಿ ಮಾತನಾಡಿ, ರಾಜ್ಯಪಾಲರ ಮೂಲಕ ರಾಜ್ಯ ಸರಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂಬ ಮುಖ್ಯಮಂತ್ರಿ ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಇದನ್ನೆ ಹೇಳಬೇಕು ತಾನೇ? ಎಲ್ಲರೂ ಹೇಳೋದು ಇದನ್ನೆ ತಾನೇ? ಅವರಿಗೆ ಬೇಕಾದಾಗ ರಾಜ್ಯಪಾಲರು ಒಳ್ಳೆಯವರು, ಬೇಡ ಅಂದಾಗ ಕೆಟ್ಟವರು. ಅವರ ತಪ್ಪನ್ನು ಮುಚ್ಚಿಕೊಳ್ಳಲು ಈ ರೀತಿ ಹೇಳುತ್ತಿದ್ದಾರೆ. ವರ್ಗಾವಣೆಗಳಲ್ಲಿ ಪ್ರತಿಯೊಂದು ಸ್ಥಳಕ್ಕೆ ಹಣ ಕೊಡಬೇಕು. ಸಾವಿರಾರು ಉದಾಹರಣೆ ಕೊಡಬಲ್ಲೆ ಎಂದು ವಾಗ್ದಾಳಿ ನಡೆಸಿದರು.

ಜನಾಂದೋಲನ ಕಾಂಗ್ರೆಸ್‌ನಿಂದ ಆಗುವುದಲ್ಲ, ನಮ್ಮಿಂದ ರಾಜ್ಯ ಸರಕಾರದ ವಿರುದ್ಧ ಜನಾಂದೋಲನ ಆಗಬೇಕಿದ್ದು, ಅದು ಪಾದಯಾತ್ರೆ ಮೂಲಕವಾಗುತ್ತಿದೆ. ಮುಡಾ, ವಾಲ್ಮೀಕಿ ಹಗರಣ, ಜನ ವಿರೋಧಿ ನೀತಿಯನ್ನು ವಿರೋಧಿಸಿ ಪಾದಯಾತ್ರೆ ನಡೆಸಲಾಗುತ್ತಿದೆ. ಪಾದಯಾತ್ರೆಗೆ ಕೌಂಟರ್ ಆಗಿ ಕಾಂಗ್ರೆಸ್ ಜನಾಂದೋಲನ ಕಾರ್ಯಕ್ರಮ ಹಮಿಕೊಳ್ಳಲಾಗಿದೆ. ಎಲ್ಲಕ್ಕೂ ಉತ್ತರ ಕೋಡೋಣ. ಅಲ್ಲಿ ಯಾರು ಪ್ರಶ್ನೆ ಮಾಡುತ್ತಿದ್ದಾರೆ ಅವರಿಗೆ ಪ್ರಶ್ನೆ ಮಾಡಲು ನೈತಿಕತೆ ಇದೆಯಾ? ರಾಮನಗರ, ಬಿಡದಿ, ಚನ್ನಪಟ್ಟಣದಲ್ಲಿ ನನ್ನನ್ನು ಬೆಳೆಸಿರುವ ಜನರ ಮುಂದೆ ಉತ್ತರ ಕೋಡೋಣ ಎಂದು ಸವಾಲು ಹಾಕಿದರು.

ನಮ್ಮ ಕುಟುಂಬ ಅಕ್ರಮವಾಗಿ ಆಸ್ತಿ ಮಾಡಿದ್ದರೆ ಸರಕಾರ ವಶಪಡಿಸಿಕೊಳ್ಳಲಿ. ಬೇಡವೆಂದು ಹೇಳಿದವರು ಯಾರು? ನಾವು ನ್ಯಾಯ ಬದ್ಧವಾಗಿ ಬದುಕಿದ್ದೇವೆ. ಇವರ ಥರ ನಾವು ಬದುಕಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ-ಜೆಡಿಎಸ್ ಹಮ್ಮಿಕೊಂಡಿರುವ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದ ಬಿಜೆಪಿ, ಜೆಡಿಎಸ್ ನಾಯಕರು.

> **ನೀವು ನಿಜವಾಗಿಯೂ ಸತ್ಯಹರಿಶ್ಚಂದ್ರರಾಗಿದ್ದರೆ ಸಾರ್ವಜನಿಕ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎನ್ನುವುದಾದರೆ ಮೊದಲು ಮುಡಾ ಹಗರಣ ಪ್ರಕರಣದಲ್ಲಿ ನಿಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ. ನಾನು ಸತ್ಯ ಹರಿಶ್ಚಂದ್ರ ಅನ್ನುತ್ತಾರೆ. ಇಂದು ಅವರ ಬಣ್ಣ ಬಯಲಾಗಿದೆ. ಆದರೂ ರಾಜೀನಾಮೆಗೆ ಮನಸ್ಸು ಮಾಡುತ್ತಿಲ್ಲ.**
> -ಸದಾನಂದಗೌಡ ಮಾಜಿ ಮುಖ್ಯಮಂತ್ರಿ

> **ರಾಜೀನಾಮೆ ಅವರಾಗಿಯೇ ಕೊಟ್ಟರೆ ಅವರಿಗೆ ಅದು ಶೋಭೆ ತರುತ್ತದೆ, ಪಕ್ಷಕ್ಕೆ ಗೌರವ ಸಿಗುತ್ತದೆ. ಇಲ್ಲದಿದ್ದರೆ ಅನಿವಾರ್ಯವಾಗಿ ರಾಜ್ಯಪಾಲರೇ ಕ್ರಮ ತೆಗೆದುಕೊಳ್ಳಬಹುದು. ಇದಕ್ಕೆ ಅವಕಾಶ ಕೊಡದೇ ಸಿದ್ದರಾಮಯ್ಯ ರಾಜೀನಾಮೆ ಕೊಡಲಿ ಎಂದು ನಾನು ಸಲಹೆ ಕೊಡುತ್ತೇನೆ ಎಂದರು. ಜನರಿಗೆ ಸರಕಾರದ ಭ್ರಷ್ಟಾಚಾರದ ಬಗ್ಗೆ ವಾಸ್ತವ ಸ್ಥಿತಿ ತಿಳಿದಿದೆ. ಹೀಗಾಗಿ ಅವರು ಯಾವುದೇ ಆರೋಪಗಳಿಂದ ಮುಕ್ತಿ ಪಡೆಯಲು ಸಾಧ್ಯವಿಲ್ಲ .**
> -ಬಿ.ಎಸ್.ಯಡಿಯೂರಪ್ಪ ಮಾಜಿ ಸಿಎಂ

ಪಾದಯಾತ್ರೆ ಮುಗಿಯುವ ಮೊದಲೇ ಸಿಎಂ ರಾಜೀನಾಮೆ: ಬಿಎಸ್‌ವೈ

ಮುಡಾ ಅಕ್ರಮ ನಿವೇಶನ ಹಂಚಿಕೆ ಸಂಬಂಧ ಆರೋಪಿ ಸ್ಥಾನದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಿಜೆಪಿ-ಜೆಡಿಎಸ್ ಹಮ್ಮಿಕೊಂಡಿರುವ ಜಂಟಿ ಪಾದಯಾತ್ರೆ ಮುಗಿಯುವುದರೊಳಗೆ ತಮ ಸ್ಥಾನಕ್ಕೆ ರಾಜೀನಾಮೆ ನೀಡುವ ಸಾಧ್ಯತೆಯಿದೆ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅಭಿಪ್ರಾಯಪಟ್ಟಿದ್ದಾರೆ.
ನನಗಿರುವ ಮಾಹಿತಿ ಪ್ರಕಾರ ಪಾದಯಾತ್ರೆ ಮುಗಿಯುವುದರೊಳಗೆ ಸಿಎಂ ರಾಜೀನಾಮೆ ನೀಡುವ ಸಾಧ್ಯತೆಗಳಿವೆ. ಬಹುತೇಕ ಅವರು ಮಾನಸಿಕವಾಗಿಯೂ ಅಧಿಕಾರದಿಂದ ನಿರ್ಗಮಿಸಲು ಸಿದ್ಧರಾಗಿದ್ದಾರೆ. ಕುಟುಂಬದವರೇ ಶಾಮೀಲಾಗಿರುವುದರಿಂದ ಬೇರೆ ದಾರಿ ಇಲ್ಲ. ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಪಾದಯಾತ್ರೆ ನಡೆಸುತ್ತಿದ್ದೇವೆ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ ಎಲ್ಲರೂ ಹೊಂದಿಕೊಂಡು ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಜಂಟಿ ಹೋರಾಟ ಮಾಡುತ್ತೇವೆ. ನಮಲ್ಲಿ ಯಾವುದೇ ಗೊಂದಲ ಇಲ್ಲ ಎಂದು ಸ್ಪಷ್ಟಪಡಿಸಿದರು.

ಸಮಾಚಾರ ಸಣ್ಣದಲ್ಲ

ಸ್ವಾಮೀಜಿಯಿಂದ ವಿದ್ಯಾರ್ಥಿ ಮೇಲೆ ಹಲ್ಲೆ

ರಾಯಚೂರು: ಇಲ್ಲಿನ ರಾಮಕೃಷ್ಣ ಆಶ್ರಮದಲ್ಲಿ ಬಾಲಕನೊಬ್ಬನ ಮೇಲೆ ಸ್ವಾಮೀಜಿ ಹಲ್ಲೆ ಮಾಡಿದ ಘಟನೆ ನಡೆದಿದೆ. ಸ್ವಾಮೀಜಿಯ ಪೆನ್ ಬಚ್ಚಿಟ್ಟಿದ್ದಕ್ಕೆ ಕಳ್ಳತನದ ಆರೋಪದಡಿ ಬಾಲಕನ ಮೇಲೆ ಹಲ್ಲೆ ಮಾಡಿದ್ದಲ್ಲದೇ, ಕಣ್ಣಿಗೆ ಬಟ್ಟೆ ಕಟ್ಟಿ ಮೂರು ದಿನ ಕತ್ತಲೆ ಕೋಣೆಯಲ್ಲಿ ಕೂಡಿ ಹಾಕಿ ವಿಕೃತ ಮೆರೆದಿದ್ದಾಗಿ ಪೋಷಕರು ಆರೋಪಿಸಿದ್ದಾರೆ. ಆಶ್ರಮದ ಮುಖ್ಯಸ್ಥ ಪಿ.ವೇಣುಗೋಪಾಲ ಬಾಲಕ ಶ್ರವಣ ಕುಮಾರ್ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ಆರೋಪಿಸಲಾಗಿದೆ. ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಠಾಣೆಗೆ ಬಾಲಕಾರ್ಮಿಕ ರಕ್ಷಣಾಧಿಕಾರಿಗಳ ತಂಡ ಭೇಟಿ ನೀಡಿ ಮಾಹಿತಿ ಪಡೆಯುತ್ತಿದೆ. ಹಲ್ಲೆಯಿಂದ ಬಾಲಕನ ಮುಖ, ಕಣ್ಣಿಗೆ ಗಂಭೀರ ಗಾಯಗಳಾಗಿದ್ದು, ಜನತಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಈ ಕುರಿತು ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಹಿಂದುತ್ವದ ವೃಕ್ಷದಲ್ಲಿ ರೆಂಬೆ,ಕೊಂಬೆಗಳಿವೆ

ದಾವಣಗೆರೆ: ವೀರಶೈವ - ಲಿಂಗಾಯತರು ಹಿಂದುಗಳು ಎನ್ನುವುದು ಚರ್ಚೆ ಮಾಡುವ ವಿಚಾರ. ನಾವು ಎಲ್ಲಿ ಇದ್ದೇವೆ? ನಾವು ಯಾವ ರಾಷ್ಟ್ರದಲ್ಲಿ ಇದ್ದೇವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಈ ರಾಷ್ಟ್ರವನ್ನು ಯಾವ ರೀತಿ ಬೆಳೆಸಬೇಕು ಎಂದು ಯೋಚಿಸಬೇಕು ಎಂದು ಹರಿಹರ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಹೇಳಿಕೆ ನೀಡಿದ್ದಾರೆ.

ಹಿಂದೂ ಎನ್ನುವುದು ಅತ್ಯಂತ ಶ್ರೇಷ್ಠ ವಾದ ಸತ್ಯ ಸನಾತನವಾದದ್ದು ಹಿಂದುತ್ವದ ವೃಕ್ಷದಲ್ಲಿ ಸಾಕಷ್ಟು ರೆಂಬೆ-ಕೊಂಬೆಗಳಿವೆ. ಅಲ್ಲಿ ಅಲ್ಲಮಪ್ರಭು ಬಸವಾದಿ ಶರಣರು, ಗೌತಮ ಬುದ್ಧ ಸೇರಿದಂತೆ ಹಲವು ಮಹನೀಯರು ಇದ್ದಾರೆ ಎಂದರು.

ನಮ್ಮ ಸರ್ಟಿಫಿಕೇಟ್‌ನಲ್ಲಿ ಹಿಂದೂ ಲಿಂಗಾಯತ ಎಂದು ಬರೆಸಿದ್ದರು. ಎಲ್ಲ ಮಹಾನೀಯರು ಒಂದೇ ಹೇಳಿದ್ದು ಹಿಂದೂ ಎಂದು. ಆದರೆ, ಆಚರಣೆಯಲ್ಲಿ ಒಂದು ರೀತಿಯ ಬದಲಾವಣೆ ಬರಬಹುದು ಅಷ್ಟೇ. ನಾವೆಲ್ಲ ಹಿಂದೂಗಳು. ಹಿಂದೂ ಎನ್ನುವುದು ಮಹಾಸಾಗರ. ನಾವುಗಳು ಅದರಲ್ಲಿ ಸೇರುವ ನದಿಗಳಿದ್ದಂತೆ. ಮುಂದೆ ಜನಗಣತಿ ಬರುತ್ತದೆ. ಆಗ ಚರ್ಚೆ ಮಾಡಿ ಏನು ಬರೆಸಬೇಕು ಎಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ವೀರಶೈವ ಲಿಂಗಾಯತ ಎಂದು ಬರೆಸಬೇಕೋ, ವೀರಶೈವ ಎಂದು ಬರೆಸಬೇಕೋ ಎಂದು ತೀರ್ಮಾನ ಮಾಡುತ್ತೇವೆ ಎಂದರು.

ಡಿಕೆಶಿ,ವಿಜಯೇಂದ್ರ ಹೊಂದಾಣಿಕೆ ರಾಜಕಾರಣ ಸತ್ಯ

ಪಿಎಸ್‌ಐ ಆತ್ಮಹತ್ಯೆಗೆ ಶಾಸಕರೇ ನೇರ ಕಾರಣ

ವಿಜಯಪುರ: ದಲಿತರ ಹತ್ಯೆ ಸಿದ್ದರಾಮಯ್ಯರ ಸರಕಾರದಲ್ಲೇ ಹೆಚ್ಚಾಗುತ್ತಿದೆ. ವಾಲ್ಮೀಕಿ ಹಗರಣದಲ್ಲಿ ಅಧಿಕಾರಿ ಸಾವಿಗೆ ಶರಣಾದರು. ಈಗ ಪಿಎಸ್‌ಐ ನೇಣಿಗೆ ಶರಣಾಗಿದ್ದಾರೆ. ಶಾಸಕರ ಭ್ರಷ್ಟಾಚಾ ರವೇ ಪಿಎಸ್‌ಐ ಆತ್ಮಹತ್ಯೆಗೆ ಕಾರಣ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಗಂಭೀರ ಆರೋಪ ಮಾಡಿದರು.

ಯಾದಗಿರಿ ಪಿಎಸ್‌ಐ ಆತ್ಮಹತ್ಯೆಗೆ ಶರಣು ವಿಚಾರದ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಪೊಲೀಸ್ ಅಧಿಕಾರಿಗಳೇ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಇತರರ ಗತಿ ಏನು, ಕಾರಣ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ರಾಜೀನಾಮೆ ನೀಡಬೇಕು. ಸಿಎಂ ಮಾತ್ರ ರಾಜೀನಾಮೆ ನೀಡಿದರೆ ಸಾಲದು. ಸಿಎಂ ರಾಜೀನಾಮೆ ಕೊಟ್ಟರೆ ಡಿ.ಕೆ.ಶಿವಕುಮಾರ ಸಿಎಂ ಆಗಲು ಅನುಕೂಲವಾಗುತ್ತದೆ. ಹಾಗಾಗಿ ಇಡೀ ಸರಕಾರವೇ ಅಧಿಕಾರದಿಂದ ಹಿಂದೆ ಸರಿದು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ವಿಜಯೇಂದ್ರ ಕರೋನ ಸಂದರ್ಭದಲ್ಲಿ ಮಾಡಿದ ಭ್ರಷ್ಟಾಚಾರ ಹೊರಗೆ ಬರಲಿ. ಭ್ರಷ್ಟಾಚಾರ ಮಾಡಿದವರು ಭ್ರಷ್ಟಾಚಾರ ವಿರುದ್ಧ ಮಾಡುತ್ತಿರುವ ಹೋರಾಟಕ್ಕೆ ಬೆಂಬಲ ಇಲ್ಲ ಎಂದರು. ಡಿಕೆಶಿ-ವಿಜಯೇಂದ್ರ ನಡುವೆ ಹೊಂದಾಣಿಕೆ ಇದೆ. ಭೋವಿ, ತಾಂಡಾ ನಿಗಮ ಗಳ ತನಿಖೆ ಆಗಲಿ. ಭ್ರಷ್ಟ ಕುಟುಂಬವನ್ನ ಬಿಜೆಪಿ ಅಧ್ಯಕ್ಷರನ್ನಾಗಿ ಮುಂದುವರಿಸಬೇಡಿ. ಸಿದ್ದರಾಮಯ್ಯ, ಡಿಕೆಶಿ, ಧಮ್ ತಾಕತ್ತು ಇದ್ದರೇ ವಿಜಯೇಂದ್ರ ಭ್ರಷ್ಟಾಚಾರ ಹೊರಗೆ ತರಲಿ ಎಂದು ಸವಾಲು ಹಾಕಿದರು.

ವಿಜಯೇಂದ್ರ ವಿರುದ್ಧ ವಿಡಿಯೊ ಬಾಂಬ್

ವಿಜಯೇಂದ್ರ, ಡಿಕೆಶಿ ಜತೆಗೆ ಹರಟೆ ಹೊಡೆಯುವ ವಿಡಿಯೊ ಇವೆ. ಫೈಲ್‌ಗೆ ಸಹಿ ಮಾಡಿಸಿಕೊಳ್ಳುವ ವಿಡಿಯೊ, ಫೋಟೊ ತೆಗೆಸಿ ಇಟ್ಟದ್ದೇನೆ. ಡಿಕೆಶಿ,ವಿಜಯೇಂದ್ರ ಅಡ್ಜಸ್ಟ್‌ಮೆಂಟ್ ರಾಜಕಾರಣ ಸತ್ಯ .ಅಪ್ಪ ಮಕ್ಕಳು ಹೈಕಮಾಂಡ್‌ಗೆ ಬ್ಲ್ಯಾಕ್ ಮೇಲ್ ಮಾಡ್ತಿದ್ದಾರೆ. ಒಂದು ಪಕ್ಷದ ಹೈಕಮಾಂಡ್ ವಿಜಯೇಂದ್ರ ವಿರುದ್ಧ ಕ್ರಮ ಕೈಗೊಳ್ಳಲಿ, ಇಲ್ಲಾ ನಮ್ಮ ವಿರುದ್ಧವಾದರೂ ಕ್ರಮ ಕೈಗೊಳ್ಳಲಿ . ಅಪ್ಪ-ಮಕ್ಕಳ ವಿರುದ್ಧ ಬಿಜೆಪಿಯ 90% ಆಕ್ರೋಶ ಭರಿತರಾಗಿದ್ದಾರೆ. ನನಗೆ ಕಾಲ್ ಮಾಡಿ ಅಸಮಾ ಧಾನ ಹೊರಹಾಕ್ತಾರೆ. ಕುಮಾರಸ್ವಾಮಿ ಮಾನ ಮರ್ಯಾ ದೆ ಹೋಗಲು ಕಾರಣಾನೇ ವಿಜಯೇಂದ್ರ. ಪೆನ್ ಡ್ರೈವ್ ಮಾಡಿ ಹಂಚಿದ್ದೆ ವಿಜಯೇಂದ್ರ. ನೆಪಕ್ಕಾಗಿ ಪಾದ ಯಾತ್ರೆ ಮಾಡುತ್ತಿದ್ದಾರೆ. ಇನ್ನೊಂದು ವಾರದಲ್ಲಿ ಅಸಮಾ ಧಾನಿತರ ಸಭೆ ನಡೆಸಿ, ನಾವು ಮತ್ತೆ ಸಭೆ ಸೇರ್ತಿವಿ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷರ ವಿರುದ್ಧ ಸಚಿವ ಮಧು ಬಂಗಾರಪ್ಪ ವಾಗ್ದಾಳಿ

ಭ್ರಷ್ಟಾಚಾರದಲ್ಲಿ ವಿಜಯೇಂದ್ರಗೆ ಮೊದಲ ರ್‍ಯಾಂಕ್

ಶಿವಮೊಗ್ಗ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರಗೆ ಭ್ರಷ್ಟಾಚಾರದಲ್ಲಿ ಮೊದಲ ರ್‍ಯಾಂಕ್ ನೀಡಬೇಕು ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಟು ಟೀಕೆ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಬಗ್ಗೆ ವಿಜಯೇಂದ್ರ ಬಹಳ ಹಗುರವಾಗಿ ಮಾತನಾಡುತ್ತಿದ್ದಾರೆ. ಅವರ ಪಕ್ಷದವರೇ ಆದ ಯತ್ನಾಳ್ ಅವರು ವಿಜಯೇಂದ್ರ ಬಗ್ಗೆ ಮಾತನಾಡಿದ್ದಾರೆ. ಅದರ ಬಗ್ಗೆ ಮಾತನಾಡಲ್ಲ. ಡಿಕೆಶಿ ಬಗ್ಗೆ ಮಾತನಾಡಲು ಏನು ಯೋಗ್ಯತೆಯಿದೆ? ವಿಜಯೇಂದ್ರ ಎಲ್ಲಿದ್ದರು, ಇವರು ಏನು ಕೆಲಸ ಮಾಡುತ್ತಿದ್ದರು. ಅವರ ಆಸ್ತಿ ಎಷ್ಟು, ಅವರ ಆಸ್ತಿ ಹೇಗೆ ಬಂತು ಹೇಳಬೇಕಲ್ಲ. ವಿಜಯೇಂದ್ರ ಅವರ ಮೇಲೂ ಕೇಸ್ ಇದೆ ಎಂದು ತಿರುಗೇಟು ನೀಡಿದರು.

ವಿನಾಕಾರಣ ಡಿಕೆಶಿ ಜೈಲಿಗೆ: ಡಿ.ಕೆ. ಶಿವಕುಮಾರ್ ಅವರು ತಪ್ಪು ಮಾಡದಿದ್ದರೂ ಜೈಲಿಗೆ ಹೋಗಿದ್ದರು. ಅವರು ಜೈಲಿಗೆ ಹೋಗಲು ಯಡಿಯೂರಪ್ಪ, ವಿಜಯೇಂದ್ರ ಕಾರಣ. ಡಿಕೆಶಿ ಬೆಳೆಯಬಾರದು, ಅವರನ್ನು ತುಳಿಯಬೇಕೆಂದು ಮಾಡಿದರು. ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕಿ ಜೈಲಿಗೆ ಕಳುಹಿಸಿದರು ಎಂದು ಮಧು ಬಂಗಾರಪ್ಪ ಕಿಡಿಕಾರಿದರು.

2012 ರಲ್ಲಿ ಮುಡಾ ಹಗರಣ ನಡೆದಿದೆ. 2012 ರಲ್ಲಿ ಬಿಜೆಪಿ ಸರಕಾರ ಇತ್ತು. ಮುಡಾ ಅಧ್ಯಕ್ಷರಾಗಿದ್ದವರು ರಾಜೀವ್. ಆದರೂ ಪ್ರಾಧಿಕಾರವನ್ನು ನಿರ್ವಹಿಸುತ್ತಿದ್ದುದು ವಿಜಯೇಂದ್ರ. ಅವರ ಕಾರಣದಿಂದಲೇ ಯಡಿಯೂರಪ್ಪ ಪೂರ್ತಿಯಾಗಿ ಅಧಿಕಾರ ಮಾಡಲಾಗಲಿಲ್ಲ . ಭ್ರಷ್ಟಾಚಾರದಲ್ಲಿ ಯಾರಿಗಾದರೂ ರಾಂಕ್ ಕೊಟ್ಟರೆ ವಿಜಯೇಂದ್ರ ಅವರೇ ನಂ.1. ಅವರೇ ಹಿಂದುಳಿದ ವರ್ಗದ ನಾಯಕನನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಯಾವುದೇ ತಪ್ಪು ಮಾಡಿಲ್ಲ. ಇಡೀ ಸಚಿವ ಸಂಪುಟ ಸಿದ್ದರಾಮಯ್ಯ ಜತೆ ನಿಲ್ಲುತ್ತೇವೆ ಎಂದರು.

> **ಸಂಸತ್‌ಗೆ ಹೋಗಿರುವ ಬಿ.ವೈ. ರಾಘವೇಂದ್ರಗೆ ಕಮಿಟ್‌ಮೆಂಟ್ ಇಲ್ಲ. ಭೂಹಕ್ಕು ಪತ್ರ ಕೊಡಿಸುವಲ್ಲಿ ಸದನದಲ್ಲಿ ಅವರು ಮಾತನಾಡಿಲ್ಲ. ಬಗರ್ ಹುಕುಂ ಹಾಗೂ ಶರಾವತಿ ಸಂತ್ರಸ್ತರಿಗೆ ಭೂ ಹಕ್ಕು ಕೊಡಿಸುವಲ್ಲಿ ರಾಘವೇಂದ್ರ ವಿಫಲರಾಗಿದ್ದಾರೆ. ಕೇವಲ ಮತ ಗಳಿಸಿಕೊಂಡು ಹೋಗಿದ್ದಾರೆ. ಭೂ ಹಕ್ಕು ಕೊಡಿಸುವ ಪರವಾಗಿ ಕಾಗೋಡು ತಿಮ್ಮಪ್ಪ ಅವರು ಹೋರಾಟ ಮಾಡಿದ್ದರು. ಆ ಹೋರಾಟವನ್ನು ನಾವು ಮೈಗೂಡಿಸಕೊಳ್ಳಬೇಕು.**
> - ಮಧು ಬಂಗಾರಪ್ಪ, ಸಚಿವ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಾಗ್ದಾಳಿ

ಬಿಜೆಪಿಯ ಹೇಡಿತನದ ರಾಜಕೀಯ

ಬೆಳಗಾವಿ: ಕೇಂದ್ರ ಬಿಜೆಪಿ ಸರಕಾರ ರಾಜ್ಯಪಾಲರುಗಳನ್ನು ದುರುಪಯೋಗ ಪಡೆಸಿಕೊಂಡು ವಿರೋಧ ಪಕ್ಷಗಳನ್ನು ಮುಗಿಸಬೇಕು ಎನ್ನುವ ಹೇಡಿತನದ ರಾಜಕೀಯ ಮಾಡುತ್ತಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನೂರು ಪುಟಗಳ ದಾಖಲೆ ಕೊಟ್ಟಿದ್ದಾರೆ. ರಾಜ್ಯಪಾಲರು ಅದನ್ನು ಪೂರ್ಣ ಅಭ್ಯಾಸ ಮಾಡಲು ಸಮಯಬೇಕು. ಆದರೆ ರಾಜ್ಯಪಾಲರು ಎರಡು ಗಂಟೆಯಲ್ಲಿ ಓದಿ ಸಿದ್ದರಾಮಯ್ಯನವರಿಗೆ ನೋಟಿಸ್ ಕೊಡಿಸಲು ಬಿಜೆಪಿ ಮಾಡಿದೆ ಎಂದು ದೂರಿದರು.

ಬಿಜೆಪಿಗೆ ಕಾನೂನು ಎನ್ನುವುದೇ ಇಲ್ಲ. ಶೇ.95ರಷ್ಟು ತನಿಖಾ ಸಂಸ್ಥೆಗಳನ್ನು ದುರುಪಯೋಗ ಪಡೆಸಿಕೊಂಡಿದ್ದು ಬಿಜೆಪಿ. ದೆಹಲಿ ಮುಖ್ಯಮಂತ್ರಿಯನ್ನು ಬಂಧಿಸಿದರು. ಈಗ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬಂಧಿಸಲು ರಾಜಭವನವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಹರಿಹಾಯ್ದರು.

ವಿಜಯೇಂದ್ರ ಅವರು ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಯಾವ ರೀತಿ ದುರುಪಯೋಗ ಪಡೆಸಿಕೊಂಡಿದ್ದಾರೆ ಎನ್ನುವುದು ರಾಜ್ಯದ ಜನರಿಗೆ ಗೊತ್ತಿದೆ. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಪಾದಯಾತ್ರೆ ಮಾಡುವ ಉದ್ದೇಶವೇ ಸರಿ ಇಲ್ಲ. ಸಿದ್ದರಾಮಯ್ಯ ಕಳಂಕ ರಹಿತ ರಾಜಕಾರಣಿ ಅವರ ವಿರುದ್ಧ ಕಪ್ಪು ಚುಕ್ಕೆ ಮಾಡಲು ಬಿಜೆಪಿ ಹುನ್ನಾರ ನಡೆಸಿದ್ದಾರೆ ಎಂದು ಆರೋಪಿಸಿದರು.

ತಪ್ಪು ಮಾಡಿದವರಿಗೆ ಶಿಕ್ಷೆ

ಯಾದಗಿರಿಯಲ್ಲಿ ಪಿಎಸ್‌ಐ ಅನುಮಾನಸ್ಪದ ಸಾವಿಗೆ ಕಾಂಗ್ರೆಸ್ ಶಾಸಕ ಚನ್ನಾರೆಡ್ಡಿ ತನ್ನೂರ ಕಾರಣ ಎಂಬ ಕುಟುಂಬಸ್ಥರ ಆರೋಪಕ್ಕೆ ಸಂಬಂಧಿಸಿದಂತೆ ಮಾತನಾಡಿದ ಸಚಿವ ದಿನೇಶ್ ಗುಂಡೂರಾವ್ ಅವರು, ಈಗಾಗಲೇ ಎಫ್‌ಐಆರ್ ಆಗಿದ್ದರೆ ಕಾನೂನು ರೀತಿ ಕ್ರಮವಾಗುತ್ತೆ. ಯಾರೇ ತಪ್ಪು ಕೆಲಸ ಮಾಡಿದ್ದರು ರಕ್ಷಣೆ ಮಾಡೋ ಮಾತಿಲ್ಲ ಖಂಡಿತ ಕ್ರಮವಾಗುತ್ತೆ. ದೂರು ತೆಗೆದುಕೊಳ್ಳಲು ಹಿಂದೇಟು ಆರೋಪ ವಿಚಾರವಾಗಿ, ಆ ಬಗ್ಗೆ ಮಾಹಿತಿ ಇಲ್ಲ, ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ ಎಂದರು.

ಯಾವ ಪುರುಷಾರ್ಥಕ್ಕೆ ಪಾದಯಾತ್ರೆ?:ಎಚ್‌ಕೆ

ಬಾಗಲಕೋಟೆ: ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಯಾವ ಪುರುಷಾರ್ಥಕ್ಕೆ ಪಾದಯಾತ್ರೆ ನಡೆಸುತ್ತಿವೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಪ್ರಶ್ನಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಕುಟುಂಬದ ಮೇಲೆ ಆಪಾದನೆ ಬಂದಿರು ವುದ ರಿಂದ ಸಿದ್ದರಾಮಯ್ಯನವರೇ ವಿಚಾರಣಾ ಆಯೋಗ ಮಾಡಿದ್ದಾರೆ. ಈ ಹಿಂದೆ ಆರೋಪ ಬಂದಿರುವ ಯಾವೊಬ್ಬ ನಾಯಕರು ಈ ರೀತಿ ಮಾಡಿಲ್ಲ ಎಂದರು. ಯಾವ ಕಾರಣಕ್ಕೆ ರಾಜ್ಯಪಾಲರು ಸಿಎಂ ಸಿದ್ದರಾಮಯ್ಯ ಅವರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದಾರೆ. ಈ ಹಿಂದಿನ ಸರಕಾರದಲ್ಲಿ ಮಂತ್ರಿಯಾಗಿದ್ದ ಶಶಿಕಲಾ ಜೊಲ್ಲೆ, ಮುರುಗೇಶ ನಿರಾಣಿ ಹಾಗೂ ಜನಾರ್ದನ ರೆಡ್ಡಿ ಅವರ ಮೇಲೆ ಆರೋಪ ಬಂದಾಗ ರಾಜ್ಯಪಾಲರು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ರಾಜಭವನವನ್ನು ಬಿಜೆಪಿ ದುರುಪಯೋಗ ಮಾಡಿಕೊಳ್ಳುತ್ತಿರುವುದು ಸಾರ್ವಜನಿಕರಿಗೂ ಅರ್ಥವಾಗಿದೆ. ರಾಜ್ಯದಲ್ಲಿ ನಡೆದಿರುವ ಈ ಎಲ್ಲ ಬೆಳವಣಿಗೆಗಳು ರಾಜಕೀಯ ದುರುಪಯೋಗಕ್ಕಾಗಿ ಎಂದು ಆರೋಪಿಸಿದರು.

ಕಾಂಗ್ರೆಸ್ ಪಶ್ಚಾತ್ತಾಪದ ಯಾತ್ರೆ

ಮೈಸೂರು: ಕಾಂಗ್ರೆಸ್ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ತಮ್ಮ ಭ್ರಷ್ಟಾಚಾರದ ಸಮರ್ಥನೆಗೆ ಸರಕಾರವೇ ಇಳಿದಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು. ಶನಿವಾರ ಮೈಸೂರಿನಲ್ಲಿ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ ಪಾದಯಾತ್ರೆ ಯಶಸ್ಸಿಗಾಗಿ ಚಾಮುಂ ಡೇಶ್ವರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಹಿಂದ ಹೆಸರು ಹೇಳಿ ಅಧಿಕಾರ ಹಿಡಿದಿದೆ. ಆದರೆ, ಅಹಿಂದ ವರ್ಗಕ್ಕೆ ದ್ರೋಹ ಬಗೆದಿದೆ. ಕಾಂಗ್ರೆಸ್ ಸರಕಾರದಲ್ಲಿ ಭ್ರಷ್ಟಾಚಾರ ಮಿತಿಮೀರಿ ಹೋಗಿದೆ. ತುಳಿತಕ್ಕೆ ಒಳಗಾದ ವರ್ಗಕ್ಕೆ ನ್ಯಾಯ ಸಿಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಿದರು.ಮೂಡಾ, ವಾಲ್ಮೀಕಿ ಹಗರಣ, ಪರಿಶಿಷ್ಟರ ಹಣ ದುರ್ಬಳಕೆ ಸೇರಿದಂತೆ ಹಲವು ವಿಚಾರ ಇಟ್ಟುಕೊಂಡು ಪಾದಯಾತ್ರೆ ಹಮ್ಮಿಕೊಂಡಿದ್ದೇವೆ ಎಂದರು. ವಿಜಯೇಂದ್ರ ವಿರುದ್ಧ ಡಿಕೆಶಿ ಏಕವಚನ ಪದಪ್ರಯೋಗ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಅಧಿಕಾರ ಬಂದಾಗ ಕಾಂಗ್ರೆಸ್‌ನವರಿಗೆ ಈ ರೀತಿ ಆಗುತ್ತದೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ ಎಂದರು.

> **ಪಾದಯಾತ್ರೆ ಯಾವುದೇ ಕಾರಣಕ್ಕೂ ಮೊಟಕಾಗುವ ಪ್ರಶ್ನೆಯೇ ಇಲ್ಲ . ಕಾಂಗ್ರೆಸ್‌ನವರದ್ದು ಪಶ್ಚಾತ್ತಾಪದ ಯಾತ್ರೆ. ಕೊಟ್ಟ ಭರವಸೆ ಈಡೇರಿಸಲು ಆಗಲಿಲ್ಲ ಎಂಬ ಪಶ್ಚಾತ್ತಾಪದಲ್ಲಿ ಕಾರ್ಯಕ್ರಮ ಮಾಡುತ್ತಿದ್ದಾರೆ .**
> -ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವಿರಾಮ
ಪ್ರತಿ ಭಾನುವಾರ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ನಂ.ಎಚ್‌ಡಿಎಂಸಿ:100:01/ದರಗಳು/2024-25 ದಿನಾಂಕ: 03-08-2024
ದರವಾರು ಆಹ್ವಾನ ಪ್ರಕಟಣೆ
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವೆಟ್‌ವೆಲ್‌ಗೆ ಯಂತ್ರೋಪಕರಣ, ಮೋಟಾರ, ಪಂಪ್‌ಗಳು ವಿದ್ಯುತ್ ಪರಿಕರಗಳು ಅಳವಡಿಸುವ ಕಾಮಗಾರಿಗಳಿಗೆ ಮಾರುಕಟ್ಟೆಯ ತುಲನಾತ್ಮಕ ದರಗಳನ್ನು ಇಚ್ಛೆಯುಳ್ಳ ಅಧಿಕೃತ ನೋಂದಾಯಿತ ತಯಾರಕರು ವ ಪೂರೈಕೆದಾರರು ತಮ್ಮ ದರಗಳನ್ನು ಸೀಲಬಂದ ಕೊಟೇಶನ್ ಮೂಲಕ **ದಿನಾಂಕ: 07/08/2024 ರ ಅಪರಾಹ್ನ 5.00 ಗಂಟೆಯ** ಒಳಗಾಗಿ ಕರ್ಯಶನರ್ವಾಕಹಕ ಅಭಿಯಂತರರು (ಉತ್ತರ) ಹು.ಧಾ.ಮ.ಪಾ ರವರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ ಮುಖಾಂತರ ಅಥವಾ ಮಿಚಂಚೆ ವಿಳಾಸ (eenorth.hubli@gmail.com) ಮೂಲಕ ಸಲ್ಲಿಸುವಂತೆ ಈ ಮೂಲಕ ಕೋರಿದೆ. ತಾಂತ್ರಿಕ ನಿರ್ದಿಷ್ಟತೆಗಳ ವಿವರಗಳಿಗಾಗಿ ಹು.ಧಾ.ಮ.ಪಾಲಿಕೆಯ ಅಂತರ್ಜಾಲ ವಿಳಾಸ http://www.hdmc.mrc.gov.in/en/tenders ದಲ್ಲಿ **ದಿನಾಂಕ: 05/08/2024 ರಿಂದ** ಪಡೆದುಕೊಳ್ಳಬಹುದಾಗಿದೆ. **ದಿನಾಂಕ:08/08/2024 ರಂದು** ಹಾಜರಿದ್ದವರ ಸಮ್ಮುಖದಲ್ಲಿ ಕೋಟೇಶನ್ ತೆರೆಯಲಾಗುವುದು. ಇಚ್ಛೆಯುಳ್ಳ ಅಧಿಕೃತ ನೋಂದಾಯಿತ ತಯಾರಕರು ವ ಪೂರೈಕೆದಾರರು ತಮ್ಮ ಮಾರುಕಟ್ಟೆ ದರಗಳೊಂದಿಗೆ ಸೂಚಿಸಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಪಾಲಿಕೆ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ವಾ.ಸಾ.ಇ/ಧಾರವಾಡ/243/ದೇಶಪಾಂಡೆಪಬ್ಲಿಸಿಟಿ/2024-25
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.
ನಂ: ಇಇ/ಎಂಐಡಿ/ಬೀದರ/ತಾ.ಶಾ-1,2&3/ಟೆಂಡರ್/2024-25/ 932 ದಿನಾಂಕ: 02-08-2024
:: ಕೆಪಿಪಿ-ಪ್ರೋಕ್ಯೂರಮೆಂಟ ಟೆಂಡರ್ ಪ್ರಕಟಣೆ ::
1) ಕಾಮಗಾರಿಗಳ ವಿವರ : KPP -Portalನಲ್ಲಿ ನಮೂದಿಸಿದಂತೆ, 2) ಕಾಮಗಾರಿಗಳ ಅಂದಾಜು ಮೊತ್ತ : KPP -Portalನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : KPP -Portalನಲ್ಲಿ ನಮೂದಿಸಿದಂತೆ 4) ಕಾಮಗಾರಿಗಳ ಟೆಂಡರ ಮೊತ್ತದ ವಿವರ : KPP -Portalನಲ್ಲಿ ನಮೂದಿಸಿದಂತೆ, 5) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : KPP -Portalನಲ್ಲಿ ನಮೂದಿಸಿದಂತೆ, 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: ಕೆ.ಡಬ್ಲ್ಯೂ -4 ಮಾತ್ರ: **06-08-2024 ರಂದು 17.00 ಗಂಟೆವರೆಗೆ** 7) ಪ್ರೀ ಬಿಡ್ಡ್ ಮಿಟಿಂಗ ಸ್ಥಳ ದಿನಾಂಕ ಮತ್ತು ಸಮಯ ಕೆ.ಡಬ್ಲ್ಯೂ -4 ಮಾತ್ರ: ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ, ಪ್ರತಾಪನಗರ ನೌಬಾದ, ಬೀದರ. **08-08-2024 ರಂದು 11.00 ಗಂಟೆಗೆ.** 8) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ ಕೆ.ಡಬ್ಲ್ಯೂ -4 ಮಾತ್ರ: **12-08-2024 ರಂದು 16.00 ಗಂಟೆ ವರೆಗೆ,** 9) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -4 ಮಾತ್ರ: **14-08-2024 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 10) ಟೆಂಡರ ಆರ್ಥಿಕ ಬಿಡ್ ತೆರೆಯುವ ದಿನಾಂಕ. ಕೆ.ಡಬ್ಲ್ಯೂ -4 ಮಾತ್ರ: **16-08-2024 ರಂದು 11.00 ಗಂಟೆಗೆ ಸಾಧ್ಯವಾದಲ್ಲಿ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ಇಲಾಖೆ.ವಿಭಾಗ, ಬೀದರ. ದೂರವಾಣಿ ಸಂ: 08482 232080, 12) ಅಂತರ್ಜಾಲ ತಾಣದ ವಿಳಾಸ : KPP portal https://kppp.karnataka.gov.in
ಸಹಿ/- ಕಾರ್ಯ ನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭೀವೃದ್ಧಿ ವಿಭಾಗ, ಬೀದರ.
ವಾ.ಸಾ.ಸಂ.ಇ/ಬೀದರ/92/ಕೆ.ಎಸ್.ಎಂ.ಸಿ.&ಎ/2024-25

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರ (ಇ-ಪ್ರೋಕ್ಯೂರಮೆಂಟ್ ಸೆಲ್) ಕಛೇರಿ ಹುಬ್ಬಳ್ಳಿ
ಅಲ್ಪಾವದಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸನ್ 2020-21ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ, ಸನ್ 2021-22ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ, ಸನ್ 2021-22ನೇ ಸಾಲಿನ 15ನೇ ಹಣಕಾಸು ಯೋಜನೆಯಡಿಯಲ್ಲಿ (NMPC) ಹಾಗೂ ಸನ್ 2023-24ನೇ ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನದಡಿ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ	ಟೆಂಡರ್ ಇಂಡೆಂಟ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	DMA/2024-25/IND2462	4,95,60,000.00	7,43,400.00	23-08-2024 ಸಮಯ ಸಂಜೆ 4.30 ಘಂಟೆ	26-08-2024 ಸಮಯ ಬೆಳಿಗ್ಗೆ 10.30 ಘಂಟೆ
2	DMA/2024-25/IND2487	4,74,15,000.00	7,11,225.00		
3	DMA/2024-25/IND2461	3,42,20,000.00	5,13,300.00		
4	DMA/2024-25/IND2489	2,48,64,000.00	3,72,960.00		
5	DMA/2024-25/IND2464	1,93,04,000.00	2,89,560.00		
6	DMA/2024-25/IND2463	1,42,08,000.00	2,13,120.00		
7	DMA/2024-25/IND2466	22,90,000.00	57,250.00		
8	DMA/2024-25/IND2465	25,92,000.00	64,800.00		

ಟೆಂಡರ ಪೂರ್ವಭಾವಿ ಸಭೆಯ **ದಿನಾಂಕ: 14.08.2024 ರಂದು** ಮುಂಜಾನೆ 11.00 ಘಂಟೆಗೆ ನಿಗದಿಪಡಿಸಲಾಗಿದೆ. ಟೆಂಡರ್ ಪ್ರಕ್ರಿಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು **ದಿನಾಂಕ: 05-08-2024** ರಿಂದ www.kppp.karntaka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ದಿನಾಂಕ: 03-08-2024
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಇ-ಪ್ರೋ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ
ವಾ.ಸಾ.ಇ/ಧಾರವಾಡ/237/ದೇಶಪಾಂಡೆಪಬ್ಲಿಸಿಟಿ/2024-25

ಸುರಿಯುವ ಎಲ್ಲ ಧಾರಾಕಾರ ಮಳೆಯೂ ಕುಂಭದ್ರೋಣವಲ್ಲ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಮಳೆಗಾಲದಲ್ಲಿ ಕನ್ನಡ ಪತ್ರಿಕೆಗಳ ಶೀರ್ಷಿಕೆಗಳಲ್ಲಿ 'ಕುಂಭದ್ರೋಣ' ಪದ ಬಳಕೆಯಾಗುವುದು ಸಾಮಾನ್ಯ. ಎಲ್ಲೆಡೆ ಜಲಾವೃತವಾಗಿ, ಪ್ರವಾಹ ಉಂಟಾಗುವ ಧಾರಾಕಾರ ಮಳೆಯಾದಾಗ, ಈ ಪದ ಬಳಸುವುದುಂಟು. ಇತ್ತೀಚೆಗೆ ನಮ್ಮ ಪತ್ರಿಕೆಯ ಶೀರ್ಷಿಕೆಯಲ್ಲೂ 'ಕುಂಭದ್ರೋಣ' ಪದವನ್ನು ಬಳಸಿದ್ದರು.

ಬಹಳ ವರ್ಷಗಳ ಹಿಂದೆ, 'ಕನ್ನಡಪ್ರಭ'ದಲ್ಲಿ ಶೀರ್ಷಿಕೆಯಲ್ಲಿ ಈ ಪದವನ್ನು ಖಾದ್ರಿ ಶಾಮಣ್ಣನವರು ಬಳಸಿದ್ದರಂತೆ. ಇದನ್ನು ಅವರೊಂದಿಗೆ ಕೆಲಸ ಮಾಡಿದ್ದವರೆಲ್ಲ ಬಹಳ ವರ್ಷಗಳ ಕಾಲ ನೆನಪು ಮಾಡಿಕೊಳ್ಳುತ್ತಿದ್ದರು. ಎಲ್ಲ ಮಳೆಯೂ 'ಕುಂಭದ್ರೋಣ'ವಲ್ಲ. ಎಲ್ಲ ವರ್ಷವೂ ಅಂಥ ಮಳೆ ಬರುವುದಿಲ್ಲ. ಇದು ತೀರಾ ಅಪರೂಪಕ್ಕೆ ಬಳಕೆಯಾಗುವ ಪದ. ಧಾರಾಕಾರ ಮಳೆಯಾಗಿದೆ ಎಂದ ಮಾತ್ರಕ್ಕೆ ಅದು 'ಕುಂಭದ್ರೋಣ' ಮಳೆ ಅಲ್ಲ. ಡೆಸ್ಕಿನಲ್ಲಿರುವವರು ತೀರಾ ಎಚ್ಚರಿಕೆಯಿಂದ, ಅಪರೂಪಕ್ಕೆ ಬಳಸುವ ಪದವಿದು.

'ಕುಂಭದ್ರೋಣ' ಪದದ ಅರ್ಥವನ್ನು ನಿಘಂಟು ತಜ್ಞರಾಗಿದ್ದ ಪ್ರೊ.ಜಿ. (ಗಂಜಾಂ) ವೆಂಕಟಸುಬ್ಬಯ್ಯ ಅವರು ಹೀಗೆ ವಿವರಿಸುತ್ತಾರೆ- ಇದೊಂದು ಸಂಸ್ಕೃತದ ಸಮಾಸ ಶಬ್ದ, ದ್ವಂದ್ವ ಸಮಾಸ. ಎರಡು ನಾಮಪದಗಳು ಸೇರಿ ಆಗಿರುವ ಸಮಾಸ ಶಬ್ದ. ಕುಂಭ ಎಂದರೆ ಮಡಕೆ ಅಥವಾ ಆ ಆಕಾರದ ಪಾತ್ರೆ. ದ್ರೋಣ ಎಂದರೆ ದೋಣಿಯಾಕಾರದ ಪಾತ್ರೆ. ದೊನ್ನೆ ಇದಕ್ಕೆ ಮಡಕೆ ದೋಣಿ ಎಂದು ಕನ್ನಡ ಶಬ್ದವನ್ನು ಯಾರೂ ನಿರ್ಮಾಣ ಮಾಡಿಲ್ಲ. ಮಾಡಿದರೆ ಅದಕ್ಕೆ ಅರ್ಥವೂ ಬರುವುದಿಲ್ಲ. ಸಂಸ್ಕೃತದಲ್ಲಿಯೂ ಅಷ್ಟೇ! ಕೇವಲ 'ಕುಂಭದ್ರೋಣ' ಎಂದೇ ಯಾರೂ ಉಪಯೋಗಿಸುವುದಿಲ್ಲ- ಮಳೆಗೆ ಸಂಬಂಧವಿಲ್ಲದೆ. ಕುಂಭದ್ರೋಣ ವರ್ಷ, ಕುಂಭದ್ರೋಣದಂಥ ಮಳೆ ಎಂದು ಉಪಯೋಗಿಸುತ್ತಾರೆ.

ಸಾಮಾನ್ಯವಾಗಿ ಮಳೆ ಸುರಿಯುವುದು ಧಾರಾಕಾರವಾಗಿ, ಧಾರೆಧಾರೆಯಾಗಿ. ಆದರೆ ಕುಂಭದ್ರೋಣ ಮಳೆ ಎಂದರೆ ಮಡಕೆಯಲ್ಲಿ ತುಂಬಿರುವ ನೀರನ್ನು ಅಥವಾ ದೋಣಿ ಆಕಾರದ ಪಾತ್ರೆಯಲ್ಲಿ ತುಂಬಿರುವ ನೀರನ್ನು ಯಾರಾದರೂ ಆಕಾಶದಿಂದ ಕೆಳಗೆ ಸುರಿದರೆ ಅದು ಹೇಗೆ ಬೀಳುತ್ತದೆಯೋ, ಹಾಗೆ ಅಷ್ಟೇ ದಪ್ಪ ಆಕಾರದಲ್ಲಿ ಮಳೆ ಸುರಿಯುತ್ತಿದೆ ಎಂದರ್ಥ.

ಇದು ಕೇವಲ ಉತ್ಪ್ರೇಕ್ಷೆ. ತುಂಬ ಬಿರುಸಿನಿಂದ ಬರುವ ಮಳೆ ಅದು. ಅದನ್ನೇ ಧಾರಾಕಾರಿ ಎಂದು ವರ್ಣಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಡಕೆಗಳಿಂದ ಅಥವಾ ಪಾತ್ರೆಗಳಿಂದ ತುಂಬಿ ಸುರಿವಂತೆ ಎಂದು ಉತ್ಪ್ರೇಕ್ಷಿಸುವ ಸಮಾಸ ಶಬ್ದ ಅದು.

ಆದರೂ ಸಂಸ್ಕೃತ ಬಲ್ಲವರು ಕೂಡ ಕುಂಭದ್ರೋಣವರ್ಷ ಎಂದೂ ಪೂರ್ತಿಯಾಗಿ ಶಬ್ದವನ್ನು ಉಪಯೋಗಿಸುವುದೇ ಇಲ್ಲ. 'ಕುಂಭದ್ರೋಣ' ಎಂದರೆ ಕುಂಭದ್ರೋಣ ವರ್ಷ ಎಂದು ಅರ್ಥವಾಗುತ್ತದೆ ಎಂದು ಅವರ ನಿರೀಕ್ಷೆ. ಈ ಸಮಾಸವನ್ನು ಕನ್ನಡ ಕವಿಗಳು ಮಡಕೆ ದೊನ್ನೆ ಮಳೆ ಎಂದು ಯಾರೂ ಅನುವಾದ ಮಾಡಿಲ್ಲ. ಕನ್ನಡದ ಪುಣ್ಯ. ಭಾಸ ಮಹಾಕವಿ ಇಂಥ ಮಳೆಯನ್ನು ಸುರಿಸುವ ಮೋಡಗಳನ್ನು 'ಗಿರಿಸ್ನಾಪನಾಂಭೋಘಟಾಃ' = ಗಿರಿಗಳಿಗೆ ಸ್ನಾನ ಮಾಡಿಸುವ ತುಂಬ ಭಾರಿ ಮಡಕೆಗಳು ಎಂದು ವರ್ಣಿಸಿದ್ದಾನೆ. ಇದು ಸಂಸ್ಕೃತದಲ್ಲಿ ತುಂಬ ಸುಂದರವಾದ ರೂಪಕಾಲಂಕಾರದ ಶಬ್ದ.

ಇಂದ್ರನಿಗೆ ಏಳು ಮೇಘಗಳ ಸೈನ್ಯ ಉಂಟಂತೆ. ಅವುಗಳ ಹೆಸರು ಹೀಗಿವೆ: ಆವರ್ತ, ಸಂವರ್ತ, ದ್ರೋಣ, ಪುಷ್ಕಲಾವರ್ತ, ಕಾಳ, ನೀಲ, ಮಹಾಕಾಳ, ದ್ರೋಣ ಎಂಬುದು ದೋಣಿಯ ಆಕಾರದ ಮೋಡ. ಅದನ್ನು ಮಗುಚಿದರೆ ಬೀಳುವಂತಹ ಮಳೆ ಇದು.

ಪಂಪ ಭಾರತದಲ್ಲಿ ಒಂದು ಕಡೆ ಈ ವಾಕ್ಯವಿದೆ: 'ಸಿಡಿಲ ಬಳಗಮನೊಳಗೊಂಡ ದ್ರೋಣ, ಮಹಾದ್ರೋಣ, ಪುಷ್ಕಲಾವರ್ತ, ಸಂವರ್ತಕಗಳೆಂಬ ಮುಗಿಲ್ಗಳಂ ಬೆಸಸಿದಾಗಳ್ ಕವಿದುವು ಸಪ್ತ ಸಾಗರ ಜಲಂಗಳೆ ಲೋಕಮನೀಗಳ್ ಎಂಬಿನಂ ಮುಗಿಲ್ಗಳಲ್ಲಿ ಕರೆಯುತ್ತಿರೆ'. ಇದೇ ಕುಂಭದ್ರೋಣ.

ಎಷ್ಟು ಮಳೆ ಬಿದ್ದಾಗ, 'ಕುಂಭದ್ರೋಣ ಮಳೆ' ಪ್ರಯೋಗವನ್ನು ಮಾಡಬೇಕು ಎಂಬ ಬಗ್ಗೆ ಸುದ್ದಿಮನೆಯಲ್ಲಿ ಸ್ಪಷ್ಟತೆಯಿಲ್ಲ. ಆಕಾಶದಿಂದ ಕೊಡ ಅಥವಾ ಮಡಕೆಯಲ್ಲಿ ನೀರನ್ನು ಸುರಿದರೆ, ಯಾವ ರೀತಿ ಕಾಣುವುದೋ, ಮಳೆಯ ಧಾರೆ ಅದೆಷ್ಟು ದಪ್ಪವಿರಬಹುದೋ ಅದು ಕುಂಭದ್ರೋಣ ಮಳೆ. ಆಗ ಮಾತ್ರ ಈ ಪದವನ್ನು ಬಳಸಬಹುದು. ಕೆಲವು ಸಲ ಬಿರುಗಾಳಿ, ಗುಡುಗು, ಸಿಡಿಲಿನಿಂದ, ಆಲಿಕಲ್ಲಿನಿಂದ ಕೂಡಿದ ಮಳೆ ಬಿದ್ದಾಗ, ಇದನ್ನು ಬಳಸಬಾರದು. ಕಾರಣ ಅದು ಕುಂಭದ್ರೋಣ ಮಳೆ ಅಲ್ಲ. ಕುಂಭದ್ರೋಣ ಮಳೆ ಆಗಾಗ ಸುರಿಯುವುದಿಲ್ಲ. ಕೆಲವು ಸಲ ಟಿವಿ ಚಾನೆಲ್ಲುಗಳು ಸುದ್ದಿಯನ್ನು ವೈಭವೀಕರಿಸಲು 'ಕುಂಭದ್ರೋಣ' ಪದ ಪ್ರಯೋಗ ಮಾಡುವುದುಂಟು. ಅದು ಸರಿಯಲ್ಲ.

ಮುಸಲಧಾರೆ

ಮಳೆಗಾಲದಲ್ಲಿ ಕನ್ನಡ ಪತ್ರಿಕೆಗಳ ಶೀರ್ಷಿಕೆಗಳಲ್ಲಿ ಆಗಾಗ ಕಂಡುಬರುವ ಇನ್ನೊಂದು ಪದವೆಂದರೆ ಮುಸಲಧಾರೆ. ಮುಸಲ ಅಂದರೆ ಒನಕೆ ಎಂದರ್ಥ. ನೀರಿನ ಧಾರೆ ಅಥವಾ ಸುರಿತ ಜೋರಾಗಿದ್ದರೆ, ಮಳೆಹನಿ ಒನಕೆಯ ಗಾತ್ರದಷ್ಟಿದ್ದರೆ, ಅಂಥ ಭಾರಿ ಮಳೆಗೆ ಮುಸಲಧಾರೆ ಎನ್ನುತ್ತಾರೆ.

ಇದು ಕೂಡ ಮಳೆಯ ಹಾನಿಯನ್ನು ಉತ್ಪ್ರೇಕ್ಷೆಯಿಂದ ಬಳಸುವ ಪದ. ಮಳೆ ಅದೆಷ್ಟೇ ಜೋರಾಗಿದ್ದರೂ, ಒನಕೆ ಗಾತ್ರದಲ್ಲಿರುವುದಿಲ್ಲ. ಆದರೆ ತುಸು ಅತಿರಂಜಿತವಾಗಿ ಹೇಳುವಾಗ ಮಾತ್ರ ಈ ಪದವನ್ನು ಬಳಸುವುದುಂಟು.

ಕವಿ ಗೋಪಾಲಕೃಷ್ಣ ಅಡಿಗರು ತಮ್ಮ 'ಅನಾಥೆ' ಕೃತಿಯಲ್ಲಿ, 'ಮುಸಲಧಾರೆಯಾದ ಮಳೆ, ಪರಿಚಯವಿಲ್ಲದ ಸ್ಥಳ, ಅವಳು ಎಲ್ಲಿಗೆ ತಾನೇ ಹೋದಾಳು?' ಎಂದು ಹೇಳಿದ್ದಾರೆ.

ಕೆಲ ವರ್ಷಗಳ ಹಿಂದೆ, ಕನ್ನಡದ ಪತ್ರಿಕೆಯೊಂದರ ಶೀರ್ಷಿಕೆಯಲ್ಲಿ ಮುಸಲಧಾರೆ ಪದದ ಅರ್ಥ ಸರಿಯಾಗಿ ಗೊತ್ತಿಲ್ಲದ ಡೆಸ್ಕ್ ಪತ್ರಕರ್ತನ ಕೈಯಲ್ಲಿ ಒದ್ದೆಯಾಗಿತ್ತು!

ಆತ ಹೆಡ್‌ಲೈನ್‌ನಲ್ಲಿ 'ನಗರದಲ್ಲಿ ಮುಸುಕಿನಧಾರೆ' ಎಂದು ಬಳಸಿದ್ದ. ಆದರೆ ಆ ಸುದ್ದಿಯನ್ನು ಓದಿದ ಓದುಗರಿಗೆ ಅದು ತಪ್ಪು ಎಂದು ಅನಿಸಲಿಲ್ಲ. ಕಾರಣ ಮಧ್ಯಾಹ್ನ ಹನ್ನೆರಡು ಗಂಟೆ ಹೊತ್ತಿಗೆ ಇಡೀ ಬೆಂಗಳೂರು ನಗರಕ್ಕೆ ಕಪ್ಪು ಮುಸುಕು ಧರಿಸಿದಂತೆ ಭಾಸವಾಗಿತ್ತು. ಕೆಲ ಸಮಯದ ನಂತರ 'ಧೋ' ಎಂದು ಮಳೆ ಸುರಿಯಲಾರಂಭಿಸಿದ್ದರಿಂದ, ಆತ 'ಮುಸುಕಿನಧಾರೆ' ಎಂದು ಬಳಸಿದ್ದ. ಆದರೆ ಆತ ಬಳಸಬೇಕೆಂದಿದ್ದ ಪದ ಮುಸಲಧಾರೆ ಆಗಬೇಕಿತ್ತು.

ಮಳೆಕೊಯ್ಲು

ಕನ್ನಡದಲ್ಲಿ Rain water harvestingಗೆ ಮಳೆಕೊಯ್ಲು ಎಂಬ ಪದವಿದೆ. ಇದು ಈಗ ಪ್ರಚಾರದಲ್ಲೂ ಇದೆ. ಪತ್ರಿಕೆಗಳಲ್ಲಿ ಈ ಪದ ಸರಾಗವಾಗಿ ಬಳಕೆಯಾಗುತ್ತಿದೆ ಮತ್ತು ಅದು ಎಲ್ಲರಿಗೂ ಅರ್ಥವೂ ಆಗುತ್ತಿದೆ.

ಆದರೆ ಈ ಪದದ ಬಗ್ಗೆ ನಿಘಂಟು ತಜ್ಞ ಪ್ರೊ. ವೆಂಕಟಸುಬ್ಬಯ್ಯನವರಿಗೆ ತೃಪ್ತಿ ಇರಲಿಲ್ಲ. ಹಾಗೆಂದು ಅವರು ಈ ಪದವನ್ನು ಬಳಸಲೇ ಕೂಡದು ಎಂದು ಹೇಳಲಿಲ್ಲ. ಈ ಬಗ್ಗೆ ಅವರು ತಮ್ಮ ಸಾಮಾಜಿಕ ನಿಘಂಟು 'ಇಗೋ ಕನ್ನಡ'ದಲ್ಲಿ ಪ್ರಸ್ತಾಪಿಸಿದ್ದಾರೆ.

ಭಾರತದಲ್ಲಿ ಜನಸಂಖ್ಯೆ ನಿರೀಕ್ಷೆಯನ್ನು ಮೀರಿ ಬೆಳೆದಿದೆ. ಮಳೆ ಸರಿಯಾಗಿ ಆಗುತ್ತಿಲ್ಲ. ಭೂಮಿಯ ಅಂತರ್ಜಲದಲ್ಲಿ ಏರುಪೇರಾಗಿದೆ. ಈ ಕಾರಣದಿಂದ ವಿಜ್ಞಾನಿಗಳೂ ಪರಿಸರ ತಜ್ಞರೂ ಆಲೋಚನೆ ಮಾಡಿ ಮಳೆ ಬಿದ್ದಾಗ ದೊರಕುವಷ್ಟು ನೀರನ್ನೂ ಜನತೆಯ ಪ್ರಯೋಜನಕ್ಕಾಗಿ ಶೇಖರಿಸುವುದು ಸಾಧ್ಯವೇ ಎಂದು ಬೇರೆ ಬೇರೆ ಯೋಜನೆಗಳನ್ನು ಪ್ರಯೋಗಿಸಲು ಮುಂದಾಗಿದ್ದಾರೆ. ಅದರಲ್ಲಿ rain water harvesting ಎಂಬ ಇಂಗ್ಲಿಷ್ ಪದ ಪ್ರಮುಖವಾದುದು.

ಈ ಶಬ್ದವು ಪರಿಸರ ವಿಜ್ಞಾನಿಗಳು ನಿರ್ಮಿಸಿರುವ ಶಬ್ದ. ಇದನ್ನು ಅನುಸರಿಸಿ ಕನ್ನಡದಲ್ಲಿ 'ಮಳೆ ಕೊಯ್ಲು' ಎಂಬ ಶಬ್ದವನ್ನು ನಿರ್ಮಾಣ ಮಾಡಿದ್ದಾರೆ. Harvest ಎಂದರೆ ಸುಗ್ಗಿಯಲ್ಲಿ ಪೈರನ್ನು ಕೂಡಿ ಹಾಕಿ, ರಾಶಿ ಮಾಡಿ ಸಾಗಿಸುವುದು. ನೀರನ್ನು ಹೀಗೆಯೇ ಶೇಖರಿಸುವ ಆಲೋಚನೆ ಇದು. ಮಳೆಯ ನೀರನ್ನು ದಾಸ್ತಾನು ಮಾಡುವುದು. ದಾಸ್ತಾನು ಎಂಬ ಶಬ್ದವೂ ಕನ್ನಡದ್ದಲ್ಲ, ಅದು ಪಾರಸೀ ಭಾಷೆಯ ದಾಸ್ತನ್.

ಆದರೂ ಆ ಶಬ್ದವೇ ಹೆಚ್ಚು ಸಮರ್ಪಕವಾಗಿತ್ತು. ಪತ್ರಿಕಾಕರ್ತರಿಗೆ ಕೂಡಲೇ ಹೊಳೆದ ಶಬ್ದ ಕನ್ನಡದ ಕೊಯ್ಲು. ಅದನ್ನೇ ಎಲ್ಲರೂ ಉಪಯೋಗಿಸುತ್ತಿದ್ದಾರೆ. ಸಮೂಹ ಮಾಧ್ಯಮದ ಪ್ರಭಾವ ಯಾವಾಗಲೂ ಬಹು ದಟ್ಟವಾದದ್ದು. ಅದರಿಂದ ಏನು ಬೇಕಾದರೂ ಆಗಬಹುದು. ಹಾಗೆ ಶಾಶ್ವತವಾಗಿ ನಿಲ್ಲಲು ಪ್ರಯತ್ನ ಪಡುತ್ತಿರುವ ಶಬ್ದ ಕೊಯ್ಲು. ಮಳೆ ನೀರಿನ ದಾಸ್ತಾನು- ಮಳೆಯ ನೀರಿನ ಶೇಖರಣೆ ಹೆಚ್ಚು ಅರ್ಥಪೂರ್ಣವಾಗುವ ಪದಪುಂಜ. ಆದರೆ ಸ್ವಲ್ಪ ಉದ್ದ. ಪತ್ರಕರ್ತರಿಗೆ ಶಬ್ದಗಳು ಯಾವಾಗಲೂ ಚಿಕ್ಕದಾಗಿರಬೇಕು. ಹೀಗಾಗಿ ಮಳೆ ಕೊಯ್ಲು ಉಳಿದು ಬದುಕುತ್ತಾ ಇದೆ.

ಹೊಟ್ಟೆಗೆ ಏನು ತಿಂತೀರಿ?

What do you eat? ಎಂದು ಯಾರಾದರೂ ಕೇಳಿದರೆ, ತಾವು ತಿನ್ನುವುದನ್ನು ಹೇಳಬಹುದು. ನಾನು ಊಟ ಮಾಡ್ತೇನೆ, ಊಟಕ್ಕೆ ಅನ್ನ ಸೇವಿಸುತ್ತೇನೆ, ರೋಟಿ ಸೇವಿಸುತ್ತೇನೆ ಎಂದು ಹೇಳಬಹುದು. ಇಲ್ಲವೇ ಪಿಜ್ಜಾ, ಬರ್ಗರ್ ಸೇವಿಸುತ್ತೇನೆ ಎಂದು ಹೇಳಬಹುದು.

ಅದೇ ಯಾರಾದರೂ ನಿಮ್ಮನ್ನು 'ಹೊಟ್ಟೆಗೆ ಏನು ತಿಂತೀರಿ?' ಎಂದು ಕೇಳಿದರೆ, ನೀವು ಏಕಾಏಕಿ ಕೆಂಡಾಮಂಡಲರಾಗುತ್ತೀರಿ. ಕಾರಣ 'ಹೊಟ್ಟೆಗೆ ಏನು ತಿಂತೀರಿ?' ಎನ್ನುವುದು ಕನ್ನಡದಲ್ಲಿ ಬೈಗುಳ. 'ಹೊಟ್ಟೆಗೆ ಏನು ತಿಂತೀರಿ?' ಅಂದ್ರೆ, ಹೊಟ್ಟೆಗೆ ನೀವು ಅನ್ನ ತಿನ್ನುತ್ತಿಲ್ಲ ಎಂಬುದನ್ನು ಪ್ರಶ್ನಿಸಿದಂತೆ.

ಎಲ್ಲರಿಗೂ ಗೊತ್ತು, ಮತ್ತೊಬ್ಬರು ಏನು ಸೇವಿಸುತ್ತಾರೆ ಎಂಬುದು. ಎಲ್ಲರೂ ಸೇವಿಸಬೇಕಾಗಿದ್ದನ್ನೇ ಸೇವಿಸುತ್ತಾರೆ. ಈ ಸಂಗತಿ ಗೊತ್ತಿದ್ದರೂ, 'ಹೊಟ್ಟೆಗೆ ಏನು ತಿಂತೀರಿ?' ಎಂದು ಕೇಳಿದಾಗ, ಹೊಟ್ಟೆಗೆ ಅನ್ನ ತಿಂತೀನಿ ಎಂದು ಸಮಾಧಾನದಿಂದ ಹೇಳುವುದಿಲ್ಲ. 'ಹೊಟ್ಟೆಗೆ ಏನು ತಿಂತೀರಿ?' ಎಂದು ಕೇಳಿದಾಗ ಪಿತ್ತ ನೆತ್ತಿಗೇರಿದವರಂತೆ ವರ್ತಿಸುತ್ತಾರೆ.

ಹಾಗೆ ನೋಡಿದರೆ, ಇದೊಂದು ಸುರಕ್ಷಿತವಾದ ಬೈಗುಳ. ಇದರಲ್ಲಿ ಅವಾಚ್ಯವೆನಿಸುವ ಪದಗಳೇ ಇಲ್ಲ. ವರನಟ ಡಾ.ರಾಜ್ ಕುಮಾರ್ ಅವರಿಗೆ ವಿಪರೀತ ಸಿಟ್ಟು ಬಂದಾಗ, 'ಕತ್ತೆಬಡವ' ಅಥವಾ 'ಕತ್ತೆಬಡವಿ' ಎಂದು ಬೈಯುತ್ತಿದ್ದರು. ಅದಕ್ಕೆ ಯಾವುದೇ ನಿರ್ದಿಷ್ಟ ಅರ್ಥವಿಲ್ಲ. ಬೊ★ಮಗ, ಸೂ★ಮಗ, ಬಡ್ಡಿ ಮಗ ಎಂದು ಯಾರನ್ನಾದರೂ ಬೈದರೆ ಯಥಾರ್ಥ ಭಾವಿಸಿ, ಬೇಸರಿಸಿಕೊಳ್ಳುವ ಸಾಧ್ಯತೆ ಇರುತ್ತದೆ. 'ಕತ್ತೆಬಡವ' ಅಂದರೆ ಸಿಟ್ಟು ಬರುವುದಿಲ್ಲ. ದಿವಂಗತ ಸಂಪಾದಕ ವೈಎನ್ಕೆ ಅವರಿಗೆ ಸಿಟ್ಟು ಬಂದಾಗ, 'ನೀನು ಯಾವ ಮರದ ತೊಪ್ಪಲು' ಎಂದು ಬೈಯುತ್ತಿದ್ದರು.

ಕೆಲ ವರ್ಷಗಳ ಹಿಂದೆ, ಖ್ಯಾತ ಅಣುವಿಜ್ಞಾನಿ ಡಾ. ರಾಜಾರಾಮಣ್ಣ ಅವರ ಆಫೀಸಿನಲ್ಲಿ ಕುಳಿತಾಗ, ಏನೋ ತಪ್ಪು ಮಾಡಿದ ಅವರ ಅಟೆಂಡರ್‌ಗೆ, 'ಹೋಗಿ ಹೋಗಿ ಕೇಷ್ಟು ಲೋಕದಲ್ಲಿ ಬೀಳು' ಎಂದು ಬೈದರು. ನನಗೆ ಇದ್ಯಾವ ಬೈಗುಳವಿದ್ದಿರಬಹುದು ಎಂದು ಅರ್ಥವಾಗಲಿಲ್ಲ. ಅದರ ಅರ್ಥವೇನು ಎಂದು ತಿಳಿದುಕೊಳ್ಳುವ ಆಸೆಯಾದರೂ, ಆ ಸಿಟ್ಟಿನ ಸನ್ನಿವೇಶದಲ್ಲಿ ಅವರನ್ನು ಕೇಳಲೂ ಮನಸ್ಸಾಗಲಿಲ್ಲ, ನಾನು ಸುಮ್ಮನಾದೆ.

ಅದಾಗಿ ಕೆಲ ದಿನಗಳ ನಂತರ, ಅವರು ನನ್ನನ್ನು ಬೆಂಗಳೂರು ಕ್ಲಬ್‌ಗೆ ಕರೆದುಕೊಂಡು ಹೋದರು. ವೇಟರ್ ಗುಂಡು ತಂದಿಟ್ಟ. ಅವರು ಹೇಳಿದ್ದೇ ಒಂದು, ಅವನು ತಂದಿಟ್ಟಿದ್ದೇ ಇನ್ನೊಂದು. ಡಾ.ರಾಜಾರಾಮಣ್ಣ ಅವರಿಗೆ ಹಠಾತ್ ಕೋಪ ಬಂದಿತು. 'ನಾನು ಹೇಳಿದ್ದನ್ನು ತರುವುದನ್ನು ಬಿಟ್ಟು, ನೀನು ಬೇರೆಯದನ್ನು ತಂದೆ. ಯಾಕೆ ಹೀಗೆ ಮಾಡ್ತೀರಪ್ಪ, ಹೋಗಿ ಹೋಗಿ ನೀನು ಕೇಷ್ಟು ಲೋಕದಲ್ಲಿ ಬೀಳಬೇಕು' ಎಂದರು.

ಬಿಡಬಾರದು, ಈಗ ಕೇಳಬೇಕು ಎಂದು ನಿರ್ಧರಿಸಿ, 'ಸಾರ್, ಕೇಷ್ಟು ಲೋಕ ಅಂದ್ರೆ ಏನು, ಅದು ಎಲ್ಲಿದೆ?' ಎಂದು ಕೇಳಿದೆ.

'ಯಾರಿಗೆ ಗೊತ್ತು?' ಎಂದವರೇ, ಪೆಗ್ ಏರಿಸಿದರು. 'ಏನಿದು? ಕೇಷ್ಟು ಲೋಕಕ್ಕೆ ಹೋಗಿ ಬೀಳು ಎಂದು ಈಗ ತಾನೇ ಅವನಿಗೆ ಬೈದಿರಿ. ಅದರ ಅರ್ಥ ಗೊತ್ತಿರಲೇಬೇಕಲ್ಲ?' ಎಂದೆ. 'ಕೇಷ್ಟುಲೋಕ ಅಂದ್ರೆ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ, ಹಾಗ್ಯಾಕೆ ಬೈತಾರೆ ಎಂಬುದೂ ಗೊತ್ತಿಲ್ಲ. ನನ್ನ ತಂದೆಯವರಿಗೆ ಸಿಟ್ಟು ಬಂದಾಗ ಹಾಗೆ ಬೈಯುತ್ತಿದ್ದರು. ಒಮ್ಮೆ ನಾನು ಅವರಿಗೆ ಅದು (ಕೇಷ್ಟುಲೋಕ) ಎಲ್ಲಿದೆ ಎಂದು ಕೇಳಿದಾಗ, 'ಯಾವ ಪಿಶಾಚಿಗೆ ಗೊತ್ತು?' ಎಂದು ರೇಗಿದ್ದರು. ನನಗೂ ಅದು ರೂಢಿಯಾಗಿಬಿಟ್ಟಿತು' ಎಂದರು ಅಣುವಿಜ್ಞಾನಿ.

ಕೊನೆಗೆ ಅವರು ಅದಕ್ಕೆ ಸಮಜಾಯಿಷಿ ನೀಡಿದ್ದರು- 'ನೋಡಿ, ಕೇಷ್ಟುಲೋಕ ಎಂಬುದು ಒಂದು ಭ್ರಾಮಕಲೋಕ ಅಥವಾ ಕಲ್ಪನಾಲೋಕವಿದ್ದಿರಬಹುದು. ನಮ್ಮ ಹಿರಿಯರಿಗೆ ಸಿಟ್ಟು ಬಂದಾಗ ಅವಾಚ್ಯ ಪದಗಳನ್ನು ಬಳಸಿ ಬಾಯಿ ಹೊಲಸು ಮಾಡಿಕೊಳ್ಳಲು, ಕೆಟ್ಟ ಪದ ಬಳಸಿ ತಮ್ಮ ಗೌರವ ಕಳೆದುಕೊಳ್ಳಲು ಇಷ್ಟವಿರಲಿಲ್ಲ. ಹೀಗಾಗಿ ಅನಿಂದನಾತ್ಮಕ ಪದಗಳನ್ನು ಬಳಸಿ ಬೈಯುತ್ತಿದ್ದರು. ಕೇಷ್ಟುಲೋಕವೂ ಹಾಗೆ ಹುಟ್ಟಿದ್ದು'.

'ಹೊಟ್ಟೆಗೆ ಏನು ತಿಂತೀರಿ?' ಅಂದ್ರೆ ಕೆಲವರಿಗೆ ಕೋಪ ಬರಲು ಕಾರಣ 'ಹೊಟ್ಟೆಗೆ ಅನ್ನವನ್ನೇ ತಿನ್ನುತ್ತಿದ್ದರೆ ಈ ರೀತಿ ಮಾಡುತ್ತಿರಲಿಲ್ಲ. ಆದ್ದರಿಂದ ನೀನು ಸೇವಿಸುತ್ತಿರುವುದು ಅನ್ನವಿರಲಿಕ್ಕಿಲ್ಲ, ಅಮೇಧ್ಯವೋ ಅಥವಾ ಬೇರೆ ಏನೋ ಇದ್ದಿರಬಹುದು' ಎಂಬ ಅರ್ಥದಲ್ಲಿ ಧ್ವನಿಸುವುದರಿಂದ, ಹಾಗೆ ಯಾರೇ ಕೇಳಿದರೂ ಸಿಟ್ಟಾಗುತ್ತಾರೆ. ಆದರೂ ಆ ಮಾತಿನಲ್ಲಿ ಒಂದು ಪದವೂ ಬೈಗುಳವಿಲ್ಲ ಎಂಬುದನ್ನು ಒಪ್ಪಬೇಕು.

ಚಾಣಾಕ್ಷ ಜೇಬುಗಳ್ಳ

ಕೆಲ ದಿನಗಳ ಹಿಂದೆ, ಸುಮಾರು ನಲವತ್ತೈದು ವರ್ಷಗಳ ಹಿಂದಿನ ಅಲ್ಲಲ್ಲಿ ಹರಿದು ಹೋದ 'ಕಸ್ತೂರಿ' ಮಾಸಪತ್ರಿಕೆಯ ಸಂಚಿಕೆ ಸಿಕ್ಕಿತು. ಆ ಪತ್ರಿಕೆಯಲ್ಲಿ ನಾನು ತಪ್ಪದೇ ಓದುತ್ತಿದ್ದ ಒಂದು ಅಂಕಣವೆಂದರೆ 'ಇದುವೇ ಜೀವ, ಇದು ಜೀವನ'. ಅದರಲ್ಲಿ ಶ್ರೀಮತಿ ಜಿ.ವಿ.ಕಾಮತ್ ಎಂಬುವವರು ತಮಗಾದ ಒಂದು ಅನುಭವವನ್ನು ಹಂಚಿಕೊಂಡಿದ್ದರು.

ಆರು ತಿಂಗಳ ಮಗು ಕೇಶವನನ್ನು ಕೈಯಲ್ಲೆತ್ತಿಕೊಂಡು ರೈಲಿನಲ್ಲಿ ಘಾಟ್‌ಕೋಪರ್‌ದಿಂದ ಮುಳುಂದಕ್ಕೆ ಹೋಗಬೇಕಾಗಿತ್ತು. ಬಂದ ರೈಲುಗಳೆಲ್ಲ ಜನರಿಂದ ತುಂಬಿ ಬರುತ್ತಿದ್ದರೂ ಅದರಲ್ಲೇ ನುಗ್ಗದೇ ನಿರ್ವಾಹವಿರಲಿಲ್ಲ. ಕಷ್ಟಪಟ್ಟು ಲೇಡಿಸ್ ಕಂಪಾರ್ಟ್‌ಮೆಂಟಿನಲ್ಲಿ ನುಗ್ಗಿ ಒಂದು ಬದಿಯಲ್ಲಿ ನಿಂತೆ. ಒಳಗೆ ಗದ್ದಲವೋ ಗದ್ದಲ. ಉಸಿರಾಡಲೂ ಕಷ್ಟವಾಗುತ್ತಿತ್ತು. ಐದು ನಿಮಿಷ ಕಳೆದಿರಬಹುದು. ಮಗು ರಚ್ಚೆ ಹಿಡಿದು ಅಳತೊಡಗಿತು. ಸಮಾಧಾನ ಮಾಡಲು ಪ್ರಯತ್ನ ಪಟ್ಟಷ್ಟೂ ಅಳು ಹೆಚ್ಚುತ್ತಿತ್ತು.

ರೈಲು ಮುಳುಂದಕ್ಕೆ ತಲುಪಿ ನಾನು ಸ್ಟೇಶನ್ನಿನಿಂದ ಹೊರಬಂದಾಗ, ಕೇಶವ ಅತ್ತು ಅತ್ತು ದಣಿದು ಮಲಗಿದ್ದ. ಸ್ಟೇಶನ್ನಿನ ಬಳಿಯ ಮಾರ್ಕೆಟ್ಟಿನಲ್ಲಿ ತರಕಾರಿ ಕೊಂಡು ಹಣ ಕೊಡಲು ಚೀಲಕ್ಕೆ ಕೈ ಹಾಕಿದಾಗ ಎದೆ ಧಸಕ್ ಎಂದಿತು.

ಚೀಲದಲ್ಲಿಟ್ಟ ಹಣದ ಪರ್ಸ್ ಮಾಯ!

ಪ್ಲಾಸ್ಟಿಕ್ಕಿನ ಚೀಲವನ್ನು ಬ್ಲೇಡಿನಿಂದ ಕತ್ತರಿಸಿ ಅದರೊಳಗಿದ್ದ ಹಣದ ಪರ್ಸನ್ನು ಯಾರೋ ತೆಗೆದಿದ್ದರು. ಗುರುತಿನ ತರಕಾರಿಯವನಿಗೆ ಹಣ ನಾಳೆ ಕೊಡುತ್ತೇನೆಂದು ಹೇಳಿ ಜೋಲುಬಿದ್ದ ಮುಖ ಹೊತ್ತು ಮನೆಗೆ ಬಂದೆ.

ಮಗುವಿನ ಬಟ್ಟೆ ಬದಲಿಸುವಾಗ ನನಗೆ ಅದರ ಕಾಲುಗಳ ಮೇಲೆ ಉಗುರಿನ ಕೆಂಪು ಗುರುತುಗಳನ್ನು ಕಂಡು ಅಚ್ಚರಿಯಾಯಿತು. ಉಗುರಿನಿಂದ ಗೀರಿದ ಸ್ಥಳ ಕೆಂಪಾಗಿ ರಕ್ತ ಬರುವಂತಿತ್ತು. ಮಗುವಿನ ಕಾಲಿಗೆ ಉಗುರುಗಳಿಂದ ಗಾಯ ಮಾಡುವುದರ ಮೂಲಕ ಅದು ಅಳುವಂತೆ ಮಾಡಿ ನನ್ನ ಗಮನವನ್ನು ಮಗುವಿನ ಕಡೆಗೆ ತಿರುಗಿಸಿ ಹ್ಯಾಂಡ್ ಬ್ಯಾಗಿನಲ್ಲಿದ್ದ ಪರ್ಸನ್ನು ಅಪಹರಿಸಿದ್ದರು ಕಿಸೆಗಳ್ಳರು.

ಅಬ್ಬಾ! ಎಂದುಕೊಂಡೆ.

ಅಪಾರ ಕೀರ್ತಿ ಗಳಿಸಿ ಮೆರೆದ ಪಾರದರ್ಶಕ ಸಾಬೂನು!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಳಿಯ ಮನೆ ತೊಳಿಯ... ಅಂತೊಂದು ನಾಣ್ನುಡಿಯಿದೆ ಕನ್ನಡದಲ್ಲಿ. ಅದೇ ಹೆಸರಿನ ಒಂದು ಕನ್ನಡ ಸಿನೆಮಾ ಸಹ ಕೆಲ ವರ್ಷಗಳ ಹಿಂದೆ ಬಿಡುಗಡೆಯಾಗಿತ್ತೆಂದು ನೆನಪು. ಒಟ್ಟಾರೆಯಾಗಿ, ಅಳಿಯ ಮನೆ ತೊಳಿಯ ಅಂದರೆ ಸ್ವಲ್ಪ ಕುಹಕದ ನುಡಿಯೇ. ಹೆಣ್ಣು ಕೊಟ್ಟ ಮಾವನ ಗ್ರಹಚಾರ ಮಣ್ಣು ಮುಕ್ಕುವಂತೆ ಮಾಡಲು ವಕ್ಕರಿಸುವ ಹತ್ತನೆಯ ಗ್ರಹ ಎಂಬ ಅಪಕೀರ್ತಿ ಅಳಿಯನದ್ದು. 'ಸದಾ ರುಷ್ಟಃ ಸದಾ ವಕ್ರಃ ಸದಾ ಪೂಜಾಮಪೇಕ್ಷತೇ। ಕನ್ಯಾರಾಶಿಸ್ಥಿತೋ ನಿತ್ಯಂ ಜಾಮಾತಾ ದಶಮೋ ಗ್ರಹಃ॥' ಅಂತ ಸಂಸ್ಕೃತದಲ್ಲೊಂದು ಚಾಟೂಕ್ತಿಯೂ ಇದೆ! ಸದಾ ಮುನಿಸಿಕೊಂಡು, ಮುಖ ಸಿಂಡರಿಸಿಕೊಂಡು ಇರುತ್ತಾನೆ; ತನಗೆ ಮರ್ಯಾದೆ ಸಲ್ಲುತ್ತಲಿರಲಿ ಎಂದು ಅಪೇಕ್ಷಿಸುತ್ತಾನೆ; ಕನ್ಯಾ ರಾಶಿಯಲ್ಲೇ ನೆಲೆನಿಂತಿರುತ್ತಾನೆ; ಅಳಿಯನೆಂದರೆ ಹತ್ತನೆಯ ಗ್ರಹ ಇದ್ದಂತೆ ಎಂದು ಅದರ ಭಾವಾರ್ಥ. ಇದಕ್ಕೆ ತಕ್ಕಂತೆ, ಕೆಲವು ದುರ್ಬುದ್ಧಿಯ ಅಳಿಯಂದಿರು ಅತ್ತೆ-ಮಾವನ ಮನೆಯಿಂದಲೇ ಹಣ-ಒಡವೆ ಕಳ್ಳತನ ಮಾಡಿದರು, ಕೆಲವರಂತೂ ಕೊಲೆಗಡುಕರೇ ಆದರು ಎಂಬೆಲ್ಲ ಸುದ್ದಿಗಳನ್ನೂ ಆಗಾಗ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. 'ದಶಮೋ ಗ್ರಹಃ' ಎಂದಾಗ ನೆನಪಾಯ್ತು- ಈಗ 'ನವಮೋ ಗ್ರಹಃ' ಎಂದು ಶ್ಲೋಕದಲ್ಲಿ ತಿದ್ದಿಕೊಳ್ಳಬೇಕೇನೋ. ಪ್ಲುಟೋ ಒಂದು ಗ್ರಹವೇ ಅಲ್ಲವೆಂದು ವಿಜ್ಞಾನಿಗಳು ಹೇಳಿದ್ದಾರೆ. ಹಾಗಾಗಿ ತಾನು ಒಂಬತ್ತನೆಯ ಸ್ಥಾನಕ್ಕೆ ಪ್ರಮೋಷನ್ ಪಡೆದಿದ್ದೇನೆಂದು ಅಳಿಯ ಬೀಗಬಹುದು.

ತಮಾಷೆ ಒತ್ತಟ್ಟಿಗಿರಲಿ. ಅಳಿಯನೊಬ್ಬ 'ಮನೆ ತೊಳಿಯ' ನಾಗದೆ ಮಾವ ಸ್ಥಾಪಿಸಿದ ಉದ್ಯಮದ/ಉತ್ಪನ್ನದ ಕೀರ್ತಿಯನ್ನು ವಿಶ್ವದ ಮನೆಮನೆಯಲ್ಲೂ ಬೆಳಗಿಸಿದ ಯಶೋಗಾಥೆಯೊಂದಿದೆ. ಅದೇ ಪಿಯರ್ಸ್ ಸಾಬೂನಿನ ಕಥೆ. ಈಗ್ಗೆ ಎರಡು ಶತಮಾನಗಳುದ್ದಕ್ಕೂ ಖ್ಯಾತಿ ಮತ್ತು ದುಡ್ಡು ಎರಡನ್ನೂ ಗಳಿಸುತ್ತ ಮೆರೆದಿರುವ ಪಿಯರ್ಸ್ ಸೋಪಿನ ಮಹಾತ್ಮೆ. ಪಿಯರ್ಸ್ ಸಾಬೂನಿನ ಆ ಶಿಷ್ಟ ಪರಿಮಳ, ಬಣ್ಣ, ಆಕಾರಗಳ ಚಿತ್ರಣವ ನ್ನೊಮ್ಮೆ ನಿಮ್ಮ ಮನಸ್ಸಿನಲ್ಲಿ ಮೂಡಿಸಿಕೊಳ್ಳಿ. ಅಲ್ಲೊಂದು ನೆನಪುಗಳ ಮೆರವಣಿಗೆ ಹೊರಡದಿದ್ದರೆ ಆಗ ಕೇಳಿ! ಚಿಕ್ಕ ಮಗುವಾಗಿದ್ದಾಗಿನ ಕೋಮಲ ಶರೀರ... ನಿರ್ಮಲ ಮನಸ್ಸು... ಹಬೆಯಾಡುತ್ತಿರುವ ಬಿಸಿಬಿಸಿನೀರಿನಲ್ಲಿ ಅಮ್ಮ ಮಾಡಿಸಿದ ಸ್ನಾನ... ಪುಟ್ಟ ಕೈಗಳಿಂದ ಹಿಡಿದ ಪಿಯರ್ಸ್ ಸೋಪನ್ನು ಮೂಗಿನ ಹೊಳ್ಳೆಗಳ ಹತ್ತಿರ ತಂದಾಗಿನ ಪರಿಮಳ... ಆಹಾ! ನೆನಪುಗಳೂ ಒಂದುರೀತಿ ಅಮಲೇರಿಸುತ್ತವಲ್ಲವೆ? ಹೌದು, ಇದು ಪಿಯರ್ಸ್ ಪರಿಮಳದ ನೆನಪುಗಳ ಅಮಲು. ಈವತ್ತಿನ ತಿಳಿರುತೋರಣ ಅಂಕಣದಲ್ಲಿ ಪಿಯರ್ಸ್ ಸೋಪಿನದೇ ಘಮಲು.

ಇಸವಿ 1789. ಆಂಡ್ರ್ಯೂ ಪಿಯರ್ಸ್ ಎಂಬ ಹೆಸರಿನ ಕ್ಷೌರಿಕನೊಬ್ಬ ಬ್ರಿಟನ್‌ನ ಒಂದು ಹಳ್ಳಿಮೂಲೆಯಿಂದ ಲಂಡನ್‌ಗೆ ವಲಸೆ ಬಂದನು. ಲಂಡನ್‌ನ ಸೊಹೊ ಉಪನಗರದ ಜೆರ್ರಾಡ್ ಸ್ಟ್ರೀಟ್‌ನಲ್ಲಿ ಒಂದು ಸೆಲೂನ್ ಆರಂಭಿಸಿದನು. ಸೊಹೊ ಉಪನಗರದಲ್ಲಿ ಶ್ರೀಮಂತರು ಮತ್ತು ವಿಲಾಸಿ ಜನರೇ ಹೆಚ್ಚಾಗಿ ವಾಸವಾಗಿದ್ದರು. ಅವರೆಲ್ಲ ಕ್ಷೌರ ಮಾಡಿಸಿಕೊಳ್ಳಲು ಸೆಲೂನ್‌ಗೆ ಬರುವುದಕ್ಕಿಂತ ಆಂಡ್ರ್ಯೂನನ್ನೇ ತಮ್ಮ ಮನೆಗೆ ಕರೆಸಿಕೊಳ್ಳುತ್ತಿ ದ್ದರು. ಈ ಪದ್ಧತಿ ಭಾರತದಲ್ಲಿಯೂ- ಹೆಚ್ಚಾಗಿ ಹಳ್ಳಿಗಳಲ್ಲಿ ಇದ್ದದ್ದೇ. ಹಿರಿಯರು, ಕೇಶಮುಂಡನ ಮಾಡಿಸಿಕೊಳ್ಳುವ ಮಡಿ ಹೆಂಗಸರು ಇರುವ ಮನೆಗಳಿಗೆ ಒಂದೆರಡು ತಿಂಗಳಿಗೊಮ್ಮೆ ಕ್ಷೌರಿಕನೇ ಬಂದುಹೋಗುವ ಕ್ರಮ. ಮತ್ತೆ ಕೆಲವು ಧಾರ್ಮಿಕ ವಿಧಿವಿಧಾನಗಳಲ್ಲೂ ಅವನು ಇರಲೇಬೇಕು. ಬ್ರಿಟನ್‌ನಲ್ಲಿಯೂ ಹಾಗೆಯೇ ಇತ್ತು ಅಂದುಕೊಳ್ಳೋಣ. ಅಂತೂ ಆಂಡ್ರ್ಯೂ ಪಿಯರ್ಸ್ ಆ ವಠಾರದಲ್ಲಿ ತುಂಬ ಜನಪ್ರಿಯನಾಗಿದ್ದನು. ಎಲ್ಲರೂ ಅವನ ಗಿರಾಕಿಗಳೇ. ಆದರೆ ಆಂಡ್ರ್ಯೂ ಬರೀ ಕ್ಷೌರಿಕನಷ್ಟೇ ಆಗಿರದೆ ತನ್ನ ಕ್ಷೌರದಂಗಡಿಯಲ್ಲೇ ಕೆಲವು ಪೌಡರ್, ಕ್ರೀಮ್, ಲೋಷನ್ ಇತ್ಯಾದಿ ಪ್ರಸಾಧನ ಸಾಮಗ್ರಿಗಳನ್ನೂ ತಯಾರಿಸಿ ಮಾರುತ್ತಿದ್ದನು. ಸಿರಿವಂತರ ಶೋಕಿಯ ಲಾಭಪಡೆದು, ತನ್ನ ಉತ್ಪನ್ನಗಳಿಂದ ಅವರ ತ್ವಚೆಗೆ ಮೆರುಗನ್ನೂ ತರುತ್ತಿದ್ದನು. ನಿಜವಾ ಗಿಯಾದರೆ ಅವನು ಅಷ್ಟು ಜನಪ್ರಿಯನಾಗಲು ಅದೇ ಕಾರಣ.

ಆ ಕಾಲದಲ್ಲೂ ಜನರಲ್ಲಿ ಸೌಂದರ್ಯಪ್ರಜ್ಞೆ ಅಷ್ಟೊಂದು ಇತ್ತು ನೋಡಿ! ಕಪ್ಪುಮೈಯವರು, ಚರ್ಮಸುಕ್ಕಾದವರು ಮುಂತಾದ ವರೆಲ್ಲ ಸಮಾಜದ ಕೆಳವರ್ಗದವರು, ಕೂಲಿನಾಲಿ ಮಾಡಿಕೊಂಡು ಬದುಕುವವರು, ಅವರಿಗಿಂತ ತಾವು ಶ್ರೇಷ್ಠರಾಗಿರಬೇಕು ಎಂದು ಪ್ರತಿಯೊಬ್ಬರೂ ಅಂದುಕೊಳ್ಳುತ್ತಿದ್ದರು. ಪೊಳ್ಳುಪ್ರತಿಷ್ಠೆಗೆ ತ್ವಚೆಯ ಅಂದ ಮತ್ತು ಮೆರುಗು ಮುಖ್ಯವಾದ ಒಂದು ಮಾನದಂಡವಾಗಿತ್ತು. ಆ ಸಾಮಾಜಿಕ ಪರಿಸ್ಥಿತಿಯನ್ನು ಆಂಡ್ರ್ಯೂ ಪಿಯರ್ಸ್ ಸೂಕ್ಷ್ಮವಾಗಿ ಗಮನಿಸಿದ್ದನು. ಎಂತಹ ಚರ್ಮವನ್ನೂ ಲಕಲಕ ಹೊಳೆಯುವಂತೆ ಮಾಡುವ ಒಂದು ಸಾಬೂನನ್ನು ತಯಾರಿಸುವ ಪಣತೊಟ್ಟನು. ಸತತ ಪ್ರಯೋಗ ಪ್ರಯತ್ನಗಳು ಕೈಗೂಡಿ ಕೊನೆಗೂ ಒಂದು ಫಾರ್ಮುಲಾವನ್ನು ಕಂಡುಕೊಂಡನು. ಸೋಪ್ ತಯಾರಿಕೆಯ ವೇಳೆ ಅದರ ಬೇಸ್



ಮಿಶ್ರಣವನ್ನು ಪೂರ್ಣವಾಗಿ ಕಶ್ಮಲರಹಿತವನ್ನಾಗಿ ಮಾಡಿ ಮತ್ತಷ್ಟು ಸಂಸ್ಕರಿಸಿ, ಆಮೇಲೆ ಅದಕ್ಕೆ ಹೂಗಳ ಸುಗಂಧದ್ರವ್ಯ ಸೇರಿಸಿ ಹಸನುಗೊಳಿಸಿದನು. ಹಾಗೆ ಉತ್ಕೃಷ್ಟ ಗುಣಮಟ್ಟದ ಮತ್ತು ನೋಡಲಿಕ್ಕೆ ಪಾರದರ್ಶಕವಾದ ಸಾಬೂನಿನ ಬಿಲ್ಲೆ ಆಂಡ್ರ್ಯೂನ ಸೆಲೂನ್‌ನಲ್ಲೇ ತಯಾರಾಯಿತು; ಆ ರಸವಿದ್ಯೆ ಅವನಿಗೆ ಕ್ಷಣಾರ್ಧದಲ್ಲೇ ಸಿದ್ಧಿಸಿತು; ಅದೇ ಫಾರ್ಮುಲಾವನ್ನು ಇಂದಿಗೂ ಉಪಯೋಗಿಸಿಕೊಂಡು ಬಂದಿರುವ 'ಪಿಯರ್ಸ್ ಸೋಪ್' ಜನ್ಮತಾಳಿತು!

ಆದರೆ ಆಂಡ್ರ್ಯೂ ಮಾತ್ರ ಹೊಟ್ಟೆಪಾಡಿಗಾಗಿ ತನ್ನ ಕ್ಷೌರಿಕವೃತ್ತಿಯನ್ನೇ ಮುಂದುವರೆಸಿದನು. ಬಹುಶಃ ಅದು ತನ್ನ ಕುಲಕಸುಬು, ಬಿಟ್ಟುಬಿಡಬಾರದು ಎಂಬ ಕಳಕಳಿ ಆತನಲ್ಲಿತ್ತು. ಹಾಗಾಗಿ ಸಾಬೂನು ತಯಾರಿಕೆಯ ಜವಾಬ್ದಾರಿಯನ್ನು ತನ್ನ ಮಗ ಫ್ರಾನ್ಸಿಸ್ ಪಿಯರ್ಸ್‌ನಿಗೆ ವಹಿಸಿಕೊಟ್ಟನು. ಜೆರ್ರಾಡ್ ಸ್ಟ್ರೀಟ್‌ನಿಂದ ಸ್ಥಳಾಂತರಗೊಂಡು ಆಕ್ಸ್‌ಫರ್ಡ್ ಸ್ಟ್ರೀಟ್ ಎದುರಿನ ಹೊಸಜಾಗದಲ್ಲಿ ಸೋಪ್ ಫ್ಯಾಕ್ಟರಿ ಸ್ಥಾಪನೆಯಾಯಿತು. ಮೊದಲಿಂದಲೂ ವ್ಯಾಪಾರ ಚೆನ್ನಾಗಿಯೇ ಇತ್ತು. ಆಂಡ್ರ್ಯೂ ನಿವೃತ್ತನಾದ ಮೇಲೆ ಸೋಪ್ ತಯಾರಿಕಾ ಘಟಕಕ್ಕೆ ಫ್ರಾನ್ಸಿಸ್ ಪಿಯರ್ಸ್ ಸಂಪೂರ್ಣ ವಾರಸುದಾರನಾದನು. ಅವನು ಗುಣಮಟ್ಟಕ್ಕೆ ಇನ್ನಿಲ್ಲದ ಮಹತ್ವ ಕೊಡುವವನು, ಆದ್ದರಿಂದ ಸೋಪಿನ ಬೆಲೆಯೂ ಸ್ವಲ್ಪ ಜಾಸ್ತಿಯೇ ಇತ್ತು. ಆ ಕಾರಣದಿಂದಲೇ ಆಗ ಪಿಯರ್ಸ್ ಸೋಪಿಗೆ ಸೀಮಿತ ಮಾರುಕಟ್ಟೆಯಿತ್ತು. ಶ್ರೀಮಂತ ವರ್ಗದವರು ಮಾತ್ರ ಪಿಯರ್ಸ್ ಬಳಸುವ ಪರಮೋಚ್ಚರು ಎಂಬ ಅಲಿಖಿತ ಕಟ್ಟಳೆಯಿತ್ತು. ಹಾಗೆ ನೋಡಿದರೆ ಪಿಯರ್ಸ್ ವ್ಯಾಪಾರಕ್ಕೆ ಹೇಳಿಕೊಳ್ಳುವಂಥ ಜಾಹೀರಾತಾಗಲೀ ಉಚಿತ ಕೊಡುಗೆಯಂಥ ಆಮಿಷಗಳಾಗಲೀ ಏನೂ ಬೇಡವಾಗಿತ್ತು. ಹೆಚ್ಚೆಂದರೆ ಯಾವಾಗಲೋ ಒಮ್ಮೆ, ಪ್ರತಿಯೊಂದು ಸೋಪ್ ಪೆಟ್ಟಿಗೆಯ ಮೇಲೆ ಆಂಡ್ರ್ಯೂ ಪಿಯರ್ಸ್‌ನ ಹಸ್ತಾಕ್ಷರದ ನಮೂನೆ ಮುದ್ರಿತವಾಗಿರುತ್ತಿತ್ತು. ಜನರಿಗೆ ಹಸ್ತಾಕ್ಷರವಿರುವ ಸೋಪ್ ಪೆಟ್ಟಿಗೆಗಳನ್ನು ಕೊಳ್ಳುವ ಕ್ರೇಜ್; ಫ್ರಾನ್ಸಿಸ್ ಪಿಯರ್ಸ್‌ಗೆ ಅದು ಮಾರ್ಕೆಟಿಂಗ್ ತಂತ್ರ. ಒಟ್ಟಿನಲ್ಲಿ ಶ್ರೀಮಂತವರ್ಗದ ನೆಚ್ಚಿನ ಸೋಪು ಎಂದು ಮಾರುಕಟ್ಟೆಯಲ್ಲಿ ಪಿಯರ್ಸ್ ಹೆಸರಾಗಿತ್ತು.

ಕ್ರಮೇಣ ಪಿಯರ್ಸ್ ಸೋಪಿಗೆ ಪ್ರತಿಸ್ಪರ್ಧಿ ಉತ್ಪನ್ನಗಳು ಬರತೊಡಗಿದವು. ಮಧ್ಯಮವರ್ಗದವರೂ ದುಬಾರಿ ಸೋಪ್ ಖರೀದಿಸುವ ತಾಕತ್ತುಳ್ಳವರಾದರು. ತನ್ನ ಉದ್ಯಮವನ್ನು ಬೆಳೆಸದಿದ್ದರೆ ಕೊಂಪೆ ಸೇರುತ್ತದೆಂದು ಫ್ರಾನ್ಸಿಸ್‌ಗೆ ಮನವರಿಕೆ ಆಗತೊಡಗಿತು. ಲಂಡನ್‌ನ ರಸೆಲ್‌ಸ್ಟ್ರೀಟ್‌ನಲ್ಲೊಂದು ಅಂಗಡಿ ಆರಂಭವಾಯಿತು. 1862ರ ಹೊತ್ತಿಗೆ ಸೋಪ್ ತಯಾರಿಕೆಯ ಹೊಸ ಘಟಕವನ್ನು ಐಲ್‌ವರ್ತ್ ಎಂಬಲ್ಲಿ ತೆರೆದ ಫ್ರಾನ್ಸಿಸ್, ಆ ಘಟಕಕ್ಕೆ ತನ್ನ ಮಗನನ್ನು ಉತ್ತರಾಧಿಕಾರಿಯಾಗಿಸಿದನು. ಅವನ ಹೆಸರು ಸಹ ಆಂಡ್ರ್ಯೂ ಎಂದೇ ಇತ್ತು. ಅಜ್ಜನ ಹೆಸರನ್ನೇ ಮೊಮ್ಮಗನಿಗೆ ಇಡುವುದು ನಮ್ಮಲ್ಲಿಯೂ ಇರುವ ಸಂಪ್ರದಾಯವೇ ತಾನೆ? ಅಂತೂ ಮಾರುಕಟ್ಟೆಯಲ್ಲಿ ಈಸಬೇಕು ಇದ್ದು ಜೈಸಬೇಕು... ಎಂಬಂತೆ ಫ್ರಾನ್ಸಿಸ್ ಸಾಕಷ್ಟು ಶ್ರಮಪಟ್ಟನು.

ಆ ನಿರ್ಣಾಯಕ ಘಟ್ಟದಲ್ಲಿ ರಂಗಪ್ರವೇಶ ಮಾಡಿದವನೇ ಥಾಮಸ್ ಜೆ. ಬೆರ್ರಾಟ್ ಎನ್ನುವ ಯುವಕ. ಆತ ಫ್ರಾನ್ಸಿಸ್ ಪಿಯರ್ಸ್‌ನ ಅಳಿಯ. ಅಲ್ಲ, ಮಗಳ ಗಂಡ! ಕುಶಾಗ್ರಮತಿ, ಛಲವಾದಿ, ಸಾಹಸಿಗ ಮತ್ತು ಸಂಪನ್ಮೂಲ ವ್ಯಕ್ತಿ. ಪಿಯರ್ಸ್‌ನ ಮಾರ್ಕೆಟಿಂಗ್ ಮತ್ತು ಸೇಲ್ಸ್ ವಿಭಾಗಗಳಿಗೆ ಹೊಸಚೈತನ್ಯದ ಬಿರುಗಾಳಿ ತಂದ ಬಿಸಿರಕ್ತದವನು. ಉತ್ಪನ್ನ ಕೊಂಚ ದುಬಾರಿಯಾದರೂ ಜಾಹೀರಾತುಗಳ ಮೂಲಕ ವ್ಯಾಪಕ ಪ್ರಚಾರ ಅವನ ಮೂಲಭೂತ ತತ್ತ್ವ. ಆ ಪ್ರಚಾರತಂತ್ರಗಳೋ ಒಂದೊಂದೂ ಅಭೂತಪೂರ್ವ ಮತ್ತು ಅನೂಹ್ಯ. ಅಲ್ಲಿಯವರೆಗೆ ಯಾರೂ ಮಾಡದಿದ್ದ ಪ್ರಯೋಗಗಳನ್ನು ಬೆರ್ರಾಟ್ ಮಾಡಿದ್ದನು. ಅಷ್ಟೊಂದು ರಿಸ್ಕ್ ತೆಗೆದುಕೊಂಡು ಜುಗಾರಿ ವ್ಯವಹಾರ ಮಾಡಬೇಕಾದ್ದನ್ನು ನೋಡಿ ಕೆಲವೊಮ್ಮೆ ಸ್ವತಃ ಫ್ರಾನ್ಸಿಸ್ಸನಿಗೇ ತಲೆಬಿಸಿ ಆಗುತ್ತಿತ್ತು. ಕೊನೆಗೂ ಅವನು ಪಿಯರ್ಸ್ ಉದ್ಯಮದಿಂದ ತನ್ನೆಲ್ಲ ಬಂಡವಾಳವನ್ನು ಹಿಂತೆಗೆದುಕೊಂಡು ನಾಲ್ಕು ಸಾವಿರ ಪೌಂಡುಗಳನ್ನಷ್ಟೇ ಮಗ ಆಂಡ್ರ್ಯೂ ಮತ್ತು ಅಳಿಯ ಬೆರ್ರಾಟ್‌ರಿಗೆ ಸಾಲರೂಪದಲ್ಲಿ ಉಳಿಸಿ ಉದ್ಯಮದ ನೊಗವನ್ನು ಅವರಿಬ್ಬರ ಹೆಗಲಿಗೆ ವರ್ಗಾಯಿಸಿ ನಿವೃತ್ತನಾದನು. ಅವರಿಬ್ಬರೂ ಸೇರಿ ಏನಾದರೂ ಮಾಡಿಕೊಳ್ಳಲಿ ಎಂದು ನಿಟ್ಟುಸಿರಿಟ್ಟನು.

ಬೆರ್ರಾಟ್ ತನ್ನ ಚಾಣಾಕ್ಷತನವನ್ನೆಲ್ಲ ಉಪಯೋಗಿಸಿ ಹೊಸಹೊಸ ಮಾರ್ಕೆಟಿಂಗ್ ವಿಧಾನಗಳನ್ನು ಅಳವಡಿಸಿಕೊಂಡನು. ಮಿಲಿಯಗಟ್ಟಲೆ ಫ್ರೆಂಚ್ ಸೆಂಟೈಮ್ ನಾಣ್ಯಗಳನ್ನು ತರಿಸಿ ಅವುಗಳ ಮೇಲೆ 'ಪಿಯರ್ಸ್' ಎಂಬ ಮುದ್ರೆಯೊತ್ತಿ ಚಲಾವಣೆಗೆ ತಂದನು (ಆಗ ಬ್ರಿಟನ್‌ನಲ್ಲಿ ಪೆನ್ನಿ ಮತ್ತು ಸೆಂಟೈಮ್ ನಾಣ್ಯಗಳು ಸಮಬೆಲೆಯವು ಆಗಿದ್ದವು. ನಾಣ್ಯಗಳ ಮೇಲೆ ಆ ರೀತಿ ಖಾಸಗಿ ಜಾಹೀರಾತು ಮುದ್ರಿಸುವುದಕ್ಕೆ ಕಾನೂನಿನ ಸಮ್ಮತಿಯಿತ್ತು). ಬ್ರಿಟನ್‌ನ ಪ್ರಸಿದ್ಧ ವೈದ್ಯರಿಂದ, ಚರ್ಮತಜ್ಞ ರಿಂದ, ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರಿಂದ ಪಿಯರ್ಸ್ ಸೋಪ್‌ನ ಶಿಫಾರಸು ಮಾಡಿಸಿದನು. ಪತ್ರಿಕೆಗಳಲ್ಲಿ ಜಾಹೀರಾತುಗಳು, ಕರಪತ್ರಗಳು, ಪೋಸ್ಟರ್‌ಗಳು- ಹೀಗೆ ಸಾಂಪ್ರದಾಯಿಕ ವಿಧಾನಗಳನ್ನೂ ಅನುಸರಿಸಿದನು. ಯುರೋಪ್‌ನ ಪ್ರಖ್ಯಾತ ನಟ-ನಟಿಯರು ಪಿಯರ್ಸ್ ಸೋಪಿನ ರೂಪದರ್ಶಿಗಳಾದರು. ಸಂಭಾವನೆಯ ದೊಡ್ಡ ಗಂಟು ಬರುತ್ತದಷ್ಟೇ ಅಲ್ಲ, ತಮಗೆ ಒಳ್ಳೆಯ ಪ್ರಚಾರವೂ ಸಿಗುತ್ತದೆ ಎಂದುಕೊಂಡು ಆ ರೂಪದರ್ಶಿಗಳೆಲ್ಲ ಪಿಯರ್ಸ್ ಸಾಬೂನಿಗೆ ಧಾರಾಳವಾಗಿ ರೂಪ ದರ್ಶಿಸಿದರು. ಆಗಿನ ಪ್ರಖ್ಯಾತ ಆಂಗ್ಲ ನಟಿ ಲಿಲ್ಲಿ ಲ್ಯಾಂಗ್‌ಟ್ರಿ 1882ರಲ್ಲಿ ಪಿಯರ್ಸ್ ಸೋಪಿನ ಪೋಸ್ಟರ್ ಗರ್ಲ್ ಆದಾಗ ಗೃಹಬಳಕೆಯ ಉತ್ಪನ್ನವೊಂದನ್ನು ಅನುಮೋದಿಸಿದ ಮೊತ್ತಮೊದಲ ಸೆಲೆಬ್ರಿಟಿ ಎಂಬ ಕೀರ್ತಿ ಆಕೆಯದಾಯಿತು. ಸೌಂದರ್ಯವರ್ಧಕ ಉತ್ಪನ್ನ ಎಂದು ಜನರಲ್ಲಿ ಭ್ರಮೆ ಹುಟ್ಟಿಸಲಿಕ್ಕೆ ಸೌಂದರ್ಯದ ಖನಿಗಳಿಗಿಂತ ಹೆಚ್ಚು ಸೂಕ್ತ ಬೇರೆ ಯಾರು ಬೇಕು!

ಯುರೋಪ್‌ನ ಮಾರುಕಟ್ಟೆಯಲ್ಲಿ ಬಿರುಗಾಳಿ ಎಬ್ಬಿಸಿದ ಬಳಿಕ ಅಮೆರಿಕದತ್ತ ದೃಷ್ಟಿಯಿಟ್ಟ ಬೆರ್ರಾಟ್, ತನ್ನ ಸೋಪಿನ ಶಿಫಾರಸಿಗೆ ಅಮೆರಿಕದಲ್ಲಿ ಆಗ ಅತ್ಯಂತ ಪ್ರಭಾವಿ ಧರ್ಮಗುರುವಾಗಿದ್ದ ಹೆನ್ರಿ ವಾರ್ಡ್ ಬೀಚರ್‌ನ ನೆರವು ಪಡೆದನು. ಆ ಪಾದ್ರಿಯಂತೂ 'ಶುಚಿತ್ವವು ದೈವಿಕತೆಗೆ ಸೋಪಾನ, ಮತ್ತು ಅದಕ್ಕೆ ಪಿಯರ್ಸ್ ಸುಲಭಸಾಧನ...' ಎಂದು ಕಮಾಂಡ್‌ಮೆಂಟ್ ಹೊರಡಿಸಿದನು! ಅದೇ Cleanliness is next to Godliness ಎನ್ನುವ ಮಹಾನ್ ಪದಪುಂಜ! 'ನ್ಯೂಯಾರ್ಕ್ ಹೆರಾಲ್ಡ್' ಪತ್ರಿಕೆಯ ಮುಖಪುಟದಲ್ಲಿ ಪಿಯರ್ಸ್‌ನ ಜಾಹೀರಾತು ಎಲ್ಲರ ಗಮನ ಸೆಳೆಯಿತು. ಮುಂದೆ 'ಟೈಮ್' ಮ್ಯಾಗಜಿನ್‌ನಲ್ಲಿ ಜನವಾರ್ತೆ ಪ್ರಕಟಿಸುವವರಿಗೆ ಉಚಿತ ಪಿಯರ್ಸ್ ಗಿಫ್ಟ್ ಹ್ಯಾಂಪರ್ ತಲುಪಿಸುವ ವ್ಯವಸ್ಥೆ ಮಾಡಿಸಿದನು ಬೆರ್ರಾಟ್. ಅಂತೂ ಪ್ರಚಾರಕಾರ್ಯದಲ್ಲಿ ಆತ ಯಾವ 'ಕಲ್ಲನ್ನೂ ತಿರುಗಿಸದೇ' ಇರಲಿಲ್ಲ. ಅಷ್ಟು ಸಾಲದೆಂಬಂತೆ, ಸರ್ ಜಾನ್ ಎವರೆಟ್ ಮಿಲಾಯಿಸ್ ಎಂಬ ಪ್ರಖ್ಯಾತ ಬ್ರಿಟಿಷ್ ಚಿತ್ರಕಾರನ ಕಲಾಕೃತಿ 'ಬಬಲ್ಸ್' (ಕಲಾವಿದನ ಮೊಮ್ಮಗು ಸಾಬೂನಿನ ಗುಳ್ಳೆಗಳನ್ನು ದೃಷ್ಟಿಸುತ್ತ ಕುಳಿತಿರುವ ಚಿತ್ರ)ವನ್ನು ಹೇಗೋ ಪುಸಲಾಯಿಸಿ ತಂದ ಬೆರ್ರಾಟ್ ಅದನ್ನು ಪಿಯರ್ಸ್ ಸೋಪಿನ ಜಾಹೀರಾತಿಗೆ ಉಪಯೋಗಿಸಿದನು. ಕಲಾಪ್ರಕಾರವೊಂದನ್ನು ಜಾಹೀರಾತಿಗೆ ಬಳಸಿದ್ದಕ್ಕೆ ಸಾಕಷ್ಟು ಛೀಮಾರಿಯನ್ನೂ ಹಾಕಿಸಿಕೊಂಡನು. ಹಾಗೆಯೇ ಪಿಯರ್ಸ್ ಸೋಪಿನ ಕೆಲವು ಜಾಹೀರಾತುಗಳು ವರ್ಣಭೇದ ನೀತಿಯನ್ನು ಢಾಳಾಗಿ ತೋರಿಸುತ್ತಿವೆ, ಜನಾಂಗೀಯ ನಿಂದನೆ ಮಾಡುತ್ತಿವೆ ಎಂದು ಕೂಡ ಗುಲ್ಲೆದ್ದಿತ್ತು. ಒಂದು ಜಾಹೀರಾತಿನಲ್ಲಂತೂ ಸ್ನಾನದ ತೊಟ್ಟಿಯಲ್ಲಿ ಕಪ್ಪು ಬಣ್ಣದ ಮಗು ಪಿಯರ್ಸ್ ಸಾಬೂನು ಹಚ್ಚಿಕೊಂಡು ಜಳಕ ಮಾಡಿದಾಗ ಬಿಳಿ ಬಣ್ಣದ್ದಾಗುವ ಮ್ಯಾಜಿಕ್ ತೋರಿಸಲಾಗಿತ್ತು. ಈಗಿನ ಕಾಲದಲ್ಲಾದರೆ ಅಂತಹ ಜಾಹೀರಾತು ಕಾಣಿಸಿಕೊಳ್ಳಲಿಕ್ಕೇ ಸಾಧ್ಯವಿಲ್ಲ, ಆಗಲೂ ಅಷ್ಟಿಷ್ಟು ಪ್ರತಿರೋಧ ಇದ್ದೇ ಇರುತ್ತಿತ್ತೇನೋ. ಆದರೆ ಯಾವುದಕ್ಕೂ ಜಗ್ಗದ ಆ 'ಅಸಾಧ್ಯ ಅಳಿಯ' ಅದ್ಭುತ ಛಲವಾದಿಯಾಗಿ ವಿಶ್ವದ ಪ್ರತಿಯೊಂದು ದೇಶದಲ್ಲೂ ಪಿಯರ್ಸ್ ಸಾಬೂನನ್ನು ಪರಿಚಯಿಸಿದನು. 'ಮಿಸ್ ಪಿಯರ್ಸ್' ಸ್ಪರ್ಧೆಗಳನ್ನು ಏರ್ಪಡಿಸಿದನು. 19ನೆಯ ಶತಮಾನದ ಕೊನೆಯ ವರ್ಷಗಳಲ್ಲಿ 'ಪಿಯರ್ಸ್ ವಾರ್ಷಿಕ ಸಂಚಿಕೆ' ಎಂಬ ಆಕರ್ಷಕ ಪುಸ್ತಕವನ್ನೂ ಪ್ರಕಟಿಸಿದನು. 1914ರಲ್ಲಿ ಬೆರ್ರಾಟ್ ಅಸುನೀಗಿದಾಗ ಪತ್ರಿಕೆಗಳು, ಜಾಹೀರಾತು ಕಂಪನಿಗಳು ಭಾವಪೂರ್ಣ ಕಂಬನಿಗರೆದವು. ನೀವು ನಂಬುತ್ತೀರೋ ಇಲ್ಲವೋ ಪಿಯರ್ಸ್ ಸೋಪಿನ ಹಳೆಯ ಜಾಹೀರಾತುಗಳ ಪೇಂಟಿಂಗ್‌ಗಳಿಗೆ ಈಗಲೂ ಬೇಡಿಕೆ ಇದೆ! ಅವುಗಳನ್ನು ಕಲಾಕೃತಿಗಳಂತೆ, ಹಳೆಯ ದಿನಗಳ ಮಧುರಸ್ಮೃತಿಗಳಂತೆ ಜತನದಿಂದ ಇಟ್ಟುಕೊಳ್ಳುವವರಿದ್ದಾರೆ. ಗೂಗಲ್‌ನಲ್ಲಿ ಹುಡುಕಿ ನೋಡಿದರೆ ಸುಮಾರು 1920ರಲ್ಲಿ ಭಾರತದ ಪತ್ರಿಕೆಗಳಲ್ಲಿ ಪ್ರಕಟವಾದ ಒಂದು ಜಾಹೀರಾತು ಕೂಡ ಸಿಗುತ್ತದೆ. ಸರೋವರದಲ್ಲಿರುವ ಒಂದು ಸುಂದರ ಕಮಲದಲ್ಲಿ ಲಕ್ಷ್ಮಿಯಂತೆ ಆಸೀನರಾದ ತಾಯಿ-ಮಗು ಜೋಡಿ. Pears Soap- Pure As The Lotus ಎಂದು ಅಕ್ಷರಗಳಲ್ಲಿ ಕೆಳಗೆ ಅಚ್ಚಾಗಿರುವುದು. ಗ್ರಾಹಕರು ಮನಸೋಲುವಂತೆ ಮಾಡುವುದು ಹೇಗೆಂಬುದಕ್ಕೆ ಮಾದರಿ.

ಆ ದೃಷ್ಟಿಯಿಂದ ನೋಡಿದರೆ ಈಗಿನ ಜಾಹೀರಾತು ತಂತ್ರಗಳೆಲ್ಲ ಒಂದಲ್ಲ ಒಂದು ವಿಧದಲ್ಲಿ ಬೆರ್ರಾಟ್‌ನ ಯೋಜನೆಗಳದೇ ಪ್ರತಿರೂಪಗಳು. ಮುದ್ದಾದ ಮಕ್ಕಳನ್ನು, ಪ್ರಾಣಿಗಳನ್ನು, ಹೂವುಗಳನ್ನು, ಹೂವಿನಂಥ ಸುಂದರಿಯರನ್ನು ಜಾಹೀರಾತುಗಳಲ್ಲಿ ಬಳಸುವ ಕ್ರಮ ಶುರುವಾದದ್ದು ಬೆರ್ರಾಟ್‌ನಿಂದಲೇ. ಜಾಹೀರಾತಿನ ಚಿತ್ರಗಳು ಕಾಲಕಾಲಕ್ಕೆ ಬದಲಾಗುತ್ತಿದ್ದರೂ Matchless for the complexion, Good morning! Have you used Pears Soap? ಮುಂತಾದ ಸರಳ ಆದರೆ ತತ್‌ಕ್ಷಣವೇ ಮನಸ್ಸಿನಲ್ಲಿ ಅಚ್ಚಾಗುವ ಜಿಂಗಲ್‌ಗಳು, ಸ್ಲೋಗನ್‌ಗಳು ಪಿಯರ್ಸ್ ಸೋಪನ್ನು ಹೊಸ ಸಹಸ್ರಮಾನಕ್ಕೂ ಕರೆದುಕೊಂಡುಬಂದಿವೆ. 20ನೆಯ ಶತಮಾನ ಆರಂಭವಾದಾಗಿಂದ ಪಿಯರ್ಸ್ ಸೋಪ್ ಉತ್ಪಾದನೆ ಮತ್ತು ವಿತರಣೆಯ ಹಕ್ಕು ಯುನಿಲಿವರ್ (ಭಾರತದಲ್ಲಿ ಹಿಂದುಸ್ತಾನ್ ಯುನಿಲಿವರ್) ಕಂಪನಿಯ ಪಾಲಾಗಿದೆ. ಜಾಹೀರಾತುಗಳ ವಿಷಯದಲ್ಲಿ ಈಗಲೂ ಅದು ಬೆರ್ರಾಟ್‌ನ ಹೆಜ್ಜೆಗಳನ್ನೇ ಅನುಸರಿಸಿದೆ. ಪಿಯರ್ಸ್ ಸಾಬೂನಿನ ಘಮ ಎಲ್ಲೆಡೆಗೂ ಪಸರಿಸಿದೆ. ಆರಂಭದಲ್ಲಿದ್ದ ಸಹಜ ಕಂದು ಬಣ್ಣದಲ್ಲಷ್ಟೇ ಅಲ್ಲದೇ ಈಗ ಪುದೀನಾ ಸ್ವಾದವುಳ್ಳ ನೀಲಿ ಬಣ್ಣ, ನಿಂಬೆಯ ಸ್ವಾದವುಳ್ಳ ಹಸುರು ಬಣ್ಣ ಮುಂತಾಗಿ ವಿವಿಧ ಬಣ್ಣಗಳಲ್ಲಿ ಪಿಯರ್ಸ್ ಸೋಪ್ ಸಿಗುತ್ತದೆ. ಅವು ಹೇಗಿರುತ್ತವೆಂದು ನೋಡಲಿಕ್ಕೆ ನಾನೂ ಒಂದೆರಡು ಸರ್ತಿ ತಂದು ಬಳಸಿದ್ದಿದೆ. ಚೆನ್ನಾಗಿಲ್ಲವೆಂದು ತಿರಸ್ಕರಿಸಿದ್ದಿದೆ. ಈಗ ಕಂದು ಬಣ್ಣದ್ದಕ್ಕೂ ಮೊದಲಿದ್ದ ಖದರಿಲ್ಲ. ಹಳೇ ಕಾಲದ ಒರಿಜಿನಲ್ ಕಂದು ಬಣ್ಣದ ಪಿಯರ್ಸ್ ಸೋಪ್‌ನ ಪ್ಯಾಕೇಜಿಂಗ್, ಪಾರದರ್ಶಕವಾದ ಆ ಬಿಲ್ಲೆಯ ಆಕಾರ, ಅದು ಸೂಸುತ್ತಿದ್ದ ಪರಿಮಳ, ಒದ್ದೆ ಮೈಗೆ ಉಜ್ಜಿಕೊಂಡಾಗ ಬರುತ್ತಿದ್ದ ನೊರೆ, ಮತ್ತು ಆ ಒಂದು ವಿಶೇಷ ಅನುಭವವು ಹೊರಡಿಸುವ ನೆನಪುಗಳ ಮೆರವಣಿಗೆ... ಆಹಾ! ಅದಕ್ಕೆ ಬೇರೆ ಯಾವುದೂ ಸಾಟಿಯಾಗುವುದು ಬಿಡಿ, ಹತ್ತಿರವೂ ಸುಳಿಯಲಾರದು.

ರಕ್ಷಣಾ ವಲಯದಲ್ಲಿ ಆತ್ಮನಿರ್ಭರದ ಅನಿವಾರ್ಯತೆ



ವಿದ್ಯಮಾನ

ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಭಾರತ ಎದುರಿಸಿದ ವಿವಿಧ ಯುದ್ಧದ ಸಂದರ್ಭಗಳಲ್ಲಿ, ಭಾರತೀಯ ಸೇನೆಯ ಶಸ್ತ್ರಾಸ್ತ್ರಗಳ ತುರ್ತು ಅಗತ್ಯಗಳನ್ನು ಪೂರೈಸಲು ಕೆಲವು ದೇಶಗಳು ನಿರಾಕರಿಸಿದ್ದನ್ನೂ ಮತ್ತು ಅದರಿಂದಾಗಿ ಯುದ್ಧದಲ್ಲಿ ನಮ್ಮ ಸೇನೆ ಹಿನ್ನಡೆ ಅನುಭವಿಸುವಂತಾಗಿದ್ದನ್ನೂ ಮಾಜಿ ಸೇನಾ ಮುಖ್ಯಸ್ಥ ಜನರಲ್ ವಿ.ಪಿ.ಮಲಿಕ್ ಅವರು ಪತ್ರಿಕೆಯೊಂದರ ಸಂದರ್ಶನದಲ್ಲಿ ನೆನಪಿಸಿದ್ದರು. 1965ರ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲಿ, ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳ ಸಮ್ಮುಖದಲ್ಲಿ ರಕ್ಷಣಾ ಉಪಕರಣಗಳಿಗಾಗಿ ಭಾರತ ಬೇಡಿಕೆ ಇಟ್ಟಾಗ, 'ನಿಮ್ಮಿರ್ವರ ನಡುವಿನ ಸಂಘರ್ಷವನ್ನು ಕೊನೆಗೊಳಿಸುವುದು ನಮ್ಮ ಉದ್ದೇಶವಾಗಿರುವುದರಿಂದ, ನಿಮಗೆ ಶಸ್ತ್ರಾಸ್ತ್ರಗಳ ಸರಬರಾಜನ್ನು ನಿರಾಕರಿಸುತ್ತಿದ್ದೇವೆ' ಎಂದು ಅವು ನಮಗೆ ಷಾಕ್ ಕೊಟ್ಟಿದ್ದವು. ಅಂತೆಯೇ, 1971ರ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲಿಯೂ ಅಮೆರಿಕವು ಮಿಲಿಟರಿ ಮತ್ತು ರಾಜತಾಂತ್ರಿಕವಾಗಿ ಭಾರತಕ್ಕಿಂತ ಪಾಕಿಸ್ತಾನದ ಕಡೆಗೇ ಹೆಚ್ಚು ಒಲವು ತೋರಿತ್ತು ಹಾಗೂ ಪರೋಕ್ಷವಾಗಿ ಪಾಕಿಸ್ತಾನಕ್ಕೇ ಅಧಿಕ ಸಹಾಯ ಮಾಡಿತ್ತು ಎನ್ನುವುದು ನಮಗೆ ತಿಳಿದೇ ಇದೆ.

ಇನ್ನು, ನಮಗೆಲ್ಲಾ ನೆನಪಿರುವ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ವಿವಾದಿತ ಬೋಫೋರ್ಸ್ 'ಗನ್'ಗಳನ್ನು ಹೆಚ್ಚಾಗಿ ಬಳಸಲಾಗಿತ್ತು ಮತ್ತು ಉತ್ಪಾದಕರಿಂದ ಸರಿಯಾಗಿ ಪೂರೈಕೆಯಾಗದಿದ್ದುದರಿಂದ ಯುದ್ಧದ ಒಂದು ಹಂತದಲ್ಲಿ ಭಾರತವು ಅದಕ್ಕೆ ಬಳಸುವ ಮದ್ದುಗುಂಡುಗಳ ಕೊರತೆಯನ್ನು ಅನುಭವಿಸುವಂತಾಗಿತ್ತು. ಆಗ ಒಂದು ಲಕ್ಷ ಶೆಲ್‌ಗಳನ್ನು ತುರ್ತಾಗಿ ಪೂರೈಸುವಂತೆ ಭಾರತದ ಫೋರ್ಜಿಂಗ್ ಉದ್ದಿಮೆಗಳ ದೈತ್ಯ, ಕಲ್ಯಾಣಿ ಸಮೂಹ ಸಂಸ್ಥೆಗಳ 'ಭಾರತ್ ಫೋರ್ಜ್' ಸಂಸ್ಥೆಗೆ ರಕ್ಷಣಾ ಸಚಿವಾಲಯದಿಂದ ಬೇಡಿಕೆ ಸಲ್ಲಿಸಲಾಯಿತು. ದೇಶದ ಈ ಕರೆಯನ್ನು ಸವಾಲಾಗಿ ಸ್ವೀಕರಿಸಿದ ಪದ್ಮಭೂಷಣ ಬಾಬಾ ಎನ್.ಕಲ್ಯಾಣಿಯವರ ನೇತೃತ್ವದ ಈ ಸಂಸ್ಥೆ ಅಗತ್ಯ ಶೆಲ್‌ಗಳನ್ನು ಅತ್ಯಂತ ಕಡಿಮೆ ಸಮಯದಲ್ಲಿ ಸೇನೆಗೆ ಪೂರೈಸಲು ಯಶಸ್ವಿಯಾಗಿದ್ದನ್ನು ಹಾಗೂ ಅದು ಯುದ್ಧದಲ್ಲಿ ಸೇನೆಗೆ ಹೆಚ್ಚಿನ ಬಲ ತುಂಬುವಂತಾಗಿದ್ದನ್ನು ನಾವು ಇಲ್ಲಿ ಸ್ಮರಿಸಬಹುದು. ಮೊನ್ನೆ ಮೊನ್ನೆ ನಡೆದ ಕಾರ್ಗಿಲ್ ದಿವಸದ ಕಾರ್ಯಕ್ರಮದಲ್ಲಿ, ಈ ಸಕಾಲಿಕ ನೆರವನ್ನು ಸ್ಮರಿಸಿಕೊಂಡು ಬಾಬಾ ಎನ್.ಕಲ್ಯಾಣಿಯವರನ್ನು ಸೇನೆ ಸನ್ಮಾನಿಸಿತ್ತು.

ಭಾರತೀಯ ಮಿಲಿಟರಿ ಮತ್ತು ರಾಜಕೀಯ ಸಂಬಂಧಿತ ನಿರ್ಧಾರ ತೆಗೆದುಕೊಳ್ಳುವವರಿಗೆ ಬಿಕ್ಕಟ್ಟಿನ ಸಮಯದಲ್ಲಿ ಆದ ಐತಿಹಾಸಿಕ ಕಹಿ ಅನುಭವಗಳು, ರಕ್ಷಣಾ ಖರೀದಿ ಮತ್ತು ಆಧುನೀಕರಣದತ್ತ ತೀವ್ರಗತಿಯಲ್ಲಿ ತೊಡಗುವಂತೆ ಪ್ರೇರೇಪಿಸಿದವು ಎನ್ನಬಹುದು. ಸ್ವಾತಂತ್ರ್ಯ ದೊರೆತ ನಂತರದ ಅನೇಕ ವರ್ಷಗಳವರೆಗೆ ಭಾರತವು ತನ್ನ ರಕ್ಷಣಾ ಉಪಕರಣಗಳು ಮತ್ತು ಶಸ್ತ್ರಾಸ್ತ್ರಗಳಿಗೆ ಮಾತ್ರವಲ್ಲದೆ, ಅವುಗಳ ಬಿಡಿಭಾಗಗಳಿಗೂ ವಿದೇಶಿ ಪೂರೈಕೆದಾರರನ್ನೇ ಅವಲಂಬಿಸಿತ್ತು. ಬೋಫೋರ್ಸ್‌ನಂಥ ದೊಡ್ಡ ಮೊತ್ತದ ಶಸ್ತ್ರಾಸ್ತ್ರ ಖರೀದಿಗಾಗಿ ಪಾರದರ್ಶಕವಲ್ಲದ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಕಮಿಷನ್ ಪಡೆದ ಹಗರಣಗಳೂ ನಡೆಯುತ್ತಿದ್ದವು. ಪಾಕಿಸ್ತಾನದೊಂದಿಗಿನ ಎರಡು ಯುದ್ಧಗಳು ಮತ್ತು ಚೀನಾದೊಂದಿಗಿನ ಗಡಿ ಸಂಘರ್ಷದ ನಂತರ ಭಾರತದಲ್ಲಿ ರಕ್ಷಣಾ-ಕೈಗಾರಿಕಾ ಸಾಮರ್ಥ್ಯವನ್ನು ಹೆಚ್ಚಿಸುವ ಅವಶ್ಯಕತೆಯ ಕುರಿತು ದೇಶದೊಳಗೆ ಗಂಭೀರ ಚಿಂತನೆಗಳು ಪ್ರಾರಂಭವಾದವು. ಅದರಲ್ಲೂ, 2014ರಲ್ಲಿ 'ಮೇಕ್ ಇನ್ ಇಂಡಿಯಾ' ಘೋಷಣೆ ಆದಾಗಿನಿಂದ ಭಾರತ ಸರಕಾರವು ಈ ಕುರಿತು ಹಲವಾರು ಉಪಕ್ರಮಗಳನ್ನು ಘೋಷಿಸಿತು ಮತ್ತು ರಕ್ಷಣಾ ಉಪಕರಣಗಳ ದೇಶೀಯ ವಿನ್ಯಾಸ, ಅಭಿವೃದ್ಧಿ ಹಾಗೂ ಉತ್ಪಾದನೆಯನ್ನು ಉತ್ತೇಜಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲು ಪ್ರಾರಂಭಿಸಿತು.

ಈ ಉಪಕ್ರಮಗಳಲ್ಲಿ ಕೈಗಾರಿಕಾ ಪರವಾನಗಿಯನ್ನು ಸರಳೀಕರಿಸುವುದು, ರಕ್ಷಣಾ ವಲಯದಲ್ಲಿ ಶೇ.74ರಷ್ಟು ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ನೀಡುವುದು ಮತ್ತು ರಕ್ಷಣಾ ವಲಯದಲ್ಲಿ ಶ್ರೇಷ್ಠತೆ ಸಾಧಿಸಲು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಸೇರಿವೆ. ರಕ್ಷಣಾ ಖರೀದಿಯಲ್ಲಿ ಆತ್ಮನಿರ್ಭರತೆ ಅಥವಾ ಸ್ವಾವಲಂಬನೆಯ ಕಡೆಗೆ ಭಾರತ ಸರಕಾರವು ಹೆಚ್ಚಿನ ಒತ್ತು ನೀಡಿದ ಪರಿಣಾಮವಾಗಿ, ಭಾರತದ ರಕ್ಷಣಾ ಆಮದುಗಳು 2013-2017 ಮತ್ತು 2018-2022ರ ವರ್ಷಗಳ ನಡುವೆ ಹೋಲಿಸಿದಾಗ ಶೇ.11ರಷ್ಟು ಕಡಿಮೆಯಾಗಲು ಸಾಧ್ಯವಾಯಿತು. ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರವು 2014ರಲ್ಲಿ ಪ್ರಥಮ ಬಾರಿಗೆ ಅಧಿಕಾರ ವಹಿಸಿಕೊಂಡಾಗಿನಿಂದ ಭಾರತೀಯ ಶಸ್ತ್ರಾಸ್ತ್ರ ಉದ್ಯಮವನ್ನು ಬಲಪಡಿಸಲು ಮತ್ತು ವಿಶ್ವದ ಅತಿ ದೊಡ್ಡ ಶಸ್ತ್ರಾಸ್ತ್ರ ಆಮದುದಾರ ಎನ್ನುವ ಹಣೆಪಟ್ಟಿ ಕಳಚಿಕೊಂಡು ರಕ್ಷಣಾ ಉಪಕರಣಗಳ ಪ್ರಮುಖ ರಫ್ತುದಾರ ದೇಶ ಎನಿಸಿಕೊಳ್ಳಲು ಭಾರತವು ದೃಢವಾದ ಹೆಜ್ಜೆಗಳನ್ನು ಇಡುತ್ತಿದೆ. ಈ ಎಲ್ಲಾ ಸುಧಾರಣಾ ಕ್ರಮಗಳು ನಿರೀಕ್ಷಿತ ಸಮಯದೊಳಗೆ ಪೂರ್ತಿಯಾದರೆ, 2025ರ ವೇಳೆಗೆ 350 ಬಿಲಿಯನ್ ರುಪಾಯಿ ಮೌಲ್ಯದ ರಫ್ತು ಸೇರಿದಂತೆ 1,750 ಬಿಲಿಯನ್ ರುಪಾಯಿಗಳಷ್ಟು ಮೌಲ್ಯದ ಉತ್ಪಾದನಾ ಗುರಿಯನ್ನು ತಲುಪಲು ನಮಗೆ ಸಾಧ್ಯ ವಾಗಬಹುದು ಎಂದು ಅಂದಾಜಿಸಲಾಗಿದೆ.

ಸಾರ್ವಜನಿಕ ವಲಯದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್, ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್, ಭಾರತ್ ಡೈನಮಿಕ್ಸ್ ಲಿಮಿಟೆಡ್, ಮಿಶ್ರಧಾತು ನಿಗಮ್ ಲಿಮಿಟೆಡ್ ಮತ್ತು ಬಿಇಎಂಎಲ್ ಮುಂತಾದ ಸಂಸ್ಥೆಗಳು ಐತಿಹಾಸಿಕವಾಗಿ ಭಾರತೀಯ ಮಿಲಿಟರಿ ಸಾಮಗ್ರಿಗಳ ಉತ್ಪಾದನೆ ಮಾಡುವಲ್ಲಿ ಮೊದಲಿನಿಂದಲೂ ಮುಂಚೂಣಿಯಲ್ಲಿವೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಹೊಸ ಹೊಸ ಖಾಸಗಿ ಸಂಸ್ಥೆಗಳೂ ನಿಧಾನವಾಗಿ ಈ ವಲಯದಲ್ಲಿ ನೆಲೆಗೊಳ್ಳುತ್ತಿರು ವುದು ಒಳ್ಳೆಯ ಬೆಳವಣಿಗೆ ಯಾಗಿದೆ. 2001ರಲ್ಲಿ ರಕ್ಷಣಾ ಉದ್ಯಮವು ಉತ್ಪಾದನೆಗೆ ಮತ್ತು ಸರಬರಾಜಿಗೆ ಸಣ್ಣದಾಗಿ ತನ್ನನ್ನು ತಾನು ತೆರೆದು ಕೊಳ್ಳಲು ಅವಕಾಶವಾಗುವವರೆಗೂ ಭಾರತದಲ್ಲಿ ಖಾಸಗಿ ವಲಯವನ್ನು ರಕ್ಷಣಾ ಉತ್ಪಾದನೆ ಯಿಂದ ದೂರವೇ ಇಡಲಾಗಿತ್ತು. ಆದರೆ, 2014ರ ನಂತರ ಭಾರತದ ಖಾಸಗಿ ವಲಯವು ಮಿಲಿಟರಿ ಸರಬರಾಜಿನಲ್ಲಿ ಗಮನಾರ್ಹ ಬೆಳವಣಿಗೆಯನ್ನು ಕಾಣಲು ಪ್ರಾರಂಭಿಸಿತು ಎಂದು ಹೇಳಬಹುದು. ಈಗ, ಟಾಟಾ ಗ್ರೂಪ್, ಎಲ್ ಆ್ಯಂಡ್ ಟಿ, ಮಹೀಂದ್ರಾ, ಮತ್ತು ಭಾರತ್ ಫೋರ್ಜ್‌ನಂಥ ಖಾಸಗಿ ಸಂಸ್ಥೆಗಳು ಒಂದಲ್ಲಾ ಒಂದು ರೀತಿಯ ರಕ್ಷಣಾ ಉತ್ಪಾದನೆಯಲ್ಲಿ ದೊಡ್ಡ ಮಟ್ಟದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿವೆ. ಖಾಸಗಿ ವಲಯವು ತಯಾರಿಸುತ್ತಿರುವ ಕೆಲವು ಪ್ರಮುಖ ರಕ್ಷಣಾ ಸಾಧನಗಳಲ್ಲಿ ಸಾರಿಗೆ ವಿಮಾನಗಳು, ಫಿರಂಗಿ-ಬಂದೂಕುಗಳು ಮತ್ತು ರಾಕೆಟ್ ಲಾಂಚರ್‌ಗಳು ಸೇರಿವೆ. ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ದೊಡ್ಡ ಖಾಸಗಿ ಕಂಪನಿಗಳು ಭಾರತದ ರಕ್ಷಣಾ ಉತ್ಪಾದನೆಯ ಹೆಚ್ಚಿನ ಹೊರೆಯನ್ನು ಹೊರುತ್ತಿದ್ದರೂ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು (ಎಂಎಸ್‌ಎಂಇಗಳು) ಮತ್ತು ಸ್ಟಾರ್ಟ್-ಅಪ್‌ಗಳು ಸಹ ದೊಡ್ಡ ಸಂಸ್ಥೆಗಳ ಈ ಪ್ರಯತ್ನಕ್ಕೆ ಪೂರಕವಾಗಿ ನಿಂತಿವೆ. ಈಗ ಸುಮಾರು 14,000ಕ್ಕೂ ಹೆಚ್ಚು ಎಂಎಸ್‌ಎಂಇಗಳು ಮತ್ತು 329 ಸ್ಟಾರ್ಟ್ - ಅಪ್‌ಗಳು ಭಾರತದಲ್ಲಿ ರಕ್ಷಣಾ ಉತ್ಪಾದನೆಯ ಪ್ರಕ್ರಿಯೆಯಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ತೊಡಗಿಸಿಕೊಂಡಿವೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು.

ರಕ್ಷಣಾ ಉತ್ಪಾದನೆಯ ಮೊತ್ತವು 2022-23ರಲ್ಲಿ 1,087 ಬಿಲಿಯನ್ ರುಪಾಯಿಗಳನ್ನು ತಲುಪಿರುವುದನ್ನು ಗಮನಿಸಿದರೆ, ಸರಕಾರದ ಹಲವಾರು ಸುಧಾರಣಾ ಕ್ರಮಗಳ ಕಾರಣದಿಂದಾಗಿ ರಕ್ಷಣಾ ವಲಯದ ಉದ್ಯಮಗಳು ಗಣನೀಯ ಪ್ರಗತಿ ಸಾಧಿಸುತ್ತಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ದೇಶೀಯ ಉದ್ಯಮಗಳ ನಿರಂತರ ಬೆಳವಣಿಗೆಯ ಸಾಮರ್ಥ್ಯದಿಂದ ಉತ್ತೇಜಿತವಾಗಿರುವ ರಕ್ಷಣಾ ಇಲಾಖೆಯು, ಖಾಸಗಿ ಮತ್ತು ಸಾರ್ವಜನಿಕ ಉದ್ಯಮಕ್ಕೆ ಈಗೀಗ ಸಂಕೀರ್ಣ ಯೋಜನೆಗಳನ್ನು ಹೆಚ್ಚಾಗಿ ನೀಡಲು ಪ್ರಾರಂಭಿಸಿದೆ. ಉದಾಹರಣೆಗೆ, ಮಧ್ಯಮ ಶಕ್ತಿಯ ರಾಡಾರ್ ಮತ್ತು ಸಮಗ್ರ ಇಲೆಕ್ಟ್ರಾನಿಕ್ ಯುದ್ಧ ವ್ಯವಸ್ಥೆ (ಭಾರತ್ ಇಲೆಕ್ಟ್ರಾನಿಕ್ಸ್), ಮೂಲ ತರಬೇತಿ ವಿಮಾನಗಳು ಮತ್ತು ಡಾರ್ನಿಯರ್-228 ವಿಮಾನ (ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್), ಕೇಡರ್ ತರಬೇತಿ ಹಡಗುಗಳು (ಎಲ್ ಆ್ಯಂಡ್ ಟಿ), ಸುಧಾರಿತ 'ಆಕಾಶ್' ಶಸ್ತ್ರಾಸ್ತ್ರ ವ್ಯವಸ್ಥೆ (ಭಾರತ್ ಡೈನಮಿಕ್ಸ್ ಲಿಮಿಟೆಡ್), ಕಡಲಾಚೆಯ ಗಸ್ತು ಹಡಗುಗಳು ಮತ್ತು ಕ್ಷಿಪಣಿ ಹಡಗುಗಳು (ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ಹಾಗೂ ಗಾರ್ಡನ್ ರೀಚ್ ಹಡಗು ನಿರ್ಮಾಣಗಾರರು ಮತ್ತು ಎಂಜಿನಿಯರ್‌ಗಳು) ಇತ್ಯಾದಿ.

ರಕ್ಷಣಾ ಉತ್ಪಾದನೆಯ ಸಾಂಸ್ಥಿಕ ಕಾರ್ಯವಿಧಾನ, ಖಾಸಗಿ ವಲಯವು ತನ್ನ ಉಪಕರಣಗಳನ್ನು ಪರೀಕ್ಷಿಸುವುದಕ್ಕೆ ಸರಕಾರಿ ಸೌಲಭ್ಯಗಳನ್ನು ಬಳಸಲು ಅವಕಾಶ ಮಾಡಿಕೊಟ್ಟಿರುವುದು, ಎರಡು ರಕ್ಷಣಾ-ಕೈಗಾರಿಕಾ ಕಾರಿಡಾರ್‌ಗಳನ್ನು ಪ್ರಾರಂಭಿಸಿರುವುದು, ಹೂಡಿಕೆದಾರರ ಸಮಸ್ಯೆಗಳನ್ನು ಪರಿಹರಿಸಲು ಏಕಗವಾಕ್ಷಿ ಪದ್ಧತಿಯನ್ನು ಪರಿಚಯಿಸಿರುವುದು ಮತ್ತು 2019ರಲ್ಲಿ ರಕ್ಷಣಾ ಸಿಬ್ಬಂದಿ ಮುಖ್ಯಸ್ಥರ (ಸಿಡಿಎಸ್) ಹುದ್ದೆಯನ್ನು ರಚಿಸಿರುವುದು ಇವೆಲ್ಲವನ್ನು ಸ್ವಾತಂತ್ರ್ಯಾನಂತರದ ಅತ್ಯಂತ ಮಹತ್ವದ ಹಾಗೂ ನಿರ್ಣಾಯಕ ರಕ್ಷಣಾ ಸುಧಾರಣೆಗಳು ಎಂದು ವಿಶ್ಲೇಷಿಸಲಾಗುತ್ತದೆ.

ಸರಕಾರದ ಈ ಎಲ್ಲಾ ಸುಧಾರಣೆಗಳ ಸಕಾರಾತ್ಮಕ ಪರಿಣಾಮ ಗಳು ರಕ್ಷಣಾ ಉತ್ಪನ್ನಗಳ ಆಮದಿನಲ್ಲಷ್ಟೇ ಅಲ್ಲದೆ ಈಗೀಗ ರಫ್ತುಗಳಲ್ಲಿಯೂ ಗೋಚರಿಸಲಾರಂಭಿಸಿದೆ. ಇದು 2023-24ರಲ್ಲಿ ಸಾರ್ವಕಾಲಿಕ ಗರಿಷ್ಠ ಮೊತ್ತವಾದ 211 ಬಿಲಿಯನ್ ರುಪಾಯಿಗಳನ್ನು ತಲುಪಿದೆ. 2014-15ರಿಂದ 2023-24ರವರೆಗೆ ರಕ್ಷಣಾ ಸಾಮಗ್ರಿಗಳ ರಫ್ತು ಪ್ರಮಾಣವು 21 ಪಟ್ಟು ಹೆಚ್ಚಳವನ್ನು ಕಂಡಿದೆ ಎಂದು ದಾಖಲೆಗಳು ಹೇಳುತ್ತವೆ. ಇಂದು ಇಡೀ ಜಗತ್ತಿಗೆ ಶಸ್ತ್ರಾಸ್ತ್ರ ಪೂರೈಸುವ ನಾಲ್ಕು ಅಥವಾ ಐದು ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ಭಾರತವೂ ನಿಂತಿದೆ ಮತ್ತು 85ಕ್ಕೂ ಹೆಚ್ಚು ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು, ಮದ್ದು-ಗುಂಡುಗಳನ್ನು ರಫ್ತು ಮಾಡುತ್ತಿದೆ ಎಂಬುದನ್ನು ತಿಳಿದಾಗ ನಿಜಕ್ಕೂ ಹೆಮ್ಮೆಯಾಗುತ್ತದೆ.

ಭಾರತದಿಂದ ರಫ್ತು ಮಾಡಲಾಗುತ್ತಿರುವ ಪ್ರಮುಖ ರಕ್ಷಣಾ ಸಾಧನಗಳಲ್ಲಿ ಡಾರ್ನಿಯರ್ 228 ವಿಮಾನ, 155 ಎಂಎಂ ಸುಧಾರಿತ ಟೋವ್ಡ್ ಫಿರಂಗಿ-ಬಂದೂಕುಗಳು, ಬ್ರಹ್ಮೋಸ್ ಕ್ಷಿಪಣಿಗಳು, ಆಕಾಶ್ ಕ್ಷಿಪಣಿ ವ್ಯವಸ್ಥೆ, ರಾಡಾರ್‌ಗಳು, ಸಿಮ್ಯುಲೇಟರ್‌ಗಳು, ಗಣಿ ಸಂರಕ್ಷಿತ ವಾಹನಗಳು, ಶಸ್ತ್ರಸಜ್ಜಿತ ವಾಹನಗಳು, ರಾಕೆಟ್‌ಗಳು ಮತ್ತು ಲಾಂಚರ್‌ಗಳು, ಮದ್ದು-ಗುಂಡುಗಳು, ಥರ್ಮಲ್ ಇಮೇಜರುಗಳು, ಬಾಡಿ ಆರ್ಮರ್‌ಗಳು ಮತ್ತು ಭಾರತ್ ಫೋರ್ಜ್‌ನ 155 ಎಂಎಂ ಫಿರಂಗಿ-ಬಂದೂಕುಗಳು ಸೇರಿವೆ. ದೇಶೀಯ ಉದ್ಯಮದ ಈ ಸಾಧನೆಗಳನ್ನು ಮತ್ತಷ್ಟು ಬೆಂಬಲಿಸುವುದಕ್ಕಾಗಿ ಮತ್ತು ದೇಶೀಯ ಉದ್ಯಮಗಳ ಬೆಳವಣಿಗೆಗಾಗಿ ಸರಕಾರವು ತನ್ನ ಆಯವ್ಯಯದಲ್ಲಿ ಹೆಚ್ಚಿನ ಪಾಲನ್ನು ನಿರಂತರವಾಗಿ ಮೀಸಲಿಡುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಇದು ಸಶಸ್ತ್ರ ಪಡೆಗಳ ಅವಶ್ಯಕತೆಗಳನ್ನು ಪೂರೈಸುವ ದೇಶೀಯ ಉದ್ಯಮದ ಸಾಮರ್ಥ್ಯವನ್ನು ಇನ್ನಷ್ಟು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿನ ಸರಕಾರದ ಬದ್ಧತೆಯನ್ನು ಸೂಚಿಸುತ್ತದೆ.

ಹತ್ತು ವರ್ಷಗಳ ಹಿಂದೆ ಮೋದಿ ಸರಕಾರ ಪ್ರಾರಂಭಿಸಿದ ಸುಧಾರಣಾ ಕ್ರಮ ಗಳು ಭಾರತೀಯ ರಕ್ಷಣಾ ಉದ್ಯಮದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲು ಈಗಿನ್ನೂ ಪ್ರಾರಂಭಿಸಿವೆ ಎಂದಷ್ಟೇ ಹೇಳ ಬಹುದು. ಭಾರತೀಯ ರಕ್ಷಣಾ ವಲಯದ ಉದ್ಯಮವು ಈಗ ಉತ್ತಮ ಸ್ಥಿತಿಯಲ್ಲಿದೆ ಎಂದು ನಮಗೆ ಅನಿಸಿದರೂ, ಅದು ಇನ್ನೂ ಹಲವಾರು ಸವಾಲುಗಳನ್ನು ಎದುರಿಸಿ ನಿರೀಕ್ಷಿತ ಮಟ್ಟಕ್ಕೆ ಬೆಳೆಯಬೇಕಿದೆ. ಪಾಕಿಸ್ತಾನ ಮತ್ತು ಚೀನಾ ಎಂಬ ಎರಡು ಕಿರಿಕಿರಿಯ ನೆರೆದೇಶಗಳಿಂದ ಸುತ್ತುವರಿ ಯಲ್ಪಟ್ಟಿರುವ ಭಾರತವು ಈ ಎರಡೂ ದೇಶಗಳೊಂದಿಗೆ ವಿವಾದಿತ ಗಡಿಗಳನ್ನು ಹಂಚಿಕೊಂಡಿದೆ; ಭಾರತವು ಇಲ್ಲಿಯವರೆಗೆ ಚೀನಾ ದೊಂದಿಗಿನ ಗಡಿಯುದ್ಧ ಮತ್ತು ಪಾಕಿಸ್ತಾನದೊಂದಿಗಿನ ಪೂರ್ಣಪ್ರಮಾಣದ ಯುದ್ಧಗಳನ್ನು ಎದುರಿಸಿದೆ. ಇನ್ನು ಭಯೋತ್ಪಾದಕರ ಹಾವಳಿಯಂತೂ ನಮಗೆ ಬೆನ್ನುಬಿಡದ ಭೂತವಾಗಿದೆ. ನಮಗೆ ರಕ್ಷಣಾ ಸಾಮಗ್ರಿಗಳ ಅಗತ್ಯವಿದ್ದಾಗ ಮಿತ್ರದೇಶಗಳೂ ನಮ್ಮ ನೆರವಿಗೆ ಬರುವುದಿಲ್ಲ ಎಂಬುದನ್ನು ನಮ್ಮ ಪೂರ್ವಾನುಭವ ಹೇಳುತ್ತದೆ. ಹೀಗಿರುವಾಗ, ಅನ್ಯ ದೇಶಗಳ ಮೇಲಿನ ನಮ್ಮ ರಕ್ಷಣಾ ಉತ್ಪಾದನೆಗಳ ಅವಲಂಬನೆಯನ್ನು ಈಗಲಾದರೂ ಬಹುಮಟ್ಟಿಗೆ ಕಡಿಮೆ ಮಾಡಿಕೊಂಡು ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ವೇಗವಾಗಿ ಹೆಜ್ಜೆ ಹಾಕದಿದ್ದರೆ, ಮುಂದಿನ ದಿನಗಳಲ್ಲಿ ರಕ್ಷಣಾ ತಂತ್ರಗಾರಿಕೆ, ದೇಶದ ರಕ್ಷಣೆ ಮತ್ತು ಆರ್ಥಿಕ ಅಭಿವೃದ್ಧಿಗಳ ವಿಷಯದಲ್ಲಿ ಭಾರತವು ತೀವ್ರ ಹಿನ್ನಡೆ ಅನುಭವಿಸ ಬೇಕಾಗುತ್ತದೆ ಎನ್ನುವ ಸತ್ಯವನ್ನು ಇತ್ತೀಚಿನ ಸರಕಾರಗಳು ಮನಗಂಡಂತೆ ಕಾಣುತ್ತದೆ. ಈ ಕುರಿತಂತೆ ಕಳೆದ ಒಂದು ದಶಕದಲ್ಲಿನ ದೇಶದ ಸಾಧನೆಗಳು ಗಮನಾರ್ಹವೇ ಆಗಿವೆ ಎನ್ನುವು ದರಲ್ಲಿ ಎರಡು ಮಾತಿಲ್ಲ, ಆದರೆ ಇಷ್ಟಕ್ಕೇ ದೇಶವು ಸಂತೋಷಪಡುವಂತೆಯೂ ಇಲ್ಲ. ಆ ನಿಟ್ಟಿನಲ್ಲಿ ಆಗ ಬೇಕಾದ ಕೆಲಸ ಇನ್ನೂ ಸಾಕಷ್ಟಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಸಿದ್ದರಾಮಯ್ಯ ವಿರುದ್ಧ ಭೂಗಳ್ಳರ ಷಡ್ಯಂತ್ರ, ಪಾದಯಾತ್ರೆ

ಅಭಿಮತ

ಬಿ.ಎಸ್.ಶಿವಣ್ಣ
sprakashbjpgmail.com

'ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರ ಕುಟುಂಬವರ್ಗ ಅಧಿಕಾರದಲ್ಲಿದ್ದಾಗ ನಡೆಸಿದ ಭೂ ಹಗರಣದ ವಿವರಗಳನ್ನು ಜನತಾ ಜನಾರ್ದನನ ಪರಾಮರ್ಶೆಗಾಗಿ ಪ್ರಸ್ತುತಪಡಿಸಲಾಗಿದೆ. ಜೆಡಿಎಸ್ ನಾಯಕರು ಶ್ರೀಸಾಮಾನ್ಯರಲ್ಲಿ ಅನಗತ್ಯ ಗೊಂದಲ ಮೂಡಿಸಲು ನಿರಂತರ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಖುದ್ದು ಭೂ ಹಗರಣದಲ್ಲಿ ಭಾಗಿಯಾಗಿರುವ ಇವರ ಮಾತುಗಳನ್ನು ಕೇಳಿದರೆ ದೆವ್ವದ ಬಾಯಲ್ಲಿ ಭಗವದ್ಗೀತೆ ಕೇಳಿದಂತೆ ಭಾಸವಾಗುತ್ತದೆ. ಎಚ್.ಡಿ.ಕುಮಾರಸ್ವಾಮಿಯವರೇ ಹೇಳಿ, ಇನ್ನೂ ನೀವು ಬೇರೆಯವರ ಬಗ್ಗೆ ಪ್ರಶ್ನಿಸುವ ನೈತಿಕ ಹಕ್ಕು ಉಳಿಸಿಕೊಂಡಿದ್ದೀರಾ?'

-ಇದು ಕುಮಾರಸ್ವಾಮಿ ಹಾಗೂ ಕುಟುಂಬ ವರ್ಗದ ವಿರುದ್ಧ ಕಾಂಗ್ರೆಸ್ ಮಾಡುತ್ತಿರುವ ಈ ಸಂದರ್ಭದ ಆರೋಪವಲ್ಲ. ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದ 2009-10ರ ಅವಧಿಯಲ್ಲಿ ಬಿಜೆಪಿಯ ಮೈಸೂರು ಘಟಕದ ವತಿಯಿಂದ ನೀಡಿದ್ದ ಅಧಿಕೃತ ಪತ್ರಿಕಾ ಜಾಹೀರಾತು! ಅಂದು ಯಡಿಯೂರಪ್ಪನವರ ವಿರುದ್ಧ ಭೂ ಹಗರಣದ ಆರೋಪ ಮಾಡಿದ್ದ ಕುಮಾರಸ್ವಾಮಿಯವರ ಜನ್ಮ ಜಾಲಾಡಿದ ಬಿಜೆಪಿ, ಗೌಡರ ಕುಟುಂಬ ವರ್ಗದ ಭೂ ಅಕ್ರಮದ ವಿವರವನ್ನು ಸಾರ್ವಜನಿಕವಾಗಿ ತೆರೆದಿಟ್ಟಿತ್ತು.

ಆದರೆ ಈಗಿನ ಪರಿಸ್ಥಿತಿ ನೋಡಿ. ಭೂಮಿ ನುಂಗಿದವರು ಎಂದು ಯಾರು ದಶಕದ ಹಿಂದೆ ಕತ್ತಿನಪಟ್ಟಿ ಹಿಡಿದುಕೊಂಡು ಸಾರ್ವಜನಿಕವಾಗಿ ಬೆತ್ತಲೆಯಾಗಿದ್ದರೋ, ಅವರೇ ಇಂದು ಕೈ ಕೈ ಹಿಡಿದು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಹೊರಟಿದ್ದಾರೆ. ಅದೂ ಯಾರ ವಿರುದ್ಧ? ತಮ್ಮ ನಲವತ್ತು ವರ್ಷಗಳ ರಾಜಕೀಯ ಬದುಕಿನಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲದಂತೆ ಆಡಳಿತ ನಡೆಸಿದ ಮೌಲ್ಯಾಧಾರಿತ ರಾಜಕಾರಣಿ ಸಿದ್ದರಾಮಯ್ಯನವರ ವಿರುದ್ಧ. ನೈತಿಕವಾಗಿ, ವೈಯಕ್ತಿಕವಾಗಿ ಸಾರ್ವಜನಿಕ ಜೀವನದಲ್ಲಿ ಪದೇಪದೆ ಎಡವಿದ ಈ ಎರಡೂ ಪಕ್ಷದ ನಾಯಕರಿಗೆ ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿರುವುದು ಹರಳೆಣ್ಣೆ ಕುಡಿಸಿದ ಅನುಭವವನ್ನು ಉಂಟುಮಾಡಿದ್ದು, ಅವರ ನಿಸ್ಪೃಹ ವ್ಯಕ್ತಿತ್ವಕ್ಕೆ ಮಸಿ ಬಳಿಸುವುದಕ್ಕಾಗಿ ಈಗ ಮುಡಾ ನಿವೇಶನ ಹಂಚಿಕೆ ವಿಚಾರವನ್ನು ಮುಂದಿಟ್ಟುಕೊಂಡು ಪಾದಯಾತ್ರೆಯ ಪ್ರಹಸನ ಪ್ರಾರಂಭಿಸಿದ್ದಾರೆ. ಅಷ್ಟಕ್ಕೂ ಸಿದ್ದರಾಮಯ್ಯನವರ ವಿರುದ್ಧ ಭೂ ಅಕ್ರಮದ ಆರೋಪ ಮಾಡುತ್ತಿರುವವರಾದರೂ ಯಾರು? ಸಾರ್ವಜನಿಕ ಸ್ವತ್ತನ್ನು ನುಂಗಿ ನೀರು ಕುಡಿದವರು, ಭೂಗಳ್ಳರು ಎಂದು ಈ ಹಿಂದೆ ಪರಸ್ಪರ ಆರೋಪ ಮಾಡಿಕೊಂಡವರು! ಇಂಥವರಿಂದ ಸಿದ್ದರಾಮಯ್ಯನವರು ಪಾಠ ಕಲಿಯುವ ಅನಿವಾರ್ಯತೆ ಇದೆಯೇ? ಖಂಡಿತ ಇಲ್ಲ.

ಮರುಸ್ಥಾಪನೆಯ ಯತ್ನ: ಸಿದ್ದರಾಮಯ್ಯನವರೇ ಪತ್ರಿಕಾಗೋಷ್ಠಿಯಲ್ಲಿ ಹೇಳಿರುವ ಪ್ರಕಾರ, ಇದು ಬಿಜೆಪಿ ಮತ್ತು ಜೆಡಿಎಸ್‌ಗಳೆರಡೂ ಸೇರಿಕೊಂಡು ಅವರನ್ನು 'ವೈಯಕ್ತಿಕವಾಗಿ' ತೇಜೋವಧೆ ಮಾಡುವ ಕೆಲಸವನ್ನು ಮಾಡುತ್ತಿವೆ. ಕರ್ನಾಟಕದಲ್ಲಿ ಕುಸಿದುಹೋಗುತ್ತಿರುವ ಜನಪ್ರಿಯತೆಯನ್ನು ಮರುಸ್ಥಾಪಿಸಿಕೊಳ್ಳಲು ಸಾವಿರ ಸಲ ಸುಳ್ಳು ಹೇಳಿ ನಿಜವೆಂದು ಪ್ರತಿಷ್ಠಾಪಿಸುವ ಪ್ರಯತ್ನವಿದು. ಹಿಟ್ಲರ್‌ವಾದಿ ಹಾಗೂ ಭಾರತದ ಸಂದರ್ಭದಲ್ಲಿ ಪೇಶ್ವೆವಾದಿ ಮನಸ್ಥಿತಿಯನ್ನು ಬಿಜೆಪಿಯವರು ಹೊಂದಿದ್ದು, ಅದಕ್ಕೆ ಕುಟುಂಬವಾದಿ ಜೆಡಿಎಸ್ ಸಾಥ್ ನೀಡುತ್ತಿದೆ.

ನಿಜ ಹೇಳಬೇಕೆಂದರೆ, ಇದು ಕೇವಲ ಸಿದ್ದರಾಮಯ್ಯನವರೊಬ್ಬರನ್ನು ಗುರಿಯಾಗಿಸಿ ನಡೆಸುತ್ತಿರುವ ದಾಳಿ ಅಲ್ಲ. ಸಮಸ್ತ 'ಅಹಿಂದ' ವರ್ಗದ ಕಡೆಗೆ ಎಸೆಯುತ್ತಿರುವ ಬಲಾಢ್ಯರ ಬ್ರಹ್ಮಾಸ್ತ್ರ. ಈ ರಾಜ್ಯದಲ್ಲಿ ಹಿಂದುಳಿದ ವರ್ಗದವರು ಮುಖ್ಯಮಂತ್ರಿ ಹುದ್ದೆಗೆ ಏರಿದ ಸಂದರ್ಭದಲ್ಲೆಲ್ಲಾ ಈ ಬಗೆಯ ವೃಥಾ ಆರೋಪ, ವ್ಯಕ್ತಿತ್ವ ಹರಣದ ಪ್ರಯತ್ನಗಳು ನಡೆದೇ ಇವೆ. ಹಿಂದೆ ದೇವರಾಜ ಅರಸರ ವಿಚಾರದಲ್ಲೂ ಹೀಗೆ ಆಯಿತು. ಧರ್ಮಸಿಂಗ್ ಅವರ ವಿಚಾರದಲ್ಲೂ ಹೀಗೆ ಆಯಿತು. ಇವರಿಬ್ಬರನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕೆ ಯಾರು ಮುಂಚೂಣಿಯಲ್ಲಿ ನಿಂತು ಕುತಂತ್ರ ಮಾಡಿದ್ದರೋ, ಅವರೇ ಈಗ ಸಿದ್ದರಾಮಯ್ಯನವರ ವಿರುದ್ಧ ಆರೋಪ ಹಾಗೂ ಷಡ್ಯಂತ್ರ ಹೆಣೆಯುತ್ತಿದ್ದಾರೆ. ಅದರಲ್ಲಿಯೂ ದೇವರಾಜ ಅರಸು ಅವರ ಬಳಿಕ, ಹಿಂದುಳಿದ ವರ್ಗಕ್ಕೆ ಸೇರಿದ ಸಿದ್ದರಾಮಯ್ಯ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿರುವುದು ಈ ದುಷ್ಟಕೂಟಕ್ಕೆ ಅನ್ನ ಸೇರದಂತೆ ಮಾಡಿಬಿಟ್ಟಿದೆ. ಇದು 'ದಮನಿತ ವರ್ಗಗಳ ಜನಸಮೂಹದಿಂದ ಬಂದವರು ರಾಜಕಾರಣವನ್ನೇ ಮಾಡಬಾರದು, ಅವರು ಅಧಿಕಾರದ ಹತ್ತಿರ ಸುಳಿಯಲೇಬಾರದು' ಎಂಬ ಪಟ್ಟಭದ್ರ ಮನಸ್ಥಿತಿಯ ಅನಾವರಣವಷ್ಟೇ.

ಸಿದ್ದರಾಮಯ್ಯನವರೇ ಏಕೆ ಟಾರ್ಗೆಟ್?: ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಇದೇ ಬಿಜೆಪಿ ಹಾಗೂ ಜೆಡಿಎಸ್‌ನವರು ಬಾಯಿಗೆ ಬಂದಂತೆ ಮಾತನಾಡಿಕೊಂಡಿದ್ದರು. ಪೇಶ್ವೆ ಬ್ರಾಹ್ಮಣ ವಂಶದವರನ್ನು ಮುಖ್ಯಮಂತ್ರಿಯಾಗಿಸಲು ಹೊರಟಿದ್ದಾರೆಂದು ಕುಮಾರಸ್ವಾಮಿ ಆರೋಪಿಸಿದ್ದರು. ಪ್ರಧಾನಿ ನರೇಂದ್ರ ಮೋದಿಯವರ ಪ್ರಚಾರ ಸಭೆಗಳ ಬಗ್ಗೆಯೂ ವಾಗ್ದಾಳಿ ನಡೆಸಿದ್ದರು. ಆದರೆ ಫಲಿತಾಂಶದ ಬಳಿಕ ಎರಡೂ ಪಕ್ಷಗಳ ಜಂಘಾಬಲ ಉಡುಗಿ ಹೋಗಿತ್ತು. 135 ಸ್ಥಾನಗಳ ಪೂರ್ಣ ಬಹುಮತ ಕಾಂಗ್ರೆಸ್‌ಗೆ ಲಭಿಸುವಂತಾಗಿದ್ದರಲ್ಲಿ ಸಿದ್ದರಾಮಯ್ಯನವರ ಕಳಂಕರಹಿತ ವ್ಯಕ್ತಿತ್ವ ಪ್ರಧಾನ ಪಾತ್ರ ವಹಿಸಿತ್ತು. ಆ ಬಳಿಕ ನಡೆದ ಲೋಕಸಭಾ ಚುನಾವಣೆಯಲ್ಲೂ ಕಾಂಗ್ರೆಸ್ ಒಂದರಿಂದ ಒಂಬತ್ತು ಸ್ಥಾನಕ್ಕೆ ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡಿದೆ. ಮೈತ್ರಿ ಮಾಡಿಕೊಂಡರೂ ಬಿಜೆಪಿ-ಜೆಡಿಎಸ್‌ಗಿಂತ ಹೆಚ್ಚಿನ ಸರಾಸರಿ ಮತಗಳಿಕೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್‌ಗೆ ಲಭಿಸಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಸಿದ್ದರಾಮಯ್ಯನವರು ಕರ್ನಾಟಕದಲ್ಲಿ ಈ ಎರಡೂ ಪಕ್ಷಗಳ ಪಕ್ಕೆಲುಬುಗಳನ್ನು ಮುರಿದುಬಿಡುತ್ತಾರೆಂಬ ಭಯ ಜೆಡಿಎಸ್ ಹಾಗೂ ಬಿಜೆಪಿ ನಾಯಕರನ್ನು ಆವರಿಸಿದೆ. ರಾಜ್ಯದಲ್ಲಿ ಏಕಪಕ್ಷೀಯವಾಗಿ ಅಧಿಕಾರಕ್ಕೆ ಬರುವುದು ಸಾಧ್ಯವಾಗದೆ ಇದ್ದರೂ, ಮೈತ್ರಿ ಮೂಲಕ ಅಧಿಕಾರ ಗಿಟ್ಟಿಸಿಕೊಳ್ಳೋಣ ಎಂದು ಕನಸು ಕಾಣುತ್ತಿರುವವರಿಗೆ ಸಿದ್ದರಾಮಯ್ಯ ಹೆಬ್ಬಂಡೆಯಂತೆ ನಿಂತು ಅಡ್ಡಿಯಾಗಿದ್ದಾರೆ. ಹಿಂದೆ ನಿಂತು ಆಟ ಆಡುತ್ತಿರುವ ಸೈದ್ಧಾಂತಿಕ ಗುರುಗಳಿಗೆ ಕರ್ನಾಟಕದ ಜನರ ಮನಸ್ಥಿತಿ ಅರ್ಥವಾಗುತ್ತಿದೆ. ಜನ ತಮ್ಮಿಂದ ದೂರ ಸರಿಯುತ್ತಿದ್ದಾರೆ ಎಂದು ಅವರಿಗೆ ಗೊತ್ತಿದೆ. ಹೀಗಾಗಿ ಕಾಗಕ್ಕ-ಗೂಬಕ್ಕನ ಕಥೆ ಕಟ್ಟಿ ಜನರನ್ನು ನಂಬಿಸಲು ಹೊರಟಿದ್ದಾರೆ. ಬಿಜೆಪಿ-ಜೆಡಿಎಸ್‌ನವರ ಮಿದುಳು ಖಾಲಿಯಾಗಿದೆ, ಅವರು ಬೌದ್ಧಿಕವಾಗಿ ದಿವಾಳಿಯಾಗಿದ್ದಾರೆ. ಹೀಗಾಗಿ ವಾಲ್ಮೀಕಿ ನಿಗಮ ಹಾಗೂ ಮುಡಾ ವಿಚಾರವನ್ನು ಮುಂದುಟ್ಟುಕೊಂಡು ಸಿದ್ದ ರಾಮಯ್ಯನವರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಇದರ ಫಲಶ್ರುತಿಯೇ ಈಗ ಪ್ರಾರಂಭವಾಗಿರುವ ಪಾದಯಾತ್ರೆ!

ಅಷ್ಟಕ್ಕೂ ಮುಡಾದಲ್ಲಿ ಹಗರಣವಾಗಿದೆಯೇ?: ಸದನದ ಒಳಗೆ ಹಾಗೂ ಹೊರಗೆ ಇಂಥದೊಂದು ಅನುಮಾನವನ್ನು ಬಿತ್ತುವುದಕ್ಕೆ ಬಿಜೆಪಿ ಮತ್ತು ಜೆಡಿಎಸ್ ನಿರಂತರ ಪ್ರಯತ್ನ ನಡೆಸಿವೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರಂತೂ ಮೈಸೂರಿಗೆ ಬಂದು ಸಿದ್ದರಾಮಯ್ಯನವರ ವಿರುದ್ಧ ಪತ್ರಿಕಾಗೋಷ್ಠಿ ನಡೆಸಿ ಆರೋಪ ಮಾಡಿದ್ದಾರೆ. 'ತಾನು ಕಳ್ಳ, ಪರರ ನಂಬ' ಎಂಬಂತಾಗಿದೆ ಅವರ ಪರಿಸ್ಥಿತಿ. ಇಲ್ಲವಾದರೆ ಖುದ್ದು ಮುಡಾದಲ್ಲಿ ಪರ್ಯಾಯ ನಿವೇಶನ ಬೇಡಿದವರು ಇಂಥದೊಂದು ಆರೋಪ ಮಾಡುವುದಕ್ಕೆ ಸಾಧ್ಯವಿತ್ತೇ?

ಮೈತ್ರಿ ಪಕ್ಷಗಳ ಈ ಒಳಸಂಚಿನ ಬಗ್ಗೆ ಸಿದ್ದರಾಮಯ್ಯನವರು ಈಗಾಗಲೇ ಪತ್ರಿಕಾಗೋಷ್ಠಿ ನಡೆಸಿ ಸಾಕಷ್ಟು ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಸೈದ್ಧಾಂತಿಕವಾಗಿ ಅವರ ಜತೆಗೆ ಸುದೀರ್ಘ ವರ್ಷಗಳಿಂದ ನಿಂತಿರುವ ನಮಗೆಲ್ಲ ಅವರ ವ್ಯಕ್ತಿತ್ವ ಎಂಥದೆಂದು ಸ್ಪಷ್ಟವಾಗಿ ಗೊತ್ತು. ತಮ್ಮ ಇಷ್ಟು ವರ್ಷಗಳ ರಾಜಕಾರಣದಲ್ಲಿ ಅವರೆಂದೂ ಕುಟುಂಬ ವರ್ಗಕ್ಕೆ ಆಡಳಿತದ ಪಡಸಾಲೆಯ ಹತ್ತಿರ ಬರುವುದಕ್ಕೆ ಅವಕಾಶ ಕೊಟ್ಟಿಲ್ಲ. ಅವರ ಶ್ರೀಮತಿಯವರನ್ನು ಸಾರ್ವಜನಿಕವಾಗಿ ಯಾರೂ ನೋಡಿಲ್ಲ. ಏಕೆಂದರೆ, ಆಡಳಿತ, ಅಧಿಕಾರ ಇತ್ಯಾದಿ ವಿಚಾರಗಳಿಂದ ಅವರು ಗಾವುದ ದೂರ. ತಮ್ಮ ಸೋದರನಿಂದ ದಾನವಾಗಿ ಬಂದ ಭೂಮಿಯನ್ನು ಮುಡಾ ಕಾನೂನುಬಾಹಿರವಾಗಿ ಸ್ವಾಧೀನಪಡಿಸಿಕೊಂಡ ವಿಚಾರವನ್ನು 2014ರಲ್ಲಿ ಅವರು ಸಿದ್ದರಾಮಯ್ಯನವರ ಬಳಿ ಪ್ರಸ್ತಾಪಿಸಿದಾಗ, 'ಯಾವುದೇ ಕಾರಣಕ್ಕೂ ನಾನು ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡುವುದಿಲ್ಲ. ಮುಖ್ಯಮಂತ್ರಿಯಾಗಿ ಕುಟುಂಬದ ಆಸ್ತಿ ವಿಚಾರ ಪರಿಹರಿಸಲು ಹೋದರೆ ಸ್ವಜನಪಕ್ಷಪಾತ ಹಾಗೂ ಆಡಳಿತದ ದುರುಪಯೋಗವಾಗುತ್ತದೆ' ಎಂದು ಅವರು ಖಡಾಖಂಡಿತವಾಗಿ ನಿರಾಕರಿಸಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ.

ಆದಾಗ್ಯೂ ಬಿಜೆಪಿ ಮತ್ತು ಜೆಡಿಎಸ್‌ನವರು ಯಾವುದೇ ದಾಖಲೆಗಳಿಲ್ಲದೆ ಎರಡು ವಾರಗಳ ಕಾಲ ಸದನವನ್ನು ದಿಕ್ಕುತಪ್ಪಿಸಿದರು. ಸಂಸದೀಯ ಪ್ರಜಾಪ್ರಭುತ್ವವು ಯಾವುದಕ್ಕೆ ಮಾದರಿಯಾಗಬಾರದೋ ಅದಕ್ಕೆ ಬಿಜೆಪಿಯವರು ಮಾದರಿಯಾದರು. ಆದರೆ ಸಿದ್ದರಾಮಯ್ಯನವರು ಅಗ್ನಿಪರೀಕ್ಷೆಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಆರೋಪ ಸುಳ್ಳೇ ಆದರೂ, ನಿವೃತ್ತ ನ್ಯಾಯಾಧೀಶರಾದ ಜಸ್ಟಿಸ್ ಪಿ.ಬಿ.ದೇಸಾಯಿಯವರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ರಚಿಸಿ ಸ್ವಯಂತನಿಖೆಗೆ ಒಡ್ಡಿಕೊಂಡಿದ್ದಾರೆ. ಯಡಿಯೂರಪ್ಪ, ಕುಮಾರಸ್ವಾಮಿ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಅವರ ವಿರುದ್ಧವೂ ಆರೋಪ ಕೇಳಿಬಂದಿತ್ತು. ಆದರೆ ಯಾರಾದರೂ ತನಿಖೆಯ 'ಅಗ್ನಿದಿವ್ಯ' ಹಿಡಿಯುವ ಧೈರ್ಯ ಮಾಡಿದ್ದರೇ? ಇಲ್ಲ. ಏಕೆಂದರೆ ಆ ಸಾಹಸಕ್ಕೆ ಕೈಹಾಕುವುದಕ್ಕೆ ಅವರ ಆತ್ಮಸಾಕ್ಷಿ ಚುಚ್ಚುತ್ತಿತ್ತು. ತಪ್ಪಿತಸ್ಥರ ಭಾವನೆ ಕಾಡುತ್ತಿತ್ತು. ಆದರೆ ತಾವು ಯಾವುದೇ ತಪ್ಪು ಮಾಡಿಲ್ಲ ಎಂಬ ವಿಚಾರ ಸಿದ್ದರಾಮಯ್ಯನವರಿಗೆ ಸ್ಪಷ್ಟವಾಗಿರುವುದರಿಂದಲೇ ತನಿಖೆಗೆ ಸಿದ್ಧರಾಗಿದ್ದಾರೆ.

ಪಾದಯಾತ್ರೆ ದಿಲ್ಲಿಗೆ ಮಾಡಿ: ಅಷ್ಟಕ್ಕೂ ಬಿಜೆಪಿ ಮತ್ತು ಜೆಡಿಎಸ್ ಜಂಟಿ ಪಾದಯಾತ್ರೆಯನ್ನು ಮಾಡಬೇಕಿರುವುದು ಬೆಂಗಳೂರಿನಿಂದ ಮೈಸೂರಿಗೆ ಅಲ್ಲ, ಬೆಂಗಳೂರಿನಿಂದ ದಿಲ್ಲಿಗೆ. ಉಭಯಪಕ್ಷಗಳ ನಾಯಕರೇ, ಕನ್ನಡಿಗರಿಗೆ ಕೇಂದ್ರ ಸರಕಾರ ನಿರಂತರವಾಗಿ ಮಾಡುತ್ತಿರುವ ಅನ್ಯಾಯವನ್ನು ಪ್ರಶ್ನಿಸಿ ನೀವು ಹೋರಾಟವನ್ನು ಮಾಡಬೇಕಿದೆ. ಅದು ನಿಮ್ಮ ನಿಜವಾದ ಕರ್ತವ್ಯ. ಆದರೆ ಅದನ್ನು ಬಿಟ್ಟು ರಿಯಲ್ ಎಸ್ಟೇಟ್ ಏಜೆಂಟ್‌ಗಳ ರೀತಿಯಲ್ಲಿ ದಿನಕ್ಕೊಂದು ಕತೆ ಹೇಳುತ್ತಾ ಪಾದಯಾತ್ರೆ ನಡೆಸಿದರೆ ಜನ ನಂಬುತ್ತಾರೆಯೇ? ಈ ದೇಶದಲ್ಲಿ ಸ್ವಾತಂತ್ರ್ಯ, ಸಮಾನತೆ, ಗಣಿ ಅಕ್ರಮ, ನದಿ-ನೀರು ಇತ್ಯಾದಿ ವಿಷಯಗಳಿಗಾಗಿ ನಡೆದ ಪಾದಯಾತ್ರೆಗಳು ಯಶಸ್ವಿಯಾಗಿವೆ. ನಿಮ್ಮಂತೆ ಅಧಿಕಾರ ಹಾಗೂ ಸುಳ್ಳು ಪ್ರತಿಪಾದನೆಗಾಗಿ ನಡೆದ ಹೋರಾಟ ಅರ್ಧಕ್ಕೇ ಮುಳುಗಿ ಹೋಗಿದೆ. ಸಾಧ್ಯವಿದ್ದರೆ, ನೀಟ್ ಅಕ್ರಮ, ಒಂದು ದೇಶ ಒಂದು ಚುನಾವಣೆ, ಕ್ಷೇತ್ರ ಪುನರ್‌ವಿಂಗಡಣೆಯಂಥ ಜ್ವಲಂತ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ. ಭೂಗಳ್ಳರನ್ನು ಬಗಲಲ್ಲಿ ಕಟ್ಟಿಕೊಂಡು ಹೋರಾಟ ನಡೆಸಿದರೆ ಜನ ದೊಣ್ಣೆ ತೆಗೆದುಕೊಳ್ಳುತ್ತಾರೆಂಬುದನ್ನು ಮರೆಯಬೇಡಿ.

(ಲೇಖಕರು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆಯ ಅಧ್ಯಕ್ಷರು)

ಕಳಕಳಿ

ಆದರ್ಶ್ ಶೆಟ್ಟಿ ಉಪ್ಪಿನಂಗಡಿ

ಬದುಕನ್ನು ಮರಳಿ ಕಟ್ಟಬೇಕಿದೆ

ದೇಶದ ವಿವಿಧ ಭಾಗಗಳಲ್ಲಿ ಸುರಿದ ಧಾರಾಕಾರ ಮಳೆಗೆ ಹಲವಾರು ಆಸ್ತಿಪಾಸ್ತಿ ನಷ್ಟ, ಜೀವಹಾನಿಗಳು ಸಂಭವಿಸಿವೆ. ಗುಡ್ಡಗಳು ಕುಸಿದು ಅವುಗಳ ಮಣ್ಣು ರಸ್ತೆಗಳ ಮೇಲೆ ಜಮೆಯಾಗಿ ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಶಾಲಾ ಕಾಲೇಜುಗಳಿಗೆ ವಾರವಿಡೀ ರಜೆ ಘೋಷಿಸಲಾಗಿದೆ. ಇಂಥ ಘನಘೋರ ದುರಂತಕ್ಕೆ ಕೇರಳದ ವಯನಾಡು ಅಕ್ಷರಶಃ ತತ್ತರಿಸಿ ಹೋಗಿದೆ. ಮೂರು ಬೃಹತ್ ಗುಡ್ಡಗಳು ಕುಸಿದ ಪರಿಣಾಮವಾಗಿ ಒಂದು ಗ್ರಾಮವೇ ನೆಲಸಮವಾಗಿ ಸಾವಿನ ಸಂಖ್ಯೆ 375ರ ಗಡಿ ದಾಟಿದೆ. ಸಾವಿನ ಪ್ರಮಾಣ ಇನ್ನೂ ಹೆಚ್ಚುವ ಸಾಧ್ಯತೆಗಳಿದ್ದು, ಶವಗಳಿಗಾಗಿ ಶೋಧಕಾರ್ಯ ಇನ್ನೂ ಮುಂದುವರಿದಿದೆ.

ಹಲವಾರು ಮಂದಿ ತಮ್ಮ ಬಂಧು-ಬಳಗವನ್ನು ಕಳೆದುಕೊಂಡಿದ್ದಾರೆ, ಬದುಕುಳಿದವರು ಗಾಯಾಳುಗಳಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅದೆಷ್ಟೋ ಮಕ್ಕಳು ತಮ್ಮ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾಗಿದ್ದಾರೆ. ಎಲ್ಲವನ್ನೂ ಕಳೆದುಕೊಂಡು ಉಟ್ಟ ಬಟ್ಟೆಯಲ್ಲೇ ಗಂಜಿ ಕೇಂದ್ರ, ಸೈನಿಕರ ಆಶ್ರಯದಲ್ಲಿ ದಿಕ್ಕೇ ತೋಚದಂತಾಗಿ ದಿನದೂಡಬೇಕಾದ ಪರಿಸ್ಥಿತಿಗೆ ತಲುಪಿದ್ದಾರೆ. ಒಂದೆಡೆ ನಮ್ಮ ಕಾರ್ಯಪಡೆಯು ನಿರಂತರ ರಕ್ಷಣಾಕಾರ್ಯದಲ್ಲಿ ಮಗ್ನವಾಗಿದ್ದರೆ, ದುರಂತದ ಬಳಿಕ ಒಬ್ಬೊಬ್ಬ ಸಂತ್ರಸ್ತರ ಸ್ಥಿತಿಯೂ ಕಲ್ಲು ಹೃದಯದವರನ್ನೂ ಕರಗಿಸುವಂತಿದೆ.

ತಾಯಿ ಮತ್ತು ಮಗಳು, ಅಳಿಯ, ಮೊಮ್ಮಕ್ಕಳು ಇರುವ ಸಣ್ಣ ಕುಟುಂಬದ ಮನೆಗೆ ನೀರು ಅಪ್ಪಳಿಸಿದಾಗ ಹೇಗೋ ಅಲ್ಲಿಂದ ಪಾರಾಗಿ ಮಧ್ಯರಾತ್ರಿಯಲ್ಲಿ ಎತ್ತರದ ಜಾಗಕ್ಕೆ ತಲುಪಲು ಕಾಡಿನಲ್ಲಿ ಓಡುತ್ತಿದ್ದಾಗ, ಕಾಡಾನೆಯೊಂದು ಎದುರಾಯಿತಂತೆ. ಆ ಕುಟುಂಬವು ಕಾಡಾನೆಗೆ ಕೈ ಮುಗಿದು ಪ್ರಾರ್ಥಿಸುತ್ತಾ, 'ಈಗಾಗಲೇ ಒಂದು ಸಂಕಷ್ಟದಿಂದ ಪಾರಾಗಿ ಬಂದಿದ್ದೇವೆ, ನಮಗೆ ಏನೂ ಮಾಡಬೇಡ' ಎಂದು ಬೇಡಿ, ಬಳಿಕ ಆ ಕಾಡಾನೆಯ ಕಾಲಬುಡದಲ್ಲೇ ಬೆಳಗಿನವರೆಗೆ ಆಶ್ರಯ ಪಡೆಯುವಂತಾದ ದುಃಸ್ಥಿತಿಯನ್ನು ಆ ಕುಟುಂಬದವರೊಬ್ಬರು ಮಾಧ್ಯಮದವರ ಮುಂದೆ ವಿವರಿಸಿದ್ದಾರೆ. ಇನ್ನು ಘಟನಾ ಸ್ಥಳದಲ್ಲಿ ಅದೆಷ್ಟೋ ಜನರ ಕೈ ಕಾಲು, ದೇಹದ ಅರ್ಧಭಾಗ, ಮಣ್ಣಿನಲ್ಲಿ ಹೂತುಹೋದ ಪ್ರಾಣಿಗಳ ದೇಹ, ಮನುಷ್ಯರ ದೇಹಗಳು, ಸೈನಿಕರ ಕಂಕುಳಲ್ಲಿ ರಕ್ಷಿಸಲ್ಪಟ್ಟ ಪುಟ್ಟ ಮಗು ಇಂಥ ದೃಶ್ಯಗಳನ್ನು ಕಾಣಬಹುದಾಗಿತ್ತು.

ಈ ಹಿಂದೆ ಇದೇ ಮಾದರಿಯಲ್ಲಿ ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಗುಡ್ಡ ಕುಸಿತದ ದುರಂತವಾಗಿತ್ತು. ಇತ್ತೀಚೆಗೆ ಕಾರವಾರದ ಶಿರೂರು ಪ್ರದೇಶದಲ್ಲಿ ಸಂಭವಿಸಿದ ದುರಂತಗಳು ನಮ್ಮ ಕಣ್ಣ ಮುಂದೆ ಜೀವಂತವಾಗಿವೆ. ಈಗಾಗಲೇ ವಯನಾಡಿನಲ್ಲಿ ಆರೆಸ್ಸೆಸ್‌ನ ಸೇವಾಭಾರತಿಯ ಮೂಲಕ ಹಾಗೂ ಇನ್ನಿತರ ಸಂಘಟನೆಗಳ ನೆರವಿನಿಂದ ಸೇವಾಕಾರ್ಯಗಳು ಭರದಿಂದ ಸಾಗುತ್ತಿವೆ. ಹಲವಾರು ಉದ್ಯಮಿಗಳು, ಸಮಾಜದ ವಿವಿಧ ಗಣ್ಯರು ಬಟ್ಟೆ-ಬರೆ, ಅಗತ್ಯದ ಆಹಾರ ವಸ್ತುಗಳ ನೆರವನ್ನು ನೀಡುತ್ತಿರುವುದು ಗಮನಾರ್ಹ. ನಮ್ಮ ದೇಶದಲ್ಲಿ ಇಂಥ ಯಾವುದೇ ದುರ್ಘಟನೆಗಳು ಸಂಭವಿಸಿದಾಗ ಜನರು ಪರಸ್ಪರ ಮಾನವೀಯ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಬಂಧು-ಬಳಗವನ್ನು ಕಳೆದುಕೊಂಡ ಸಂತ್ರಸ್ತರಿಗೆ ಹೋದ ಜೀವವನ್ನು ಮತ್ತೆ ತಂದುಕೊಡುವುದು ಅಸಾಧ್ಯ; ಆದರೆ ಅವರ ಬದುಕನ್ನು ಮತ್ತೆ ಶೂನ್ಯದಿಂದ ಕಟ್ಟಿಕೊಡಬೇಕಾದದ್ದು ಸರಕಾರದ ಮತ್ತು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕಿದೆ. ನೊಂದವರ ಕಣ್ಣೀರು ಒರೆಸಬೇಕಿದೆ. 'ದೇವರ ಸ್ವಂತ ನಾಡು' ಎಂದೇ ಕರೆಯಲ್ಪಡುವ ಕೇರಳದ ವಯನಾಡ್ ಪ್ರದೇಶವು ಮತ್ತೊಮ್ಮೆ ಎಂದಿನಂತೆ ಲವಲವಿಕೆಯಿಂದ, ಉತ್ಸಾಹದಿಂದ ಎದ್ದು ನಿಲ್ಲುವಂತಾಗಲು, ಹೊಸ ಬೆಳಕನ್ನು ಕಾಣುವಂತಾಗಲು ನಮ್ಮೆಲ್ಲರ ಸಹಕಾರವು ಅತ್ಯಗತ್ಯವಾಗಿದೆ. ಮಾನವೀಯತೆಗಿಂತ ಮಿಗಿಲಾದ ಧರ್ಮ, ಸಂಘಟನೆ, ಪಕ್ಷ ಬೇರೆ ಯಾವುದಿದೆ ಹೇಳಿ?

(ಲೇಖಕರು ಹವ್ಯಾಸಿ ಬರಹಗಾರರು)

ಪ್ರತಿಸ್ಪಂದನ

ವಿನಾಯಕ ಭಟ್ ಓಣಿವಿಘ್ನೇಶ್ವರ

ರಾಹುಲ್ ಜವಾಬ್ದಾರಿ ಮೆರೆಯಲಿ

ಗೆಲುವಿಗಾಗಿ ಮಾಡುವ ಯಾವುದೇ ರೀತಿಯ ಧನಾತ್ಮಕ ಹೋರಾಟ ಸ್ವಾಗತಾರ್ಹ. ಆದರೆ, ಸೋತ ಭರದಲ್ಲಿ ಸಮಾಜದಲ್ಲಿ ದ್ವೇಷವನ್ನೇ ಹರಡುತ್ತಾ, ಭಯವನ್ನೇ ಹೆಚ್ಚಿಸುತ್ತಾ ಮಾಡುವ ರಾಜಕಾರಣ ಇದೆಯಲ್ಲಾ ಅದನ್ನು ಜೀರ್ಣಿಸಿಕೊಳ್ಳಲಾಗದು. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಂಥ ಜವಾಬ್ದಾರಿಯುತ ಸ್ಥಾನದಲ್ಲಿರುವ ರಾಹುಲ್ ಗಾಂಧಿಯವರು ಇತ್ತೀಚೆಗೆ ವರ್ತಿಸಿದ ಪರಿ ಇದಕ್ಕೊಂದು ಉದಾಹರಣೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ರಾಹುಲ್ ಅವರು ಒಂದು ಫೋಟೋವನ್ನು ತೋರಿಸಿದರು. ಅದು ಎಲ್ಲಾ ಪಕ್ಷಗಳ ಎಲ್ಲಾ ಸರಕಾರಗಳ ಬಜೆಟ್ ಮಂಡನೆಯ ಸಮಯದಲ್ಲಿ ಮಾಡುವ ಹಲ್ವಾ ಸಮಾರಂಭದ ಫೋಟೋ. ಅದನ್ನು ತೋರಿಸುತ್ತಾ ಅವರು, 'ಈ ಫೋಟೋದಲ್ಲಿ ಒಂದಷ್ಟು ಜಾತಿಯ ಜನರ ಮುಖ ಇಲ್ಲ. ಅವರನ್ನೆಲ್ಲ ನಿರ್ಲಕ್ಷಿಸಲಾಗಿದೆ. ಆಡಳಿತಾರೂಢ ಎನ್‌ಡಿಎ ಒಕ್ಕೂಟ ಈ ಜಾತಿಗಳ ವಿರೋಧಿ' ಎಂದೆಲ್ಲಾ ಹೇಳುವ ಮೂಲಕ ಜನರ ಮನಸ್ಸಿನಲ್ಲಿ ಜಾತಿಯ ವಿಷಬೀಜವನ್ನು ಬಿತ್ತುವ ಪ್ರಯತ್ನ ಮಾಡಿದರು.

ಇತ್ತೀಚೆಗೆ ರಾಹುಲ್ ಮಾತೆತ್ತಿದರೆ ಭಯ ಮತ್ತು ದ್ವೇಷದ ಬಗ್ಗೆಯೇ ಮಾತಾಡುತ್ತಾರೆ. ಆದರೆ ನಿಜವಾಗಿಯೂ ಅಂಥ ಪರಿಕಲ್ಪನೆಗಳನ್ನು ಸಮಾಜದಲ್ಲಿ ಬಿತ್ತುತ್ತಿರುವುದು ಅವರ ಪಕ್ಷವೇ! ಸೋಲಿನ ಹತಾಶೆಗೆ ಸಿಲುಕಿರುವ ಕಾಂಗ್ರೆಸ್, ಹೀಗೆ ಎನ್‌ಡಿಎ ಬಗ್ಗೆ ಜನರಲ್ಲಿ ಭಯ ಮತ್ತು ದ್ವೇಷವನ್ನು ಹೆಚ್ಚಿಸಲು ಸಾಧ್ಯವಾದೆಡೆಯೆಲ್ಲಾ ಯತ್ನಿಸುತ್ತಿದೆ. ಜನರಲ್ಲಿರುವ ಬಿಜೆಪಿ ಬೆಂಬಲದ ಮನಸ್ಥಿತಿಯನ್ನು ತೊಳೆಯಲು ಈ ನಕಾರಾತ್ಮಕ ತಂತ್ರವನ್ನು ಬಳಸುವಲ್ಲಿ ರಾಹುಲ್ ಹಗಲಿರುಳೂ ಶ್ರಮಿಸುತ್ತಿದ್ದಾರೆ. ಅದಿಲ್ಲದಿದ್ದಲ್ಲಿ ಬಜೆಟ್‌ನ ಹಲ್ವಾ ಸಮಾರಂಭದ ಫೋಟೋದಲ್ಲಿ ಕೂಡ ತೀರಾ ಬಾಲಿಶವಾದ ಜಾತಿವಾದವನ್ನು ಎತ್ತುವ ಧೋರಣೆ ಅವರಿಂದ ಹೊಮ್ಮುತ್ತಿರಲಿಲ್ಲ. ಅದೆಷ್ಟು ಕುಟಿಲಬುದ್ಧಿ ನೋಡಿ. ಭಾರತದಲ್ಲಿ ನೂರಾರು ಜಾತಿಗಳಿವೆ. ಆ ಎಲ್ಲಾ ಜಾತಿಗಳ ಜನರನ್ನೂ ಆ ಫೋಟೋದಲ್ಲಿ ತರಬೇಕಿತ್ತೇ? ಅಥವಾ ಆ ರೀತಿಯಲ್ಲಿ ತಂದಾಗ ಮಾತ್ರವೇ ಎಲ್ಲರನ್ನೂ ಒಗ್ಗೂಡಿಸಿದಂತೆ ಆಯಿತೇ?

ಅಷ್ಟಕ್ಕೂ, ಭಾರತದ ಮೂಲಬೇರು ಇರುವುದು ಇದೇ ಕಾಂಗ್ರೆಸ್ ಕೆತ್ತಿದ 'ಜಾತ್ಯತೀತ' ಅನ್ನುವ ಶಬ್ದದ ಮೇಲೆ. ಆದರೆ ಕಾಂಗ್ರೆಸ್ ಯಾವತ್ತೂ ಜಾತ್ಯತೀತತೆಯ ನಿಜವಾದ ಅರ್ಥದ ಮೇಲೂ, ಆಶಯದ ಮೇಲೂ ಕೆಲಸ ಮಾಡಿದ ನಿದರ್ಶನ ಒಂದಾದರೂ ಇದೆಯಾ? ಜಾತ್ಯತೀತ ಅಂದರೆ ಕೇವಲ ಒಂದು ಕೋಮನ್ನು ಓಲೈಸಿಕೊಂಡು ತನ್ನ ಮತಬ್ಯಾಂಕ್ ಅನ್ನು ಹೆಚ್ಚಿಸಿಕೊಳ್ಳುವುದು ಎಂಬುದು ಕಾಂಗ್ರೆಸ್ ಸದಾ ಜಪಿಸಿಕೊಂಡು ಬಂದಿರುವ ಮೂಲಮಂತ್ರ. ಈ ವರ್ಷದ ಚುನಾವಣೆಯಲ್ಲಿ ಸ್ವಲ್ಪ ಚೇತರಿಸಿಕೊಳ್ಳಲು ಕಾರಣವಾಗಿದ್ದು ಈ ಜಾತಿವಾರು ಒಡೆಯುವ ತಂತ್ರ. ಇದನ್ನು ಪ್ರಜ್ಞಾವಂತ ಜನರು ಅರ್ಥಮಾಡಿಕೊಳ್ಳಬೇಕು. ಜಾತಿಗಳ ನಡುವೆ ಇಲ್ಲದ ತಾರತಮ್ಯವನ್ನು ಎತ್ತಿ ತೋರಿಸಿ, ಹೇಗಾದರೂ ಮಾಡಿ ಹೆಚ್ಚು ಮತಗಳನ್ನು ಗಿಟ್ಟಿಸಿಕೊಳ್ಳುವ ಕಾಂಗ್ರೆಸ್‌ನ ಇಂಥ ತಂತ್ರಗಳಿಂದ ಜನರು ದೂರ ಇರಬೇಕಿದೆ.

ಕಾಂಗ್ರೆಸ್ ಒಂದು ಸಮರ್ಥ ವಿರೋಧ ಪಕ್ಷವಾಗಿ ನಡೆದುಕೊಳ್ಳಬೇಕಿದೆ. ಜನೋಪಯೋಗಿ ಕೆಲಸಗಳನ್ನು ಆಡಳಿತ ಪಕ್ಷದಿಂದ ಮಾಡಿಸುವ ಜವಾಬ್ದಾರಿಯನ್ನು ಹೊರಬೇಕಾಗಿದೆ. ತನ್ಮೂಲಕ ತಾನು ನಿಜವಾದ ಜನಾನುರಾಗಿ ಪಕ್ಷ ಎಂದು ಗುರುತಿಸಿಕೊಳ್ಳಬೇಕಿದೆ. ಅದಿಲ್ಲದಿದ್ದಲ್ಲಿ ಭವಿಷ್ಯದಲ್ಲಿ ಆಡಳಿತ ಪಕ್ಷವಾಗುವುದು ಕಾಂಗ್ರೆಸ್ ಪಾಲಿಗೆ ಕನಸೇ ಆಗಿ ಉಳಿದೀತು.

(ಲೇಖಕರು ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 88

ಸಮಾಚಾರ ಸಣ್ಣದಲ್ಲ

ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ

ವಾಷಿಂಗ್ಟನ್: ನ.5ರಂದು ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಭಾರತ ಮೂಲದ ಕಮಲಾ ಹ್ಯಾರಿಸ್ ಕಣಕ್ಕಿಳಿಯುವುದು ಖಚಿತವಾಗಿದೆ. ಅಮೆರಿಕ ಅಧ್ಯಕ್ಷ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗುವುದಕ್ಕೆ ಅಗತ್ಯವಾದಷ್ಟು ಪಕ್ಷದ ಪ್ರತಿನಿಧಿಗಳ ಮತಗಳನ್ನು ಪಡೆಯುವಲ್ಲಿ ಕಮಲಾ ಹ್ಯಾರಿಸ್ ಯಶಸ್ವಿಯಾಗಿದ್ದಾರೆ ಎಂದು ಪಕ್ಷದ ರಾಷ್ಟ್ರೀಯ ಸಮಿತಿ ಅಧ್ಯಕ್ಷ ಜೇಮ್ ಹ್ಯಾರಿಸನ್ ಪ್ರಕಟಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಕಮಲಾ ಹ್ಯಾರಿಸ್, ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ಅಭ್ಯರ್ಥಿಯಾಗುವುದು ಗೌರವ ತಂದಿದೆ. ವರ್ಚುವಲ್ ನಾಮನಿರ್ದೇಶನ ಪ್ರಕ್ರಿಯೆ ಅವಧಿ ಮುಗಿದ ಬಳಿಕ(ಮುಂದಿನ ವಾರ) ನಾಮ ನಿರ್ದೇಶನ ಅಧಿಕೃತವಾಗಿ ಸ್ವೀಕರಿಸುತ್ತೇನೆ ಎಂದಿದ್ದಾರೆ. ನ.5ರಂದು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಮತ್ತು ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಪೈಪೋಟಿ ನಡೆಯಲಿದೆ.

ಕೇರಳ, ತ.ನಾಡಿಗೆ ಎನ್‌ಜಿಟಿ ನೋಟಿಸ್

ಭೂಕುಸಿತ ಭೀತಿ ಸ್ಥಳಗಳಲ್ಲಿ ಕಾಮಗಾರಿ: ರಾಷ್ಟ್ರೀಯ ಪರಿಸರ ನ್ಯಾಯ ಮಂಡಳಿ-ದಕ್ಷಿಣ ವಿಭಾಗದ ಪ್ರಶ್ನೆ

ವಯನಾಡು: ಪರಿಸರ ಸೂಕ್ಷ್ಮ ಮತ್ತು ಭೂಕುಸಿತದ ಅಪಾಯವಿರುವ ಸ್ಥಳಗಳೆಂದು ಗುರುತಿಸಿರುವ ಪಶ್ಚಿಮ ಘಟ್ಟಗಳ ಬೆಟ್ಟದ ಇಳಿಜಾರುಗಳಲ್ಲಿ ಕಾಮಗಾರಿಗಳಿಗೆ ಅವಕಾಶ ನೀಡಿದ್ದೇಕೆ ಎಂದು ಪ್ರಶ್ನೆ ಮಾಡಿರುವ ರಾಷ್ಟ್ರೀಯ ಪರಿಸರ ನ್ಯಾಯಮಂಡಳಿಯ ದಕ್ಷಿಣ ಪೀಠ(ಎನ್‌ಜಿಟಿ-ಎಸ್), ಕೇರಳ ಮತ್ತು ತಮಿಳುನಾಡು ರಾಜ್ಯ ಸರಕಾರಗಳಿಗೆ ಶನಿವಾರ ನೋಟಿಸ್ ಜಾರಿ ಮಾಡಿದೆ.

ಕೇರಳದ ವಯನಾಡು ಜಿಲ್ಲೆಯ ಮುಂಡಕ್ಕೈ ಮತ್ತು ಚೂರಲ್‌ಮಲಾ ಪ್ರದೇಶದಲ್ಲಿ ಜು.30ರ ನಸುಕಿನಲ್ಲಿ ಸಂಭವಿಸಿದ ಭೀಕರ ಭೂಕುಸಿತಕ್ಕೆ ಮಾನವ ಹಸ್ತಕ್ಷೇಪವೇ ಕಾರಣ ಎಂದು ತಜ್ಞರು ವಿಶ್ಲೇಷಣೆ ಮಾಡಿದ್ದು, ಪೀಠ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದೆ. ಅಲ್ಲದೇ, ಎರಡೂ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು, ರಾಜ್ಯ ವಿಪತ್ತು ನಿರ್ವಹಣಾ ಅಧಿಕಾರಿಗಳು, ಕೇರಳದ ವಯನಾಡು ಮತ್ತು ಇಡುಕ್ಕಿ ಹಾಗೂ ತಮಿಳುನಾಡಿನ ನೀಲಗಿರಿ ಮತ್ತು ಕೊಯಮತ್ತೂರು ಜಿಲ್ಲಾಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ.

ವಯನಾಡು ಭೂಕುಸಿತ ಹೇಗೆ ಸಂಭವಿಸಿತು ಎಂಬ ವಿವರ ಈಗ ಬೇಕಿಲ್ಲ. ಬದಲಾಗಿ, ಇಂಥ ದುರಂತ ಮರುಕಳಿಸದಂತೆ ಮಾಡಲು ಸರಕಾರ ಏನೇನು ಕ್ರಮ ಕೈಗೊಂಡಿದೆ ಎಂಬುದನ್ನು ವಿವರಿಸಿ ಎಂದು ನ್ಯಾ.ಪುಷ್ಪಾ ಸತ್ಯನಾರಾಯಣ ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

ತಮಿಳುನಾಡಿಗೂ ಚಾಟಿ

ಭೂಕುಸಿತ ಭೀತಿಯ ಪ್ರದೇಶಗಳಲ್ಲಿ ಇನ್ನು ಮುಂದೆ ಯಾವುದೇ ನಿರ್ಮಾಣ ಕಾರ್ಯ ಮಾಡುವಂತಿಲ್ಲ ಎಂದು ಪೀಠ ಕಟ್ಟುನಿಟ್ಟಿನ ಸೂಚನೆ ಹೊರಡಿಸಿದೆ. ತಮಿಳುನಾಡಿನ ನೀಲಗಿರಿ ಮತ್ತು ವಾಲ್ಪಾರೈ ಪ್ರದೇಶಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ರೆಸಾರ್ಟ್‌ಗಳು ಇರುವುದಕ್ಕೆ ಪೀಠ ತೀವ್ರ ಕಳವಳ ವ್ಯಕ್ತಪಡಿಸಿದೆ. ಜನರ ಜೀವ-ಜೀವನಕ್ಕೆ ಅಪಾಯ ಕಾರಿಯಾಗಿರುವ ರೆಸಾರ್ಟ್‌ಗಳನ್ನು ಪ್ರವಾಸೋದ್ಯಮ ಇಲಾಖೆ ಏಕೆ ನಿಯಂತ್ರಿ ಸುತ್ತಿಲ್ಲ? ಎಂದು ನ್ಯಾ.ಪುಷ್ಪಾ ಸತ್ಯನಾರಾಯಣ ಪ್ರಶ್ನಿಸಿದರು. ಗಿರಿಧಾಮಗಳಲ್ಲಿ ಕಟ್ಟಡಗಳ ನಿರ್ಮಾಣ ನಿರ್ಬಂಧಿಸುವ ತಮಿಳುನಾಡು ಜಿಲ್ಲಾ ಪುರಸಭೆ ಗಳ ಕಾಯಿದೆ-1920ರ 'ಅಧ್ಯಾಯ 10 ಎ'ನಲ್ಲಿ ಸೂಚಿಸಿ ರುವ ಅಂಶಗಳನ್ನು ತಮಿಳುನಾಡು ಸರಕಾರ ಕಟ್ಟುನಿಟ್ಟಾಗಿ ಅನುಸರಿಸುತ್ತಿದೆಯೇ? ಎಂದು ಪೀಠ ಪ್ರಶ್ನಿಸಿದೆ.

ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಬೆಟ್ಟದ ಇಳಿಜಾರುಗಳಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಿರುವುದೇಕೆ? ಎಂದು ಪ್ರಶ್ನಿಸಿರುವ ಪೀಠ, ಎರಡೂ ರಾಜ್ಯ ಸರಕಾರಗಳ ನಡೆಗೆ ಅಸಮಾಧಾನ ವ್ಯಕ್ತಪಡಿಸಿದೆ.

ಭೂಕುಸಿತ ಸಂಭವಿಸಿದ ವಯನಾಡು ಜಿಲ್ಲೆಯ ವೈತಿರಿ ತಾಲೂಕನ್ನು ಪರಿಸರ ಸೂಕ್ಷ್ಮ ವಲಯ-1 ಎಂದು ದಶಕಗಳ ಹಿಂದೆಯೇ ಪರಿಸರ ತಜ್ಞ ಮಾಧವ್ ಗಾಡ್ಗೀಳ್ ನೇತೃತ್ವದ ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿ ಗುರುತಿಸಿ ದಾಖಲಿಸಿದೆ. ಅಲ್ಲದೇ, ಇಲ್ಲಿ ಪರಿಸರಕ್ಕೆ ಧಕ್ಕೆ ತರುವಂತಹ ಯಾವುದೇ ಚಟುವಟಿಕೆ ನಡೆಸವಂತಿಲ್ಲ ಎಂದೂ ಸ್ಪಷ್ಟವಾಗಿ ತಿಳಿಸಿದೆ. ಅದರಲ್ಲೂ ಭೂಕುಸಿತ ಸಂಭವಿಸಿದ ವಯನಾಡಿನ ಮೆಪ್ಪಾಡಿ ಪ್ರದೇಶದ ಚೂರಲ್‌ಮಲಾ ಮತ್ತು ಮುಂಡಕ್ಕೈ ಗ್ರಾಮಗಳಿರುವ ಪ್ರದೇಶ ಬಂಡೆಯಂಥ ಗಟ್ಟಿ ನೆಲದ ಮೇಲೆ ರೂಪತಾಳಿಲ್ಲ, ಅಲ್ಲಿ ಬಹಳ ಮೆದುವಾದ ಕೆಂಪು ಮಣ್ಣು ಇರುವ ಜಾಗ. ನೀರಿನಲ್ಲಿ ಸರಾಗ ಕೊಚ್ಚಿಕೊಂಡು ಹೋಗುವಂತಹುದು. ಹಾಗಿದ್ದೂ ಇಲ್ಲಿ ಅಷ್ಟೊಂದು ಕಟ್ಟಡಗಳು ನಿರ್ಮಾಣವಾಗಿದ್ದು ಹೇಗೆ? ಉತ್ತರಿಸಿ ಎಂದು ನ್ಯಾಯಪೀಠ ಹೇಳಿದೆ.

ಎಕ್ಸ್‌ಪ್ರೆಸ್ ರೈಲುಗಳಿಗೆ 2500 ಸಾಮಾನ್ಯ ಬೋಗಿ ಜೋಡಣೆ

ಪ್ರಯಾಣಿಕರ ದಟ್ಟಣೆ ತಗ್ಗಿಸಲು ಕ್ರಮ: ಸಚಿವ

ದೆಹಲಿ: ಭಾರತೀಯ ರೈಲ್ವೆಯ ಕೋಟ್ಯಂತರ ಪ್ರಯಾಣಿಕರಿಗೆ ಸಂತಸ ತರುವ ಸುದ್ದಿಯನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಯಲ್ಲಿ ಶನಿವಾರ ಪ್ರಕಟಿಸಿದರು. ದೇಶದಲ್ಲಿ ಸದ್ಯ ಸಂಚರಿಸುತ್ತಿರುವ ಎಲ್ಲಾ 'ಎಕ್ಸ್‌ಪ್ರೆಸ್ ರೈಲು'ಗಳಿಗೆ ಮುಂದಿನ ಕೆಲ ತಿಂಗಳಲ್ಲಿ 2500 ಸಾಮಾನ್ಯ ಬೋಗಿಗಳನ್ನು ಅಳವಡಿಸಲು ಭಾರತೀಯ ರೈಲ್ವೆ ಇಲಾಖೆ ಸಿದ್ಧತೆ ನಡೆಸಿದೆ ಎಂದರು.

ಭಾರತೀಯ ರೈಲ್ವೆ ವೇಗದ ರೈಲುಗಳಲ್ಲಿನ ಸಾಮಾನ್ಯ ಬೋಗಿ ಸಂಖ್ಯೆ ಹೆಚ್ಚಿಸಲಿದೆ. ಮೇಲ್ ಎಕ್ಸ್‌ಪ್ರೆಸ್‌ನಲ್ಲಿ 4 ಸಾಮಾನ್ಯ ಬೋಗಿ ಅಳವಡಿಸಲಾಗುವುದು. ನೂಕುನುಗ್ಗಲು ತಗ್ಗಿಸಲು ಈ ನಿರ್ಧಾರಕ್ಕೆ ಬರಲಾಗಿದೆ. 2,500 ಸಾಮನ್ಯ ಬೋಗಿಗಳನ್ನು ತಯಾರಿಸುವ ಕೆಲಸ ಆರಂಭಿಸಿದ್ದೇವೆ ಎಂದರು. ಇದರಿಂದ ಬಡ ಮತ್ತು ಮಧ್ಯಮ ವರ್ಗದ ರೈಲು ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗುವ ನಿರೀಕ್ಷೆ ಇದೆ.

ಸ್ಲೀಪರ್ ಮತ್ತು ಕಾಯ್ದಿರಿಸದಿರುವ ಕೋಚ್ ಹಾಗೂ ಸಾಮಾನ್ಯ ಬೋಗಿ ಅನುಪಾತ ಮೂರನೇ ಎರಡರಷ್ಟು ಇರುತ್ತವೆ. ಮೂರನೇ ಒಂದು ಭಾಗ ಗುಣಮಟ್ಟದ ಎಸಿ ಕೋಚ್‌ಗಳಿರುತ್ತವೆ ಎಂದು ವಿವರಿಸಿದರು.

ಭಾರತೀಯ ರೈಲ್ವೆ ೀ ದೇಶದ ಜೀವನಾಡಿ ಎಂದು ಬಣ್ಣಿಸಿದ ಸಚಿವರು, ರೈಲ್ವೆಯ 12 ಲಕ್ಷ ಉದ್ಯೋಗಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಇವರೆಲ್ಲಾ ಸೇರಿ ನಿತ್ಯವೂ 20 ಸಾವಿರ ರೈಲು ಸುಗಮ ಸಂಚಾರ ನಡೆಸುವಂತೆ ನೋಡಿಕೊಳ್ಳುತ್ತಾರೆ ಎಂದರು.

ರೈಲ್ವೆ ಕೈಗೊಳ್ಳುವ ಸುರಕ್ಷತಾ ಕ್ರಮಗಳ ಕುರಿತು ಮಾತನಾಡಿ, ಕಳೆದೊಂದು ದಶಕದಲ್ಲಿ 26.52 ಲಕ್ಷದಷ್ಟು ಅಲ್ಟ್ರಾಸಾನಿಕ್ ದೋಷ ಪತ್ತೆ ಪರೀಕ್ಷೆ ನಡೆಸಲಾಗಿದೆ. ಸುರಕ್ಷತಾ ಕ್ರಮಗಳನ್ನು ಹೆಚ್ಚಿಸಲು ಅನೇಕ ಹೊಸ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ ಎಂದು ವಿವರಿಸಿದರು.

ಎಸ್‌ಸಿ-ಎಸ್‌ಟಿ ಒಳಮೀಸಲಿಗೆ ಕೇಂದ್ರ ಸಚಿವ ಚಿರಾಗ್ ವಿರೋಧ

ಮರು ಪರಿಶೀಲನಾ ಅರ್ಜಿ ಸಲ್ಲಿಸಲು ನಿರ್ಧಾರ

ಪಟನಾ: ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡಗಳಲ್ಲಿನ ಮೀಸಲಾತಿಯಲ್ಲಿ ಒಳಮೀಸಲು ಕಲ್ಪಿಸಲು ರಾಜ್ಯಗಳಿಗೆ ಅವಕಾಶ ನೀಡುವ ಸುಪ್ರೀಂ ಕೋರ್ಟ್ ತೀರ್ಪನ್ನು ಕೇಂದ್ರ ಸಚಿವ, ಲೋಕ ಜನಶಕ್ತಿ ಪಕ್ಷದ (ಎಲ್‌ಜೆಪಿ) ವರಿಷ್ಠ ಮುಖಂಡ ಚಿರಾಗ್ ಪಾಸ್ವಾನ್ ವಿರೋಧಿಸಿದ್ದಾರೆ. ಸುಪ್ರೀಂ ಆದೇಶದ ವಿರುದ್ಧ ಪಕ್ಷ ಮೇಲ್ಮನವಿ ಸಲ್ಲಿಸಲಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಶೇ.15 ಕೋಟಾದಲ್ಲಿ ಒಳ ಮೀಸಲಾತಿ ಕಲ್ಪಿಸಲು ರಾಜ್ಯಗಳಿಗೆ ಅವಕಾಶ ನೀಡುವ ತೀರ್ಪನ್ನು ಮರುಪರಿಶೀಲಿಸುವಂತೆ (ರಿವ್ಯೂ ಪಿಟಿಷನ್) ಅರ್ಜಿ ಸಲ್ಲಿಸಲಾಗುವುದು. ಮೀಸಲು ಪ್ರಮಾಣದಲ್ಲಿ ಕೆನೆ ಪದರಕ್ಕೆ ಅವಕಾಶ ನೀಡಿಲ್ಲ. ಅಸ್ಪೃಶ್ಯತೆಯಿಂದ ಸಾಮಾಜಿಕವಾಗಿ ಅಂಚಿಗೆ ದೂಡಿರುವ ವರ್ಗವನ್ನು ಮೇಲೆತ್ತುವ ಉದ್ದೇಶವು ಒಳ ಮೀಸಲಾತಿಗೆ ಅವಕಾಶ ನೀಡುವುದರಿಂದ ಈಡೇರುವುದಿಲ್ಲ ಎಂದು ಎನ್‌ಡಿಎ ಮೈತ್ರಿಕೂಟದ ಅಂಗ ಪಕ್ಷವಾಗಿರುವ ಎಲ್‌ಜೆಪಿ ಪಕ್ಷದ ಮುಖಂಡ ಪ್ರತಿಪಾದಿಸಿದರು.

ಪರಿಶಿಷ್ಟ ಜಾತಿ-ಪಂಗಡದ ಜನರಲ್ಲಿ ಉತ್ತಮ ಕೌಟುಂಬಿಕ ಹಿನ್ನೆಲೆಯವರು, ಉನ್ನತ ಶಿಕ್ಷಣ ಹೊಂದಿದವವರು ಸಹ ಈಗಲೂ ಅಸ್ಪೃಶ್ಯತೆ ಅನುಭವಿಸುತ್ತಾರೆ. ಪ.ಜಾತಿಯಲ್ಲಿ ಒಳ ಮೀಸಲಾತಿ ಸಮರ್ಥನೀಯವಲ್ಲ ಎಂದರು.

ಆದರೆ, ಬಿಹಾರ ಮುಖ್ಯಮಂತ್ರಿ, ಎನ್‌ಡಿಎ ಮೈತ್ರಿಕೂಟದ ಅಂಗಪಕ್ಷವಾಗಿರುವ ಜೆಡಿಯು ಪಕ್ಷದ ಮುಖಂಡ ನಿತೀಶ್ ಕುಮಾರ್ ಅವರು ಸುಪ್ರೀಂ ಕೋರ್ಟ್ ತೀರ್ಪನ್ನು ಸ್ವಾಗತಿಸಿದ್ದಾರೆ.

ಭೂಕುಸಿತ ಪ್ರದೇಶ ಪುನರ್ವಸತಿಗೆ 3 ಕೋಟಿ ನೆರವು: ಮೋಹನ್ ಲಾಲ್

ಬಿಟಿಎ ಲೆ.ಕರ್ನಲ್ ಸಮವಸ್ತ್ರದಲ್ಲೇ ಸ್ಥಳ ಪರಿಶೀಲನೆ



ಮುಂಡಕ್ಕೈ: 'ಭಾರತೀಯ ಟೆರಿಟೋರಿಯಲ್ ಆರ್ಮಿ'(ಬಿಟಿಎ)ಯಲ್ಲಿ ಗೌರವಾರ್ಥ ಲೆಫ್ಟಿನೆಂಟ್ ಕರ್ನಲ್ ಹುದ್ದೆ ಅಲಂಕರಿಸಿರುವ ಖ್ಯಾತ ಬಹುಭಾಷಾ ನಟ ಮೋಹನ್ ಲಾಲ್ ಶನಿವಾರ ಭೂಕುಸಿತ ಸಂತ್ರಸ್ತ ಮುಂಡಕ್ಕೈ ಮತ್ತು ಚೂರಲ್‌ಮಲಾ ಪ್ರದೇಶಗಳಿಗೆ ಭೇಟಿ ನೀಟಿ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಮರುಗಿದರು. ವಿಪತ್ತು ಪೀಡಿತ ಪ್ರದೇಶದಲ್ಲಿ ಪುನರ್ವಸತಿ ಕಾರ್ಯಕ್ಕಾಗಿ 3 ಕೋಟಿ ರು. ನೆರವನ್ನು ತಮ್ಮ ತಂದೆ-ತಾಯಿ ಹೆಸರಲ್ಲಿ ಸ್ಥಾಪಿಸಿರುವ ಪ್ರತಿಷ್ಠಾನದಿಂದ ನೀಡುವುದಾಗಿ ಪ್ರಕಟಿಸಿದರು.

ಸೇನಾ ಸಮವಸ್ತ್ರದಲ್ಲಿಯೇ ಮೆಪ್ಪಾಡಿಯ ಸೇನಾ ಶಿಬಿರಕ್ಕೆ ಆಗಮಿಸಿದ ಮೋಹನಲಾಲ್, ಸ್ವಲ್ಪ ಸಮಯ ಅಧಿಕಾರಿಗಳ ಜತೆ ಚರ್ಚೆ ನಡೆಸಿದರು. ಬಳಿಕ ಭೂಕುಸಿತವಾಗಿದ್ದ ಪ್ರದೇಶಕ್ಕೆ ತೆರಳಿ ಅವಲೋಕಿಸಿದರು. ಚೂರಲ್‌ಮಲಾ, ಮುಂಡಕ್ಕೈ ಮತ್ತು ಪುಂಚಿರಿಮಟ್ಟಂ ಮತ್ತಿತರ ಸ್ಥಳಗಳನ್ನು ವೀಕ್ಷಿಸಿದರು. ಸೇನೆ ಮತ್ತು ಸ್ಥಳೀಯರು, ರಕ್ಷಣಾ ಕಾರ್ಯಕರ್ತರ ಜತೆ ಸಂವಾದ ನಡೆಸಿ ಘಟನೆಯ ತೀವ್ರತೆಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಸುದ್ದಿಗಾರರ ಜತೆ ಮಾತನಾಡಿ, ವಿಪತ್ತಿನ ಪ್ರಮಾಣ ನೇರ ವೀಕ್ಷಿಸಿದರಷ್ಟೇ ಅರ್ಥವಾಗುತ್ತದೆ. ಸೇನೆ, ನೌಕಾಪಡೆ, ವಾಯುಪಡೆ, ಎನ್‌ಡಿಆರ್‌ಎಫ್, ಅಗ್ನಿಶಾಮಕ ಮತ್ತು ರಕ್ಷಣಾ ಇಲಾಖೆ, ಇತರೆ ಸಂಸ್ಥೆಗಳು, ಸ್ಥಳೀಯರು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿರುವುದು ಪ್ರಶಂಸಾರ್ಹ. ಎಲ್ಲರೂ ಅತ್ಯದ್ಭುತ ರೀತಿ ಕೆಲಸ ಮಾಡುತ್ತಿದ್ದಾರೆ ಎಂದರು. ತಮ್ಮ ತಂದೆ-ತಾಯಿ ಹೆಸರಿನಲ್ಲಿ ಸ್ಥಾಪಿಸಿರುವ ವಿಶ್ವಶಾಂತಿ ಪ್ರತಿಷ್ಠಾನದಿಂದ ಭೂಕುಸಿತ ಪ್ರದೇಶದ ಪುನರ್ವಸತಿ ಕಾರ್ಯಗಳಿಗೆ 3 ಕೋಟಿ ರು. ನೆರವು ನೀಡಲು ನಿರ್ಧರಿಸಲಾಗಿದೆ. ಅಗತ್ಯವಿದ್ದರೆ ಇನ್ನೂ ಹೆಚ್ಚಿನ ಹಣ ಒದಗಿಸಲಾಗುವುದು ಎಂದು ಮೋಹನಲಾಲ್ ಹೇಳಿದರು.

ಹಾನಿಗೀಡಾಗಿರುವ ಮುಂಡಕ್ಕೈ ಶಾಲೆ ಮರು ನಿರ್ಮಾಣ ಕಾರ್ಯವನ್ನು ಪ್ರತಿಷ್ಠಾನದಿಂದ ಮಾಡಲಾಗುವುದು ಎಂದು ಚಲನಚಿತ್ರ ನಿರ್ದೇಶಕ ಮೇಜರ್ ರವಿ ಹೇಳಿದರು.

ತ.ನಾಡು ಗಜಸಂತತಿ 3063

ಒಂದೇ ವರ್ಷದಲ್ಲಿ 102 ಆನೆಗಳ ಹೆಚ್ಚಳ

ಚೆನ್ನೈ: ತಮಿಳುನಾಡು ರಾಜ್ಯದ ಕಾಡುಗಳಲ್ಲಿ ಒಟ್ಟು ಗಜಸಂತತಿ ಸಂಖ್ಯೆ 3063ಕ್ಕೇರಿದೆ. ಕಳೆದೊಂದು ವರ್ಷದಲ್ಲಿ 102 ಆನೆಗಳ ಹೆಚ್ಚಳವಾಗಿದೆ ಎಂದು ಹೇಳಿದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಂತಸ ವ್ಯಕ್ತಪಡಿಸಿದರು.

2024ರ ಗಜಗಣತಿ ವರದಿಯನ್ನು ಶನಿವಾರ ಪ್ರಕಟಿಸಿದ ಅವರು, ಕಳೆದ ವರ್ಷ ರಾಜ್ಯದ ಕಾಡುಗಳಲ್ಲಿ 2961 ಆನೆಗಳಿದ್ದವು. 2017ರಲ್ಲಿ ಗಣತಿ ಮಾಡಿದಾಗ 2761 ಆನೆಗಳಿದ್ದವು. ರಾಜ್ಯದ ಕಾಡುಗಳಲ್ಲಿ ವರ್ಷದಿಂದ ವರ್ಷಕ್ಕೆ ಗಜ ಸಂತತಿ ಹೆಚ್ಚುತ್ತಿರುವುದು ಸಂತಸ ತಂದಿದೆ ಎಂದರು.

ದಕ್ಷಿಣ ಭಾರತದ ನಾಲ್ಕು ರಾಜ್ಯಗಳು(ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶ) ಸಂಯೋಜಿತ ಆನೆ ಗಣತಿ 2024ರಲ್ಲಿ (ಮೇ 23-25) ನಡೆದಿದೆ. ಅದರಂತೆ 4 ರಾಜ್ಯಗಳಲ್ಲಿ ಒಟ್ಟು ಆನೆಗಳ ಸಂಖ್ಯೆ 14 ಸಾವಿರಕ್ಕೂ ಅಧಿಕವಾಗಿದೆ ಎಂದರು.

ಡಿಜಿಟಲ್ ವೇದಿಕೆ- ಬಾಂಗ್ಲಾ ನಿಷೇಧ

ವಾಟ್ಸಾಪ್, ಇನ್‌ಸ್ಟಾಗ್ರಾಂ, ಟಿಕ್‌ಟಾಕ್, ಯೂಟ್ಯೂಬ್‌ಗೆ ತಡೆ

ಢಾಕಾ: ದೇಶದಲ್ಲಿ ಜನರು ಸಾಮಾಜಿಕ ಜಾಲತಾಣ ವೇದಿಕೆಗಳಾದ ವಾಟ್ಸಾಪ್, ಇನ್‌ಸ್ಟಾಗ್ರಾಂ, ಟಿಕ್‌ಟಾಕ್, ಯೂಟ್ಯೂಬ್ ಬಳಸುವುದನ್ನು ಬಾಂಗ್ಲಾದೇಶ ಪೂರ್ಣ ನಿಷೇಧಿಸಿ ಶನಿವಾರ ಆದೇಶ ಹೊರಡಿಸಿದೆ. ಬಾಂಗ್ಲಾದದಲ್ಲಿ ಮೆಟಾ ಕಂಪನಿಯ ಜಾಲತಾಣಗಳಿಗೆ ನಿರ್ಬಂಧ ಹೇರಿರುವುದು ಇದೇ ಮೊದಲೇನಲ್ಲ. ಜುಲೈನಲ್ಲೇ ಫೇಸ್‌ಬುಕ್, ಇನ್‌ಸ್ಟಾಗ್ರಾಂ ನಿಷೇಧಿಸಲಾಗಿತ್ತು. ಟರ್ಕಿ ದೇಶದಲ್ಲೂ ಇನ್‌ಸ್ಟಾಗ್ರಾಂಗೆ ನಿಷೇಧ ಹೇರಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-1, ಕೆ.ಐ.ಎ.ಡಿ.ಬಿ (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ, ನೆಲಮಂಗಲ
ನಂ.14/3, 1ನೇ ಮಹಡಿ, ಮಹರ್ಷಿ ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು. ದೂರವಾಣಿ : 080-22236840
ಇ-ಮೇಲ್: slao1bmicp.kiadb.in

ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/ಬೆಂ.ಗ್ರಾ.ನೆ/570/2024-25 ದಿನಾಂಕ:26.07.2024

ಸಾರ್ವಜನಿಕ ನೋಟೀಸು

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(1)ರ ಅನ್ವಯ)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕೊಡಿಗೇಹಳ್ಳಿ ಗ್ರಾಮದಲ್ಲಿ ಈ ಕೆಳಕಂಡ ಸರ್ವೆ ನಂಬರ್ ಜಮೀನುಗಳನ್ನು ಕೈಗಾರಿಕಾ ಪ್ರದೇಶದ ಸ್ಥಾಪನೆಗಾಗಿ ಕೆಐಡಿಬಿ ಕಾಯ್ದೆ 1966 ಕಲಂ 28(1)ರಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 29 ಎಸ್ಪಿಕ್ಯೂ 2024 ದಿ:25.06.2024ರ ಪ್ರಕಾರ ಹೊರಡಿಸಿ, ಕರ್ನಾಟಕ ರಾಜ್ಯ ಪತ್ರ ದಿ:27.06.2024ರಲ್ಲಿ ಪ್ರಕಟಿಸಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ಕಲಂ 28(1) ಪ್ರಕಾರ ಈ ಕೆಳಗೆ ವಿವರಿಸಿರುವ ಸ್ವತ್ತುಗಳು ಕರ್ನಾಟಕ ರಾಜ್ಯ ಸರ್ಕಾರಕ್ಕೆ ಎಲ್ಲಾ ರೀತಿಯ ಋಣಭಾರಗಳಿಂದ ವಿಮುಕ್ತಗೊಂಡು ಸರ್ಕಾರಕ್ಕೆ ನಿಹಿತಗೊಂಡಿರುತ್ತದೆ.

ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳ ಸರ್ವೆ ನಂಬರ್ ವಿವರುಗಳು

ಕ್ರ. ಸಂ	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಐನ್ ಎ-ಗುಂ	ಖರಾಬು ಎ-ಗುಂ	ಉಳಿಕೆ ಎ-ಗುಂ
1	2	3	4	5	6	7
ಗ್ರಾಮ: ಕೊಡಿಗೇಹಳ್ಳಿ ತಾಲ್ಲೂಕು: ನೆಲಮಂಗಲ		ಹೋಬಳಿ: ತ್ಯಾಮಗೊಂಡ್ಲು ಜಿಲ್ಲೆ: ಬೆಂಗಳೂರು ಗ್ರಾಮಾಂತರ				
1.	ಸರ್ಕಾರಿ ಗೋಮಾಳ	ಸರ್ಕಾರಿ ಗೋಮಾಳ	68	24-25	24-25	-
2.	ಹೆಚ್. ವಿ. ಕೆಂಪಣ್ಣ ಬಿನ್ ಲೇಟ್ ವೆಂಕಟರಮಣಶೆಟ್ಟಿ, ರಾಘವೇಂದ್ರ ಬಿನ್ ವೀರಣ್ಣ, ರಾಧ ಕೋಂ ನಾಗರಾಜ್ ರಾಜೇಶ್ವರಿ ಕೋಂ ನವೀನ್ ಹನ್ರಿ ಕಾಮತ್, ಅರ್ಚನ ಮರಳಿ ಬಿನ್ ಲೇಟ್ ಗೋಪಾಲಕೃಷ್ಣ ಆದ್ಯಾ	ಹೆಚ್. ವಿ. ಕೆಂಪಣ್ಣ ಬಿನ್ ಲೇಟ್ ವೆಂಕಟ ರಮಣಶೆಟ್ಟಿ, ರಾಘವೇಂದ್ರ ಬಿನ್ ವೀರಣ್ಣ, ರಾಧ ಕೋಂ ನಾಗರಾಜ್ ರಾಜೇಶ್ವರಿ ಕೋಂ ನವೀನ್ ಹನ್ರಿ ಕಾಮತ್, ಅರ್ಚನ ಮರಳಿ ಬಿನ್ ಲೇಟ್ ಗೋಪಾಲಕೃಷ್ಣ ಆದ್ಯಾ	69/1	4-27	0-02	4-25
3.	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	69/2	0-12	-	0-12
4.	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	69/3	0-17	-	0-17
5.	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	69/4	0-12	-	0-12
6.	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	ಕೆ.ಎಸ್. ಬಸವಪ್ರಭು ಬಿನ್ ಕೆ.ಎಲ್ ಸದಾಶಿವಯ್ಯ	69/5	2-20	0-00.08	2-20
7.	ಪಿ.ಎ. ಪ್ರಿಯಾ ಮಂದಣ್ಣ ಕೋಂ ಬಿ.ಎ. ಮಂದಣ್ಣ, ಪಿ.ಚಿ. ಅಪ್ಪಚ್ಚ ಬಿನ್ ಪಿ. ಚಿಟ್ಟಿಯಪ್ಪ	ಪಿ.ಎ. ಪ್ರಿಯಾ ಮಂದಣ್ಣ ಕೋಂ ಬಿ.ಎ. ಮಂದಣ್ಣ, ಪಿ.ಚಿ. ಅಪ್ಪಚ್ಚ ಬಿನ್ ಪಿ. ಚಿಟ್ಟಿಯಪ್ಪ	69/6	2-20.08	0-00.08	2-20
8.	ಬೈರಣ್ಣ ಬಿನ್ ಈ. ಲಿಂಗಪ್ಪ	ಬೈರಣ್ಣ ಬಿನ್ ಈ. ಲಿಂಗಪ್ಪ	69/7	0-20	-	0-20
9.	ಹೆಂಚಾರಪ್ಪ ಬಿನ್ ಕೆಂಪಬೈರಪ್ಪ, ಗಂಗನಾಗಪ್ಪ ಬಿನ್ ಕೆಂಪಬೈರಪ್ಪ, ನಾಗಪ್ಪ ಬಿನ್ ಈರ ಲಿಂಗಪ್ಪ, ಕೆಂಪಬೈರಪ್ಪ ಬಿನ್ ಈ. ಲಿಂಗಪ್ಪ,	ಹೆಂಚಾರಪ್ಪ ಬಿನ್ ಕೆಂಪಬೈರಪ್ಪ, ಗಂಗನಾಗಪ್ಪ ಬಿನ್ ಕೆಂಪಬೈರಪ್ಪ, ನಾಗಪ್ಪ ಬಿನ್ ಈರ ಲಿಂಗಪ್ಪ, ಕೆಂಪಬೈರಪ್ಪ ಬಿನ್ ಈ. ಲಿಂಗಪ್ಪ,	69/8	7-29	0-07	7-22
10.	ಆರ್.ಸೋಮಶೇಖರಯ್ಯ ಬಿನ್ ರುದ್ರಯ್ಯ, ಕೃಷ್ಣಪ್ಪ ಬಿನ್ ಹನುಮಂತಯ್ಯ,	ಆರ್.ಸೋಮಶೇಖರಯ್ಯ ಬಿನ್ ರುದ್ರಯ್ಯ, ಕೃಷ್ಣಪ್ಪ ಬಿನ್ ಹನುಮಂತಯ್ಯ,	70/1	3-33	0-01.08	3-31.08
11.	ಬಾಬು ಬಿನ್ ಶಿವನಯ್ಯ, ಪುಟ್ಟಮ್ಮ ಕೋಂ ಬಂಡಿಯಪ್ಪ	ಬಾಬು ಬಿನ್ ಶಿವನಯ್ಯ, ಪುಟ್ಟಮ್ಮ ಕೋಂ ಬಂಡಿಯಪ್ಪ	70/2	1-25	0-01	1-24
12.	ಸೋಮಶೇಖರಯ್ಯ ಬಿನ್ ಲೇಟ್ ಆಂಜಿನಪ್ಪ	ಸೋಮಶೇಖರಯ್ಯ ಬಿನ್ ಲೇಟ್ ಆಂಜಿನಪ್ಪ	70/3	1-36	0-00.12	1-35.04
13.	ರಾಮಚಂದ್ರಯ್ಯ ಬಿನ್ ಲೇಟ್ ಆಂಜಿನಪ್ಪ	ರಾಮಚಂದ್ರಯ್ಯ ಬಿನ್ ಲೇಟ್ ಆಂಜಿನಪ್ಪ	70/4	1-37	0-00.12	1-36.04
14.	ಮುದ್ದಮ್ಮ ಕೋಂ ನಾಗಪ್ಪ	ಮುದ್ದಮ್ಮ ಕೋಂ ನಾಗಪ್ಪ	70/4	0-32	0-00.08	0-32
15.	ಪುಟ್ಟನರಸಮ್ಮ ಕೋಂ ಹುಲಿಯಪ್ಪ	ಪುಟ್ಟನರಸಮ್ಮ ಕೋಂ ಹುಲಿಯಪ್ಪ	70/5	0-32.08	0-00.08	0-32
16.	ಸರ್ಕಾರಿ ಗೋಮಾಳ	ಸರ್ಕಾರಿ ಗೋಮಾಳ	71	26-33	26-33	-
17.	ಚಿಕ್ಕಹನುಮಂತರಾಯಪ್ಪ ಬಿನ್ ಆಂಜಿನಪ್ಪ	ಚಿಕ್ಕಹನುಮಂತರಾಯಪ್ಪ ಬಿನ್ ಆಂಜಿನಪ್ಪ	99/1	1-12	-	1-12
18.	ಗಂಗನಾಗಪ್ಪ ಬಿನ್ ಕೆಂಪಬೈರಣ್ಣ, ರತ್ನಮ್ಮ ಕೋಂ ಗಂಗರಾಜು ಉರುಫ್ ಗಂಗಯ್ಯ, ಲಿಂಗಮ್ಮ ಉರುಫ್ ಗಂಗಮ್ಮ ಕೋಂ ಲೇಟ್ ವೀರಣ್ಣ, ಎಂ. ಮಂಜುನಾಥ್ ಬಿನ್ ಮುನಿರಾಜು	ಗಂಗನಾಗಪ್ಪ ಬಿನ್ ಕೆಂಪಬೈರಣ್ಣ, ರತ್ನಮ್ಮ ಕೋಂ ಗಂಗರಾಜು ಉರುಫ್ ಗಂಗಯ್ಯ, ಲಿಂಗಮ್ಮ ಉರುಫ್ ಗಂಗಮ್ಮ ಕೋಂ ಲೇಟ್ ವೀರಣ್ಣ, ಎಂ. ಮಂಜುನಾಥ್ ಬಿನ್ ಮುನಿರಾಜು	99/2	3-02	-	3-02
19.	ಹೆಚ್. ವಿ. ವೀರಯ್ಯ ಬಿನ್ ವಿರಭದ್ರಯ್ಯ	ಹೆಚ್. ವಿ. ವೀರಯ್ಯ ಬಿನ್ ವಿರಭದ್ರಯ್ಯ	99/3	1-01	-	1-01
20.	ಕರಿಯಣ್ಣ ಬಿನ್ ಲೇಟ್ ಮಾಳಯ್ಯ, ಹೆಂಜಾರಯ್ಯ ಬಿನ್ ಲೇಟ್ ಮಾಳಯ್ಯ	ಕರಿಯಣ್ಣ ಬಿನ್ ಲೇಟ್ ಮಾಳಯ್ಯ, ಹೆಂಜಾರಯ್ಯ ಬಿನ್ ಲೇಟ್ ಮಾಳಯ್ಯ	100	10-05	0-01	10-04
21.	ಬೈರಣ್ಣ ಬಿನ್ ಲೇಟ್ ಚಿಕ್ಕಹನುಮಕ್ಕ, ನಾರಾಯಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ, ನಾಗರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಗೋವಿಂದರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಕೃಷ್ಣಪ್ಪ ಹೆಚ್. ಬಿನ್ ಲೇಟ್ ಚಿಕ್ಕಹನುಮಕ್ಕ, ಪುಟ್ಟಲಿಂಗಯ್ಯ ಬಿನ್ ಲೇಟ್ ಗಂಗಮ್ಮ, ಸಿದ್ದರಾಜು ಬಿನ್ ಲೇಟ್ ಗಂಗಮ್ಮ, ಹನುಮಂತರಾಜು ಹೆಚ್. ಬಿನ್ ಲೇಟ್ ಗಂಗಮ್ಮ, ಭೈರಣ್ಣ ಬಿನ್ ಲೇಟ್ ಚಿಕ್ಕಹನುಮಕ್ಕ, ನಾರಾಯಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ, ನಾಗರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಗೋವಿಂದರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಕೃಷ್ಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ,	ಬೈರಣ್ಣ ಬಿನ್ ಲೇಟ್ ಚಿಕ್ಕಹನುಮಕ್ಕ, ನಾರಾಯಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ, ನಾಗರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಗೋವಿಂದರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಕೃಷ್ಣಪ್ಪ ಹೆಚ್. ಬಿನ್ ಲೇಟ್ ಚಿಕ್ಕಹನುಮಕ್ಕ, ಪುಟ್ಟಲಿಂಗಯ್ಯ ಬಿನ್ ಲೇಟ್ ಗಂಗಮ್ಮ, ಸಿದ್ದರಾಜು ಬಿನ್ ಲೇಟ್ ಗಂಗಮ್ಮ, ಹನುಮಂತರಾಜು ಹೆಚ್. ಬಿನ್ ಲೇಟ್ ಗಂಗಮ್ಮ, ಭೈರಣ್ಣ ಬಿನ್ ಲೇಟ್ ಚಿಕ್ಕಹನುಮಕ್ಕ, ನಾರಾಯಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ, ನಾಗರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಗೋವಿಂದರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಕೃಷ್ಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ,	101/1	3-37.08	0-01	3-36.08
22.	ಲಕ್ಷ್ಮಣಗೌಡ .ಟಿ.ಎಲ್. ಬಿನ್ ಲೇಟ್ .ಟಿ. ಎನ್. ಲಕ್ಷ್ಮೀನರಸಿಂಹಯ್ಯ	ಲಕ್ಷ್ಮಣಗೌಡ .ಟಿ.ಎಲ್. ಬಿನ್ ಲೇಟ್ .ಟಿ. ಎನ್. ಲಕ್ಷ್ಮೀನರಸಿಂಹಯ್ಯ	101/2	0-36	-	0-36
23.	ಮಾಳಯ್ಯ ಬಿನ್ ಲೇಟ್ ನರಸಿಂಹಯ್ಯ, ಸಿದ್ದರಾಜು ಬಿನ್ ಲೇಟ್ ನರಸಿಂಹಯ್ಯ, ಮುನಿರಾಜು ಬಿನ್ ಲೇಟ್ ನರಸಿಂಹಯ್ಯ	ಮಾಳಯ್ಯ ಬಿನ್ ಲೇಟ್ ನರಸಿಂಹಯ್ಯ, ಸಿದ್ದರಾಜು ಬಿನ್ ಲೇಟ್ ನರಸಿಂಹಯ್ಯ, ಮುನಿರಾಜು ಬಿನ್ ಲೇಟ್ ನರಸಿಂಹಯ್ಯ	101/3	0-36.08	-	0-36.08
24.	ಲಕ್ಷ್ಮಣಗೌಡ .ಟಿ.ಎಲ್. ಬಿನ್ ಲೇಟ್ .ಟಿ. ಎನ್. ಲಕ್ಷ್ಮೀನರಸಿಂಹಯ್ಯ	ಲಕ್ಷ್ಮಣಗೌಡ .ಟಿ.ಎಲ್. ಬಿನ್ ಲೇಟ್ .ಟಿ. ಎನ್. ಲಕ್ಷ್ಮೀನರಸಿಂಹಯ್ಯ	101/4	0-36.08	-	0-36.08
25.	ಎಮ್. ಮುನಿರತ್ನಮ್ಮ ಕೋಂ ಕೆ.ಎಸ್. ನರಸಪ್ಪ	ಎಮ್. ಮುನಿರತ್ನಮ್ಮ ಕೋಂ ಕೆ.ಎಸ್. ನರಸಪ್ಪ	101/5	0-36.08	-	0-36.08
26.	ಸಾಕಮ್ಮ ಕೋಂ ಲೇಟ್ ತಿಮ್ಮಯ್ಯ, ಪದ್ಮ ಬಿನ್ ಲೇಟ್ ತಿಮ್ಮಯ್ಯ, ಶಾರದ ಬಿನ್ ಲೇಟ್ ತಿಮ್ಮಯ್ಯ,, ಬೈರಣ್ಣ ಬಿನ್ ಲೇಟ್ ಚಿಕ್ಕಹನುಮಕ್ಕ, ನಾರಾಯಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ, ನಾಗರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಗೋವಿಂದರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಕೃಷ್ಣಪ್ಪ ಹೆಚ್. ಬಿನ್ ಲೇಟ್ ಚಿಕ್ಕಹನುಮಕ್ಕ	ಸಾಕಮ್ಮ ಕೋಂ ಲೇಟ್ ತಿಮ್ಮಯ್ಯ, ಪದ್ಮ ಬಿನ್ ಲೇಟ್ ತಿಮ್ಮಯ್ಯ, ಶಾರದ ಬಿನ್ ಲೇಟ್ ತಿಮ್ಮಯ್ಯ,, ಬೈರಣ್ಣ ಬಿನ್ ಲೇಟ್ ಚಿಕ್ಕಹನುಮಕ್ಕ, ನಾರಾಯಣಪ್ಪ ಬಿನ್ ಲೇಟ್ ಚಿಕ್ಕಹನುಮಕ್ಕ, ನಾಗರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಗೋವಿಂದರಾಜು ಬಿನ್ ಲೇಟ್ ಚಿಕ್ಕಹನುಮಕ್ಕ, ಕೃಷ್ಣಪ್ಪ ಹೆಚ್. ಬಿನ್ ಲೇಟ್ ಚಿಕ್ಕಹನುಮಕ್ಕ	102/1	2-32	-	2-32
27.	ಸಾಕಮ್ಮ ಕೋಂ ಲೇಟ್ ತಿಮ್ಮಯ್ಯ, ಪದ್ಮ ಬಿನ್ ಲೇಟ್ ತಿಮ್ಮಯ್ಯ, ಶಾರದ ಬಿನ್ ಲೇಟ್ ತಿಮ್ಮಯ್ಯ,	ಸಾಕಮ್ಮ ಕೋಂ ಲೇಟ್ ತಿಮ್ಮಯ್ಯ, ಪದ್ಮ ಬಿನ್ ಲೇಟ್ ತಿಮ್ಮಯ್ಯ, ಶಾರದ ಬಿನ್ ಲೇಟ್ ತಿಮ್ಮಯ್ಯ,	102/2	2-28	-	2-28
28.	ಆರ್. ದೇವರಾಜ್ ಬಿನ್ ಲೇಟ್ ರಾಮಹನುಮಯ್ಯ	ಆರ್. ದೇವರಾಜ್ ಬಿನ್ ಲೇಟ್ ರಾಮಹನುಮಯ್ಯ	102/3	3-15	0-04	3-11
29.	ಕೆ.ರಂಗಯ್ಯ ಬಿನ್ ಕೆಂಪಯ್ಯ	ಕೆ.ರಂಗಯ್ಯ ಬಿನ್ ಕೆಂಪಯ್ಯ	103/1	6-09	0-04	6-05
30.	ಆರ್. ದೇವರಾಜ್ ಬಿನ್ ಲೇಟ್ ರಾಮಹನುಮಯ್ಯ	ಆರ್. ದೇವರಾಜ್ ಬಿನ್ ಲೇಟ್ ರಾಮಹನುಮಯ್ಯ	103/2	0-39	-	0-39
31.	ತಿಮ್ಮಬೈರಣ್ಣ ಬಿನ್ ಚಿಕ್ಕಣ್ಣ	ತಿಮ್ಮಬೈರಣ್ಣ ಬಿನ್ ಚಿಕ್ಕಣ್ಣ	104/1ಎ	3-20	0-02	3-18
32.	ಮುತ್ತರಾಯಪ್ಪ ಬಿನ್ ವೀರಣ್ಣ, ಕೆ.ಪಿ. ನರಸಿಂಹಮೂರ್ತಿ ಲೇಟ್ ಕೆ.ಸಿ. ಪುಟ್ಟನರಸಯ್ಯ	ಮುತ್ತರಾಯಪ್ಪ ಬಿನ್ ವೀರಣ್ಣ, ಕೆ.ಪಿ. ನರಸಿಂಹಮೂರ್ತಿ ಲೇಟ್ ಕೆ.ಸಿ. ಪುಟ್ಟನರಸಯ್ಯ	104/1ಬಿ	4-29	-	4-29
33.	ಶಿವರಾಮಯ್ಯ ಬಿನ್ ಲೇಟ್ ಗುರಪ್ಪ	ಶಿವರಾಮಯ್ಯ ಬಿನ್ ಲೇಟ್ ಗುರಪ್ಪ	104/2	0-25	-	0-25
34.	ಸರ್ಕಾರಿ ಗೋಮಾಳ, ಗ್ರಾಮೀಣ ನಿವೇಶನಕ್ಕೆ, ಪಿ.ಎಂ. ರಾಜು ಬಿನ್ ಲೇಟ್ ಪುಟ್ಟರಸಯ್ಯ, ಸಿದ್ದಪ್ಪ ಬಿನ್ ಪುಟ್ಟಯ್ಯ, ಶೆಟ್ಟಳಪ್ಪ ಬಿನ್ ಹನುಮಂತರಾಯಪ್ಪ, ಅರಸಮ್ಮ ಕೋಂ ವೆಂಕಟರಮಣಯ್ಯ, ಹರೀಶ್.ವಿ. ಬಿನ್ ಲೇಟ್ ವೆಂಕಟರಮಣಯ್ಯ, ಚಿಕ್ಕಣ್ಣ ಬಿನ್ ನರಸಯ್ಯ, ಹೆಚ್.ವಿ.ಮುದ್ದರಾಮಯ್ಯ ಬಿನ್ ವೆಂಕಟಪ್ಪ, ಲಕ್ಷ್ಮಮ್ಮ ಕೋಂ ದೊಡ್ಡಯ್ಯ, ರೇವಣ್ಣ ಬಿನ್ ಮುದ್ದಯ್ಯ ಬೇಬಿಜಾನ್ ಕೋಂ ಇಬ್ರಾಹಿಂ, ಹನುಮಂತಯ್ಯ ಬಿನ್ ಮುತ್ತಯ್ಯ, ಗಂಗಮ್ಮ ಕೋಂ ಕೆಂಪಯ್ಯ, ಜಿ. ಸಿದ್ದಗಂಗಯ್ಯ ಬಿನ್ ಲೇಟ್ ಗಂಗಯ್ಯ, ಜಿ. ಕೃಷ್ಣಪ್ಪ ಬಿನ್ ಲೇಟ್ ಗಂಗಯ್ಯ, ಜಿ. ಸಿದ್ದರಾಜು ಬಿನ್ ಲೇಟ್ ಗಂಗಯ್ಯ, ಸಿದ್ದಗಂಗಮ್ಮ ಬಿನ್ ಲೇಟ್ ಗಂಗಯ್ಯ, ಭಾಗ್ಯಮ್ಮ ಬಿನ್ ಲೇಟ್ ಗಂಗಯ್ಯ, ಗೌರಮ್ಮ ಕೋಂ ಲೇಟ್ ಸಿದ್ದಪ್ಪ, ಗಂಗಹನುಮಯ್ಯ ಬಿನ್ ಲೇಟ್ ಹನುಮಂತರಾಯಪ್ಪ, ಆಂಜಿನಪ್ಪ ಬಿನ್ ಲೇಟ್ ಹನುಮಂತರಾಯಪ್ಪ, ವೆಂಕಟಪ್ಪ ಬಿನ್ ಲೇಟ್ ವೆಂಕಟೇಶಯ್ಯ, ತಿಮ್ಮಯ್ಯ ಬಿನ್ ಲೇಟ್ ಅಜ್ಜಪ್ಪ, ಕೆಂಪಅರಸಯ್ಯ ಬಿನ್ ಲೇಟ್ ಅಜ್ಜಪ್ಪ, ಗಂಗಯ್ಯ ಬಿನ್ ಲೇಟ್ ಅಜ್ಜಪ್ಪ, ವೆಂಕಟಾಚಲ ಬಿನ್ ಲೇಟ್ ಅಜ್ಜಪ್ಪ, ಹನುಮಂತರಾಜು ಬಿನ್ ಲೇಟ್ ಲೆಂಕಹನುಮಯ್ಯ, ಕೃಷ್ಣಪ್ಪ ಬಿನ್ ಲೇಟ್ ಲೆಂಕಹನುಮಯ್ಯ, ಆಂಜಿನಪ್ಪ ಬಿನ್ ಹನುಮಂತರಾಯಪ್ಪ, ಗೋವಿಂದಪ್ಪ ಬಿನ್ ಚಿಕ್ಕವೆಂಕಟಪ್ಪ, ಶ್ರೀನಿವಾಸ್ ಬಿನ್ ವೆಂಕಟೇಶಯ್ಯ, ಲಕ್ಷ್ಮಮ್ಮ ಕೋಂ ನರಸಯ್ಯ, ಕೃಷ್ಣಪ್ಪ .ಹೆಚ್. ಬಿನ್ ಹನುಮಂತಯ್ಯ, ಗಂಗಮ್ಮ ಬಿನ್ ಮುತ್ತಮ್ಮ, ಲತಾ ಕೋಂ ಶಿವಲಿಂಗರಾಜು, ಚನ್ನಗಿರಿಯಪ್ಪ ಬಿನ್ ತಿಮ್ಮಯ್ಯ, ನಾಗರತ್ನ ಕೋಂ ಕೆ. ಕೃಷ್ಣಮೂರ್ತಿ, ಸೌಭಾಗ್ಯ ಕೋಂ ಗೋಪಾಲಕೃಷ್ಣ, ಬೈರಮ್ಮ ಕೋಂ ಗೋವಿಂದಯ್ಯ, ರಾಮಾಂಜಿನಪ್ಪ ಬಿನ್ ಮಲ್ಲಾರಯ್ಯ, ಲಕ್ಷ್ಮಮ್ಮ ಕೋಂ ಲೇಟ್ ಹನುಮಯ್ಯ, ಮಂಜಮ್ಮ ಕೋಂ ಲೇಟ್ ಆಂಜನಪ್ಪ, ಸರೋಜಮ್ಮ ಕೋಂ ಲೇಟ್ ಕೆ.ಬಿ. ಹನುಮಂತರಾಯಪ್ಪ, ಕೆ.ಬಿ. ರಾಜಣ್ಣ ಬಿನ್ ಲೇಟ್ ಬೈಲಪ್ಪ, ಗಂಗಮ್ಮ ಬಿನ್ ಲೇಟ್ ಬೈಲಪ್ಪ, ಬಿ.ರಾಮಯ್ಯ ಬಿನ್ ಲೇಟ್ ಬೈಲಪ್ಪ, ಕೆ.ಬಿ. ಕೃಷ್ಣಾಂಜೀರಾವ್ ಬಿನ್ ಲೇಟ್ ಬೈಲಪ್ಪ, ಭಾಗ್ಯ ಬಿನ್ ಲೇಟ್ ಬೈಲಪ್ಪ, ಜಿ. ರಾಜಣ್ಣ ಬಿನ್ ಲೇಟ್ ಗಂಗನಂಜಪ್ಪ, ಶಿವಣ್ಣ ಬಿನ್ ಲೇಟ್ ಗಂಗನಂಜಪ್ಪ	ಸರ್ಕಾರಿ ಗೋಮಾಳ, ಗ್ರಾಮೀಣ ನಿವೇಶನಕ್ಕೆ, ಪಿ.ಎಂ. ರಾಜು ಬಿನ್ ಲೇಟ್ ಪುಟ್ಟರಸಯ್ಯ, ಸಿದ್ದಪ್ಪ ಬಿನ್ ಪುಟ್ಟಯ್ಯ, ಶೆಟ್ಟಳಪ್ಪ ಬಿನ್ ಹನುಮಂತರಾಯಪ್ಪ, ಅರಸಮ್ಮ ಕೋಂ ವೆಂಕಟರಮಣಯ್ಯ, ಹರೀಶ್.ವಿ. ಬಿನ್ ಲೇಟ್ ವೆಂಕಟರಮಣಯ್ಯ, ಚಿಕ್ಕಣ್ಣ ಬಿನ್ ನರಸಯ್ಯ, ಹೆಚ್.ವಿ.ಮುದ್ದರಾಮಯ್ಯ ಬಿನ್ ವೆಂಕಟಪ್ಪ, ಲಕ್ಷ್ಮಮ್ಮ ಕೋಂ ದೊಡ್ಡಯ್ಯ, ರೇವಣ್ಣ ಬಿನ್ ಮುದ್ದಯ್ಯ ಬೇಬಿಜಾನ್ ಕೋಂ ಇಬ್ರಾಹಿಂ, ಹನುಮಂತಯ್ಯ ಬಿನ್ ಮುತ್ತಯ್ಯ, ಗಂಗಮ್ಮ ಕೋಂ ಕೆಂಪಯ್ಯ, ಜಿ. ಸಿದ್ದಗಂಗಯ್ಯ ಬಿನ್ ಲೇಟ್ ಗಂಗಯ್ಯ, ಜಿ. ಕೃಷ್ಣಪ್ಪ ಬಿನ್ ಲೇಟ್ ಗಂಗಯ್ಯ, ಜಿ. ಸಿದ್ದರಾಜು ಬಿನ್ ಲೇಟ್ ಗಂಗಯ್ಯ, ಸಿದ್ದಗಂಗಮ್ಮ ಬಿನ್ ಲೇಟ್ ಗಂಗಯ್ಯ, ಭಾಗ್ಯಮ್ಮ ಬಿನ್ ಲೇಟ್ ಗಂಗಯ್ಯ, ಗೌರಮ್ಮ ಕೋಂ ಲೇಟ್ ಸಿದ್ದಪ್ಪ, ಗಂಗಹನುಮಯ್ಯ ಬಿನ್ ಲೇಟ್ ಹನುಮಂತರಾಯಪ್ಪ, ಆಂಜಿನಪ್ಪ ಬಿನ್ ಲೇಟ್ ಹನುಮಂತರಾಯಪ್ಪ, ವೆಂಕಟಪ್ಪ ಬಿನ್ ಲೇಟ್ ವೆಂಕಟೇಶಯ್ಯ, ತಿಮ್ಮಯ್ಯ ಬಿನ್ ಲೇಟ್ ಅಜ್ಜಪ್ಪ, ಕೆಂಪಅರಸಯ್ಯ ಬಿನ್ ಲೇಟ್ ಅಜ್ಜಪ್ಪ, ಗಂಗಯ್ಯ ಬಿನ್ ಲೇಟ್ ಅಜ್ಜಪ್ಪ, ವೆಂಕಟಾಚಲ ಬಿನ್ ಲೇಟ್ ಅಜ್ಜಪ್ಪ, ಹನುಮಂತರಾಜು ಬಿನ್ ಲೇಟ್ ಲೆಂಕಹನುಮಯ್ಯ, ಕೃಷ್ಣಪ್ಪ ಬಿನ್ ಲೇಟ್ ಲೆಂಕಹನುಮಯ್ಯ, ಆಂಜಿನಪ್ಪ ಬಿನ್ ಹನುಮಂತರಾಯಪ್ಪ, ಗೋವಿಂದಪ್ಪ ಬಿನ್ ಚಿಕ್ಕವೆಂಕಟಪ್ಪ, ಶ್ರೀನಿವಾಸ್ ಬಿನ್ ವೆಂಕಟೇಶಯ್ಯ, ಲಕ್ಷ್ಮಮ್ಮ ಕೋಂ ನರಸಯ್ಯ, ಕೃಷ್ಣಪ್ಪ .ಹೆಚ್. ಬಿನ್ ಹನುಮಂತಯ್ಯ, ಗಂಗಮ್ಮ ಬಿನ್ ಮುತ್ತಮ್ಮ, ಲತಾ ಕೋಂ ಶಿವಲಿಂಗರಾಜು, ಚನ್ನಗಿರಿಯಪ್ಪ ಬಿನ್ ತಿಮ್ಮಯ್ಯ, ನಾಗರತ್ನ ಕೋಂ ಕೆ. ಕೃಷ್ಣಮೂರ್ತಿ, ಸೌಭಾಗ್ಯ ಕೋಂ ಗೋಪಾಲಕೃಷ್ಣ, ಬೈರಮ್ಮ ಕೋಂ ಗೋವಿಂದಯ್ಯ, ರಾಮಾಂಜಿನಪ್ಪ ಬಿನ್ ಮಲ್ಲಾರಯ್ಯ, ಲಕ್ಷ್ಮಮ್ಮ ಕೋಂ ಲೇಟ್ ಹನುಮಯ್ಯ, ಮಂಜಮ್ಮ ಕೋಂ ಲೇಟ್ ಆಂಜನಪ್ಪ, ಸರೋಜಮ್ಮ ಕೋಂ ಲೇಟ್ ಕೆ.ಬಿ. ಹನುಮಂತರಾಯಪ್ಪ, ಕೆ.ಬಿ. ರಾಜಣ್ಣ ಬಿನ್ ಲೇಟ್ ಬೈಲಪ್ಪ, ಗಂಗಮ್ಮ ಬಿನ್ ಲೇಟ್ ಬೈಲಪ್ಪ, ಬಿ.ರಾಮಯ್ಯ ಬಿನ್ ಲೇಟ್ ಬೈಲಪ್ಪ, ಕೆ.ಬಿ. ಕೃಷ್ಣಾಂಜೀರಾವ್ ಬಿನ್ ಲೇಟ್ ಬೈಲಪ್ಪ, ಭಾಗ್ಯ ಬಿನ್ ಲೇಟ್ ಬೈಲಪ್ಪ, ಜಿ. ರಾಜಣ್ಣ ಬಿನ್ ಲೇಟ್ ಗಂಗನಂಜಪ್ಪ, ಶಿವಣ್ಣ ಬಿನ್ ಲೇಟ್ ಗಂಗನಂಜಪ್ಪ	105ರ ಪೈಕಿ	44-08	44-08	-
35.	ಕಮಲಮ್ಮ ಕೋಂ ರಾಮಹನುಮಯ್ಯ	ಕಮಲಮ್ಮ ಕೋಂ ರಾಮಹನುಮಯ್ಯ	125	2-00	-	2-00
			ಒಟ್ಟು	175-19	96-13	79-06

-:: ಘೋಷ್ವಾರೆ ::-

ಕ್ರ. ಸಂ.	ಗ್ರಾಮದ ಹೆಸರು	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಐನು ಎ-ಗು	ಖರಾಬು ಎ-ಗು	ಬಾಕಿ ಎ-ಗು
1	ಕೊಡಿಗೇಹಳ್ಳಿ	175-19	96-13	79-06
	ಒಟ್ಟು	**175-19**	**96-13**	**79-06**

ಈ ಮೇಲ್ಕಂಡ ಜಮೀನಿನ ಖಾತೆದಾರರು/ಅನುಭದಾರರು ಹಾಗೂ ಹಿತಾಸಕ್ತಿದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1966ರ ವಿಧಿ 28(2)ರ ಮೇರೆಗೆ ಅಧಿಸೂಚಿತ ಖಾತೆದಾರರಿಗೆ/ಅನುಭವದಾರರಿಗೆ ತಿಳುವಳಿಕೆ ನೋಟೀಸುಗಳನ್ನು ಹೊರಡಿಸಿ ಜಾರಿ ಮಾಡಲಾಗಿದೆ ಹಾಗೂ ನೋಂದಣಿ ಅಂಚೆ ಮೂಲಕ ರವಾನಿಸಲಾಗಿದೆ. ಮೇಲ್ಕಂಡ ಜಮೀನಿನ ಖಾತೆದಾರರು/ಹಕ್ಕುದಾರರು ಈ ಪ್ರಕಟಣೆಯನ್ನು ಕೆ.ಐ.ಎ.ಡಿ. ಕಾಯ್ದೆ ವಿಧಿ 28(2)ರ ಮೇರೆಗೆ ತಿಳುವಳಿಕೆ ನೋಟೀಸು ಎಂದು ಪರಿಗಣಿಸತಕ್ಕದ್ದು.

ಪ್ರಸ್ತುತ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಭೂಮಾಲೀಕರು/ ಹಿತಾಸಕ್ತಿ ಉಳ್ಳವರು ತಮ್ಮ ಆಕ್ಷೇಪಣೆಗಳನ್ನು ರಾಜ್ಯಪತ್ರದಲ್ಲಿ ಈ ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ಅಗತ್ಯ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ಅವರ ಪರವಾಗಿ ಅಧಿಕಾರ ಪಡೆದವರು ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂಬುದಾಗಿ ಈ ಮೂಲಕ ಸಾರ್ವಜನಿಕ ಗಮನಕ್ಕೆ ತರಲಾಗಿದೆ. ಮೇಲ್ಕಂಡ ಗ್ರಾಮಗಳ ಜಮೀನುಗಳ ವಿಚಾರಣೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿ-1 (ಬಿಎಂಐಸಿಪಿ) ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ, ಕೆಐಎಡಿಬಿ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001 ಇಲ್ಲಿ ನಿಗದಿಪಡಿಸಲಾಗಿದೆ. ಸದರಿ ದಿನಾಂಕದಂದು ದಾಖಲಾತಿಗಳೊಂದಿಗೆ ಲಿಖಿತವಾಗಿ ಅಥವಾ ಖುದ್ದಾಗಿ ಹಾಜರಾಗಿ ಸಲ್ಲಿಸಲು ಸೂಚಿಸಿದೆ.

ಕ್ರ. ಸಂ.	ಗ್ರಾಮದ ಹೆಸರು	ಗೆಜೆಟ್ ಕ್ರ.ಸಂ ಇಂದ	ಗೆಜೆಟ್ ಕ್ರ.ಸಂ ವರೆಗೆ	ಸ.ನಂ. ಇಂದ	ಸ.ನಂ. ವರೆಗೆ	ವಿಚಾರಣಾ ದಿನಾಂಕ & ಸಮಯ
1	ಕೊಡಿಗೇಹಳ್ಳಿ	1	35	68	125	10.09.2024 ಬೆಳಿಗ್ಗೆ 11.00 ಗಂಟೆಗೆ

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-1
ಕೆಐಎಡಿಬಿ (ಬಿಎಂಐಸಿಪಿ) ಮತ್ತು ಬೆಂ.ಗ್ರಾಂ, ನೆಲಮಂಗಲ ತಾಲ್ಲೂಕು, ಬೆಂಗಳೂರು

ಸಮಾಚಾರ ಸಣ್ಣದಲ್ಲ

ಜಿಲ್ಲಾ ಮಟ್ಟದ ಕ್ರಿಕೆಟ್ ಕ್ವಿಜ್ ಆಗಸ್ಟ್ 11ಕ್ಕೆ

ಬಾಗಲಕೋಟೆ: ನವನಗರದ ಬೃಂದಾವನ ಬಡಾವಣೆ ಎದುರಿಗಿರುವ ಮರಾಠ ಭವನವದಲ್ಲಿ ಆ.11 ರಂದು ಬೆಳಗ್ಗೆ 10ಕ್ಕೆ ಜಿಲ್ಲಾ ಮಟ್ಟದ ಕ್ರಿಕೆಟ್ ಕ್ವಿಜ್ ಹಮ್ಮಿಕೊಳ್ಳಲಾಗಿದೆ. ವಯೋಮಿತಿ ಇಲ್ಲದೇ ಕ್ರಿಕೆಟ್ ಜ್ಞಾನವಿರುವ ಜಿಲ್ಲೆಯ ಯಾರು ಬೇಕಾದರೂ ಈ ಮುಕ್ತ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಹುದೆಂದು ಅಂಗಡಿ ಕ್ರಿಕೆಟ್ ಅಕಾಡೆಮಿಯ ಸ್ಥಾಪಕ ಉದಯ್ ಅಂಗಡಿ ತಿಳಿಸಿದ್ದಾರೆ. ಹಿರಿಯ ಕ್ರಿಕೆಟ್ ಆಟಗಾರ, ಕನ್ನಡದ ಖ್ಯಾತ ಕ್ರೀಡಾ ಕಾಮೆಂಟೇಟರ್ ಹಾಗೂ ಕ್ರೀಡಾ ವಿಶ್ಲೇಷಕ ಚಂದ್ರಮೌಳಿ ಕಣವಿ ಪಾಲ್ಗೊಳ್ಳುವ ಮೂಲಕ ಈ ಸ್ಪರ್ಧೆಗೆ ತಾರಾ ಮೆರೆಗು ನೀಡಲಿದ್ದು, ಜಿಲ್ಲೆಯ ಗಣ್ಯರು ಆಗಮಿಸಲಿದ್ದಾರೆ. ಪ್ರಥಮ, ದ್ವಿತೀಯ ಮತ್ತು ತೃತಿಯ ಬಂದವರಿಗೆ ನಗದು ಬಹುಮಾನ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ ಸಂ: 96863-05219 ಮತ್ತು 78488-66666 ಸಂಪರ್ಕಿಸಬಹುದು ಎಂದು ಕ್ರಿಕೆಟ್ ಕೋಚ್ ಉದಯ ಅಂಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಲವು ದಿನಗಳಿಂದ ನೀರು ಪೋಲು: ದೂರು

ಗುಳೇದಗುಡ್ಡ: ಪಟ್ಟಣದ ಡಿವಿಜನ್ ನಂ.4ರಲ್ಲಿನ ತಟ್ಟಿಮಠ ಅವರ ಮನೆಯ ಹತ್ತಿರ ವಾರ್ಡಿಗೆ ಸರಬರಾಜಾಗುತ್ತಿರುವ ಕುಡಿಯುವ ನೀರಿನ ಪೈಪ್

ಲೈನ್ ಒಡೆದು ಸಾಕಷ್ಟು ನೀರು ಪೋಲಾಗುತ್ತಿದೆ. ಕಳೆದ ಹದಿನೈದು ದಿನಗಳಿಂದ ನೀರು ಪೋಲಾಗುತ್ತಿದ್ದು, ಪುರಸಭೆಗೆ ಮಾಹಿತಿ ನೀಡಿದರೂ ಪುರಸಭೆ ಸಿಬ್ಬಂದಿ ಒಡೆದ ಪೈಪ್ ಲೈನ್ ದುರಸ್ತಿ ಮಾಡುತ್ತಿಲ್ಲ ಎಂದು ಡಿವಿಜನ್‌ನ ನಾಗರಿಕರು ದೂರಿದ್ದಾರೆ.

ನೀರು ಬಿಟ್ಟ ಸಂದರ್ಭದಲ್ಲಿ ಸಾಕಷ್ಟು ನೀರು ಪೋಲಾಗಿ ರಸ್ತೆಗೆ ನೀರು ಹರಿಯುತ್ತದೆ. ಪುರಸಭೆ ಅಧಿಕಾರಿಗಳು ನೋಡಿಯೂ ನೋಡದಂತೆ ಇದ್ದಾರೆ. ನೀರು ಪೋಲಾಗದಂತೆ ಪುರಸಭೆಯವರು ಕೂಡಲೇ ಈ ಪೈಪ್ ಲೈನ್‌ನನ್ನು ದುರಸ್ತಿಗೊಳಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕೃಷ್ಣಾ ನದಿಯ ಒಳ ಹರಿವು ಹೆಚ್ಚಳ

ರಬಕವಿ-ಬನಹಟ್ಟಿ: ರಬಕವಿಯ ಹೊಸ ಪೇಟಲೇನ್, ಮುತ್ತೂರ, ಕಟಾಲಕಟ್ಟಿ, ಯಾತಗೇರಿ, ಮಟ್ಟಿಕಲ್ಲಿ ಲೇನ್ ಪ್ರದೇಶಗಳಿಗೆ ಕೃಷ್ಣೆಯ ಹಿನ್ನೀರು ನುಗ್ಗುವ ಅಪಾಯ ಹೆಚ್ಚಿದೆ. ನದಿಗೆ ಸೇರುವ ಹಳ್ಳದ ನೀರಿನ ಹರಿವನ್ನು ಆಕ್ರಮಿಸಿಕೊಂಡಿರುವ ಹಿನ್ನೀರಿನ ಹೆಚ್ಚಳದ ಹಿನ್ನೆಲೆಯಲ್ಲಿ ಹಳ್ಳದ ನೀರು ಪ್ರವಹಿಸುವುದು ನಿಧಾನವಾಗಿದ್ದು, ಮಹಾರಾಷ್ಟ್ರದಲ್ಲಿ ಮಳೆ ಪ್ರಮಾಣ ಎರಡು ದಿನಗಳಿಂದ ಹೆಚ್ಚಿರುವುದರಿಂದ ಕೃಷ್ಣೆಯ ಒಳ ಹರಿವು ಹೆಚ್ಚಳಗೊಳ್ಳುವ ನಿರೀಕ್ಷೆಯಿದೆ. ಆಲಮಟ್ಟಿ ಜಲಾಶಯದಲ್ಲಿ ನೀರು ಸಂಗ್ರಹಣೆ ದೃಷ್ಠಿಯಿಂದ ಹೊರಹಾಕುವ ಪ್ರಮಾಣವನ್ನು 3.5 ಲಕ್ಷ ಕ್ಯೂಸೆಕ್‌ನಿಂದ 3ಲಕ್ಷ ಕ್ಯೂಸೆಕ್ ಇಳಿಕೆ ಮಾಡಿರುವುದರಿಂದ ಸದ್ಯ ಸ್ಥಿರತೆ ಕಾಯ್ದುಕೊಂಡಿರುವ ಕೃಷ್ಣಾ ನದಿಗೆ ಯಾವುದೇ ಕ್ಷಣದಲ್ಲಿ ಮಹಾ ನೀರು ಬಂದಲ್ಲಿ ರಬಕವಿ ನಗರಕ್ಕೆ ಪ್ರವಾಹ ತಪ್ಪಿದ್ದಲ್ಲ ಎಂದು ಹೊಸಪೇಟ ಲೇನ್ ಕೃಷ್ಣಾ ಸಂತ್ರಸ್ಥರ ಹೋರಾಟ ಸಮೀತಿ ಧುರೀಣ ಪ್ರಕಾಶ ಬೀಳಗಿ ದುಗುಡ ವ್ಯಕ್ತಪಡಿಸಿದ್ದಾರೆ.

ನಗರ ಸ್ವಚ್ಛತೆಗೆ ಸಾಥ್ ಕೊಟ್ಟ ಪೌರಾಯುಕ್ತ

ರಬಕ-ಬನಹಟ್ಟಿ: ಉತ್ತಮ ಹುದ್ದೆಯೊಂದಿಗೆ ಎಸಿ ಕೊಠಡಿಯಲ್ಲಿ ಕಾಲ ಕಳೆಯುವ ಪೌರಾಯುಕ್ತ ಹುದ್ದೆಯಿಂದ ದಿನಂಪ್ರತಿ ಬೆಳಗಿನ ಜಾವ 2 ಗಂಟೆಗಳ ಕಾಲ ಪೌರ ಕಾರ್ಮಿಕರೊಂದಿಗೆ ಇದ್ದು ರಬಕವಿ-ಬನಹಟ್ಟಿ ಅವಳಿ ನಗರ ಸ್ವಚ್ಛತೆಗೆ ಟೊಂಕ ಕಟ್ಟಿ ನಿಂತ ಪೌರಾಯುಕ್ತ ಜಗದೀಶ ಈಟಿ, ಕಟ್ಟಕಡೆಯ ಜನರ ಮಧ್ಯ ಇದ್ದು ನಗರ ಸ್ವಚ್ಛತೆಗೆ ಮುಂದಾಗಿರುವದು ನಿಜಕ್ಕೂ ಶ್ಲಾಘನೀಯ.

ನಗರದ ಬಸ್ ನಿಲ್ದಾಣ, ಗಾಂಧಿ, ವೃತ್ತ, ಶಂಕರಲಿಂಗ ವೃತ್ತ ಸೇರಿದಂತೆ ಅನೇಕ ಕಡೆಗಳಲ್ಲಿನ ಉದ್ಯಾನವನಗಳಿಗೆ ತೆರಳಿ ಕಾರ್ಮಿಕರ ಜನತೆಗೂಡಿ ದಿನಂಪ್ರತಿ ಬೆಳಿಗ್ಗೆ ಸ್ವಚ್ಛತೆಯಲ್ಲಿ ಪಾಲ್ಗೊಂಡು ಶೇಷವಾಗಿದೆ.

ಸ್ವಚ್ಛತೆಗೆ ಪೌರ ಕಾರ್ಮಿಕರು ಇಲ್ಲವೇ ಎಂದು ಪ್ರಶ್ನಿಸಬೇಡಿ, ಅವರಿಗೆ ಸ್ಪೂರ್ತಿ ತುಂಬಲು ಪೌರಾಯುಕ್ತರು ಸಾಥ್ ನೀಡಿದರು. ಸ್ವಚ್ಛತೆ ಎನ್ನುವದು ಅನೇಕ ದಿನಗಳಿಂದ ನಗರಸಭೆಯ ಅಧ್ಯಕ್ಷ-ಉಪಾಧ್ಯಕ್ಷರಿಲ್ಲದೆ ಸ್ವಚ್ಛತೆ ಮರೀಚಿಕೆಯಾಗಿತ್ತು. ಅನೇಕ ದಿನಗಳಿಂದ ಉದ್ಯಾನವನ ಸೇರಿದಂತೆ ಕೆಲವಡೆ ಯಾರೂ ತಿರುಗಿ ನೋಡಿಲ್ಲ, ಸಾಕಷ್ಟು ಬಾರಿ ಆ ಪ್ರದೇಶದ ನಿವಾಸಿಗಳು ಮನ ಸಲ್ಲಿಸಿದರೂ ಪ್ರಯೋಜನವಾಗಿರಲಿಲ್ಲ. ಅಲ್ಲದೆ ಉದ್ಯಾನದಲ್ಲಿ ವಿಷ ಜಂತುಗಳ ಭಯ ಕಾಡುತ್ತಿತ್ತು. ಪುಂಡ ಪೋಕರಿಗಳು ದುರುಪಯೋಗಪಡಿಸಿಕೊಂಡಿದ್ದರು ಎಂದು ನಿವಾಸಿಗಳು ಆರೋಪಿಸಿದ್ದರು.

{ಎಚ್.ಕೆ.ಪಾಟೀಲ್} ಸಚಿವ

ರಾಜ್ಯದ ಜನಸಂಖ್ಯೆಯೇ 7 ಕೋಟಿ. ಅದರಲ್ಲಿ ಶೇ.50 ರಷ್ಟು ಯುವಕರಿದ್ದು, ಉಳಿದ 3.5 ಕೋಟಿ ಜನರ 35 ಲಕ್ಷ ಪ್ರಕರಣಗಳು ಬಾಕಿ ಉಳಿದಿವೆ. ಇದರ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕಿದೆ. ಕೋರ್ಟ್‌ಗೆ ಬರುವ ವ್ಯಕ್ತಿಯನ್ನು ತುಚ್ಛವಾಗಿ ನೋಡುವ ಸಂಸ್ಕೃತಿ ಬ್ರಿಟಿಷರ್ ಕಾಲದಿಂದ ಬಂದಿದೆ. ಕೋರ್ಟ್‌ಗೆ ಆಗಮಿಸುವ ಹಿರಿಯ ವ್ಯಕ್ತಿ ಸಾಕ್ಷಿದಾರರು ಸೇರಿದಂತೆ ಪ್ರತಿಯೊಬ್ಬರನ್ನು ಸರಿಯಾದ ದೃಷ್ಟಿಯಲ್ಲಿ ನೋಡುವುದಿಲ್ಲ. ಈ ಮನಸ್ಥಿತಿ ಬದಲಾಗಬೇಕಿದೆ.



ಬಾಗಲಕೋಟೆಯ ಕಾನೂನು ಕಾರ್ಯಾಗಾರದಲ್ಲಿ ಸಚಿವ ಎಚ್.ಕೆ.ಪಾಟೀಲ ಭರವಸೆ

ಜಿಲ್ಲೆಯಲ್ಲಿ ನೂತನ ಕೋರ್ಟ್ ಸ್ಥಾಪಿಸಲು ಕ್ರಮ

ಬಾಗಲಕೋಟೆ: ಜಿಲ್ಲೆಯಲ್ಲಿ ಘೋಷಣೆಯಾಗಿರುವ 7 ತಾಲೂಕುಗಳ ಪೈಕಿ ಮೂರ್‍ನಾಲ್ಕು ತಾಲೂಕುಗಳಲ್ಲಿ ಕೋರ್ಟ್ ಸ್ಥಾಪನೆಗೆ ಕ್ರಮವಹಿಸಲಾಗುತ್ತದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಭರವಸೆ ನೀಡಿದರು.

ಕಾನೂನು ಇಲಾಖೆ ಹಾಗೂ ಕಾನೂನುಗಳಲ್ಲಿ ಏನಾದರೂ ಸಲಹೆ ಹಾಗೂ ಸೂಚನೆಗಳನ್ನು ನೀಡಲು ಪ್ರತಿಯೊಬ್ಬರಿಗೂ ಮುಕ್ತ ಅವಕಾಶವಿದೆ. ಈ ರೀತಿ ಏನಾದರೂ ಇದ್ದರೆ ನನ್ನನ್ನು ಭೇಟಿಯಾಗಿ ನಿಮ್ಮ ಸಲಹೆ ನೀಡಬಹುದು.
-ಎಚ್.ಕೆ.ಪಾಟೀಲ, ಕಾನೂನು ಸಚಿವ

ಬಾಗಲಕೋಟೆಯ ವಕೀಲರ ಭವನದಲ್ಲಿ ಹಮ್ಮಿಕೊಂಡಿದ್ದ ಕಾನೂನು ಕಾರ್ಯಾಗಾರದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ ಮಾತನಾಡಿದರು.

ಇಲ್ಲಿನ ಕೋರ್ಟ್ ಆವರಣದಲ್ಲಿರುವ ವಕೀಲರ ಭವನದಲ್ಲಿ ರಾಜ್ಯ ವಕೀಲರ ಪರಿಷತ್ ಹಾಗೂ ನ್ಯಾಯವಾದಿಗಳ ಸಂಘದಿಂದ ಹಮ್ಮಿಕೊಂಡಿದ್ದ ಕಾನೂನು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನೂತನವಾಗಿ ಘೋಷಣೆಯಾಗಿರುವ ತಾಲೂಕುಗಳಲ್ಲಿ ಕಾಯಂ ಕೋರ್ಟ್ ಸ್ಥಾಪಿಸುವಂತೆ ಅನೇಕ ದಿನಗಳಿಂದ ಬೇಡಿಕೆ ಇದೆ. ಈ ಬಗ್ಗೆ ರಾಜ್ಯದ ಆರ್ಥಿಕ ಸ್ಥಿತಿ ಗಮನದಲ್ಲಿಟ್ಟುಂಡು ಮೂರ್‍ನಾಲ್ಕು ಕೋರ್ಟ್ ಸ್ಥಾಪನೆಗೆ ಕ್ರಮ ವಹಿಸಲಾಗುತ್ತದೆ ಎಂದು ತಿಳಿಸಿದರು.

ಜಿಲ್ಲೆಯ ಕೋರ್ಟ್‌ಗಳಲ್ಲಿ ಸುಸಜ್ಜಿತವಾದ ಗ್ರಂಥಾಲಯದ ಬೇಡಿಕೆ ಕೇಳಿ ಬಂದಿದ್ದು, ಇದಕ್ಕೆ ಹೆಚ್ಚಿನ ಖರ್ಚು ಬರುವುದಿಲ್ಲ. ಕಾರಣ ಗ್ರಂಥಾಲಯದ ಸ್ಥಾಪಿಸಲು ಬೇಕಿರುವ ಎಲ್ಲ ಸಹಾಯ ಹಾಗೂ ಸಹಕಾರವನ್ನು ಕಾನೂನು ಇಲಾಖೆ ನೀಡಲಿದೆ. ಜತೆಗೆ ಉತ್ತರ ಕರ್ನಾಟಕದಲ್ಲಿ ವಕೀಲರ ತರಬೇತಿ ಕೇಂದ್ರ ಸ್ಥಾಪನೆಗೆ ಕ್ರಮವಹಿಸಲಾಗುತ್ತದೆ ಎಂದು ತಿಳಿಸಿದರು.

ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿ ಎಚ್.ಪಿ.ಸಂದೇಶ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಕೀಲರು ನ್ಯಾಯ ಕೊಡಿಸುವ ಮಹತ್ವವಾದ ಜವಾಬ್ದಾರಿಯನ್ನು ಹೊಂದಿದ್ದು, ತಮ್ಮ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಅವರು ಜ್ಞಾನ ಹೆಚ್ಚಿಸಿಕೊಳ್ಳುವಲ್ಲಿ ನಿರತರಾಗುವ ಅವಶ್ಯಕತೆ ಹೆಚ್ಚಿದೆ ಎಂದರು.

ನ್ಯಾಯ ಕೊಡಿಸುತ್ತಾರೆ ಎಂದು ವಕೀಲರನ್ನು ನಂಬಿ ಬಂದವರಿಗೆ ನ್ಯಾಯ ಸಿಕ್ಕಾಗ ಮಾತ್ರ ವಕೀಲ ವೃತ್ತಿ ಮಾಡುತ್ತಿರುವುದಕ್ಕೆ ಸಾರ್ಥಕವಾಗುತ್ತದೆ. ನಮ್ಮಲ್ಲಿನ ಉತ್ಕೃಷ್ಟತೆ ಹೆಚ್ಚಿಸಿಕೊಂಡಾಗ ಮಾತ್ರ ವಕೀಲರಿಂದ ನ್ಯಾಯ ಒದಗಿಸಲು ಸಾಧ್ಯ. ಹಕ್ಕಿಗೆ ಚ್ಯುತಿ ಬಂದಾಗ ನೊಂದವರು ನಮ್ಮ ಬಳಿ ಬರುತ್ತಾರೆ. ಅವರಿಗೆ ನ್ಯಾಯ ಒದಗಿಸಿದಾಗ ಮಾತ್ರ ವೃತ್ತಿಗೆ ಸಾರ್ಥಕತೆ ಬರುತ್ತದೆ ಎಂದರು.

ಕಕ್ಷಿದಾರರಿಗೆ ನಿಮಗೆ ನ್ಯಾಯ ಸಿಗುವುದು ಪಕ್ಕಾ ಎಂದು ಹೇಳುವ ಮುಂಚೆ ಪ್ರಕರಣವನ್ನು ಸರಿಯಾಗಿ ಓದಿಕೊಂಡು, ಅದರ ಬಗ್ಗೆ ಅಧ್ಯಯನ ಮಾಡಿ ನಂತರ ಕಕ್ಷಿದಾರರಿಗೆ ಇರುವ ಸತ್ಯಾಂಶ ಹೇಳುವುದು ಉತ್ತಮ. ಇಲ್ಲದಿದ್ದರೆ ನೀವು ಹೇಳುವುದು ಒಂದು ಆಗುವುದು ಮತ್ತೊಂದಾದರೆ ಅವರಿಗೆ ಮತ್ತೆ ಏನಾದರೂ ಸಮಜಾಯಿಸಿ ನೀಡುವ ಪ್ರಮೆಯೇ ನಿಮ್ಮ ಮುಂದೆ ಬರಲ್ಲ ಎಂದರು.

ನಾನು ವಕೀಲ ವೃತ್ತಿ ಆರಂಭಿಸಿದಾಗ ನಮ್ಮ ಸಿನಿಯರ್ ವಕೀಲರು ಸರಸ್ವತಿ ಹಿಂದೆ ಹೋಗು ಅಂದಾಗ ಲಕ್ಷ್ಮೀ ಕಾಲು ಮುರಿದುಕೊಂಡು ಬರುತ್ತಾಳೆ ಎಂದು ಹೇಳಿದರು. ಅದರಂತೆ ನಾನು ನಡೆದುಕೊಂಡು ಬರುತ್ತಿದ್ದೇನೆ. ಯುವ ವಕೀಲರು ಕೂಡ ಇದನ್ನೇ ಅಳವಡಿಸಿಕೊಂಡಾ ವೃತ್ತಿಯಲ್ಲಿ ಯಶಸ್ಸು ಹೊಂದಲು ಸಾಧ್ಯ ಎಂದರು.

ಯುವ ವಕೀಲರು ವೃತ್ತಿಯಲ್ಲಿ ಒಳ್ಳೆಯ ಹೆಸರು ಪಡೆಯಲು ವೃತ್ತಿಯ ಮೊದಲ ದಿನದಿಂದಲೇ ಶ್ರದ್ಧೆಯಿಂದ ಕೆಲಸ ನಿರ್ವಹಿಸಬೇಕು. ಸಂಸ್ಕಾರ ಹಾಗೂ ಜ್ಞಾನದ ಮೂಲಕ ವೃತ್ತಿ ಪ್ರಾರಂಭಿಸಿದಾಗ ನಿಮ್ಮ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಸಾಧ್ಯ. ಹಿರಿಯ ವಕೀಲರು ಸಹಿತ, ಕಿರಿಯ ವಕೀಲರು ತಪ್ಪು ಮಾಡಿದಾಗ ಅವರಿಗೆ ತಿದ್ದಿ ಹೇಳುವ ಗುಣ ಬೆಳೆಸಿಕೊಳ್ಳುವ ಜತೆಗೆ ಅವರ ನಿತ್ಯದ ಖರ್ಚಿಗೆ ಹಣವನ್ನು ನೀಡುವುದನ್ನು ಮರೆಯಬೇಡಿ ಎಂದರು.

ಉಚ್ಚ ನ್ಯಾಯಾಲಯದ ಮತ್ತೊಬ್ಬ ನ್ಯಾಯಾಧೀಶ ಸಂಜೀವಕುಮಾರ ಹಂಚಾಟೆ ಮಾತನಾಡಿ, ನಮ್ಮ ಭಾಗದಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರಕರಣಗಳು ಹೆಚ್ಚಾಗಿರುವುದರಿಂದ ಸರಕಾರ ಘೋಷಿಸಿರುವ ಪ್ರತಿ ಹೊಸ ತಾಲೂಕಿನಲ್ಲಿ ನೂತನ ಕೋರ್ಟ್ ಸ್ಥಾಪಿಸಲು ಸರಕಾರ ಮುಂದಾಗಬೇಕು ಎಂದು ಮನವಿ ಮಾಡಿದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎನ್.ವಿ.ವಿಜಯ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ರಮೇಶ ಬದ್ನೂರ, ಕರಾವಪ ಸದಸ್ಯರಾದ ಕೆ.ಬಿ.ನಾಯಕ, ವಿ.ಟಿ.ಕಾಮರಡ್ಡಿ, ಎಸ್.ಎಚ್.ಆಸೀಫ್‌ಅಲಿ, ಎಸ್.ಎಸ್.ಮಿಠ್ಠಲಕೋಡ, ಪಿ.ಎಚ್.ನಾರಾಯಣಕರ ಸೇರಿದಂತೆ ಅನೇಕರಿದ್ದರು.

ಸಲಹೆಗಳನ್ನು ಪರಿಗಣಿಸದ ಕೇಂದ್ರ ಸರಕಾರ

ಕೇಂದ್ರ ಸರಕಾರ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ ಬದಲಾವಣೆ ಮಾಡಿ ಹೊಸ ಕಾನೂನು ಜಾರಿಗೆ ತಂದಿದೆ. ಇವುಗಳನ್ನು ಯಾವೊಬ್ಬ ವಕೀಲರು ಪ್ರಶ್ನಿಸಲಿಲ್ಲ. ಆದರೆ, ಕೇಂದ್ರ ಸರಕಾರ ಜಾರಿಗೆ ತಂದಿರುವ 3 ಹೊಸ ಕಾನೂನುಗಳನ್ನು ರಾಜ್ಯ ಸರಕಾರ ವಿರೋಧ ವ್ಯಕ್ತ ಪಡಿಸಿದೆ. ಈ ಕುರಿತು ರಾಜ್ಯ ಸರಕಾರ 23 ಸಲಹೆಗನ್ನು ನೀಡಿತ್ತು. ಆದರೆ, ಇದನ್ನು ಕೇಂದ್ರ ಸರಕಾರ ಪರಿಗಣಿಸಲಿಲ್ಲ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಕೊಪ್ಪದಲ್ಲಿ ಕೆರೆ ನಿರ್ಮಾಣಕ್ಕೆ ಆಗ್ರಹ

ಬೀಳಗಿ: ಬೇಸಿಗೆ ಸಮಯದಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆಯಾಗುತ್ತಿದ್ದು, ಕ್ರಾಸ್ ಕೊಪ್ಪ ಎಸ್.ಆರ್, ಗ್ರಾಮದಲ್ಲಿ ಖಾಲಿ ಇರುವ ಗರಸಿನ ಕ್ವಾರಿಯಲ್ಲಿ ಕೆರೆ ನಿರ್ಮಿಸಲು ಅನುಮತಿ ನೀಡಬೇಕು ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ನೀಡಲು ಆಗ್ರಹಿಸಿ ಹೆಗ್ಗೂರ ಗ್ರಾ.ಪಂ.ವ್ಯಾಪ್ತಿಯ 8 ಪುನರ್ ವಸತಿ ಕೇಂದ್ರಗಳ ಸಂತ್ರಸ್ತರು ಗ್ರಾ.ಪಂ ಹಾಗೂ ಬೀಳಗಿ ಪುನರವಸತಿ ಅಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸಂತ್ರಸ್ತರ ಮುಖಂಡ ಸಿದ್ದಪ್ಪ ಮೇಲನಾಡ ಮಾತನಾಡಿ, ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಆಲಮಟ್ಟಿ ಆಣೆಕಟ್ಟಿನ ಹಿನ್ನೀರಿನಿಂದ ಹೆಗ್ಗೂರು ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರಲಿರುವ ನಡುಗಡ್ಡೆ ಪ್ರದೇಶದ ಹಳ್ಳಿಗಳಾದ ಕೊಪ್ಪ ಎಸ್ ಆರ್,ಹೆಗ್ಗೂರು, ಲಿಂಗಾಪೂರ ಎಸ್ ಆರ್,ಗೋಡಿಹಾಳ, ಚಿನಿವಾಲ ಕೊಪ್ಪ, ಗುಂಡನಪಲ್ಲೆ ,ಮುತ್ತಲದಿನ್ನಿ, ಮುತ್ತಲದಿನ್ನಿ ತಾಂಡಾ ಮುಳಗಡೆಯಾಗಿ ಬೀಳಗಿ ಕ್ರಾಸಿನಲ್ಲಿರುವ ಪುನರ್ ವಸತಿ ಕೇಂದ್ರಗಳಿಗೆ ಸ್ಥಳಾಂತರಗೊಂಡಿದ್ದು ಜನ ಜಾನುವಾರುಗಳಿಗೆ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಕೊರತೆಯಾಗುತ್ತಿದ್ದು ಕೊಪ್ಪ ಎಸ್ ಆರ್ ಪುನರ್ ವಸತಿ ಕೇಂದ್ರದಲ್ಲಿ ಖಾಲಿ ಇರುವ ಗರಸಿನ ಕ್ವಾರಿಯನ್ನು ಕೆರೆಯಾಗಿ ಮಾರ್ಪಡಿಸಬೇಕು ಆಗ್ರಹಿಸಿದರು.

ಬೀಳಗಿ ತಾಲೂಕಿನ ಹೆಗ್ಗೂರ ಗ್ರಾ.ಪಂ. ವ್ಯಾಪ್ತಿಯ 8 ಗ್ರಾಮಗಳು ಗ್ರಾಮಸ್ಥರು ಕೊಪ್ಪ ಎಸ್.ಆರ್. ಖಾಲಿ ಜಾಗದಲ್ಲಿ ಕೆರೆ ನಿರ್ಮಿಸಲು ಅನುಮತಿ ನೀಡಲು ಹಾಗೂ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನೀಡಲು ಆಗ್ರಹಿಸಿ ಪುನರ್ ವಸತಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈಗ ಮಳೆಗಾಲ ಇರುವದರಿಂದ ಈ ಭಾಗದ ಜೀವನಾಡಿ ನದಿಗಳಾದ ಕೃಷ್ಣಾ, ಘಟಪ್ರಭ ತುಂಬಿ ಹರಿಯುತ್ತಿದ್ದು, ಶೀಘ್ರಗತಿಯಲ್ಲಿ ಕೆರೆ ನಿರ್ಮಾಣವನ್ನು ಮಹತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಮಾಡಬೇಕು ಇದರಿಂದಾಗಿ ಕೂಲಿ ಕಾರ್ಮಿರಿಗೆ ಉದ್ಯೋಗ ದೊರೆಯುತ್ತದೆ.
-ಕರಿಯಪ್ಪ ಹೆರಕಲ್ಲ, ಕೂಲಿ ಕಾರ್ಮಿಕ

ಈ ಬಗ್ಗೆ ಸಂಬದಿಸಿದ ಕೃಷ್ಣಾ ಮೇಲ್ದಂಡೆ ಯೋಜನೆಯ ಹಾಗೂ ಜಿಲ್ಲಾ ಪಂಚಾಯತ ಬಾಗಲಕೋಟವರು ಗರಸಿನ ಕ್ವಾರಿಯಲ್ಲಿ ಕೆರೆ ನಿರ್ಮಿಸಲು ಮಂಜೂರು ಮಾಡಿ ತಕ್ಷಣ ಕೆರೆ ನಿರ್ಮಾಣಕ್ಕೆ ಅನುಮತಿ ನೀಡಬೇಕು ಇಲ್ಲದಿದ್ದಲ್ಲಿ ಹೆಗ್ಗೂರು ಗ್ರಾ.ಪಂ.8 ಗ್ರಾಮಗಳ ಗ್ರಾಮಸ್ಥರು ಉಗ್ರ ಹೋರಾಟ ಮಾಡಬೇಕಾಗುತ್ತದೆ ಸರಕಾರಕ್ಕೆ ಎಚ್ಚರಿಸಿದರು.

ಈ ಸಂದರ್ಭದಲ್ಲಿ ರಾಮಣ್ಣ ತೋಳಮಟ್ಟಿ ಹುಲ್ಲಪ್ಪ ಹಳಬರ, ಪ್ರತಿಭಟನೆ ನೇತೃ ವಹಿಸಿದ್ದರು ಯುವಕರು ಹಿರಿಯರು ಮಹಿಳೆಯರು ಭಾಗಿಯಾಗಿದ್ದರು.

ಕೌಶಲ್ಯವೇ ಯಶಸ್ಸಿನ ಕೀಲಿಕೈ

ಮುಧೋಳ: ಇಂದಿನ ದಿನಗಳಲ್ಲಿ ಕೌಶಲ್ಯವೇ ಎಂಜನಿಯರಿಂಗ್ ವಿದ್ಯಾರ್ಥಿಗಳ ಯಶಸ್ಸಿನ ಕೀಲಿ ಕೈ, ಆದಕಾರಣ ವಿದ್ಯಾರ್ಥಿಗಳು ತಮ್ಮ ನಾಲ್ಕು ವರ್ಷದ ಶೈಕ್ಷಣಿಕ ಪಠ್ಯಕ್ರಮದಲ್ಲಿ ಅತಿ ಅವಶ್ಯವಾದ ಸಾಫ್ಟವೇರ್ ಕೌಶಲ್ಯಗಳನ್ನು ಬೆಳೆಸಿಕೊಳ್ಳುವಂತೆ ಲೇಖಕ ಯಶವಂತ ಕಾನಿಟ್ಕರ್ ಕರೆ ನೀಡಿದರು.

ಸ್ಥಳೀಯ ಬೀಳೂರು ಗುರುಬಸವ ಮಹಾಸ್ವಾಮಿಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ ಮುಧೋಳದ ನಾಲ್ಕನೇ ಪದವಿ ಪ್ರಧಾನ ಸಮಾರಂಭದಲ್ಲಿ ಅವರು ಮಾತನಾಡಿ ಗ್ರಾಮಿಣ ಭಾಗದಲ್ಲಿ ಸೂಸಜ್ಜಿತ ಇಂಜಿನಿಯರಿಂಗ ಕಾಲೇಜು ಆರಂಭಿಸುವ ಮೂಲಕ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣದ ಅಭಿರುಚಿಯನ್ನು ನೀಡುತ್ತಿರುವದಕ್ಕೆ ಅವರು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಬಿವಿವಿ. ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮಾತನಾಡಿ, ಮನೋಸ್ಥೈರ್ಯವೇ ವಿದ್ಯಾರ್ಥಿಗಳ ಅಪರೂಪದ ಶಕ್ತಿ, ನಮ್ಮ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಲ್ಲಿ ಅವಶ್ಯಕವಿರುವ ಎಲ್ಲಾ ತಾಂತ್ರಿಕ ಕೌಶಲ್ಯಗಳನ್ನು ವೃದ್ಧಿಪಡಿಸುವ ಮೂಲಕ ಅವರ ಮನೋಸ್ಥೆರ್ಯ ಹೆಚ್ಚಿಸಲಾಗುವುದು ಎಂದರು.

ಮಹಾಂತೇಶ ಶೆಟ್ಟರ ಮಾತನಾಡಿ, ವಿದ್ಯಾರ್ಥಿಗಳು ಪದವಿಯ ನಂತರ ದೃಡ ನಿರ್ಧಾರದೊಂದಿಗೆ, ನಮ್ಮ ತಾಂತ್ರಿಕ ಕೌಶಲ್ಯಗಳನ್ನು ಸದೃಡಗೊಳಿಸುವ ಉದ್ಯೋಗಗಳನ್ನು ಆಯ್ಕೆ ಮಾಡುವಂತೆ ತಿಳಿಸಿದರು. ಅದಕ್ಕಾಗಿ ಮಹಾವಿದ್ಯಾಲಯದಲ್ಲಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್, ಮಶಿನ್ ಲರ್ನಿಂಗ್, ಮೆಕ್ಯಾಟ್ರಾನಿಕ್ಸ್ ಮತ್ತು ನ್ಯಾನೋ ಇಲೆಕ್ಟ್ರಾನಿಕ್ಸ್ ನಂತಹ ವಿಷಯಗಳನ್ನು ಬೋಧಿಸಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಪದಕ : ಸಂಸ್ಥೆಯ ಪರವಾಗಿ ಸ್ಥಾಪಿಸಿರುವ ಮತ್ತು ಕೆಲವು ದಾನಿಗಳು ಕೊಡಮಾಡಿದ ಬಂಗಾರದ ಪದಕಗಳನ್ನು ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಸಿಮ್ರನ್ ಬಸ್ತಿ, ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮದಸ್ಸಿರ ಕೆರೂರು ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್‌ದ ಅಭಿಷೇಕ ಪರೀಟ ತಲಾ 3 ಬಂಗಾರದ ಪದಕಗಳನ್ನು, ಕಂಪ್ಯೂಟರ್ ಸೈನ್ಸ್ ವಿಭಾಗದ ತೇಜಸ್ವಿನ್ ಹತ್ತರಕಿ 2. ಮತ್ತು ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್‌ದ ರಿಹಾನ್ ಅಂಬಿ, ಎಮ್.ಬಿ.ಎ ವಿಭಾಗದ ನಯನೇಶ ಶಹಾ ತಲಾ ಒಂದು ಬಂಗಾರದ ಪದಕ ಪಡೆದುಕೊಂಡರು.

ಸ್ಥಳೀಯ ಬೀಳೂರು ಗುರುಬಸವ ಮಹಾಸ್ವಾಮಿಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ ಮುಧೋಳದ ನಾಲ್ಕನೇ ಪದವಿ ಪ್ರಧಾನ ಸಮಾರಂಭದಲ್ಲಿ ಲೇಖಕ ಯಶವಂತ ಕಾನಿಟ್ಕರ್‌ರನ್ನು ಗಣ್ಯರು ಸನ್ಮಾನಿಸುತ್ತಿರುವುದು.

ಪ್ರಾಚಾರ್ಯ ಡಾ. ಶ್ರವಣಕುಮಾರ ಕೆರೂರ, ಪ್ರೋ. ವಿನಯ ಶೆಟ್ಟರ್, ಪ್ರೋ. ವರುಣ ಸರ್ವದೆ, ಪ್ರೋ. ರಶ್ಮಿ ಕಿತ್ತಲಿ, ಪ್ರೋ. ಪ್ರಿಯಾಂಕಾ ತುಪ್ಪದ, ಸಂಘದ ಎಲ್ಲಾ ಗೌರವಾನ್ವಿತ ಸದಸ್ಯರು ಮಎಲ್ಲಾ ವಿಭಾಗದ ಮುಖ್ಯಸ್ಥರು ಬೋದಕ, ಬೋದಕೇತರ ಸಿಬ್ಬಂದಿ ವಿದ್ಯಾರ್ಥಿಗಳು ಮತ್ತು ಪಾಲಕರು ಇತರರಿದ್ದರು.

ಪ್ರವಾಸೋದ್ಯಮ ಜಿಲ್ಲಾ ಅಭಿವೃದ್ಧಿ ಸಮೀತಿ | ಅಕ್ರಮ ಹಣ ವರ್ಗಾವಣೆ ಪ್ರಕರಣ

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ: ಸಚಿವ

ಬಾಗಲಕೋಟೆ: ಜಿಲ್ಲೆಯ ಐಡಿಬಿಐ ಬ್ಯಾಂಕ್‌ನಲ್ಲಿ ಪ್ರವಾಸೋದ್ಯಮ ಜಿಲ್ಲಾ ಅಭಿವೃದ್ಧಿ ಸಮೀತಿ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆಯಾದ ಬಗ್ಗೆ ಪ್ರಕರಣದ ದಾಖಲಾಗಿದ್ದು, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಪ್ರವಾಸೋದ್ಯಮ ಸಚಿವರಾದ ಎಚ್.ಕೆ.ಪಾಟೀಲ ಹೇಳಿದರು.

ನೀರಿನ ಮಟ್ಟದಲ್ಲಿ ಇಳಿಕೆ

ಜಿಲ್ಲೆಯ ಕೃಷ್ಣಾ ಹಾಗೂ ಘಟಪ್ರಭಾ ನದಿಯ ನೀರಿನ ಮಟ್ಟದಲ್ಲಿ ಇಳಿಕೆಯಾಗುತ್ತಿದ್ದು, ಮುಂದಿನ ದಿನಕ್ಕೆ ಅನುಕೂಲವಾಗಬೇಕು ಎಂಬ ಕಾರಣದಿಂದ ನದಿಗಳಲ್ಲಿ ನೀರು ಶೇಖರಿಸುವ ಕಾರ್ಯ ಪ್ರಾರಂಭಿಸಲಾಗುತ್ತದೆ. ಜಿಲ್ಲೆಯ 203 ಗ್ರಾಮಗಳು ಪ್ರವಾಹದಿಂದ ಬಾದಿತವಾಗಿದ್ದು, ಅದರಲ್ಲಿ 29 ಗ್ರಾಮಗಳು ಪೂರ್ಣ ಹಾಗೂ 174 ಗ್ರಾಮಗಳು ಭಾಗಶಃ ಹಾನಿಯಾಗಿವೆ ಎಂದು ಗುರುತಿಸಲಾಗಿದೆ. ಪ್ರವಾಹದಿಂದ ಹಾನಿಯಾದ ಮನೆಗಳನ್ನು ಕಟ್ಟಿಕೊಳ್ಳಲು ಎಸ್ಸಿಎಸ್ಟಿ ಅವರಿಗೆ 1.50 ಲಕ್ಷ ರು. ಹಾಗೂ ಸಾಮಾನ್ಯರಿಗೆ 1.25 ಲಕ್ಷ ರು. ನೀಡಲು ಸರಕಾರ ತೀರ್ಮಾನಿಸಿದೆ. ಇನ್ನೂ ತೋಟಗಾರಿಕೆ ಹಾಗೂ ಕೃಷಿ ಇಲಾಖೆ ಸೇರಿ ಒಟ್ಟು 15,862 ಹೆಕ್ಟೇರ್ ಬೆಳೆ ಹಾನಿಯಾದ ಬಗ್ಗೆ ಮಾಹಿತಿ ಇದ್ದು, ನೀರು ಸಂಪೂರ್ಣ ಸರಿದ ನಂತರ ಸಮೀಕ್ಷೆ ನಡೆಸಲಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ತಿಳಿಸಿದರು.

ಇಲ್ಲಿನ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಒಟ್ಟು ಬ್ಯಾಂಕಿನ 9 ನೌಕರರು ಹಾಗೂ 33 ಜನ ಖಾಸಗಿ ವ್ಯಕ್ತಿಗಳು ಭಾಗಿಯಾಗಿದ್ದು ತನಿಖೆಯಿಂದ ತಿಳಿದು ಬಂದಿದೆ. ಬ್ಯಾಂಕಿನ ನೌಕರರ ಪೈಕಿ 3 ಜನ ಹಾಗೂ ಖಾಸಗಿ ವ್ಯಕ್ತಿ 6 ಜನ ಸೇರಿ ಒಟ್ಟು 9 ಜನರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದು, ಉಳಿದವರನ್ನು ಕೂಡಲೇ ವಶಕ್ಕೆ ಪಡೆಯುವಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಬಾಗಲಕೋಟೆಯ ಜಿಲ್ಲಾಡಳಿತ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ ಮಾತನಾಡಿದರು.

ಪೊಲೀಸ್ ತನಿಖೆ ವೇಳೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಮೀತಿಯ ಒಟ್ಟು 3 ಬ್ಯಾಂಕ್ ಖಾತೆಗಳಲ್ಲಿ ಒಟ್ಟು 54 ಬಾರಿ ಹಣ ವರ್ಗಾವಣೆಗೊಂಡಿರುತ್ತದೆ. ಒಟ್ಟು 2.77 ಕೋಟಿ ರು.ಗಳ ಅಕ್ರಮವಾಗಿದ್ದು, ಬ್ಯಾಂಕಿನವರು ವಾರದಲ್ಲಿ ಹಣವನ್ನು ಸೆಟಲ್‌ಮೆಂಟ್ ಮಾಡುವುದಾಗಿ ತನಿಖೆ ವೇಳೆಯಲ್ಲಿ ಬ್ಯಾಂಕ್ ವ್ಯವಸ್ಥಾಪಕರು ತಿಳಿಸಿದ್ದಾರೆ. ತನಿಖೆಯಲ್ಲಿ ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಿಸಿದ ಖಾತೆಯಿಂದ 80 ಲಕ್ಷ ರು., ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗದ ಖಾತೆಯಿಂದ 86.40 ಲಕ್ಷ ರು.ಗಳು ಅಕ್ರಮವಾಗಿ ವರ್ಗಾವಣೆ ಆಗಿರುವುದು ಬೆಳಕಿಗೆ ಬಂದಿದೆ. ಹಿಂದುಳಿದ ವರ್ಗಗಳ ಇಲಾಖೆಯಿಂದ ಎಫ್.ಐ.ಆರ್ ಸಹ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಶಾಸಕರಾದ ಎಚ್.ವೈ.ಮೇಟಿ, ಭೀಮಸೇನ ಚಿಮ್ಮನಕಟ್ಟಿ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಎಸ್ಪಿ ಅಮರನಾಥ ರೆಡ್ಡಿ, ಜಿಪಂ ಸಿಇಒ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಲ್ಲಿ ಪ್ರಯತ್ನ, ಗುರಿ ನಿರಂತರವಾಗಿರಲಿ: ಡಾ.ವಿರೇಶಬಾಬು

ರಬಕವಿ-ಬನಹಟ್ಟಿ: ವಿದ್ಯಾರ್ಥಿಗಳು ಯಾವುದೇ ವಿಷಯವಿರಲಿ ಅದರಲ್ಲಿ ಸಾಧನೆ ಮಾಡುವುದು ಮುಖ್ಯ. ವಿಜ್ಞಾನ ವಿಭಾಗದಲ್ಲಿ ಪ್ರತಿಯೊಂದು ವಿಷಯವು ತನ್ನದೇ ಆದ ಪ್ರಾಮುಖ್ಯತೆ ಹೊಂದಿದೆ. ಆದರಿಂದ ಯಾವುದಕ್ಕೂ ನಿರ್ಲಕ್ಷ್ಯ ಬೇಡ. ನಿಮಗೆ ಕಠಿಣವಾದ ವಿಷಯಕ್ಕೆ ಸ್ವಲ್ಪ ಜಾಸ್ತಿ ಮಹತ್ವ ನೀಡಿ ಎಂದು ಬಾಗಲಕೊಟೆ ವೃತ್ತದ ಅಸಿಸ್ಟೆಂಟ್ ಡ್ರಗ್ ಕಂಟ್ರೋಲರ್ ಡಾ. ವಿರೇಶಬಾಬು ಎಸ್. ವಿ. ಹೇಳಿದರು.

ಅವರು ರಾಮಪೂರದ ಪೂರ್ಣಪ್ರಜ್ಞೆ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು.

ಶಿಕ್ಷಕರ ಬಗ್ಗೆ ಯಾವತ್ತೂ ಕೀಳರಿಮೆ ಬೇಡ. ಅವರನ್ನು ಗೌರವದಿಂದ ಕಾಣಿ. ತಂದೆ ತಾಯಿ ನಂತರ ನಿಮ್ಮ ಯಶಸ್ವಿಗೆ ಹೆಮ್ಮೆ ಪಡುವ ವ್ಯಕ್ತಿ ಶಿಕ್ಷಕರಾಗಿದ್ದರೆ. ವಿದ್ಯಾರ್ಥಿಗಳು ಹೆಚ್ಚಿನ ಕನಸು ಕಾಣಬೇಕು. ಅಂದಾಗ ಮಾತ್ರ ನಿಮ್ಮ ಜೀವನದ ಗುರಿ ಸಾಧಿಸಲು ಸಾಧ್ಯ. ಶ್ರಮ, ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡಿ ಜೀವನ ಸಾರ್ಥಕ ಪಡಿಸಿಕೊಳ್ಳಿ, ಸಮಯವನ್ನು ಸರಿಯಾಗಿ ಬಳಸಿಕೊಂಡು ತಂದೆ ತಾಯಿಗಳ ಅಪೇಕ್ಷೆಯಂತೆ ಅವರ ಕನಸುಗಳನ್ನು ನನಸು ಮಾಡಲು ಪ್ರಯತ್ನಿಸಿ. ಗುರಿ, ಪ್ರಯತ್ನ ನಿರಂತರವಾಗಿರಲಿ. ವಿದ್ಯಾ, ವಿನಯತೆ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಿಎ ಪಾಸಾದ ನಾಗೇಶ ಸುಂಕದ ಅವರನ್ನು ಸನ್ಮಾನಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಪೂರ್ಣಪ್ರಜ್ಞೆ ಶಿಕ್ಷಣ ಸಂಸ್ಥೆಯ ಚೇರಮನ್ನರಾದ ಸಿದ್ದಪ್ಪ ಮೇಣಿ ವಹಿಸಿದ್ದರು. ಉಪಚೇರಮನ್ನರಾದ ರಾಮದಾಸ ಸಿಂಘನ, ಕಾರ್ಯದರ್ಶೀ ಶಕೀಲ ನದಾಫ, ಖಜಂಚಿ ಎಸ್. ಕೆ. ಕರಡಿ, ಶಂಕರ ಸಿಂಘನ, ಪ್ರಾಚಾರ್ಯ ಎ. ಕೆ. ಕಾಡದೇವರ, ಎಸ್. ಬಿ. ಹಟ್ಟಿ, ಬಿ. ಆರ್. ಬಾಗಲಕೋಟ, ಎ. ಎಚ್. ಬಾಗೆನ್ನವರ, ಶೆಹಾನ ನದಾಫ, ಬಿ. ಎಂ. ಮಠದ, ಎಂ. ಆರ್. ಮುಲ್ಲಾ, ಎಲ್. ಜಿ. ಹುಲಕುಂದ, ಎಂ. ಎಸ್. ಉಮದಿ, ಆರ್. ಎಸ್.ಮಟ್ಟಿಕಲ್ಲಿ, ವಿ. ಎ. ಲಠ್ಠೆ, ಎಂ. ಎನ್. ಹುದ್ದಾರ, ಎಸ್. ಎಸ್. ಸಿಂಘೆ, ವಿ. ಆರ್. ಕುಂದರಗಿ, ಎಸ್. ಸಿ. ಚತರಬಾನ, ಎಂ. ಕೆ. ಮಲಾಬಾದಿ, ವಿ. ಬಿ. ದೇವರ ಸೇರಿದಂತೆ ಅನೇಕರು ಇದ್ದರು.

ಹಲ್ಲುಗಳ ರಕ್ಷಣೆಗೆ ಉತ್ತಮ ಆಹಾರ ಅವಶ್ಯ

ಕೆರೂರ: ವಿದ್ಯಾರ್ಥಿನಿಯರು ಹಲ್ಲುಗಳ ಸ್ವಚ್ಛತೆ ಹಾಗೂ ಆರೋಗ್ಯವನ್ನು ಸರಿಯಾಗಿ ನೋಡಿಕೊಳ್ಳಬೇಕು, ಹಲ್ಲುಗಳನ್ನು ಕಾಪಾಡಿಕೊಳ್ಳುವದರ ಜೊತೆಗೆ ಸೊಪ್ಪು ತರಕಾರಿ ಹಣ್ಣು ಹಂಪಲು ಇತ್ಯಾದಿ ಖನಿಜಯುಕ್ತ ಆಹಾರ ಸೇವಿಸುವುದರಿಂದ ಹಲ್ಲುಗಳ ರಕ್ಷಣೆ ಆಗುತ್ತದೆ ಎಂದು ಬಾಗಲಕೋಟೆಯ ಪಿ.ಎಂ.ನಾಡಗೌಡ ದಂತ ಮಹಾವಿದ್ಯಾಲಯದ ಮುಖ್ಯಸ್ಥ ಡಾ.ಮಹೇಶ ಹೇಳಿದರು. ಅವರು ತಾಲೂಕಿನ ಯಂಕಂಚಿ ಮಣಿನಾಗರ ಗ್ರಾಮದ ಕಸ್ತೂರಬಾ ಗಾಂಧಿ ಬಾಲಕೀಯರ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ದಂತ ವೈದ್ಯಕೀಯ ತಪಾಸಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಎಲ್ಲರೂ ಪ್ರತ್ಯೇಕ ಬ್ರಶ್ ನಿಂದ ಪ್ರತಿನಿತ್ಯ ಬೆಳಗ್ಗೆ ರಾತ್ರಿ ತಪ್ಪದೇ ಬ್ರಶ್ ಮಾಡಬೇಕು ಎಂದು ಶಾಲಾ ಮಕ್ಕಳಿಗೆ ಸಲಹೆ ನೀಡಿದರು. ಮುಂದುವರೆದು ನಿಮ್ಮ ಮನೆಯಲ್ಲಿರುವ ಅಪ್ಪ ಅಜ್ಜ ಅಣ್ಣ ತಮ್ಮಂದಿರಿಗೆ ತಂಬಾಕು ಗುಟ್ಕಾ ತಿನ್ನದಂತೆ, ಸಿಗರೆಟ್ ಸೇದದಂತೆ ತಿಳಿಹೇಳಿ ಪ್ರಮಾಣ ಮಾಡಿಸಿಕೊಳ್ಳಿ ಅಂತಾ ಕಿವಿಮಾತು ಹೇಳಿದರು ಜೊತೆಗೆ ಮಹಾವಿದ್ಯಾಲಯದ ವೈದ್ಯರಾದ ಡಾ. ಅವಿನಾಶ್, ಡಾ.ಅಭಿಷೇಕ ನಾಲತವಾಡ, ಡಾ.ಅಜಯ್, ಡಾ. ಅನುಷಾ ಡಾ, ಶೃತಿ, ಡಾ,ಸಾಗರ ಹಕ್ಕಿ. ಡಾ.ರೋಹಿತ್ ಡಾ ಸೇವರಿನ್, ಡಾ ಶ್ರೇಯಾ ಉಪಸ್ಥಿತರಿದ್ದು 150 ವಿದ್ಯಾರ್ಥಿನಿಯರ ದಂತ ತಪಾಸಣೆಯನ್ನು ಮಾಡಿದರು. ತಪಾಸಣಾ ಶಿಬಿರದಲ್ಲಿ ಮುಖ್ಯ ಶಿಕ್ಷಕಿ ಬಸಮ್ಮ ನರಸಾಪೂರ, ಸಹಶಿಕ್ಷಕಿ ಅನಿತಾ ಜಲಗೇರಿ ಸಹಶಿಕ್ಷಕರು, ಶಾಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕ್ರೀಡೆಯಲ್ಲಿ ಪಾಲ್ಗೊಳ್ಳಿ ವಿದ್ಯಾರ್ಥಿಗಳಿಗೆ ಕರೆ

ಗುಳೇದಗುಡ್ಡದ ಭಂಡಾರಿ ಕಾಲೇಜಿನಲ್ಲಿ 2024 ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು.

ಗುಳೇದಗುಡ್ಡ: ಇಂದು ಭಾರತವು ಕ್ರೀಡಾ ಜಗತ್ತಿನಲ್ಲಿ ಒಳ್ಳೆಯ ಸಾಧನೆ ಮಾಡುತ್ತಿದೆ. ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನಲ್ಲಿ ಮನು ಬಾಕರ್ ಅವರು ಎರಡು ಕಂಚಿನ ಪದಕ ಪಡೆದು ಭಾರತದ ಕೀರ್ತಿ ಹೆಚ್ಚಿಸಿದ್ದು, ಯುವಕರಿಗೆ ಸ್ಫೂರ್ತಿ ತುಂಬಿದೆ. ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿ ಗುರುತಿಸಿಕೊಂಡು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಪಿಇ ಟ್ರಸ್ಟ್‌ನ ಚೇರಮನ್ ಕಮಲ ಕಿಶೋರ ಭಂಡಾರಿ ಹೇಳಿದರು.

ಅವರು ಪಟ್ಟಣದ ಭಂಡಾರಿ ಕಾಲೇಜಿನಲ್ಲಿ 2024 ನೇ ಸಾಲಿನ ವಾರ್ಷಿಕ ಕ್ರೀಡಾಕೂಟವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳನ್ನು ಭಾಗವಹಿಸುವ ಮೂಲಕ ಉತ್ತಮ ಆರೋಗ್ಯ ಹಾಗೂ ದೈಹಿಕವಾಗಿ ಸದೃಢಗೊಳ್ಳಬೇಕು ಎಂದರು.

ಪ್ರಾಚಾರ್ಯ ಡಾ.ಎನ್.ವೈ.ಬಡಣ್ಣವರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ರವೀಂದ್ರ ಪಟ್ಟಣಶೆಟ್ಟಿ, ಪುರುಷೋತ್ತಮ ಝುಂವಾರ, ಸಿದ್ದರಾಮಯ್ಯ ಪುರಾಣಿಕಮಠ, ಡಾ.ಎಂ.ಎಸ್.ಪಾಟೀಲ್, ಡಾ ಸುರೇಖಾ ಯಂಡಿಗೇರಿ, ಪ್ರೊ ಪಿ. ಬಿ. ಕಣವಿ, ಡಾ ಚಿದಾನಂದ ನಂದಾರ, ಪೂರ್ಣಿಮಾ ಗಿಡವೀರ, ಈರಣ್ಣ ಅಲದಿ ಇದ್ದರು. ಪದ್ಯಾವಳಿಯಲ್ಲಿ ಪಿಜಿ ಬಾಯ್ಸ್, ಬಿಎಸ್ಸಿ ರೈಡರ್ಸ್, ಬಿ.ಎ. ಸ್ಟ್ರೈಕರ್ಸ, ವಿಕ್ಟೋರಿ ವೈಪರ್ಸ್, ಪೈಂಟ್ ಹಂಟರ್, ವಿರಾಟ್ 18, ರಾಯಲ್ ಚಾಲುಕ್ಯ ಬಾಯ್ಸ್ ಮುಂತಾದ ವಿದ್ಯಾರ್ಥಿ ವಿದ್ಯಾರ್ಥಿನಿಯರ ತಂಡಗಳು ಭಾಗವಹಿಸಿದ್ದರು.

ಸಸಿಗಳನ್ನು ನೆಟ್ಟು ಮಕ್ಕಳಂತೆ ಪೋಷಿಸಿ

ಇಳಕಲ್ಲ: ಪ್ರತಿಯೊಬ್ಬರೂ ಉಚಿತವಾಗಿ ಕೊಟ್ಟಿರುವ ಪ್ರಕೃತಿಯನ್ನು ಪೋಷಿಸಬೇಕು. ಪರಿಸರ ನಮಗೆಲ್ಲವನ್ನು ಕೊಟ್ಟಿದೆ.ಆದರೆ ಮಾನವನ ಕೊಡುಗೆ ಏನು? ಆದ್ದರಿಂದ ಎಲ್ಲರೂ ಸಸಿಗಳನ್ನು ನೆಟ್ಟು ಮಕ್ಕಳಂತೆ ಪೋಷಿಸಬೇಕು ಮನೆಗೊಂದು ಮರ ಊರಿಗೊಂದು ವನ ಇದು ಪ್ರತಿಯೊಬ್ಬರ ಘೋಷವಾಕ್ಯ ಆಗಬೇಕು ಎಂದು ನಗರದ ಗ್ರಾನೈಟ್ ಉದ್ದಿಮೆದಾರ ರಾಜು ಎಂ. ಬೋರಾ ಹೇಳಿದರು. ಇಳಕಲ್ಲ ಸಮೀಪದ ಗೊರಬಾಳ ಗ್ರಾಮದಲ್ಲಿ ನಗರದ ಮುಖಾಮುಖಿ ಸಾಮಾಜಿಕ ಸ್ಪಂದನ ಸಂಸ್ಥೆ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗೋರಬಾಳ ಸಹಯೋಗದಲ್ಲಿ ವಿಶ್ವ ಪರಿಸರ ವರ್ಷಾಚರಣೆ ಅಂಗವಾಗಿ ಹಮ್ಮಿಕೊಳ್ಳಲಾದ ಸಸಿ ನೆಡುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತಾಡಿದರು. ಸಸಿಗಳನ್ನು ಪ್ರೀತಿಸಿದರೆ ಮಕ್ಕಳನ್ನು ಪ್ರೀತಿಸಿದಂತೆ ಎಂದರು. ಕಾರ್ಯಕ್ರಮದಲ್ಲಿ ಶಾಲೆಯ ಸುಧಾರಣಾ ಸಮಿತಿ ಅಧ್ಯಕ್ಷರಾದ ಮಲ್ಲಪ್ಪ ಕನಿಗೇರಿ, ಸಂಸ್ಥೆಯ ಉಪಾಧ್ಯಕ್ಷರಾದ ಲಾಲ್ ಬಾಷಾ ಶಿವನಗುತ್ತಿ, ಖಜಾಂಚಿಯಾದ ವೆಂಕಟೇಶ್ ಬಂಡಿ ಪದಾಧಿಕಾರಿಗಳಾದ ಡಾಕ್ಟರ ವಿಜಯಕುಮಾರ್ ಮೇರೆಕೋರ್, ವೆಂಕಟೇಶ್ ನಾಯ್ಕ್, ಎಸ್ ಎಸ್ ಪಾಟೀಲ್ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಸಿ.ವೈ.ಬಡಿಗೇರ್ ಉಪಸ್ಥಿತರಿದ್ದರು. ಶೇಖರಯ್ಯ ಹಿರೇಮಠ್ ಸ್ವಾಗತಿಸಿದರು. ಶ್ರೀಧರ್ ಜೋಗಿನ್ ಪ್ರಾಸ್ತಾವಿಕ ಹಾಗೂ ನಿರೂಪಣೆ ನೆರವೇರಿಸಿದರು.

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	3	3
ಚೀನಾ	16	11	9	36
ಆಸ್ಟ್ರೇಲಿಯಾ	12	7	5	24
ಅಮೆರಿಕ	11	20	20	51
ಫ್ರಾನ್ಸ್	11	14	15	40
ಗ್ರೇಟ್ ಬ್ರಿಟನ್	10	10	12	32
ದಕ್ಷಿಣ ಕೊರಿಯಾ	9	6	5	20
ಜಪಾನ್	8	4	8	20
ಇಟಲಿ	6	8	4	18
ನೆದರ್ಲೆಂಡ್ಸ್	5	4	4	13

ಮೈಕ್ರೋ ಮಾಹಿತಿ

43 ಈವೆಂಟ್‌ಗಳನ್ನು 1896ರ ಮೊದಲ ಒಲಿಂಪಿಕ್ಸ್‌ನಲ್ಲಿ ಆಡಿಸಲಾಗಿತ್ತು.



280 ಅಥ್ಲೀಟ್‌ಗಳು ಇತಿಹಾಸದ ಮೊಟ್ಟ ಮೊದಲ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದರು.

10,500 ಒಟ್ಟು ಆಟಗಾರರು

10,500 ಪುರುಷರು

5,250 ಮಹಿಳೆಯರು

0 ಮೊದಲ ಒಲಿಂಪಿಕ್ಸ್‌ನಲ್ಲಿ ಒಬ್ಬ ಮಹಿಳೆಯೂ ಭಾಗಿಯಾಗಿರಲಿಲ್ಲ.

1900 ಹೆಲೆನ್ ಪೌರ್ಟಲ್ಸ್ ಮೊದಲ ಮಹಿಳಾ ಕ್ರೀಡಾಪಟು

50% ಈ ಬಾರಿ ಶೇಕಡಾ ಅರ್ಧದಷ್ಟು ಮಹಿಳಾ ಕ್ರೀಡಾಪಟುಗಳು ಭಾಗಿ.

12 ದೇಶಗಳು 43 ಈವೆಂಟ್‌ಗಳಲ್ಲಿ ಚಾಂಪಿಯನ್ ಆಗಲು ಭಾಗಿಯಾಗಿದ್ದವು.

ಸಮಾಚಾರ ಸಣ್ಣದಲ್ಲ

ಮಾನ್‌ಗಿಲ್ಲ ಪ್ಯಾರಿಸ್ ಟಿಕೇಟ್

ಚಂಡೀಗಢ: ಭಾರತದ ಹಾಕಿ ತಂಡವನ್ನು ಬೆಂಬಲಿಸುವ ಉದ್ದೇಶದಿಂದ ಪ್ಯಾರಿಸ್‌ಗೆ ಭೇಟಿ ನೀಡಲು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ನಿರ್ಧರಿಸಿದ್ದು, ಇದಕ್ಕೆ ಅನುಮತಿ ನೀಡಲು ಕೇಂದ್ರ ಸರಕಾರ ನಿರಾಕರಿಸಿದೆ ಎಂದು ಮೂಲಗಳು ತಿಳಿಸಿವೆ. ಭಾನುವಾರ ನಡೆಯಲಿರುವ ಹಾಕಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತ ತಂಡವನ್ನು ಬೆಂಬಲಿಸಲಿಕ್ಕಾಗಿ, ಆ.3ರಿಂದ 9ರವರೆಗೆ ಪ್ಯಾರಿಸ್‌ಗೆ ಭೇಟಿ ನೀಡಲು ಅನುಮತಿ ನೀಡುವಂತೆ ರಾಜತಾಂತ್ರಿಕ ಪಾಸ್ಪೋರ್ಟ್ ಹೊಂದಿರುವ ಮಾನ್ ಮನವಿ ಮಾಡಿದ್ದರು.

ಇಂದು ಕಣದಲ್ಲಿ

- ಶೂಟಿಂಗ್: 25 ಮೀ ರಾಪಿಡ್ ಫೈಯರ್: 12:30 ಗಂಟೆಗೆ
- ಹಾಕಿ: ಕ್ವಾರ್ಟರ್‌ಫೈನಲ್ ಭಾರತ VS ಗ್ರೇಟ್ ಬ್ರಿಟನ್ 1:30ಕ್ಕೆ
- ಸ್ಕೀಟ್: ಮಹಿಳೆಯರ ಅರ್ಹತೆ: ಸಂಜೆ 7:00
- ಅಥ್ಲೆಟಿಕ್ಸ್: ಮಹಿಳೆಯರ 3000 ಮೀಟರ್ ಸ್ಟೀಪಲ್ಚೇಸ್: 1:35
- ಲಾಂಗ್ ಜಂಪ್: ಪುರುಷರ ಅರ್ಹತಾ ಸುತ್ತು 2:30
- ಬ್ಯಾಡ್ಮಿಂಟನ್: ಪುರುಷರ ಸಿಂಗಲ್ಸ್ ಸೆಮಿಫೈನಲ್ 3:30
- ಸೇಲಿಂಗ್: ಪುರುಷರ ಡಿಂಘಿ ಸೀರಿಸ್ (ರೇಸ್ 7/8) 3:35, ಮಹಿಳೆಯರ ಡಿಂಘಿ ಸೀರಿಸ್ 6:05 ಗಂಟೆಗೆ

ಗೆಲುವಿನ ದವಡೆಯಲ್ಲಿ ಸೋತ ರಾಂಚಿ ಕುಮಾರಿ

ಕ್ವಾರ್ಟರ್ ಫೈನಲ್ ಎಡವಿದ ದೀಪಿಕಾ

ಪ್ಯಾರಿಸ್: ಮಹಿಳೆಯರ ವೈಯಕ್ತಿಕ ಆರ್ಚರಿ ಕ್ವಾರ್ಟರ್‌ಫೈನಲ್‌ನಲ್ಲಿ ವಿಶ್ವದ ಮಾಜಿ ನಂ. 1 ದೀಪಿಕಾ ಕುಮಾರಿ ಅವರು ನಿರಾಸೆ ಅನುಭವಿಸಿದ್ದಾರೆ. ಭಾರತದ ಒಲಿಂಪಿಕ್ಸ್ ಅಭಿಯಾನ ಪ್ರಾರಂಭ ಮಾಡಿದ್ದ ದೀಪಿಕಾ ಅವರು ಲೀಗ್ ಹಂತದ ಕೂಟಗಳಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಭಾರೀ ಸಂಚಲನ ಮೂಡಿಸಿದ್ದರು. ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ವಿಶ್ವದ ಬಲಿಷ್ಠ ಆಟಗಾರರನ್ನು ಸೋಲಿಸುವ ಮೂಲಕ ಪದಕದ ಆಸೆ ಮೂಡಿಸಿದ್ದ ಅವರು, ಕ್ವಾರ್ಟರ್‌ಫೈನಲ್ ಪ್ರವೇಶಿಸುವ ಮೂಲಕ ಭಾರೀ ಮುನ್ನಡೆ ಸಾಧಿಸಿದ್ದರು. ಆದರೆ ಶನಿವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸೋಲುಂಡ ಅವರು, ತಮ್ಮ ಅಭಿಯಾನವನ್ನು ಮುಗಿಸಿದ್ದಾರೆ.

ಶನಿವಾರ ನಡೆದ ಸಮರದಲ್ಲಿ ಮೂರು ಸೆಟ್‌ಗಳ ನಂತರ 4-2 ಮುನ್ನಡೆಯೊಂದಿಗೆ, ನಾಲ್ಕು ಬಾರಿಯ ಒಲಿಂಪಿಯನ್ ದೀಪಿಕಾ ಕೊನೆಯ ನಾಲ್ಕರಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿದ್ದರು. ಆದಾಗ್ಯೂ, ನಾಲ್ಕನೇ ಸೆಟ್‌ನಲ್ಲಿ ಏಳು ಪಾಯಿಂಟ್‌ಗಳನ್ನು ಗಳಿಸಿ ಹಿನ್ನಡೆ ಸಾಧಿಸಿದರು. ಅಂತಿಮ ಸೆಟ್‌ನಲ್ಲಿ ನಾಮ್ ಸುಹ್ಯೆನ್ 29-27ರಲ್ಲಿ ದೀಪಿಕಾ ಅವರನ್ನು ಸೋಲಿಸುವ ಮೂಲಕ ಗೆಲುವು ಸಾಧಿಸಿದರು.

ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಗೆಲುವು: ಇದಕ್ಕೂ ಮುನ್ನ ನಡೆದ ಅತ್ಯಂತ ರೋಚಕ ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ದೀಪಿಕಾ ಕುಮಾರಿ ಜರ್ಮನಿಯ 13 ಶ್ರೇಯಾಂಕದ ಮೈಕಲ್ ಕ್ರೋಪೆನ್ ವಿರುದ್ಧ 6-4 ಅಂತರದಿಂದ ಗೆದ್ದು ಬೀಗಿದ್ದರು. ಕಳೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ದೀಪಿಕಾ ಕುಮಾರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೊರಿಯಾದ ಆಟಗಾರ್ತಿಯ ವಿರುದ್ಧ ಸೋಲನುಭವಿಸಿ ನಿರಾಸೆ ಎದುರಿಸಿದ್ದರು. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಮೊದಲ ಸುತ್ತಿನಲ್ಲಿ, ರಿಯೋ ಒಲಿಂಪಿಕ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿದ್ದರು. ಇದೀಗ 2ನೇ ಬಾರಿ ಕ್ವಾರ್ಟರ್ ಫೈನಲ್ ಸೋಲುವ ಮೂಲಕ ನಿರಾಸೆ ಮೂಡಿಸಿದ್ದಾರೆ.

ಭಜನ್ ಕೌರ್‌ಗೂ ಸೋಲು

ಪದಕ ಗೆಲ್ಲುವ ಭರವಸೆ ಮೂಡಿಸಿದ್ದ ಭಾರತದ ಯುವ ಬಿಲ್ಗಾರ್ತಿ ಭಜನ್ ಕೌರ್ ಇಂಡೋನೇಷ್ಯಾದ ದಯಾನಂದ ಚೋರುನಿಸಾ ವಿರುದ್ಧ ಅಮೋಘ ಹೋರಾಟ ನಡೆಸಿ 5-5 ಸಮಬಲ ಸಾಧಿಸಿದರೂ ಕೂಡ ಅಂತಿಮ ಶೂಟ್‌ನಲ್ಲಿ ಎಡವಿದರು. ಚೋರುನಿಸಾ 9 ಅಂಕಕ್ಕೆ ಗುರಿ ಇಟ್ಟರೆ, ಕೌರ್ 8 ಅಂಕ ಗಳಿಸಿ ಸೋಲು ಕಂಡರು. 10 ಅಂಕಕ್ಕೆ ಗುರಿ ಇಡುತ್ತಿದ್ದರೆ ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸುತ್ತಿದ್ದರು.

ದೀಪಿಕಾ ಕುಮಾರಿ

ಹಾಕಿ: ಭಾರತ, ಬ್ರಿಟನ್ ಕ್ವಾ. ಫೈನಲ್ ಇಂದು

ಪ್ಯಾರಿಸ್: ಕಳೆದ ಒಲಿಂಪಿಕ್ಸ್‌ನ ಬೆಳ್ಳಿ ವಿಜೇತ ಆಸ್ಟ್ರೇಲಿಯಾ ವಿರುದ್ಧ ಶುಕ್ರವಾರ ಚಾರಿತ್ರಿಕ ಜಯ ದಾಖಲಿಸಿದ ನಂತರ ಭಾರತ ಹಾಕಿ ತಂಡದ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದ್ದು, ಭಾರತ ತಂಡ ಭಾನುವಾರ ಹಾಕಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಬ್ರಿಟನ್ ತಂಡವನ್ನು ಎದುರಿಸಲಿದೆ.

ಭಾರತ ತನ್ನ ಅತ್ಯುತ್ತಮ ಆಟವನ್ನು ಆಸ್ಟ್ರೇಲಿಯಾ ವಿರುದ್ಧ 'ಬಿ' ಗುಂಪಿನ ಕೊನೆಯ ಪಂದ್ಯಕ್ಕೆ ಉಳಿಸಿಕೊಂಡಂತೆ ಇತ್ತು. 3-2 ರಿಂದ ಗೆದ್ದ ಭಾರತ ಒಲಿಂಪಿಕ್ಸ್‌ನಲ್ಲಿ 52 ವರ್ಷಗಳ ನಂತರ ಈ ಎದುರಾಳಿಗೆ ಸೋಲುಣಿಸಿತ್ತು. ಹಾಕಿಯನ್ನು ಆಸ್ಟ್ರೋಟರ್ಫ್‌ನಲ್ಲಿ ಆಡುವುದಕ್ಕಿಂತ ಮುಂಚೆ ಆ ಗೆಲುವು ಒಲಿದಿತ್ತು. ಭಾರತ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು, ಹಾಲಿ ಚಾಂಪಿಯನ್ ಬೆಲ್ಜಿಯಂ ಮೊದಲನೇ ಸ್ಥಾನ ಗಳಿಸಿದೆ. ಭಾರತ ಎದುರಾಳಿಯಾಗಿರುವ ಬ್ರಿಟನ್ 'ಎ' ಗುಂಪಿನಲ್ಲಿ ಮೂರನೇ ಸ್ಥಾನ ಪಡೆದಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ಆಕ್ರಮಣಕಾರಿಯಾಗಿ ಆಡಿತ್ತು. ಮೊದಲ ಎರಡು ಕ್ವಾರ್ಟರ್‌ಗಳಲ್ಲಂತೂ ಪಂದ್ಯ ಭಾರತದ ನಿಯಂತ್ರಣದಲ್ಲಿದಲ್ಲಿತ್ತು. ಈ ಎರಡು ವಿಭಾಗದ ಸಮನ್ವಯದಿಂದ ಭಾನುವಾರದ ಪಂದ್ಯದಲ್ಲಿ ವಿಶ್ವದ ನಂಬರ್ ಎರಡನೇ ತಂಡವನ್ನು ಹಿಮ್ಮೆಟ್ಟಿಸಲು ಭಾರತ ತಂಡ ಗಮನಹರಿಸಲಿದೆ. ರಕ್ಷಣೆಯಲ್ಲಿ ಅಮಿತ್ ರೋಹಿದಾಸ್ ಮತ್ತು ಜರ್ಮನ್‌ಪ್ರೀತ್ ಹೆಗಲಾಗಿದ್ದಾರೆ. ಕೊನೆಯ ಸಲ ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿರುವ ಅನುಭವಿ ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಎದುರಾಳಿಗಳ ಹಲವು ಗೋಲು ಯತ್ನಗಳನ್ನು ಭಗ್ನಗೊಳಿಸಿದ್ದಾರೆ. ಈ ಪಂದ್ಯವೂ ಅವರಿಗೆ ಸತ್ವಪರೀಕ್ಷೆ.

ಕ್ವಾರ್ಟರ್‌ಫೈನಲ್‌ಗಳು

- ಭಾರತ VS ಬ್ರಿಟನ್
- ಬೆಲ್ಜಿಯಂ VS ಸ್ಪೇನ್
- ಆಸ್ಟ್ರೇಲಿಯಾ VS ನೆದರ್ಲೆಂಡ್ಸ್
- ಜರ್ಮನಿ VS ಅರ್ಜೆಂಟೀನಾ

ಕುಸಿದ ವಿಷ್ಣು ಶ್ರೇಯಾಂಕ

ಪ್ಯಾರಿಸ್: ಪುರುಷರ ಡಿಂಗಿ ಸ್ಪರ್ಧೆಯಲ್ಲಿ ಭಾರತದ ವಿಷ್ಣು ಸರವಣನ್ 5ನೇ ಸುತ್ತಿನಲ್ಲಿ 21ನೇ ಮತ್ತು ರೇಸ್ 6 ರಲ್ಲಿ 13ನೇ ಸ್ಥಾನ ಪಡೆದಿದ್ದಾರೆ. ಸ್ಪರ್ಧೆಯ ಎಲ್ಲಾ ದೋಣಿಗಳು ಆರಂಭಿಕ ಸರಣಿಯಲ್ಲಿ 10 ರೇಸ್‌ಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸರಣಿಯ ನಂತರ ಟಾಪ್ 10 ನಿವ್ವಳ ಅಂಕಗಳನ್ನು ಹೊಂದಿರುವ ದೋಣಿಗಳು ಪದಕದ ಸುತ್ತಿಗೆ ತಲಪುತ್ತವೆ. 6ನೇ ಓಟದ ನಂತರ, ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಸರವಣನ್ 83 ನೆಟ್ ಪಾಯಿಂಟ್‌ಗಳೊಂದಿಗೆ (ಒಟ್ಟು 117 ಅಂಕಗಳು) 23 ನೇ ಸ್ಥಾನದಲ್ಲಿದ್ದಾರೆ. ರೇಸ್ 7 ಮತ್ತು ರೇಸ್ 8, ಭಾನುವಾರ ನಡೆಯಲಿದೆ.

ಕುಸಿದ ನೇತ್ರಾ

ಪ್ಯಾರಿಸ್: ಶುಕ್ರವಾರದಂದು 11 ನೇ ಶ್ರೇಯಾಂಕದಲ್ಲಿದ್ದ ಭಾರತೀಯ ನಾವಿಕ ನೇತ್ರಾ ಕುಮನನ್, ಆರು ರೇಸ್‌ಗಳ ನಂತರ ಮಹಿಳೆಯರ ಡಿಂಗಿ ಅಂಕಪಟ್ಟಿಯಲ್ಲಿ 24 ನೇ ಸ್ಥಾನಕ್ಕೆ ಕುಸಿದಿದ್ದಾರೆ. ಶನಿವಾರ ನಡೆದ ಕ್ರೀಡೆಯಲ್ಲಿ ನೇತ್ರಾ, ರೇಸ್4 ರಲ್ಲಿ 28 ನೇ ಹಾಗೂ ರೇಸ್ 5, ರೇಸ್ 6ರಲ್ಲಿ 24ನೇ ಸ್ಥಾನ ಪಡೆದರು. ಪರಿಣಾಮವಾಗಿ ಮೂರನೇ ದಿನದ ಅಂತ್ಯದಲ್ಲಿ 96 ನಿವ್ವಳ ಅಂಕ (124 ಒಟ್ಟು ಅಂಕಗಳನ್ನು) ಪಡೆದರು.

ಪದಕ ಸ್ಪರ್ಧೆಗೆ ಅರ್ಹತೆ ಪಡೆಯಲು ಸರಣಿಯ ಅಂತ್ಯದ ವೇಳೆಗೆ ಅವರು ಟಾಪ್ 10ರಲ್ಲಿ ಸ್ಥಾನ ಪಡೆಯಬೇಕಿದೆ.

ಎಂಟನೇ ಸ್ಥಾನ ಪಡೆದ ಮಹೇಶ್ವರಿ

ಪ್ಯಾರಿಸ್: ಮಹಿಳೆಯರ ಸ್ಕೀಟ್ ಅರ್ಹತಾ ಸ್ಪರ್ಧೆಯಲ್ಲಿ ಭಾರತದ ಮಹೇಶ್ವರಿ ಚೌಹಾಣ್ ಎಂಟನೇ ಶ್ರೇಯಾಂಕವನ್ನು ಪಡೆದಿದ್ದಾರೆ. 28ರ ಹರೆಯದ ಭಾರತೀಯ ಶೂಟರ್ ಮೊದಲ ಮೂರು ಸುತ್ತುಗಳಲ್ಲಿ ಒಟ್ಟು 71 (23, 24, 24) ಅಂಕಗಳನ್ನು ಗಳಿಸಿ ಅರ್ಹತಾ ಸುತ್ತಿನಲ್ಲಿ ಅಗ್ರ ಎಂಟರಲ್ಲಿ ಕಂಡರು. ಇಂದು ನಡೆಯಲಿರುವ ಐದು ಸುತ್ತುಗಳ ಕೊನೆಯಲ್ಲಿ, ಮೊದಲಿನಿಂದ ಆರು ಶ್ರೇಯಾಂಕದ ಶೂಟರ್‌ಗಳು ಫೈನಲ್‌ಗೆ ಪ್ರವೇಶಿಸುತ್ತಾರೆ. ಮತ್ತೊಂದೆಡೆ ರೈಜಾ ಧಿಲ್ಲೋನ್ ಮೊದಲ ಮೂರು ಸುತ್ತುಗಳಲ್ಲಿ 66 (21, 22, 23) ಅಂಕಗಳನ್ನು ಗಳಿಸಿದ ನಂತರ ಪ್ರಸ್ತುತ 25 ನೇ ಸ್ಥಾನದಲ್ಲಿದ್ದಾರೆ. ಅರ್ಹತಾ ಈವೆಂಟ್‌ನ 4ನೇ,5ನೇ ಸುತ್ತು ಮತ್ತು ಸ್ಕೀಟ್ ಫೈನಲ್ ಭಾನುವಾರ ನಡೆಯಲಿದೆ.



ಕೂದಲೆಳೆಯಲ್ಲಿ ಪದಕ ಕಳೆದು ಕೊಂಡ ಶೂಟರ್ ಭಾಕರ್

ಗುರಿ ತಪ್ಪಿದ ಮನು ಹ್ಯಾಟ್ರಿಕ್ ಕನಸು ಭಗ್ನ

ಪ್ಯಾರಿಸ್: ಮನು ಭಾಕರ್ ಇತಿಹಾಸ ಸೃಷ್ಟಿಸುವ ಅವಕಾಶವನ್ನು ಕೂದಲೆಳೆಯಲ್ಲಿ ಕಳೆದುಕೊಂಡಿದ್ದಾರೆ. ಮಹಿಳೆಯರ 25 ಮೀಟರ್ ಮಹಿಳಾ ಪಿಸ್ತೂಲ್ ಶೂಟಿಂಗ್ ಸ್ಪರ್ಧೆಯ ಫೈನಲ್‌ನಲ್ಲಿ ಅವರು 4ನೇ ಸ್ಥಾನ ಗಳಿಸಿದ್ದು, ಹ್ಯಾಟ್ರಿಕ್ ಪದಕದ ಕನಸು ಇಂಚಿನಲ್ಲಿ ಮಿಸ್ ಆಗಿದೆ. ಒಂದು ವೇಳೆ ಈ ಸ್ಪರ್ಧೆಯಲ್ಲಿ ಪದಕ ಗೆದ್ದಿದ್ದರೆ ಒಂದೇ ಒಲಿಂಪಿಕ್ಸ್‌ನಲ್ಲಿ 3 ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿಕೊಳ್ಳುತ್ತಿದ್ದರು.

ಶನಿವಾರ ನಡೆದ ಮಹಿಳೆಯರ 25 ಮೀಟರ್ ಪಿಸ್ತೂಲ್ ಫೈನಲ್‌ನಲ್ಲಿ ಒಟ್ಟು 28 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಗಳಿಸಿ ಅಲ್ಪ ಅಂತರದಲ್ಲೇ ಪದಕ ಕಳೆದುಕೊಂಡಿದ್ದಾರೆ.

ಜಾಹೀರಾತಿನ ಮೌಲ್ಯ ಹೆಚ್ಚಳ

ಶೂಟಿಂಗ್ ವಿಭಾಗದಲ್ಲಿ ಅವಳಿ ಕಂಚಿನ ಪದಕ ಗೆದ್ದ ಮನು ಭಾಕರ್ ಅವರ ಜಾಹೀರಾತು ಮೌಲ್ಯದಲ್ಲಿ ಇದೀಗ ಭಾರೀ ಏರಿಕೆ ಕಂಡಿದೆ. ಅಲ್ಲದೆ 40ಕ್ಕೂ ಹೆಚ್ಚು ಬ್ರಾಂಡ್‌ಗಳು ಮನು ಅವರನ್ನು ತಮ್ಮ ಕಂಪನಿಗೆ ರಾಯಭಾರಿಯಾಗಿ ಬಳಸಿಕೊಳ್ಳಲು ತೀವ್ರ ಪೈಪೋಟಿಗೆ ಬಿದ್ದಿದೆ ಎಂದು ವರದಿಯಾಗಿದೆ. ಒಲಿಂಪಿಕ್ಸ್ ಪದಕ ಗೆಲ್ಲುವ ಮೊದಲು ಮನುಗೆ ಒಂದು ಜಾಹೀರಾತಿನಿಂದ 20-25 ಲಕ್ಷ ರು. ಸಿಗುತ್ತಿತ್ತು. ಆದರೆ, ಈಗ ಈ ಶುಲ್ಕವು ಆರರಿಂದ ಏಳು ಪಟ್ಟು ಹೆಚ್ಚಾಗಿದ್ದು, ಒಂದು ಒಪ್ಪಂದವು ಸುಮಾರು 1.5 ಕೋಟಿ ರು. ಎಂದು ಹೇಳಲಾಗುತ್ತಿದೆ.

ನಾಲ್ಕನೇ ಸ್ಥಾನ ಪಡೆದು ನಿರಾಸೆ ಅನುಭವಿಸಿದ ಆಟಗಾರರು

ಲಂಡನ್ 2012	ರಿಯೊ 2016	ಪ್ಯಾರಿಸ್ 2024	ಪ್ಯಾರಿಸ್ 2024
ಜೋಯ್ದೀಪ್ ಕಮಾರ್‌ಕರ್ (ಪುರುಷರ 50 ಮೀ ರೈಫಲ್ ಪ್ರೋನ್)	ಅಭಿನವ್ ಬಿಂದ್ರಾ (ಪುರುಷರ 10 ಮೀ ಏರ್ ರೈಫಲ್)	ಅರ್ಜುನ್ ಬಾಬುತಾ (ಪುರುಷರ 10 ಮೀ ಏರ್ ರೈಫಲ್)	ಮನು ಭಾಕರ್ (ಮಹಿಳೆಯರ 25 ಮೀ ಪಿಸ್ತೂಲ್)

> ನೀವು ನಿಮ್ಮ ಸಾಧನೆಯಿಂದ ಇಡೀ ರಾಷ್ಟ್ರವೇ ಎದ್ದು ನಿಂತು ಶ್ಲಾಘಿಸುವಂತೆ ಮಾಡಿದ್ದೀರಿ. ಮೂರನೇ ಒಲಿಂಪಿಕ್ ಪದಕವನ್ನು ಗೆಲ್ಲುವುದು ಅಸಾಧಾರಣ ಸಾಧನೆಯಾಗಿರಬಹುದು, ಆದರೆ ನೀವು ಪ್ಯಾರಿಸ್‌ನಲ್ಲಿ ಸಾಧಿಸಿರುವುದು ನಿಜವಾಗಿಯೂ ಸ್ಮರಣೀಯವಾಗಿದೆ. ನಿಮ್ಮ ಪ್ರಯಾಣವು ನಿರಂತರ ಪರಿಶ್ರಮ ಮತ್ತು ಸಮರ್ಪಣೆಗೆ ಸಾಕ್ಷಿಯಾಗಿದೆ. ಕೇವಲ 22ನೇ ವಯಸ್ಸಿನಲ್ಲಿ, ನೀವು ಈಗಾಗಲೇ ಗಮನಾರ್ಹ ಸಾಧನೆ ಮಾಡಿದ್ದೀರಿ. ನಿಮಗೆ ಅಭಿನಂದನೆಗಳು.
>
> -**ಅಭಿನವ್ ಬಿಂದ್ರಾ**, ಶೂಟರ್

> ಅದು 2012ರ ಆಗಸ್ಟ್ 3. ನಾನು ಕಂಚಿನ ಪದಕವನ್ನು ಕಳೆದುಕೊಂಡು 4 ನೇ ಸ್ಥಾನಕ್ಕೆ ಬಂದಿದ್ದೆ. ಅದೇ ದೃಶ್ಯ ಈಗ 3ನೇ ಆಗಸ್ಟ್ ದಿನದಂದೇ ನಿರ್ಮಾಣವಾಗಿದೆ. ಮನು ಅವರು ಕಂಚು ಗೆಲ್ಲಲು ತುಂಬಾ ಹತ್ತಿರ ಬಂದು ವಿಫಲರಾದರು. ಆದರೆ ಎಂತಹ ಪ್ರಯಾಣ, ಅವರ ಈ ಬಾರಿಯ ಪ್ರದರ್ಶನವು ಅದ್ಭುತವಾಗಿದೆ. ಮನು ಭಾಕರ್ ಅವರ ಹೆಸರು ಈಗಾಗಲೇ ಇತಿಹಾಸ ಪುಸ್ತಕಗಳಲ್ಲಿ ಕೆತ್ತಲಾಗಿದೆ. ಅವರು 22 ನೇ ವಯಸ್ಸಿನಲ್ಲಿ ದಂತಕಥೆಯಾಗಿದ್ದಾರೆ.
>
> -**ಜೋಯಿದೀಪ್ ಕರ್ಮಾಕರ್**, ಮಾಜಿ ಶೂಟರ್

ಮಾಜಿ ಯೂತ್ ಒಲಿಂಪಿಕ್ ಚಾಂಪಿಯನ್ ಭಾಕರ್ ಮೊದಲ ಸುತ್ತಿನ ನಂತರ ಎರಡನೇ ಸ್ಥಾನದಲ್ಲಿದ್ದರು. ಅಲ್ಲದೆ, 7ನೇ ಸರಣಿಯ ಅಂತ್ಯದ ವೇಳೆಗೂ ಮನು ಪದಕ ಗೆಲ್ಲುವ ತವಕದಲ್ಲಿದ್ದರು. 8ನೇ ಸರಣಿಯಲ್ಲಿ ತನ್ನ 5 ಹೊಡೆತಗಳಲ್ಲಿ ಎರಡನ್ನು ಮಾತ್ರ ಪರಿವರ್ತಿಸಿದ ನಂತರ (10.2 ಅಥವಾ ಹೆಚ್ಚಿನ ಸ್ಕೋರ್), ಭಾಕರ್ ಟಾಪ್3 ನಲ್ಲಿ ಉಳಿಯಲು ಶೂಟ್-ಆಫ್‌ಗೆ ಹೋದರು. ಅಲ್ಲಿ ಹಂಗೇರಿಯ ಶೂಟರ್ ವೆರೋನಿಕಾ ಮೇಜರ್ ಅವರು ಮನು ಭಾಕರ್ ಅವರನ್ನು ಹಿಂದಿಕ್ಕಿ ಕಂಚಿನ ಪದಕ ಗೆದ್ದರು. ಮಹಿಳೆಯರ 25 ಮೀಟರ್ ಪಿಸ್ತೂಲ್ ವಿಭಾಗದ ಫೈನಲ್‌ನಲ್ಲಿ ಕೊರಿಯಾದ ಯಾಂಗ್ ಜಿನ್ 37 ಅಂಕ ಗಳಿಸಿ ಚಿನ್ನದ ಪದಕ ಗೆದ್ದರು. ಆತಿಥೇಯ ಫ್ರಾನ್ಸ್ ಶೂಟರ್ ಕ್ಯಾಮಿಲ್ಲೆ ಜೆಡ್ರೆಜೆವ್ಸ್ಕಿ ಶೂಟ್‌ಆಫ್ ನಂತರ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟರು.

ಇತಿಹಾಸ ಸೃಷ್ಟಿಸಿದ ಭಾಕರ್

ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಮನು ಭಾಕರ್ ಅವರ ಪಯಣ ಅಂತ್ಯಗೊಂಡಿದೆ. ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಪಿಸ್ತೂಲ್‌ನಲ್ಲಿ ಇದ್ದ ದೋಷದಿಂದಾಗಿ ನಿರಾಸೆ ಅನುಭವಿಸಿದ್ದ ಮನು ಭಾಕರ್ ಅವರು ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ದಾಖಲೆ ನಿರ್ಮಿಸಿದ್ದಾರೆ. ಈ ಕಳೆದ ವಾರ ನಡೆದಿದ್ದ 10 ಮೀ. ಏರ್ ಪಿಸ್ತೂಲ್ ಶೂಟಿಂಗ್‌ನಲ್ಲಿ ಕಮುಚು ಗೆದ್ದಿದ್ದರು. ಅದಾದ ಬಳಿಕ ಮಿಶ್ರ ವಿಭಾಗದಲ್ಲಿ ಸರಬ್ಜೋತ್ ಸಿಂಗ್ ಅವರೊಂದಿಗೆ ಜತೆಗೂಡಿ ಮಿಶ್ರ ವಿಭಾಗದಲ್ಲಿ ಕಂಚು ಗೆಲ್ಲುವ ಮೂಲಕ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದ ಮೊದಲ ಶೂಟರ್, ಮೊದಲ ಮಹಿಳೆ ಹಾಗೂ ಎರಡನೇ ಭಾರತೀಯ ಎನ್ನಿಸಿದ್ದರು. ಇದರೊಂದಿಗೆ ಮೂರನೇ ಫೈನಲ್‌ಗೇರುವ ಮೂಲಕ ಇತಿಹಾಸ ಸೃಷ್ಟಿಸುವ ಹಂತಕ್ಕೆ ತಲುಪಿದ್ದರು. ಆದರೆ ಅಲ್ಪ ಅಂಕಗಳಲ್ಲೇ ಅದನ್ನು ತಪ್ಪಿಸಿಕೊಂಡು 2024 ಒಲಿಂಪಿಕ್ಸ್‌ನ ಅಭಿಯಾನವನ್ನು ಪೂರ್ಣಗೊಳಿಸಿದ್ದಾರೆ.

ಸದ್ಯ ಮನು ಪಾಮ್ಯಾಕ್ಸ್ ಆಕ್ಟಿವ್‌ವೇರ್‌ಗೆ ಮಾತ್ರ ಪ್ರಚಾರ ರಾಯಭಾರಿಯಾಗಿದ್ದಾರೆ.

12 ಕಂಪನಿಗಳ ವಿರುದ್ಧ ಕ್ರಮ

ಕೆಲವು ದಿನಗಳ ಹಿಂದಷ್ಟೇ ಮನು ಭಾಕರ್ ಅವರು 12 ಕಂಪನಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಮುಂದಾಗಿದ್ದರು. ಪದಕ ಸಾಧನೆಯ ಬಳಿಕ ತನ್ನ ಚಿತ್ರಗಳನ್ನು ಬಳಸಿ, ತನಗೆ ಅಭಿನಂದನೆ ಸಲ್ಲಿಸುವ ಜಾಹೀರಾತು ಗಳನ್ನು ಸಾಮಾಜಿಕ ಜಾಲತಾಣದಲ್ಲಿ ಅನಧಿಕೃತ ವಾಗಿ ಪ್ರಕಟಿಸಿದ್ದು ಇದಕ್ಕೆ ಕಾರಣ. ಬ್ರ್ಯಾಂಡ್‌ಗಳು ತನಗೆ ಪ್ರಾಯೋಜಕತ್ವ



ನೀಡಿರದಿದ್ದರೂ ಮತ್ತು ತನ್ನನ್ನು ಪ್ರಚಾರ ರಾಯಭಾರಿಯಾಗಿ ನೇಮಿಸಿಕೊಳ್ಳದಿದ್ದರೂ, ಇದೀಗ ತನ್ನ ಯಶಸ್ಸಿನಲ್ಲಿ ಪಾಲು ಪಡೆಯಲು ಮುಂದಾಗುವ ಮೂಲಕ ಉಚಿತ ಮಾರ್ಕೆಟಿಂಗ್ ಮಾಡಿವೆ ಎಂದು ಮನು ಅವರ ವ್ಯವಹಾರಗಳನ್ನು ನೋಡಿಕೊಳ್ಳುವ ತಂಡ ಆರೋಪಿಸಿ ಕಾನೂನು ನೋಟಿಸ್ ಕಳುಹಿಸಲು ಸಿದ್ಧತೆ ನಡೆಸಿದೆ ಎನ್ನಲಾಗಿದೆ. ವ್ಯಕ್ತಿಯೊಬ್ಬರಿಗೆ ಪ್ರಾಯೋಜಕತ್ವ ಒಪ್ಪಂದ ನೀಡದೆ ಅವರ ಚಿತ್ರಗಳ ಹಕ್ಕು ಪಡೆದು ಕೊಳ್ಳುವಂತಿಲ್ಲ. ಇದು ಭಾರತದಲ್ಲಿ ಕಾನೂನು ಬಾಹಿರ ಎನಿಸಿದೆ.

ಲಕ್ಷ್ಯ ತಪ್ಪದಿದ್ದರೆ ಸೇನ್‌ಗೆ ಪದಕ

ಪ್ಯಾರಿಸ್: ಬ್ಯಾಡ್ಮಿಂಟನ್‌ನಲ್ಲಿ ಪದಕದ ಹತ್ತಿರ ಹೋಗುವ ಮೂಲಕ ಎಲ್ಲರಲ್ಲೂ ನಿರೀಕ್ಷೆ ಮೂಡಿಸಿರುವ ಭಾರತದ ಲಕ್ಷ್ಯ ಸೇನ್ ಅವರು ಇಂದು ಸೆಮಿಸ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ಈ ಹಿಂದಿನ ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಪದಕ ಗೆಲ್ಲುವ ಆಸೆ ಮೂಡಿಸಿರುವ ಅವರು, ಪದಕ ಗೆಲ್ಲಲು ಇನ್ನೊಂದೆ ಹೆಜ್ಜೆ ಇಡಬೇಕಿದೆ.

ಮೊದಲ ಪಂದ್ಯದಲ್ಲಿ ಸೇನ್ ಅವರು ಭರ್ಜರಿ ಗೆಲುವು ಸಾಧಿಸಿದ್ದರು. ಆದರೆ ಎದುರಾಳಿ ಆಟಗಾರ ಮೊಳಕಾಲು ನೋವಿನಿಂದ ಹೊರಗುಳಿದ ಕಾರಣದಿಂದಾಗಿ ಅವರು ಗೆದ್ದ ಫಲಿತಾಂಶವನ್ನು ರದ್ದುಗೊಳಿಸಿಲಾಗಿತ್ತು. ಆದರೆ ಎರಡನೇ ಹಾಗೂ ಮೂರನೇ ಪಂದ್ಯದಲ್ಲೂ ಪರಾಕ್ರಮ ಮುಂದುವರಿಸಿದ ಅವರು, ಸತತ ಗೆಲುವಿನಿಂದ ಪ್ರಿಕ್ವಾರ್ಟರ್‌ಫೈನಲ್‌ಗೆ ಪ್ರವೇಶಿಸಿದ್ದರು. ಅದಾದ ಬಳಿಕ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲೂ ಭರ್ಜರಿ ಪ್ರದರ್ಶನ ತೋರುವ ಮೂಲಕ ಕ್ವಾರ್ಟರ್‌ಫೈನಲ್‌ಗೆ ತಲುಪಿದ್ದರು. ಅಲ್ಲದೆ, ಶುಕ್ರವಾರ ನಡೆದ ಪಂದ್ಯದಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ.

ಸೆಮಿಫೈನಲ್

ಲಕ್ಷ್ಯ ಸೇನ್ VS ಅಲೆಕ್ಸಿನ್
ಯಾವಾಗ? ಭಾನುವಾರ

ಹೆಡ್ ಟು ಹೆಡ್		
	ಪಂದ್ಯಗಳು	8
	ಅಲೆಕ್ಸಿನ್	7
	ಲಕ್ಷ್ಯ ಸೇನ್	1

ಇದರೊಂದಿಗೆ ಒಲಿಂಪಿಕ್ ಇತಿಹಾಸದಲ್ಲಿ ಸೆಮಿಫೈನಲ್ ತಲುಪಿದ ಭಾರತದ ಮೊದಲ ಪುರುಷ ಆಟಗಾರ ಎಂಬ ದಾಖಲೆ ನಿರ್ಮಿಸಿದ್ದಾರೆ.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೈನೀಸ್ ತೈಪೆಯ ಚೌ ತಿಯೆನ್ ಚೆನ್ ಅವರನ್ನು 19-21, 21-15, 21-12 ರಿಂದ ಸೋಲಿಸಿ ಸೆಮಿ-ಫೈನಲ್‌ಗೆ ಲಗ್ಗೆ ಹಾಕಿದ್ದು, ಪದಕಕ್ಕೆ ಕೇವಲ ಒಂದು ಗೆಲುವಿನ ಅಂತರದಲ್ಲಿದ್ದಾರೆ. ಇವರಿಗೂ ಮುನ್ನ ಕಿಡಂಬಿ ಶ್ರೀಕಾಂತ್ (2016) ಮತ್ತು ಪರುಪಳ್ಳಿ ಕಶ್ಯಪ್ (2012) ಕ್ವಾರ್ಟರ್ ಫೈನಲ್ ತಲುಪಿದ್ದರು. ಆದರೆ ಕ್ವಾರ್ಟರ್ ಫೈನಲ್ ಮೀರಿ ಈ ಇಬ್ಬರು ಆಟಗಾರರಿಗೆ ಮುನ್ನಡೆಯಲು ಸಾಧ್ಯವಾಗಿರಲಿಲ್ಲ.

ರೋಚಕ ಗೆಲುವು

ತೀವ್ರ ಕುತೂಹಲದಿಂದ ಕೂಡಿದ್ದ ಈ ಪಂದ್ಯದಲ್ಲಿ ಉಭಯ ಆಟಗಾರರ ನಡುವೆ ತೀವ್ರ ಪೈಪೋಟಿ ಕಂಡುಬಂತು. ಇಬ್ಬರು ಶಟ್ಲರ್‌ಗಳು ತಲಾ ಒಂದೊಂದು ಅಂಕಕ್ಕೂ ಹೋರಾಡಿದರು. ಚೈನೀಸ್ ತೈಪೆಯ ಚೌ ತಿಯೆನ್ ಚೆನ್ ಪ್ರಾಬಲ್ಯ ಸಾಧಿಸಿ 21-19 ರಿಂದ ಮೊದಲ ಸೆಟ್ ಗೆದ್ದರು. ನಂತರ 2ನೇ ಸೆಟ್‌ನಲ್ಲಿ ಪುನರಾಗಮನ ಮಾಡಿದ ಲಕ್ಷ್ಯ 21-15 ರಲ್ಲಿ ಗೆದ್ದು ಪಂದ್ಯವನ್ನು ಸಮಬಲ ಗೊಳಿಸಿದರು. ಹೀಗಾಗಿ ಮೂರನೇ ಸೆಟ್ ತೀವ್ರ ರೋಚಕತೆ ಸೃಷ್ಟಿಸಿತ್ತು. ಅಂತಿಮವಾಗಿ ಸೇನ್ 21-12 ರಿಂದ 3ನೇ ಸೆಟ್ ಗೆದ್ದು ಸೆಮಿ ಫೈನಲ್‌ಗೆ ತಲುಪಿದರು.

ಏಕೈಕ ಭರವಸೆ

ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಭಾರತದ ಬ್ಯಾಡ್ಮಿಂಟ್ ಆಟಗಾರರ ಮೇಲೆ ಭಾರೀ ನಿರೀಕ್ಷೆಯನ್ನು ಇಡಲಾಗಿತ್ತು. ಪ್ರಮುಖವಾಗಿ ಇತ್ತೀಚೆಗೆ ನಡೆದಿದ್ದ ಕಮನ್ವೆಲ್ತ್, ವಿಶ್ವಕಪ್ ಸೇರಿ ಹಲವು ಕ್ರೀಡಾಕೂಟದಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಬ್ಯಾಡ್ಮಿಂಟನ್‌ನಲ್ಲಿ ನಿರೀಕ್ಷೆ ಮೂಡಿಸಿದ್ದರು. ಪ್ರಮುಖವಾಗಿ ಹ್ಯಾಟ್ರಿಕ್ ಪದಕದ ನಿರೀಕ್ಷೆಯಲ್ಲಿದ್ದ ಪಿ.ವಿ. ಸಿಂಧು ಭಾರೀ ಸಂಚಲನ ಮೂಡಿಸಿದ್ದರು. ಮತ್ತೊಂದೆಡೆ ಸಾತ್ವಿಕ್ ಹಾಗೂ ಚಿರಾಗ್ ಜೋಡಿ ವಿಶ್ವದ ಬಲಿಷ್ಠ ಆಟಗಾರರನ್ನು ಸೋಲಿಸುವ ಮೂಲಕ ಪದಕದ ಆಸೆ ಹುಟ್ಟಿಸಿದ್ದರು.

ಆದರೆ ಈ ಮೂವರೂ ಕ್ವಾರ್ಟರ್ ಫೈನಲ್‌ಗಳಲ್ಲಿ ಸೋಲುವ ಮೂಲಕ ನಿರಾಸೆ ಮೂಡಿಸಿದ್ದರು. ಹೀಗಾಗಿ ಬ್ಯಾಡ್ಮಿಂಟನ್‌ನಲ್ಲಿ ಭರ್ಜರಿ ಪ್ರದರ್ಶನ ತೋರುವ ಮೂಲಕ ಲಕ್ಷ್ಯ ಸೇನ್ ಭಾರತದ ಏಕೈಕ ಭರವಸೆ ಆಗಿದ್ದಾರೆ.

ಭವಿಷ್ಯದ ತಂತ್ರಜ್ಞಾನ ಡಿಜಿಟಲ್ ಪ್ರತಿರೂಪ!

ಡಿಜಿಟಲ್ ಪ್ರತಿರೂಪವು ಭವಿಷ್ಯದ ತಂತ್ರಜ್ಞಾನ ಎನಿಸಲಿದೆ. ಈ ದಶಕ ಮುಗಿಯುವ ಹೊತ್ತಿಗೆ ಮನುಷ್ಯನ ಡಿಜಿಟಲ್ ಪ್ರತಿರೂಪವನ್ನು ತಯಾರಿಸಬಹುದು ಎಂದು ತಜ್ಞರು ಹೇಳಿದ್ದಾರೆ. ಒಮ್ನಿವರ್ಸ್ ಎನ್ನುವುದು ಎನ್‌ವಿಡಿಯಾ ಕಂಪನಿಯು ತಯಾರಿಸಿದ ಡಿಜಿಟಲ್ ಪ್ರತಿರೂಪವನ್ನು ತಯಾರಿಸಬಲ್ಲ ಸಾಫ್ಟ್‌ವೇರ್. ಅದನ್ನು ಬಳಸಿ ಇಡೀ ಭೂಮಂಡಲದ ಪ್ರತಿರೂಪವನ್ನು ರಚಿಸುವ ಪ್ರಯತ್ನವೂ ನಡೆದಿದೆ.

» ವಿಕ್ರಮ ಜೋಶಿ

ಇಪ್ಪತ್ತನೆಯ ಶತಮಾನದ ಅರವತ್ತನೆಯ ದಶಕ. ನಾಸಾದ ಅಪೋಲೋ 13 ಅಂತರಿಕ್ಷ ನೌಕೆಯು ಚಂದ್ರನತ್ತ ಧಾವಿಸುತ್ತಿತ್ತು. ಪಯಣದ ನಡುವೆ ಹಠಾತ್ತನೆ ಅದರಲ್ಲಿದ್ದ ಆಮ್ಲಜನಕದ ಸಿಲಿಂಡರ್‌ನ ಸ್ಫೋಟವಾಯಿತು. ಈ ಸ್ಫೋಟದಿಂದಾಗಿ ಅಪೋಲೋ 13ರ ಮುಖ್ಯವಾದ ಇಂಜಿನ್ ಹಾಗೂ ಇತರೆ ಎಲೆಕ್ಟ್ರಾನಿಕ್ ಬಿಡಿ ಭಾಗಗಳು ಹಾನಿಗೊಂಡವು. ತಕ್ಷಣವೇ ಗಗನಯಾತ್ರಿಗಳನ್ನು ಹೊತ್ತಿದ್ದ ಅಂತರಿಕ್ಷ ನೌಕೆಯನ್ನು ರಿಪೇರಿ ಮಾಡಲೇಬೇಕಾದ ಜವಾಬ್ದಾರಿಯು ಧರೆಯಲ್ಲಿಯ ವಿಜ್ಞಾನಿಗಳ ಹೆಗಲ ಮೇಲೆ ಬಿತ್ತು.

'ಅಷ್ಟು ಬೇಗನೆ ಹೇಗೆ ರಿಪೇರಿ ಮಾಡಬಹುದು?' ಎನ್ನುವ ಪ್ರಶ್ನೆಯು ಅಲ್ಲಿದ್ದ ಪ್ರತಿ ವಿಜ್ಞಾನಿಗಳೆದುರೂ ದೊಡ್ಡ ಸವಾಲಾಗಿ ನಿಂತಿತು. ಅದಕ್ಕುತ್ತರವಾಗಿ ನಾಸಾದ ವಿಜ್ಞಾನಿಗಳು ಕೂಡಲೇ ಅಪೋಲೋ 13 ಅಂತರಿಕ್ಷ ನೌಕೆಯ 'ಜೀವಂತ ಮಾದರಿ'ಯನ್ನು ತಯಾರಿಸಿದರು. ಅದನ್ನು ಬಳಸಿ, ಅದರೊಂದಿಗೆ ಪ್ರಯೋಗ ನಡೆಸಿ ಬೇಗನೆ ಪರಿಹಾರವನ್ನು ಕಂಡುಕೊಂಡರು. ಅಷ್ಟೇ ಅಲ್ಲ, ನೌಕೆಯಲ್ಲಿರುವ ಗಗನಯಾನಿಗಳು, ತಾವೇ ಖುದ್ದಾಗಿ ತಾವಿರುವ ನೌಕೆಯನ್ನು ಹೇಗೆ ರಿಪೇರಿ ಮಾಡಿಕೊಳ್ಳಬಹುದೆನ್ನುವ ಸಂಪೂರ್ಣ ಮಾಹಿತಿಯನ್ನು ಅವರಲ್ಲಿಗೆ ರವಾನಿಸಿದರು. ಆ ಜೀವಂತ ಮಾದರಿಯು ಕೊಟ್ಟ ಪರಿಹಾರದ ನೆರವಿನಿಂದ ಹಾನಿಗೊಳಗಾದ ಅಪೋಲೋ 13ನ್ನು ಸರಿದೂಗಿಸಿ, ಅಲ್ಲಿದ್ದ ಗಗನಯಾನಿಗಳಿಗೆ ಯಾರಿಗೂ ಜೀವ ಹಾನಿಯಾಗದಂತೆ ಪುನಃ ಪೃಥ್ವಿಗೆ ಕರೆತರಲಾಯಿತು. ಆ ಡಿಜಿಟಲ್ ಜೀವಂತ ಮಾದರಿಯೇ ಗಗನ ಯಾತ್ರಿಗಳ ಜೀವವನ್ನು ಉಳಿಸಿತ್ತು. ಅದನ್ನು ನಾವು ಇಂದು ಡಿಜಿಟಲ್ ಟ್ವಿನ್ ಎನ್ನುತ್ತೇವೆ. ಈ ಡಿಜಿಟಲ್ ಟ್ವಿನ್ ಅಥವಾ ಡಿಜಿಟಲ್ ಪ್ರತಿರೂಪವು ಜನ್ಮ ತಾಳಿದ್ದು ನಾಸಾದ ಪ್ರಯೋಗಾಲಯದಲ್ಲಿ.



ಬಯಲಾಗಿದ್ದು ಈಚೆಗೆ

ನಾಸಾವು ಇಪ್ಪತ್ತನೇ ಶತಮಾನದ ಅರವತ್ತರ ದಶಕದಲ್ಲಿ ಡಿಜಿಟಲ್ ಪ್ರತಿರೂಪದ ಬಳಕೆ ಮಾಡಿದ್ದರೂ ಕೂಡ ಮೊದಲ ಬಾರಿಗೆ ಈ ವಿಚಾರವು ಜಗತ್ತಿನ ಮುಂದೆ ಬಂದಿದ್ದು 1991ರಲ್ಲಿ. ಡೆವಿಡ್ ಜೆಲೆಟ್ನರ್ ಅವರು ತಾವು ಬರೆದ 'ಮಿರರ್ ವರ್ಲ್ಡ್' ಎನ್ನುವ ಪುಸ್ತಕದಲ್ಲಿ ಇದರ ಕುರಿತು ವಿವರವಾಗಿ ಚರ್ಚಿಸಿದ್ದರು. ಇದಾದ ಹತ್ತು ವರ್ಷಗಳ ನಂತರ ಡಿಜಿಟಲ್ ಪ್ರತಿರೂಪದ ವಿಚಾರವನ್ನು ಕೈಗಾರಿಕಾ ಕ್ಷೇತ್ರಕ್ಕೆ ಬಳಸಲು ಪ್ರಯತ್ನ ಪಟ್ಟಿದ್ದು ಡಾ. ಮೈಕಲ್ ಗ್ರೀವ್ಸ್ ಎನ್ನುವವರು. ಡಿಜಿಟಲ್ ಟ್ವಿನ್ ಅಥವಾ ಡಿಜಿಟಲ್ ಪ್ರತಿರೂಪ ಎನ್ನುವ ಪದವು ಮೊತ್ತ ಮೊದಲ ಬಾರಿಗೆ ಬಳಕೆಯಾಗಿದ್ದು 2010ರಲ್ಲಿ. ಅದಕ್ಕೆ ಕಾರಣರಾದವರು ನಾಸಾದ ವಿಜ್ಞಾನಿ ಜಾನ್ ವಿಕರ್ಸ್.

ಡಿಜಿಟಲ್ ಪ್ರತಿರೂಪ ಎಂದರೇನು?

ಯಾವುದೇ ಭೌತಿಕ ವಸ್ತುವಿನ ಸಂಪೂರ್ಣವಾದ ಮಾಹಿತಿಯು ಡಿಜಿಟಲ್ ರೂಪದಲ್ಲಿ ಇದ್ದರೆ ಅದನ್ನು ಡಿಜಿಟಲ್ ಪ್ರತಿರೂಪ ಎನ್ನುತ್ತಾರೆ. ಇದರಲ್ಲಿ ಮೂರು ಪ್ರಮುಖವಾದ ಅಂಶಗಳಿರುತ್ತವೆ. ಮೊದಲನೆಯದು ಕೆಲಸವನ್ನು ನಿರ್ವಹಿಸುವ ಭೌತಿಕ ವಸ್ತು, ಎರಡನೆಯದು ಆ ಕೆಲಸದ ಪ್ರಕ್ರಿಯೆ ಹಾಗೂ ಮೂರನೆಯದು ಅದು ಕೆಲಸ ಮಾಡುವ ಪರಿಸರ. ಇವೆಲ್ಲವನ್ನು ಕಂಪ್ಯೂಟರಿನಲ್ಲಿ ಗಣಿತದ ಸಮೀಕರಣಗಳನ್ನು ಬಳಸಿ ರಚಿಸಲಾಗುತ್ತದೆ. ಅದರಲ್ಲಿ ವಿಚಾರವೇ ಸೃಷ್ಟಿಕರ್ತ, ಗಣಿತವೇ ಸಾಮಗ್ರಿ, ಹಾಗೂ ಗಣಕಯಂತ್ರವೇ ಅದಕ್ಕೆ ಬೇಕಾದ ಚಲನ ಶಕ್ತಿ. ಉದಾಹರಣೆಗೆ ವಿಮಾನದಲ್ಲಿರುವ ಇಂಜಿನನ್ನು ಆಯ್ಕೆ ಮಾಡಿಕೊಂಡರೆ ಅದರ ಡಿಜಿಟಲ್ ಪ್ರತಿರೂಪ ಹೇಗಿರಬಹುದು? ಒಂದು ಕಂಪ್ಯೂಟರ್‌ನಲ್ಲಿ ವಿಮಾನದ ವಿನ್ಯಾಸ, ರಚನೆ, ಸಂಪೂರ್ಣ ವಿವರ ಹಾಗೂ ಅದರಲ್ಲಿ ಇಂಜಿನ್ ಸಮೇತ ಎಲ್ಲವನ್ನೂ ಸಮೀಕರಣದಲ್ಲಿ ರಚಿಸಲಾಗುತ್ತದೆ. ನಂತರ ಆ ಸಮೀಕರಣಕ್ಕೆ ಆ ವಿಮಾನದ ಇಂಜಿನ್ ಹೇಗೆ ಕೆಲಸ ಮಾಡುತ್ತದೆ? ಇಷ್ಟು ಶಕ್ತಿಯ ಉತ್ಪಾದನೆಗೆ ಎಷ್ಟು ಇಂಧನ ಬೇಕು? ಯಾವಾಗ ಅದು ಹೇಗೆ ವರ್ತಿಸುತ್ತದೆ? ಇತ್ಯಾದಿಗಳ ಸಂಪೂರ್ಣ ಪ್ರಕ್ರಿಯೆಯನ್ನು ಜೀವಂತ ಮಾದರಿಯಲ್ಲಿ ಸೇರಿಸಲಾಗುತ್ತದೆ. ಇದೂ ಸಮೀಕರಣದ ರೂಪವೇ. ಕೊನೆಯದಾಗಿ ಹಾಗೂ ಮುಖ್ಯವಾಗಿ ಪರಿಸರದ ಅಂಕಿ ಅಂಶಗಳನ್ನು ಮಾದರಿಯಲ್ಲಿ ಅಳವಡಿಸುವುದು. ಈ ಸಂಪೂರ್ಣ ಜೀವಂತ ಮಾದರಿಯ ತಯಾರಿಕೆ ಅತ್ಯಂತ ಕ್ಲಿಷ್ಟಕರ ಕೆಲಸ. ಇದನ್ನು ಸೃಷ್ಟಿ ಮಾಡುವವರಿಗೆ ರಚನೆ, ಪ್ರಕ್ರಿಯೆ ಹಾಗೂ ಪರಿಸರದ ಕುರಿತು ಅತ್ಯಂತ ಆಳವಾದ ಜ್ಞಾನ ಇರಬೇಕಾಗುತ್ತದೆ. ಒಂದು ಊಹೆ ತಪ್ಪಾದರೂ ಭೌತಿಕ ವಸ್ತುವಿನಲ್ಲಿ ಅವಘಡ ತಪ್ಪಿದ್ದಲ್ಲ. ಡಿಜಿಟಲ್ ಪ್ರತಿರೂಪವನ್ನು 'ಒಮ್ಮೆ ನಿರ್ಮಿಸಿದರೆ ಮುಗಿಯಿತು' ಎನ್ನುವ ಹಾಗಿಲ್ಲ; ಅದು ಸತತವಾಗಿ ಅಪ್ಡೇಟ್ ಆಗುತ್ತಿರಬೇಕು. ಮೇಲಿನ ಉದಾಹರಣೆಯನ್ನೇ ತಗೆದುಕೊಂಡು ನೋಡೋಣ. ಒಮ್ಮೆ ವಿಮಾನ ಸಿದ್ಧವಾಗಿ ಅದರ ಉಡಾವಣೆ ಶುರುವಾಯಿತು ಎಂದಾಕ್ಷಣ ಇಲ್ಲಿಯ ಡಿಜಿಟಲ್ ಪ್ರತಿರೂಪಕ್ಕೂ ಹೊಸ ಚಾಲನೆ ಸಿಗುತ್ತದೆ. ಕಾಲಕ್ರಮೇಣ ಆ ವಿಮಾನದ ಮಾಹಿತಿಗಳು, ಪರಿಸರದ ಬದಲಾವಣೆಗಳು, ಪ್ರಕ್ರಿಯೆಯ ವಿಭಿನ್ನತೆ, ಊಹೆಗೂ ಮೀರಿದ ಹೊಸಸಂಗತಿಗಳು ಇವೆಲ್ಲ ಪ್ರತಿರೂಪದಲ್ಲಿ ಸೇರಿಕೊಂಡು ಗಣಕಯಂತ್ರದಲ್ಲಿನ ಮಾದರಿಯು ಮತ್ತಷ್ಟು ಬಲಿಷ್ಠವಾಗುತ್ತಾ ಹೋಗುತ್ತದೆ. ಕೃತಕ ಬುದ್ಧಿಮತ್ತೆಯ ಸಹಾಯದಿಂದ ಇಂದು ಡಿಜಿಟಲ್ ಪ್ರತಿರೂಪದ ನಿಖರತೆ ನೈಜ ಪ್ರಪಂಚಕ್ಕೆ ಸರಿಸಮಾನ ಎನ್ನುವ ಮಟ್ಟಕ್ಕೆ ತಲುಪಿದೆ.

ಡಿಜಿಟಲ್ ಪ್ರತಿರೂಪದ ಬಳಕೆ

ಸೂಪರ್ ಕಂಪ್ಯೂಟರ್, ಶಕ್ತಿಶಾಲಿ ಜಿಪಿಯು, ಕ್ಲೌಡ್ ಸೌಲಭ್ಯ, ನಾನಾ ಬಗೆಯ ಸಂವೇದಕಗಳು, ಐಓಟಿ ಹಾಗೂ ಸೃಷ್ಟಿಶೀಲ ಕೃತಕ ಬುದ್ಧಿಮತ್ತೆಗಳು ಡಿಜಿಟಲ್ ಪ್ರತಿರೂಪವನ್ನು ಇನ್ನೊಂದು ಪ್ರಬಲವಾದ ತಂತ್ರಜ್ಞಾನವಾಗಿ ರೂಪಿಸುತ್ತಿವೆ. ಇಂದು ಡಿಜಿಟಲ್ ಪ್ರತಿರೂಪವನ್ನು ಯಾವುದೇ ಕ್ಷೇತ್ರಕ್ಕೂ ಬಳಸಿಕೊಳ್ಳಬಹುದು. ಆಸ್ಪತ್ರೆಯಿಂದ ಹಿಡಿದು ಅಣುಸ್ಥಾವರದವರೆಗೆ, ಒಂದು ನಗರದ ಮಾದರಿಯಿಂದ ಶುರುಮಾಡಿ ಅಂತರಿಕ್ಷ ನೌಕೆಯ ಕಾರ್ಯ ವೈಖರಿಯ ಅಧ್ಯಯನದ ತನಕ, ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಡಿಜಿಟಲ್ ಪ್ರತಿರೂಪದ ಬೇಡಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈಗಾಗಲೇ ಬೃಹತ್ ಕಟ್ಟಡದ ನಿರ್ಮಾಣ ಹಾಗೂ ನಿರ್ವಹಣೆ, ಶಕ್ತಿ ಉತ್ಪಾದನೆ, ಕೈಗಾರಿಕಾ ನಿರ್ವಹಣೆ, ಆರೋಗ್ಯ ಸೇವೆ, ಆಟೋಮೊಬೈಲ್ ಇಂಡಸ್ಟ್ರಿ, ನಗರಾಭಿವೃದ್ಧಿ ಯೋಜನೆಗಳಲ್ಲಿ ಡಿಜಿಟಲ್ ಪ್ರತಿರೂಪದ ಬಳಕೆಯು ಯಶಸ್ಸನ್ನು ಕಂಡಿವೆ. ಬೆಂಗಳೂರಿನ ಒಂದು ಡಿಜಿಟಲ್ ಪ್ರತಿರೂಪ್ನ ತಯಾರಿಸಿದರೆ ಇವತ್ತಿನ ಟ್ರಾಫಿಕ್ ಜಾಮ್‌ನ್ನು 90% ರಷ್ಟು ಕಡಿಮೆ ಮಾಡಬಹುದೇನೋ?

ಡಿಜಿಟಲ್ ಪ್ರತಿರೂಪದ ಲಾಭಗಳು

ಯಾವುದೇ ಯಂತ್ರವಿರಲಿ, ಅದರ ವಿನ್ಯಾಸದ ಪ್ರೋಟೋಟೈಪ್ ಮಾದರಿಯ ಮೇಲೆ ಪ್ರಯೋಗ ನಡೆಸಿದ ಮೇಲೆಯೇ ಕಾರ್ಯಕ್ಷಮತೆಯ ಕುರಿತು ಹೇಳಲು ಸಾಧ್ಯ. ಉದಾಹರಣೆಗೆ ಜೆಟ್ ಇಂಜಿನ್, ವಿಮಾನ, ಹಡಗು, ಕಾರು, ಫ್ಯಾಕ್ಟರಿ, ರಾಕೆಟ್, ಕಟ್ಟಡ, ಸೇತುವೆ, ಇತ್ಯಾದಿಗಳು. ಆದರೆ ಪ್ರೋಟೋಟೈಪ್ ಮಾದರಿ ತಯಾರಿಸುವುದು ತುಂಬಾ ದುಬಾರಿ ವ್ಯವಹಾರ. ಒಂದು ಸಮರ್ಪಕ ಡಿಜಿಟಲ್ ಪ್ರತಿರೂಪವಿದ್ದರೆ ಪ್ರೋಟೋಟೈಪ್ ಮಾದರಿಯ ಅಗತ್ಯವೇ ಇರುವುದಿಲ್ಲ. ಉತ್ತಮ ಗುಣಮಟ್ಟದ ಡಿಜಿಟಲ್ ಪ್ರತಿರೂಪವು ತಯಾರಾದಾರೆ ಒಂದು ಸಂಸ್ಥೆಯು ತನ್ನ ಸಾಕಷ್ಟು ಹಣ ಹಾಗೂ ಸಮಯದ ಉಳಿಸಬಹುದು. ಇದು ಮೊದಲನೆಯ ಹಾಗೂ ಮುಖ್ಯವಾದ ಲಾಭ.ಇನ್ನೊಂದು ಲಾಭವೆಂದರೆ ಡಿಜಿಟಲ್ ಪ್ರತಿರೂಪವನ್ನು ಬಳಸಿ ಲಕ್ಷಾಂತರ ಬಗೆಯ ಬೇರೆ ಬೇರೆ ರೀತಿಯ ಪ್ರಯೋಗಳನ್ನು ನಡೆಸಬಹುದು. ಹೀಗೆ ಅನೇಕ ಪ್ರಯೋಗಗಳನ್ನು ಮಾಡುವುದರಿಂದ ನಾವು ವಿನ್ಯಾಸಗೊಳಿಸುವ ಉತ್ಪನ್ನವನ್ನು ಅತ್ಯುತ್ತಮ ಗುಣಮಟ್ಟದಲ್ಲಿ ಸಿದ್ಧಪಡಿಸುವುದು ಸಾಧ್ಯ. ಮತ್ತೊಂದು ಲಾಭವೆಂದರೆ ಡಿಜಿಟಲ್ ಪ್ರತಿರೂಪವನ್ನು ರಿಯಲ್ ಟೈಮ್ ಲೈವ್ ಮಾದರಿಯನ್ನಾಗಿ ಪರಿವರ್ತಿಸಬಹುದು. ಇದರಿಂದಾಗಿ ತುರ್ತಾಗಿ ಏನೇ ಸಮಸ್ಯೆಗಳ ಉದ್ಭವವಾದರೂ ಅದಕ್ಕೆ ಶೀಘ್ರದಲ್ಲೇ ಪರಿಹಾರ ಕಂಡುಕೊಳ್ಳುವುದು ಸುಲಭ. ಕೊನೆಯದಾಗಿ ಡಿಜಿಟಲ್ ಪ್ರತಿರೂಪವನ್ನು ಕೇವಲ ದೊಡ್ಡ ದೊಡ್ಡ ಯಂತ್ರಗಳಿಗೇ ಸೃಷ್ಟಿಸಬೇಕು ಎಂದೇನಿಲ್ಲ; ಬಿಡಿ ಭಾಗಗಳಿಗೆ ಬಳಸಬಹುದು, ಹತ್ತಾರು ಬಿಡಿ ಭಾಗಗಳಿರುವ ಒಂದು ಸಿಸ್ಟಮ್ ಸೃಷ್ಟಿ ಮಾಡಬಹುದು, ಇಲ್ಲವೇ ಸಂಪೂರ್ಣ ರಚನೆಯ ಪ್ರತಿರೂಪ ವಿನ್ಯಾಸಗೊಳಿಸುವುದು ಸಾಧ್ಯ, ಇಲ್ಲವೇ ಕೇವಲ ಪ್ರಕ್ರಿಯೆಯನ್ನು ಕೂಡ ಪ್ರತಿರೂಪವಾಗಿ ಮಾಡಲು ಶಕ್ಯವಿದೆ.

ಕೆಲವು ಉದಾಹರಣೆಗಳು

1. ತಂತ್ರಜ್ಞಾನ ವಿಶ್ಲೇಷಕ ರಾಬ್ ಎಂಡೆರ್ಲೆಯವರ ಪ್ರಕಾರ ಈ ದಶಕವು ಮುಗಿಯುವುದರೊಳಗೆ 'ವಿಚಾರ ಮಾಡಬಲ್ಲ' ಮನುಷ್ಯನ ಡಿಜಿಟಲ್ ಪ್ರತಿರೂಪ ಸಿದ್ಧವಾಗಲಿದೆ.
2. ಫಾರ್ಮುಲಾ ಒನ್ ರೇಸ್‌ನಲ್ಲಿ ಹಾಗೂ ರೆಡ್‌ಬುಲ್ ತಂಡವು ತಮ್ಮ ರೇಸ್ ಕಾರಿನ ಡಿಜಿಟಲ್ ಪ್ರತಿರೂಪವನ್ನು ತಯಾರಿಸಿವೆ.
3. ಅತೀ ದೊಡ್ಡ ಕೋರಿಯರ್ ಕಂಪನಿಯಾದ ಡಿಎಫ್‌ಎಲ್ ತನ್ನ ವೇರ್‌ಹೌಸ್ ಹಾಗೂ ಸಪ್ಲೈ ಚೈನ್‌ನ ಡಿಜಿಟಲ್ ಪ್ರತಿರೂಪ ತಯಾರಿಸಿದೆ.
4. ಸಿಂಗಾಪುರ ಜಗತ್ತಿನ ಮೊದಲ ಡಿಜಿಟಲ್ ಪ್ರತಿರೂಪದ ನಗರ. ನಂತರ ಷಾಂಘೈ ನಗರವನ್ನು ಡಿಜಿಟಲ್ ರೂಪಕ್ಕೆ ತರಲಾಗಿದೆ.
5. ಫ್ರಾನ್ಸಿನ ಕಂಪನಿಯಾ ಡಸ್ಸಾಲ್ಟ್ ಸಿಸ್ಟಮ್ ಮನುಷ್ಯನ ಹೃದಯದ ಡಿಜಿಟಲ್ ಪ್ರತಿರೂಪವನ್ನು ನಿರ್ಮಿಸಿದೆ.
6. ಒಮ್ನಿವರ್ಸ್ ಎನ್ನುವುದು ಎನ್‌ವಿಡಿಯಾ ಕಂಪನಿಯು ತಯಾರಿಸಿದ ಡಿಜಿಟಲ್ ಪ್ರತಿರೂಪವನ್ನು ತಯಾರಿಸಬಲ್ಲ ಸಾಫ್ಟ್‌ವೇರ್. ಅದನ್ನು ಬಳಸಿ ಇಡೀ ಭೂಮಂಡಲದ ಪ್ರತಿರೂಪವನ್ನು ರಚಿಸುವ ಪ್ರಯತ್ನ ನಡೆದಿದೆ.

» ಡಾ. ಎನ್. ಭಾಸ್ಕರ ಆಚಾರ್ಯ

ಗರ್ಭಿಣಿಯರಲ್ಲಿ ಆಂತರಿಕ ಆಘಾತ

ಆರೋಗ್ಯವೇ ಮಹಾಭಾಗ್ಯ. ಅದರಲ್ಲೂ ಗರ್ಭಿಣಿಯರ ಆರೋಗ್ಯ ಇನ್ನಷ್ಟು ಸೂಕ್ಷ್ಮ. ಅವರನ್ನು ಜತನದಿಂದ ನೋಡಿಕೊಳ್ಳುವುದು ಪತಿ ಮತ್ತು ಬಂಧುಗಳ ಹೊಣೆ. ಗರ್ಭಿಣಿಯರಿಗೆ ಆಘಾತವಾದರೆ ಪ್ರಾಣಕ್ಕೆ ಅಪಾಯ ಎಂಬ ವಿಚಾರವನ್ನು, ಉದಾಹರಣೆ ಸಹಿತ ಇಲ್ಲಿ ಪ್ರಸ್ತುತಪಡಿಸಿದ್ದಾರೆ, ಅನುಭವಿ ವೈದ್ಯರು.

ರವಿಚಂದ್ರ ತನ್ನ ಆಸ್ಪತ್ರೆಯ ಕೊಠಡಿಯಲ್ಲಿ ಕುಳಿತು, ರೋಗಿಗಳನ್ನು ಒಬ್ಬೊಬ್ಬರನ್ನಾಗಿ ನೋಡುತ್ತಿದ್ದ. ರಾತ್ರಿ ಗಂಟೆ ಒಂಭತ್ತಾದರೂ ರೋಗಿಗಳ ಗುಂಪು ಇನ್ನೂ ಕರಗುವ ಹಾಗೆ ಕಾಣಲಿಲ್ಲ. ಅಷ್ಟರಲ್ಲಿ ಹೊರಗಿನಿಂದ ಗಲಾಟೆ ಕೇಳಿಸಿತು. ಆಟೋ ರಿಕ್ಷಾವೊಂದು ಬಂದು ನಿಲ್ಲುತ್ತಿದ್ದಂತೆ, ಅದರಿಂದ ಕೆಳಗಿಳಿದ ಡ್ರೈವರ್ ಅಲ್ಲಿಂದ ಸ್ಟ್ರೆಚರ್ ಅನ್ನು ಎಳೆದುಕೊಂಡು ಗಡಿಬಿಡಿಯಿಂದ ವಾಡ್ ರ್ಬಾಯಿ ಸಹಾಯದಿಂದ, ಯುವತಿಯೊಬ್ಬಳನ್ನು ಅದರ ಮೇಲೆ ಮಲಗಿಸಿದ, ಆ ಯುವತಿಯ ಹಿಂದೆಯೇ ಕೆಳಗಿಳಿದ ವ್ಯಕ್ತಿ ಆಕೆಯನ್ನು ಲೇಬರ್ ವಾರ್ಡ್ ಕಡೆಗೆ ಕರೆದೊಯ್ಯಲು ಹೇಳಿದ. ಅದರಂತೆ, ಕ್ಯಾಶ್ಯುವಾಲ್ಟಿಯ ಸಿಸ್ಟರ್ ಆ ರೋಗಿಯೊಡನೆಯೇ ಲೇಬರ್ ವಾರ್ಡ್ ಕಡೆ ನಡೆದರು. ಆತ, 'ರೋಗಿ ಗರ್ಭಿಣಿ, ಪ್ರಜ್ಞೆ ತಪ್ಪಿದೆ' ಎಂದು ಹೇಳುತ್ತಾ ಸ್ತ್ರೀರೋಗ ತಜ್ಞವೈದ್ಯರನ್ನು ಕರೆಯಲು ಕೇಳಿಕೊಂಡ. ಆಸ್ಪತ್ರೆಯ ರಿಸೆಪ್ಶನ್ ನಿಂದ ಕೂಡಲೇ ಅವರಿಗೆ ಫೋನ್ ಕರೆ ಮಾಡಲಾಗಿ ಅವರು 'ಈಗಲೇ ಆಸ್ಪತ್ರೆಗೆ ಹೊರಡುತ್ತೇನೆ'' ಎಂದು ಹೇಳಿದರು.

ಲೇಬರ್ ವಾರ್ಡ್ ಒಳಗೆ ರೋಗಿಯನ್ನು ಕೊಂಡು ಹೋದ ಸಿಸ್ಟರ್, ಆಕೆಯ ಸ್ಥಿತಿ ನೋಡಿ, ಆಕೆಯನ್ನು ಸ್ಟ್ರೆಚರ್‌ನಿಂದ ಇಳಿಸದೇ ಆಸ್ಪತ್ರೆಯಲ್ಲಿದ್ದ ವೈದ್ಯಕೀಯ ತಜ್ಞ ಡಾ. ರವಿಚಂದ್ರರಿಗೆ ವಿಷಯ ತಿಳಿಸಿ ಕೂಡಲೇ ಬರುವಂತೆ ಕೇಳಿಕೊಂಡಳು. ಪರೀಕ್ಷಿಸುತ್ತಿದ್ದ ರೋಗಿಯನ್ನು ಅಲ್ಲೇ ಬಿಟ್ಟು ಲೇಬರ್ ವಾರ್ಡ್ ಕಡೆ ಹೋದರು. ರೋಗಿಗೆ ಮೂಗಿನ ಮೂಲಕ ಆಕ್ಸಿಜನ್ ಕೊಡುತ್ತಾ ಡ್ರಿಪ್ ಹಾಕಲು ಸಿದ್ಧತೆ ಮಾಡುತ್ತಿದ್ದ ಸಿಸ್ಟರ್, 'ಡಾಕ್ಟ್ರೆ, ರೋಗಿಯ ಪಲ್ಸ್, ಬಿ.ಪಿ. ಸಿಗುತ್ತಿಲ್ಲ. ಆಕ್ಸಿಜನ್ ಸ್ಯಾಚುರೇಷನ್ ರೆಕಾರ್ಡ್ ಆಗ್ತ ಇಲ್ಲ. ಗಾಸ್ಪಿಂಗ್ ಸ್ಟೇಜ್‌ನಲ್ಲಿದ್ದಾಳೆ. ಐ.ವಿ.ಫ್ಲುಯಿಡ್ಸ್ ಪ್ರಾರಂಭ ಮಾಡುತ್ತಿದ್ದೇವೆ' ಎಂದಳು. ವೈದ್ಯರೂ ಪರೀಕ್ಷಿಸಿ ನೋಡಲಾಗಿ ಆಕೆ ಅದ್ಯಾವುದೋ ತೀವ್ರತರ ಅಘಾತಕ್ಕೆ ಒಳಗಾಗಿದ್ದು ಮರಣದ ಅಂಚಿನಲ್ಲಿರುವುದನ್ನು ತಿಳಿದುಕೊಂಡರು. ಕೂಡಲೇ ರೋಗಿಯೊಡನೆ ಬಂದ ವ್ಯಕ್ತಿಯನ್ನು ಒಳಕರೆದು ಆಕೆಯ ಗಂಡನೇ ಆತ ಎಂದು ಖಚಿತಪಡಿಸಿಕೊಂಡು ಆಕೆಗೆ ಏನಾಗಿತ್ತು ಎಂದು ಕೇಳಿದರು. ಆಕೆ ಎರಡು ತಿಂಗಳ ಗರ್ಭಿಣಿ ಎಂದೂ ಆ ದಿನ ಸಾಯಂಕಾಲ ಆಕೆ ಇದ್ದಕ್ಕಿದ್ದಂತೆ ವಾಂತಿ ಮಾಡಿ ಪ್ರಜ್ಞೆ ತಪ್ಪಿ ಬಿದ್ದಳೆಂದೂ ಆತ ಹೇಳಿದ.

ಬಹುಶಃ ಗರ್ಭಕೋಶದ ಹೊರಗೆ ಗರ್ಭ ನಿಂತಿದ್ದು, ಅದು ಒಡೆದು ಹೋಗಿದ್ದರಿಂದ ಒಳಗೆ ರಕ್ತಸ್ರಾವವಾಗಿ ಆಕೆಯ ಸ್ಥಿತಿ ಗಂಭೀರವಾಗಿದೆಯೆಂದು ತಿಳಿದುಕೊಂಡು ಆ ಗಡಿಬಿಡಿಯಲ್ಲೇ ಆಕೆಯ ಗಂಡನಿಗೆ ಆಕೆಯ ಪರಿಸ್ಥಿತಿಯ ಬಗ್ಗೆ ತಿಳಿಸುತ್ತಾ, ಆಕೆಯನ್ನು ಬದುಕಿಸಲು ತಮ್ಮಿಂದಾದ ಪ್ರಯತ್ನ ಮಾಡುವುದಾಗಿ ಹೇಳಿ ಬೇಕಾದ ಚಿಕಿತ್ಸೆ ಮುಂದುವರಿಸಿದರು. ರೋಗಿಯ ಪತಿ 'ಸ್ತ್ರೀ ರೋಗ ತಜ್ಞರನ್ನು ಬರ ಹೇಳಿ' ಎಂದು ಹೇಳುತ್ತಾ ಇರುವಾಗಲೇ, ರೋಗಿ ಅವರ ಎದುರಲ್ಲೇ ಕೊನೆಯುಸಿರೆಳೆದಳು. ಆಕೆಯ ಗಂಡನಿಗೆ ವಿಷಯವನ್ನು ಸ್ಪಷ್ಟಪಡಿಸಿ, ಅಂಥಾ ಸಂದರ್ಭಗಳಲ್ಲಿ ರೋಗಿಯನ್ನು ಬದುಕಿಸಲು ಕೊಡುವ ಚಿಕಿತ್ಸೆಯನ್ನು ವೈದ್ಯರು ಪ್ರಾರಂಭಿಸಿದರೂ ಆಕೆಯ ಹೃದಯ ಶ್ವಾಸಕೋಶಗಳು ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಸುಮಾರು ಅರ್ಧ ಗಂಟೆಯ ಪ್ರಯತ್ನದ ಬಳಿಕ, ರೋಗಿ ಮರಣಿಸಿದ ವಿಷಯವನ್ನು ವೈದ್ಯರು ಘೋಷಿಸಿದರು.

ವಿಷಯ ತಿಳಿದ ರೋಗಿಯ ಪತಿ ಲೇಬರ್ ವಾರ್ಡ್ ಹೊರಗಡೆ ತಲೆ ಮೇಲೆ ಕೈ ಹೊತ್ತು ಕುಳಿತಿದ್ದ. ತಾವು ಕೊನೆ ಕ್ಷಣದಲ್ಲಿ ಕೊಟ್ಟ ತುರ್ತುಚಿಕಿತ್ಸೆಯಿಂದ ಏನೂ ಪ್ರಯೋಜನವಾಗಲಿಲ್ಲ ಎಂದು ಆತನನ್ನು ತಮ್ಮ ಕೊಠಡಿಗೆ ಕರೆದು ಡಾ. ರವಿಚಂದ್ರ ಮತ್ತು ಸ್ತ್ರೀ ರೋಗ ತಜ್ಞ ವೈದ್ಯರಾದ ಡಾ. ಪ್ರಭಾ ತಿಳಿಸಿದರು. ಅಲ್ಲದೆ ಗರ್ಭಿಣಿ ಯುವತಿಯೊಬ್ಬಳು ಹೀಗೆ ಆಕಸ್ಮಿಕ ಮರಣಕ್ಕೊಳಗಾದಾಗ ಅದನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ತಿಳಿಸಬೇಕಾಗುತ್ತದೆ ಎಂದೂ, ಮೃತಳ ಶವ ಪರೀಕ್ಷೆಯನ್ನು ಮಾಡಿಸಬೇಕೆಂದು ವೈದ್ಯರು ತಿಳಿಸಿ ಆತನ ಎದುರಲ್ಲೇ, ಠಾಣೆಯ ಸಬ್ ಇನ್ಸ್‌ಪೆಕ್ಟರಿಗೆ ಇಂಟಿಮೇಷನ್ ಪತ್ರವನ್ನು ಬರೆದರು.

'ಅಯ್ಯೋ ಅದೆಲ್ಲ ಏಕೆ ಸರ್? ಹೋದ ಜೀವ ಅಂತೂ ಹೋಯ್ತು. ಬಿಟ್ಟುಕೊಡಿ' ಎಂದು ಆತ ಹೇಳಿದ. ವೈದ್ಯರು, 'ಹಾಗಾಗುವುದಿಲ್ಲವಪ್ಪ, ಹಾಗೆ ಮಾಡದಿದ್ದರೆ ಕಾನೂನು ಪ್ರಕಾರ ತಪ್ಪಾಗುತ್ತೆ.' ಎಂದು ಹೇಳಿದಾಗ, 'ಮನೆಯವರನ್ನು ಕೇಳಿ ಬರುತ್ತೇನೆ' ಎಂದು ಆತ ಹೊರಟು ಹೋದ. ಡಾ. ರವಿಚಂದ್ರ, ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ವಿಷಯ ತಿಳಿಸಿದರು.

★★★

ಸುಮನ, ಸುರೇಶ ಮದುವೆಯಾಗಿ ಐದು ವರ್ಷಗಳಾಗಿದ್ದರೂ, ಮಕ್ಕಳಾಗಿರಲಿಲ್ಲ. ಮೊದಲು ಮೂರ್ನಾಲ್ಕು ವರ್ಷಗಳು ಕಾದು ನಂತರ, ಅನೇಕ ಕಡೆ ಚಿಕಿತ್ಸೆ ನಡೆಸಿ, ಕೆಲವೊಂದು ಹರಕೆಗಳನ್ನು ಪೂರೈಸಿ ನಂತರ ಡಾ.ರವಿಚಂದ್ರರ ಆಸ್ಪತ್ರೆಗೆ ಬಂದಿದ್ದರು. ಅಲ್ಲಿನ ಸ್ತ್ರೀರೋಗ ತಜ್ಞ ವೈದ್ಯರು ಸುಮನಳನ್ನು ಪರೀಕ್ಷಿಸಿ, ತಕ್ಕ ಚಿಕಿತ್ಸೆ ನೀಡಿದ ಬಳಿಕ ಆಕೆ ಗರ್ಭಿಣಿಯಾಗಿ, ಗಂಡು ಮಗುವಿಗೆ ಜನ್ಮ ನೀಡಿದ್ದಳು. ಆ ಮಗುವನ್ನು ಜೋಪಾನವಾಗಿ ನೋಡಿಕೊಂಡು, ಕಾಲ ಕಾಲಕ್ಕೆ ಮಗುವಿಗೆ ಕೊಡಬೇಕಾಗಿದ್ದ ಚುಚ್ಚುಮದ್ದುಗಳನ್ನು ಕೊಡಿಸುತ್ತಿದ್ದರು. ಮಗು ಸಣ್ಣ ಗೂಡಂಗಡಿಯಿಂದ ಬರುವ ಆದಾಯದಿಂದಲೇ ಹೇಗೂ ನಿಭಾಯಿಸುತ್ತಿದ್ದ ದಂಪತಿಗಳಿಗೆ ಆ ಮಗುವಿನ ಮೇಲೆ ಅದಮ್ಯ ಪ್ರೀತಿ. ತಂದೆ ಸುರೇಶನಿಗೆ ಮಗುವಿನ ಮೇಲೆ ತಾಯಿಗಿಂತಲೂ ಹೆಚ್ಚಿನ ಅಕ್ಕರೆ.

ಮಗುವಿಗೆ ನಾಲ್ಕು ವರ್ಷಗಳಾದಾಗ ಸುಮನಳಿಗೆ ಪುನಃ ಮುಟ್ಟು ನಿಂತಿತು. ಡ್ರಗ್ ಹೌಸ್‌ನಲ್ಲಿ ಸಿಗುತ್ತಿದ್ದ ಕಾರ್ಡು ತಂದು ಮೂತ್ರ ಪರೀಕ್ಷೆ ಮಾಡಿ ನೋಡಿಕೊಂಡಾಗ ಗರ್ಭಿಣಿ ಎಂದು ತಿಳಿದು ಬಂತು. ಸುಮನಳಿಗೆ ಇನ್ನೊಂದು ಮಗು ಬೇಕು ಎನ್ನುವ ಬಯಕೆ, ಹೆಣ್ಣಾದರೆ ಒಳ್ಳೆಯದು ಎನ್ನುವ ಆಸೆ. ಸುರೇಶನಿಗೆ ಇನ್ನೊಂದು ಮಗು ಇಷ್ಟು ಬೇಗ ಬೇಡ, ಹಣ ಹೊಂದಿಸುವುದು ಕಷ್ಟ, ಅಲ್ಲದೆ ಮೊದಲ ಮಗುವಿನ ಮೇಲೆ ಗಮನ ಕಡಿಮೆಯಾಗುತ್ತದೆ ಎಂಬ ಯೋಚನೆ, 'ವೈದ್ಯರಲ್ಲಿ ಹೋಗಿ ಗರ್ಭಪಾತ ಮಾಡಿಸಿಕೊಳ್ಳು' ಎಂದು ಒತ್ತಾಯ.

ಹೀಗೆ ನಾಲ್ಕಾರು ದಿನ ವಾದವಿವಾದ ನಡೆದು, ಕೊನೆಗೊಮ್ಮೆ ಆತ ಸಿಟ್ಟಿನಿಂದ ಆಕೆಗೆ ಕಾಲಿನಿಂದ ಒದ್ದೇ ಬಿಟ್ಟ, 'ಅಯ್ಯೋ' ಎಂದು ನರಳಿದ ಆಕೆ, ಅಲ್ಲೇ ಉರುಳಿ ಬಿದ್ದಳು; ಕೂಗಿ ವಾಂತಿ ಮಾಡಿಕೊಂಡಳು, ಅಲ್ಲದೆ ಆಕೆಯ ಸೀರೆ ಲಂಗ ಸೊಂಟದ ಬಳಿ ಒದ್ದೆಯಾಯ್ತು. 'ಅಯ್ಯೋ ದೇವರೇ ಇದೇನಾಯ್ತು' ಎಂದುಕೊಂಡ ಸುರೇಶ ಆಕೆಯನ್ನು ಮಾತನಾಡಿಸಲು ಪ್ರಯತ್ನಿಸಿದ ಅದಾಗಲೇ ಅರೆಪ್ರಜ್ಞಾವಸ್ಥೆಗೆ ತಲುಪಿದ ಆಕೆ ಉತ್ತರಿಸಲಿಲ್ಲ. ಆಕೆಯ ಮುಖಕ್ಕೆ ನೀರು ಚಿಮುಕಿಸಿದರೂ ಸ್ಪಂದಿಸಲಿಲ್ಲ. ಸಿಟ್ಟೆಲ್ಲ ಇಳಿದು ಹೋಗಿ ಪಶ್ಚಾತ್ತಾಪದಿಂದ ನರಳುತ್ತಿದ್ದ ಆತ ಆಕೆಯ ಬಟ್ಟೆ ಸಡಿಲಿಸಿ ನೋಡಿದ. ಬಟ್ಟೆಯಲ್ಲೇ ಆಕೆ ಮಲಮೂತ್ರ ಮಾಡಿಕೊಂಡಿದ್ದಳು. ಅಯ್ಯೋ ಈಕೆಯನ್ನು ಆಸ್ಪತ್ರೆಗೆ ಕೊಂಡು ಹೋಗಬೇಕಲ್ಲ. ಈ ಅವಸ್ಥೆಯಲ್ಲಿ ಹೇಗೆ ಕರೆದುಕೊಂಡು ಹೋಗುವುದು ಎಂದು ಆಕೆಯ ಬಟ್ಟೆ ಬದಲಾಯಿಸತೊಡಗಿದ. ಮನೆಯೊಳಗೆ ಯಾರೂ ಇರಲಿಲ್ಲ. ಬಿಸಿನೀರಿನಲ್ಲಿ ಬಟ್ಟೆಯ ತುಂಡುಗಳನ್ನು ಅದ್ದಿ ಆಕೆಯ ಮೈ ಎಲ್ಲಾ ಒರೆಸಿದ. ಆ ಬಟ್ಟೆಯ ಬಿಸಿಗಾದರೂ, ಆಕೆ ಕಣ್ಣು ಬಿಟ್ಟಾಳೆಂಬ ಒಳ ಆಸೆ. ಬಟ್ಟೆ ಬದಲಿಸಿ, ಕೋಣೆಯಲ್ಲಿ ಮಲಗಿಸಿದ. ಆಕೆಯನ್ನು ರಿಕ್ಷಾದಲ್ಲಿ ಮಲಗಿಸಿ, ಆಸ್ಪತ್ರೆಗೆ ಹೊರಟ. ಅಂತೂ ಇಂತೂ, ಪೆಟ್ಟು ಬಿದ್ದ ಮೂರು ಗಂಟೆಗಳ ಬಳಿಕ ಸುಮನ ಆಸ್ಪತ್ರೆಗೆ ತಲುಪಿದಳು.

★★★

ಮನೆಯವರನ್ನು ಕೇಳಿ ಹೇಳುತ್ತೇನೆ ಎಂದು ಹೊರ ಹೋದ ಸುರೇಶ್ ಕೇವಲ ಐದೇ ನಿಮಿಷಗಳಲ್ಲಿ ಮರಳಿ ಬಂದ. ಆತನೊಡನೆ ಐದಾರು ಜನ ಯುವಕರಿದ್ದರು. ಅವರೆಲ್ಲ ಒಂದಲ್ಲೊಂದು ಕಾಹಿಲೆಗೆ ಆಸ್ಪತ್ರೆಗೆ ಬಂದು ಹೋಗುವವರೇ ಆಗಿದ್ದರು. 'ಡಾಕ್ಟ್ರೇ ಇವನ ಹೆಂಡತಿಗೆ ಏನಾಗಿತ್ತು? ಏಕೆ ಅವಳು ಸತ್ತಳು? ನೀವೆ ಏನೋ ಮಿಸ್ಟೇಕ್ ಮಾಡಿದ್ದರಿಂದ ಅವಳು ಸತ್ತಿರಬೇಕು. ಅದನ್ನು ಮುಚ್ಚಿ ಹಾಕಲು ಪೋಸ್ಟ್ ಮಾರ್ಟಂ ಮಾಡಿ ಎನ್ನುತ್ತೀರಿ, ಅದನ್ನು ಮಾಡುವವರು ಕೂಡಾ ನಿಮ್ಮಂತಹ ಡಾಕ್ಟ್ರೇ ಅಲ್ಲವೇ?' ಎಂದು ಒಬ್ಬ ಕೇಳಿದ.

ಅದಕ್ಕೆ ಡಾ.ರವಿಚಂದ್ರ ಉತ್ತರ ಕೊಡುವಷ್ಟರಲ್ಲಿ ಮತ್ತೊಬ್ಬ ಪ್ರಾರಂಭಿಸಿದ, 'ಏಕೆ ಡಾಕ್ಟ್ರೇ?, ಇದೆಲ್ಲಾ ರಾಮಾಯಣ. ನಾವೆಲ್ಲಾ........ ಸಂಘಟನೆಯವರು. ಸುಮ್ಮನೆ ಬಾಡಿಯನ್ನು ಬಿಟ್ಟು ಕೊಡಿ. ಸುರೇಶ ಪಾಪ ಬಡವ, ಶವ ಸಂಸ್ಕಾರಕ್ಕೆ ಐವತ್ತು ಸಾವಿರ ರೂಪಾಯಿ ಕೊಡಿ. ಇಲ್ಲದಿದ್ದರೆ ಗೊತ್ತಲ್ಲ' ಎಂದ.

'ಏನಪ್ಪ ನೀವು ಹೇಳುವುದು? ಆಕೆ ಸತ್ತಿದ್ದು ಏಕೆ ಎಂದು ನಮಗೇ ಗೊತ್ತಿಲ್ಲ. ಬಂದಾಗಲೇ ಮೇಲುಶ್ವಾಸ ಬಿಡುತ್ತಿದ್ದ ಆಕೆಯನ್ನು ಪರೀಕ್ಷೆ ಮಾಡಲು ಸಮಯವಿರಲಿಲ್ಲ. ಅಷ್ಟರಲ್ಲೇ ಸತ್ತಾಗಿತ್ತು. ಆಕೆಯ ಗಂಡನನ್ನೇ ಕೇಳಿ ನೋಡಿ, ಅವರೆದುರೇ ಎಲ್ಲ ನಡೆದಿತ್ತಲ್ಲ' ಎಂದು ವೈದ್ಯರು ಹೇಳಿದರು. ಅದು ಯಾವುದನ್ನೂ ಕೇಳದ ಮನಸ್ಥಿತಿಯಲ್ಲಿದ್ದ ಯುವಕರು ಆ ವೈದ್ಯರ ಮೇಲೆ, ಆಸ್ಪತ್ರೆಯ ಮೇಲೆ, ಸ್ತ್ರೀ ರೋಗ ತಜ್ಞರ ಮೇಲೆ ಅಲ್ಲಸಲ್ಲದ ಅಪಾದನೆಗಳನ್ನು ಹೊರಿಸಿ ಗಟ್ಟಿಯಾಗಿ ಮಾತನಾಡತೊಡಗಿದರು. ಅಷ್ಟರಲ್ಲಿ ರಾತ್ರಿ ಪಾಳಿಯ ಕಾರ್ಯ ನಿರತ ವೈದ್ಯರೊಬ್ಬರು ಪೊಲೀಸ್ ಸ್ಟೇಷನ್‌ಗೆ ಪುನಃ ಫೋನ್ ಮಾಡಿ ಪರಿಸ್ಥಿತಿಯನ್ನು ವಿವರಿಸಿದರು. ಸಬ್ ಇನ್ಸ್‌ಪೆಕ್ಟರು ಐದಾರು ಜನ ಪೊಲೀಸರೊಡನೆ, ಕೂಡಲೇ ಆಸ್ಪತ್ರೆಗೆ ಬಂದರು.

ಬಂದವರೇ ಸೀದಾ ಡಾ.ರವಿಚಂದ್ರರ ಕೊಠಡಿಯನ್ನು ಪ್ರವೇಶಿಸಿದ್ದರು. ಅವರನ್ನು ನೋಡಿ ಅಲ್ಲಿದ್ದ ಯುವಕರೆಲ್ಲಾ ಕಕ್ಕಾಬಿಕ್ಕಿಯಾದರು. ರೋಗಿಯ ಗಂಡ ಸುರೇಶ ಹಾಗೂ ಆತನ ಒಬ್ಬ ಸ್ನೇಹಿತನನ್ನು ಒಳಗೆ ನಿಲ್ಲಿಸಿಕೊಂಡು ಉಳಿದವರನ್ನು ಹೊರಗಡೆ ಕಳುಹಿಸಿ, ಸಬ್ ಇನ್ಸ್‌ಪೆಕ್ಟರ್ ವೈದ್ಯರ ಬಳಿ ಘಟನೆಯ ಕುರಿತು ವಿವರ ಪಡೆದರು. ನಂತರ ಸುರೇಶನನ್ನು ವಿಚಾರಿಸಿದರು. ಆತನ ಸಂಬಂಧಿ, 'ಸರ್, ಹೋದವರು ಹೇಗೂ ಹೋಗಿಯಾಯ್ತು. ಇವರು ಪೋಸ್ಟ್ ಮಾರ್ಟಂ ಮಾಡಿ ಎನ್ನುತ್ತಿದ್ದಾರೆ. ಬೇಡ ಸರ್, ಪುನಃ ದೇಹಕ್ಕೆ ಘಾಸಿ ಮಾಡುವುದೇ? ಸ್ವಲ್ಪ ಡಾಕ್ಟರಿಗೆ ತಿಳಿಸಿ ಹೇಳಿ, ಬಾಡಿಯನ್ನು ಬಿಟ್ಟು ಕೊಡಿ ಸಾರ್' ಎಂದ. ಅದಕ್ಕೆ ಒಪ್ಪದ ಸಬ್‌ಇನ್ಸ್‌ಪೆಕ್ಟರ್, 'ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇಲ್ಲದಿದ್ದರೆ ಮುಂದೆ ನಿಮಗೆ ತೊಂದರೆ ಆಗಬಹುದು' ಎಂದರು. ವೈದ್ಯರಿಂದ ಇಂಟಿಮೇಷನ್ ಪತ್ರವನ್ನು ತೆಗೆದುಕೊಂಡು ಬಾಡಿಯನ್ನು ಅಂಬುಲೆನ್ಸ್ ಗೆ ಹಾಕಿಸಿ, ಸರ್ಕಾರಿ ಆಸ್ಪತ್ರೆಗೆ ಕೊಂಡು ಹೋದರು. ಅದಾಗಲೇ ಸುರೇಶನೊಡನೆ ಬಂದ ಆತನ ಸ್ನೇಹಿತರು ಅಲ್ಲಿಂದ ಹೊರಟು ಹೋಗಿಯಾಗಿತ್ತು.

ಮರುದಿನ, ಅದು ಗರ್ಭಿಣಿ ಸ್ತ್ರೀಯ ಮರಣವಾಗಿದ್ದರಿಂದ, ಜಿಲ್ಲಾಸ್ಪತ್ರೆಗೆ ಸಾಗಿಸಿದರು. ಅಲ್ಲೇ ಪೋಸ್ಟ್ ಮಾರ್ಟಂ ನಡೆಯಿತು. ಅಲ್ಲದೇ ಮತ್ತೊಂದು ವಾರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ವಿಚಾರಣೆಗೆ ಹಾಜರಾಗಲು ಡಾ. ರವಿಚಂದ್ರರಿಗೆ ಜಿಲ್ಲಾ ಆರೋಗ್ಯಾಧಿಕಾರಿಗಳ ಮೂಲಕ ಕರೆ ಬಂತು. ಆ ಸಮಯದ ಸಿಸಿ ಟಿವಿ ಕವರೇಜ್ ಸಹಿತ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ನಿರ್ದಿಷ್ಟ ದಿನ ಡಾ. ರವಿಚಂದ್ರ ಅಲ್ಲಿ ಹಾಜರಾದರು. ಸುಮನಳ ಪತಿ ಸುರೇಶ ಕೂಡಾ ಆತನ ಸ್ನೇಹಿತನೊಡನೆ ಅಲ್ಲಿಗೆ ಬಂದಿದ್ದ. ಅಷ್ಟರಲ್ಲಿ ಶವಪರೀಕ್ಷೆಯ ವರದಿ ಬಂದಿತ್ತು. ಅದರಂತೆ ಮೃತಳಾದ ಗರ್ಭಿಣಿ ಮಹಿಳೆಯ ಗರ್ಭಕೋಶಕ್ಕೆ ರಕ್ತ ಪೂರೈಕೆ ಮಾಡುವ ಬಲ ಬದಿಯ ಮುಖ್ಯ ರಕ್ತನಾಡಿ ದುರ್ಬಲವಾಗಿ ಅಗಲವಾಗಿದ್ದು ಬಲೂನ್ ರೀತಿ ಮಾರ್ಪಾಟಾಗಿತ್ತು. ಅದು ಒಡೆದು ಹೋಗಿದ್ದರಿಂದ ಆಂತರಿಕ ರಕ್ತಸ್ರಾವವಾಗಿ ರೋಗಿ ಮೃತಪಟ್ಟಿದ್ದಾಳೆ ಎಂದು ವರದಿಯಾಗಿತ್ತು. ಹಾಗಾಗಿ, ಗರ್ಭಧಾರಣೆ ಮರಣಕ್ಕೆ ಕಾರಣವಲ್ಲ ಎಂದು ಷರಾ ಬರೆದು, ಆ ವಿಚಾರಣೆಯನ್ನು ಬರ್ಖಾಸ್ತುಗೊಳಿಸಿದರು.

ತಮ್ಮದಲ್ಲದ ತಪ್ಪಿಗಾಗಿ ತಲೆ ಒಡ್ಡ ಬೇಕಾಗುವ ಇಂಥಾ ಪ್ರಸಂಗಗಳು ಪ್ರತಿಯೊಬ್ಬ ವೈದ್ಯನ ಬಾಳಿನ ಅವಿಭಾಜ್ಯ ಅಂಗ ಎನ್ನಬಹುದು. ಈ ಲೇಖನ ಮಧ್ಯಭಾಗದ ವಿವರಗಳು, ರೋಗಿಯ ಪತಿಯಿಂದ ಹಾಗೂ ಆತನ ಸ್ನೇಹಿತನಿಂದ ಘಟನೆಯ ಎಷ್ಟೋ ದಿನಗಳ ಬಳಿಕ ವೈದ್ಯರಿಗೆ ತಿಳಿದು ಬಂದವುಗಳು. ಬಹುಶಃ ಘಟನೆ ಸಂಭವಿಸಿದ ಸ್ವಲ್ಪ ಸಮಯದೊಳಗೆ ರೋಗಿಗೆ ವೈದ್ಯಕೀಯ ಸಹಾಯ ಸಿಕ್ಕಿದ್ದಲ್ಲಿ ಆಕೆಯ ಜೀವ ಉಳಿಯುತ್ತಿತ್ತೇನೋ?

ಪುಸ್ತಕ ವಿಮಾನ



ಸುನಂದಾ ಬೆಳಗಾಂವಕರರ ನಾಸು

ಮಹಿಳೆಯ ಹಲವು ಸ್ಥಿತಿಗಳನ್ನು ಈ ಕಾದಂಬರಿಯಲ್ಲಿ ಕಟ್ಟಿಕೊಟ್ಟ ರೀತಿಯನ್ನು ಓದುವುದೇ ಒಂದು ವಿಭಿನ್ನ ಆಯಾಮದ ಅನುಭವ.

ಸುನಂದಾ ಬೆಳಗಾಂವಕರ (1935– 2017) ಅವರು ಕಜ್ಜಾಯ, ಕೈತುತ್ತು, ಕೊಡುವುದೇನು ಕೊಂಬುವುದೇನು, ಕಾಕ ಭುಶುಂಡಿ (ಲಲಿತ ಪ್ರಬಂಧಗಳ ಸಂಕಲನ) ಮೃದ್ಗಂಧ (ಕಥಾಸಂಕಲನ) ಶಾಲ್ಮಲಿ (ಕವನ ಸಂಕಲನ) ನಾಸು, ಝುವಾದಿ, ಕಾಯಕ ಕೈಲಾಸ (ಕಾದಂಬರಿ) ಎಂಬ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರ ಚೊಚ್ಚಲ ಕಾದಂಬರಿಯಾದ ನಾಸು ವಿಶಿಷ್ಟ ಎನಿಸಿದೆ.

» ಡಾ. ಸುಭಾಷ್ ಪಟ್ಟಾಜೆ

ನಾಸು ಎಂದರೆ 'ನಾಯಿ ಸೂಳೆಮಗ' ಎಂಬ ಬೈಗುಳ ಪದದ ಅಪಭ್ರಂಶ ರೂಪವಾಗಿದೆ. ವಿದ್ವತ್ತಿಗೆ ಹೆಸರಾದ ಮಾಧ್ವ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಅನಂತಾಚಾರ್ಯರು ಬುದ್ಧಿ ಪಳಗಿದ, ಶ್ರದ್ಧೆ ಬೆಳಗಿದ ಶಿಕ್ಷಕರಾಗಿದ್ದು, ಕಾಳಿದಾಸನ ನಾಟಗಳು, ಕಾವ್ಯಗಳು, ವೇದಶಾಸ್ತ್ರ ಪುರಾಣಗಳನ್ನು ಅರಗಿಸಿಕೊಂಡವರು. ಜಾಣರನ್ನು ಬೆಳಗಿಸುವ ಗುರುಗಳು. ಆದರೆ ದಡ್ಡರನ್ನು ದಾರಿಗೆ ಹಚ್ಚುವ ತಾಳ್ಮೆ ಇಲ್ಲದವರು. ಅವರ ಮಕ್ಕಳ ಪೈಕಿ ವಿಷ್ಣು ಮತ್ತು ಅರುಂಧತಿಯರು ಮೇಧಾವಿಗಳಾಗಿ ತಂದೆಯ ಪ್ರೀತಿಗೆ ಪಾತ್ರರಾದರೆ, ಹಿರಿಯ ಮಗನಾಗಿ ಹುಟ್ಟಿ, ಓದು ತಲೆಗೆ ಹತ್ತದೆ ಅಪ್ಪನ ಸಿಟ್ಟಿಗೆ ಕಾರಣನಾಗಿ 'ನಾಯಿ ಸೂಳೆಮಗ' ಎಂಬ ಬೈಗಳು ತಿನ್ನುತ್ತಾ ತಿರಸ್ಕೃತನಾಗಿ ಬಾಳುವ ನಾನಿ (ನಾರಾಯಣ) ಅವರ ಕೆಂಗಣ್ಣಿಗೆ ಗುರಿಯಾಗುತ್ತಾನೆ.

ತನ್ನಂಥ ವಿದ್ವಾಂಸನ ಮಗನು ದಡ್ಡನೆಂಬ ವಿಚಾರ ಅವರ ಮನದಲ್ಲಿ ಕೊರೆಯತೊಡಗಿದ್ದರಿಂದ ಅವರು ಮಗನ ಪಾಲಿಗೆ ಕ್ರೂರಿಯಾಗುತ್ತಾರೆ. ಅವರು ತಮ್ಮ ಮಗನ ಬುದ್ಧಿಗೇಡಿತನಕ್ಕೆ ನೊಂದು ಮಾನವೀಯತೆಯನ್ನು ಕಳೆದುಕೊಂಡಿದ್ದಾರೆಯೇ ಹೊರತು ನೀಚರಲ್ಲ. ಕರುಳ ಕುಡಿಯನ್ನು ಅರ್ಥಮಾಡಿಕೊಳ್ಳಲಾರದವರು ಬೇರೆಯವರಿಗೆ ಏನು ವಿದ್ಯೆ ನೀಡಬಹುದು ಎಂಬ ಜಿಜ್ಞಾಸೆಯೊಂದಿಗೆ ತಂದೆ ಮಗನ ನಡುವಿನ ವಿರೋಧದ ವೈಚಾರಿಕ ಮೂಲವನ್ನು ಮನಶಾಸ್ತ್ರೀಯ ನೆಲೆಯಲ್ಲೂ ನೋಡುವ ಅವಕಾಶ ಸೃಷ್ಟಿಯಾಗುತ್ತದೆ.

ಅನಂತಾಚಾರ್ಯರ ನೆರೆಮನೆಯವರಾದ ಹಯಗ್ರೀವಾಚಾರ್ಯರ ಮಡದಿ ಸುಬ್ಬವ್ವ (ಸುಭದ್ರಾ) ಇಬ್ಬರು ಮಕ್ಕಳ ತಾಯಿಯಾಗಿದ್ದರೂ, ಆಕೆಗೆ ಲೈಂಗಿಕ ಶಕ್ತಿಯ ಕೊರತೆ ಇರುವುದರಿಂದ ಗಂಡಹೆಂಡಿರ ನಡುವೆ ಶಾರೀರಿಕ ಸಾಮರಸ್ಯವು ಸಾಧ್ಯವಾಗುವುದಿಲ್ಲ. ಗಂಡನ ಅನಾದರವು ಆಕೆಯನ್ನು ಅಲಕ್ಷಿಸಿ ಚಂದ್ರಾಸಾನಿ ಸಂಗವನ್ನು ಮಾಡುವಲ್ಲಿವರೆಗೂ ಮಂದುವರಿಯುತ್ತದೆ. 'ಚಂದ್ರಾ, ನಾ ಬಡವ. ಆದ್ರೆ ರಸಿಕ. ನಿನಗ ಕೊಡಲಿಕ್ಕ ಹಣ ಇಲ್ಲ. ಒಣ ಪ್ರೀತಿ ಅದ. ನೀ ಒಪ್ಪೂ ಹಂಗಿದ್ರ ನಾ ನಿನ್ನ ದಾಸ' (ಪುಟ 47) ಎಂದು ಬೇಡಿಕೊಳ್ಳುತ್ತಾನೆ. ಚಂದ್ರಾ ಭಯಗೊಳ್ಳುತ್ತಾಳೆ. ಹಾರುವನನ್ನು ವರಿಸಿದರೆ ಕಲ್ಯಾಣವಾದೀತೇ ಎಂದು ಒಳಗೊಳಗೆ ಹಿಂಜರಿದರೂ ತಾಯ್ತನದ ಬಯಕೆಯನ್ನು ತಡೆಯಲಾರದೆ 'ನನಗೆ ದುಡ್ಡಿನ ಆಶಯಿಲ್ಲ. ಕೊಳೆತು ಹೋಗುವಷ್ಟು ಅದ. ನನ್ನ ಮನೀಷಾ ನಡೆಸಿಕೊಡಬೇಕು. ನಿಮ್ಮಿಂದ ನನಗೊಂದು ಸಂತಾನ ಬೇಕು' (ಪುಟ 47) ಎಂದಷ್ಟೇ ಕೇಳಿಕೊಳ್ಳುತ್ತಾಳೆ.

ಆಕೆ ಬಸುರಾದ ಸುದ್ದಿಯನ್ನು ತಿಳಿದ ಸುಬ್ಬವ್ವಳು ತನ್ನ ಗಂಡನೊಡನೆ ಜಗಳ ಮಾಡಿ, ಏಟು ತಿಂದು, ಮನೆ ಬಿಟ್ಟು ಹೋಗುವಷ್ಟರಲ್ಲಿ ಮಕ್ಕಳ ಅಳು ಆಕೆಯನ್ನು ತಡೆದು ನಿಲ್ಲಿಸುತ್ತದೆ. ಆಕೆಯು ಗಂಡನಿಂದ ತಿರಸ್ಕೃತಳಾದ ಹೆಣ್ಣಾಗಿದ್ದರೂ ಇಬ್ಬರು ಮಕ್ಕಳ ತಾಯಿ. ಅವರನ್ನು ಬಿಟ್ಟು ಹೋದರೆ ಅಕ್ಷಮ್ಯ ಅಪರಾಧವಾಗುವುದರಿಂದ ತಾಯಿಯ ಕರ್ತವ್ಯ ನಿರ್ವಹಿಸಬೇಕು ಎಂಬ ವಿವೇಕ ಎಚ್ಚೆತ್ತುಕೊಳ್ಳುತ್ತದೆ. ಸುಬ್ಬವ್ವನ ಮೌನವು ಆಕೆಯ ದುಗುಡಗಳನ್ನು ಒಂದೇ ಏಟಿಗೆ ಪರಿಹರಿಸುವುದಿಲ್ಲ. ಆದರೆ ಅವುಗಳನ್ನು ತಾಳಿಕೊಳ್ಳುವ, ತನ್ನ ಕಾಲ ದೇಶ ಒದಗಿಸುವಷ್ಟು ಅವಕಾಶದಲ್ಲಿ ಎದುರಿಸುವ, ಮನಸ್ಸಿನ ಆರೋಗ್ಯವನ್ನು ಕಾಯ್ದುಕೊಳ್ಳುವ ಶಕ್ತಿಯನ್ನು ತಂದುಕೊಡುತ್ತದೆ. ಈ ಕಹಿ ಪ್ರಸಂಗಗಳಿಂದ ಸುಬ್ಬವ್ವ ಘಾಸಿಗೊಳಗಾದರೂ ಕುಸಿಯುವುದಿಲ್ಲ, ಅಧೀರಳಾಗುವುದಿಲ್ಲ. ಇಲ್ಲಿ ಕಥನವು ಸುಬ್ಬವ್ವನ ಕಣ್ಣಿನಿಂದ ಮಾತ್ರ ಬದುಕನ್ನು ನೋಡದೆ ಹಯಗ್ರೀವಾಚಾರ್ಯ ಮತ್ತು ಚಂದ್ರಾಳ ದೃಷ್ಟಿಕೋನದಿಂದಲೂ ಲೈಂಗಿಕ ಸಂಬಂಧಗಳನ್ನು ಪರಿಶೀಲಿಸುವ ದಿಟ್ಟತನವನ್ನು ತೋರುತ್ತದೆ.

ಸಾಂಪ್ರದಾಯಿಕ ಸಮಾಜದಲ್ಲಿ ದಾಂಪತ್ಯವು ಸಪ್ಪೆಯೆನಿಸಿ ವಿವಾಹೇತರ ಸಂಬಂಧಗಳಲ್ಲಿ ಅದನ್ನು ಅರಸುವವರ ಪ್ರಸಂಗಗಳು ಮಾಸ್ತಿ, ಶಿವರಾಮ ಕಾರಂತ, ಕುವೆಂಪು, ಅ. ನ. ಕೃ, ತ. ರಾ. ಸು, ಎಸ್. ಎಲ್. ಭೈರಪ್ಪ ಮುಂತಾದವರ ಕಾದಂಬರಿಗಳಲ್ಲಿ ಕಾಣಿಸಿಕೊಂಡಿದ್ದವು. ಆ ವಿಚಾರಗಳನ್ನೇ ಲೇಖಕಿಯು ಸೂಕ್ಷ್ಮ ಜಿಜ್ಞಾಸೆಯ ಮೂಲಕ ಮಂಡಿಸಿದ್ದಾರೆ.

ನಾಸು (ಕಾದಂಬರಿ)
ಲೇ: ಸುನಂದಾ ಬೆಳಗಾಂವಕರ
ಪ್ರ: ಅಂಕಿತ ಪುಸ್ತಕ
ಬೆಲೆ ರು.225/-

ಹಯಗ್ರೀವಾಚಾರ್ಯರು ವೇಶ್ಯೆಯ ವಿಲಾಸವನ್ನು ಮಾತ್ರ ಅನುಭವಿಸುತ್ತಾರೆಯೇ ಹೊರತು ವಿಕಾರವನ್ನು ಅಲ್ಲ. ಒಂದುವೇಳೆ ತಾನು ಅವರ ಹೆಂಡತಿಯಾಗಿದ್ದರೆ ಆ ನಡತೆಯಿಂದ ನನಗೆ ಎಷ್ಟು ನೋವಾಗುತ್ತಿತ್ತು? ಅವರ ಪತ್ನಿಗೆ ಎಷ್ಟು ನೋವಾಗಬಹುದು. ಅವರ ಸಂಸಾರದಲ್ಲಿ ನಾನು ಹುಳಿ. ಏನೇ ಆದರೂ ದಾಂಪತ್ಯ ಕೆಡದಂತೆ ನೋಡಿಕೊಳ್ಳಬೇಕು ಎಂದುಕೊಂಡು ಆ ನಿಟ್ಟಿನಲ್ಲಿ ಕ್ರಿಯಾಶೀಲಳಾಗುವಲ್ಲಿ ಚಂದ್ರಾಳ ಘನತೆ ಗಾಂಭೀರ್ಯಗಳು ಎದ್ದು ತೋರುತ್ತವೆ. ಆಕೆಯು ಸುಬ್ಬವ್ವನೊಂದಿಗೆ ನಡೆದುಕೊಳ್ಳುವ ರೀತಿಯಲ್ಲಿ ಆಕೆಯ ವ್ಯಕ್ತಿತ್ವದ ವಿವೇಕ ಪೂರ್ಣವಾದ ಮುಖವನ್ನು ಕಾಣುತ್ತೇವೆ.

ಈ ಕಾದಂಬರಿಯಲ್ಲಿ ಹೆಣ್ಣಿನ ಪ್ರತಿಭಟನೆಯ ನೆಲೆಗಳಿವೆ ಎಂಬುದಕ್ಕೆ ಅಂಬವ್ವ ಮತ್ತು ಊರ್ಮಿಳೆಯ ಪಾತ್ರಗಳು ಸಾಕ್ಷಿಯಾಗುತ್ತವೆ. ಮದುವೆ ಎಂಬುದರ ಅರ್ಥವನ್ನು ತಿಳಿಯುವ ಮೊದಲೇ ವೆಂಕಟೇಶನನ್ನು ವರಿಸಿ, ಬಾಲ್ಯಾವಸ್ಥೆಯು ದಾಟಿ, ಹದಿಹರಯಕ್ಕೆ ಕಾಲಿಟ್ಟು ಮೈನೆರೆಯುವ ಮೊದಲೇ ವಿಧವೆಯಾಗುವ ಆಕೆಯ ಪರಿಸ್ಥಿತಿ, ನಂತರದ ದಿನಗಳಲ್ಲಿ ಎದುರಾಗುವ ಅಗ್ನಿ ಪರೀಕ್ಷೆಗಳನ್ನು ಎದುರಿಸಿ ಮಾನವೀಯತೆಯ ವಿಕಾಸದ ಮಜಲನ್ನು ಮುಟ್ಟುವ ರೀತಿಯು ಮರ್ಮಭೇದಕವಾಗಿದೆ. ಆಕೆಯ ಕೂದಲಿನಂತೆ ಬದುಕು ಬೋಳಾದರೂ ಆಕೆಯ ಜೀವನದ ನೈಸರ್ಗಿಕ ಒತ್ತಡವನ್ನು ಬೋಳಿಸುವುದು ಸುಲಭವಲ್ಲ. ಕೂದಲಿನಂತೆ ಚಿಗುರಿ ಬರುವ ಬಯಕೆ, ಭಾವನೆ, ಹಂಬಲಗಳನ್ನು ನೀಗಲು ಆಕೆ ಕಷ್ಟಪಡುತ್ತಾಳೆ. ತನ್ನ ಗಂಡನಾದ ಲಚ್ಚಪ್ಪನ್ನು ದಿಟ್ಟವಾಗಿ ಎದುರಿಸುವ ಊರ್ಮಿಳೆಯು ಅಂಬವ್ವನಿಗೆ ಕಾವಲಾಗುವುದಲ್ಲದೆ ಆಕೆಯ ಅಶನಾರ್ಥಕ್ಕೆ ಕಾನೂನು ರೀತಿಯ ಸಹಾಯವನ್ನು ಮಾಡುತ್ತಾಳೆ. ಅಂಬವ್ವ ಇನ್ನೇನು ಮುಳುಗಿ ಹೋದಳು ಎಂದುಕೊಳ್ಳುವಾಗ ಆಕೆಗೆ ಊರ್ಮಿಳೆಯ ಬೆಂಬಲ ಸಹಾನುಭೂತಿಗಳು ನೆರವಿಗೆ ಬರುತ್ತವೆ. ಕಟ್ಟಾ ಸಂಪ್ರದಾಯವಾದಿಯಾದ ಅನಂತಾಚಾರ್ಯರ ಹೆಂಡತಿಯಾಗಿದ್ದುಕೊಂಡು ಅಳುಮುಂಜಿಯಾಗಿ ಬಾಳುತ್ತಿರುವ ಪದ್ದಕ್ಕನ ಮೊದಲ ತಲೆಮಾರಿನ ಹೆಣ್ಣೊಬ್ಬಳು ಪ್ರತಿಭಟನೆಯ ಸಾಧ್ಯತೆಗಳನ್ನು ತೋರಿರುವುದು ಗಮನಾರ್ಹವಾಗಿದೆ.

ಸುನಂದಾ ಬೆಳಗಾಂವಕರರು ಕಾದಂಬರಿಯನ್ನು ಬರೆಯತೊಡಗಿದ ವೇಳೆಗೆ ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದವು ತನ್ನ ಪ್ರಭಾವವನ್ನು ಬೀರತೊಡಗಿತ್ತು. ಹೆಣ್ಣಿನ ಅಂತರಂಗದ ಬಗೆಯೊಳಗನು ತೆರೆದು ನೋಡುವ ಕ್ರಮ ಆರಂಭಗೊಂಡಿತ್ತು. ಆದರೆ ಅವರು ಯಾವುದೇ ಸಿದ್ಧಾಂತಕ್ಕೆ ಕಟ್ಟುಬೀಳದೆ ಸಾಮಾಜಿಕ ಬದುಕಿನ ಒಳಹೊರಗುಗಳ ಮುಖಾಮುಖಿಯನ್ನು ತಮ್ಮದೇ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ. ಹೆಣ್ಣಿನ ಪಾತ್ರದ ಬದಲು ನಾನಿಯನ್ನು ಕೇಂದ್ರವಾಗಿಟ್ಟುಕೊಂಡು ಬದುಕನ್ನು ನೋಡಿದ್ದಾರೆ.

ನಾಸು ಕಾದಂಬರಿಯು ಧಾರವಾಡ, ವಿಜಯಪುರ, ಬೆಳಗಾವಿ ಜಿಲ್ಲೆಗಳ ಸಂಪ್ರದಾಯಸ್ಥ ಮಾಧ್ವ ಬ್ರಾಹ್ಮಣ ಕುಟುಂಬಗಳ ಜೀವನವಿಧಾನ, ಆಚರಣೆಗಳು ಮತ್ತು ನಂಬಿಕೆಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತದೆ. ಒಂದು ಕಾಲಘಟ್ಟದ ಧಾರವಾಡ ಭಾಗದ ಸಾಮಾಜಿಕ ಸಾಂಸ್ಕೃತಿಕ ಚಿತ್ರಣವನ್ನು ಜೀವಂತವಾಗಿ ಕಟ್ಟಿಕೊಡುತ್ತದೆ. ಧಾರವಾಡದ ದೇಸಿ ಶೈಲಿಯ ಆಡುಭಾಷೆಯು ಕಾದಂಬರಿಯ ಸೊಗಸನ್ನು ಹೆಚ್ಚಿಸಿದೆ. ಈ ಕಾದಂಬರಿಯು ಸುನಂದಾ ಬೆಳಗಾಂವಕರರಿಗೆ ಅಪಾರ ಹೆಸರನ್ನು ತಂದುಕೊಟ್ಟ ಕೃತಿ.

ಸಂಶೋಧನೆಯ ಹಾದಿಗಳು

ಸಂಶೋಧನೆಯ ಹಿಂದು ಮುಂದುಗಳನ್ನು ಚರ್ಚಿಸುವ ಅಪರೂಪದ ಕೃತಿ ಇದು.

ಸಂಶೋಧಕ ರಾಜಮಾರ್ಗ ಕೃತಿಯು ಸಂಶೋಧನೆಯ ಹಾದಿಯಲ್ಲಿ ನಡೆಯುತ್ತಿರುವವರಿಗೆ ಗುರಿತಲುಪುವ ದಾರಿಗಳನ್ನು ತೋರಿಸಿಕೊಡುವುದರ ಜೊತೆಗೆ ವಹಿಸಬೇಕಾಗಿರುವ ಎಚ್ಚರಿಕೆಗಳನ್ನು ತಿಳಿಸಿಕೊಡುತ್ತದೆ. ಸಂಶೋಧನೆ ಪ್ರಕ್ರಿಯೆಯಲ್ಲಿನ ಸಮಗ್ರ ಸಂಗತಿಗಳನ್ನು ವಿವರವಾಗಿ ಚರ್ಚಿಸುವ ಈ ಕೃತಿಯು ಉನ್ನತ ಶಿಕ್ಷಣದ ಭಾಗವಾಗಿ ಪಿಹೆಚ್.ಡಿ.ಯಂತಹ ಅಕಾಡೆಮಿಕ್ ಸಂಶೋಧನೆಯನ್ನು ಕೈಗೊಳ್ಳುತ್ತಿರುವವರಿಗೆ ಮಾತ್ರವಲ್ಲದೆ

» ಡಾ. ರವಿಶಂಕರ ಜಿ.ಕೆ.

ಸಾಮಾನ್ಯ ಜಿಜ್ಞಾಸುಗಳಿಗೂ ಕೂಡ ನೆರವಾಗುವಂತಿದೆ.

ಸಂಶೋಧಕ ರಾಜಮಾರ್ಗ ಕೃತಿಯು ಸಂಶೋಧನ ಶಾಸ್ತ್ರವನ್ನು ಪರಿಚಯಿಸುವ ಮೊದಲು ಭಾರತೀಯ ಚಿಂತನಾ ಕ್ರಮದಲ್ಲಿನ ಅನನ್ಯತೆಯನ್ನು ಎತ್ತಿ ಹಿಡಿಯುತ್ತದೆ. ಆರಂಭದ ಒಂಬತ್ತು ಲೇಖನಗಳು ಈ ಅಂಶಗಳನ್ನು ಸವಿವರವಾಗಿ ಪರಿಶೀಲಿಸುತ್ತಾ ಜ್ಞಾನದ ಅನ್ವೇಷಣೆಗೆ ಅಗತ್ಯವಾಗಿರುವ ಮನೋಸ್ಥಿತಿಯನ್ನು ಮೊದಲಿಗೆ ನಿರ್ಮಿಸಿಕೊಡುತ್ತದೆ. ಹೀಗೆ ಭಾರತೀಯತೆಯ ಸದೃಢವಾದ ತಳಪಾಯವನ್ನು ನಿರ್ಮಿಸಿಕೊಂಡ ಮೇಲೆ ಅನಂತರದ ಹದಿಮೂರು ಲೇಖನಗಳಲ್ಲಿ ಕನ್ನಡದ ಸಂಶೋಧನಾ ಶಾಸ್ತ್ರವನ್ನು ಲೇಖಕರು ನಿರೂಪಿಸಿ ಕೊಟ್ಟಿದ್ದಾರೆ. ಸಂಶೋಧನೆಗೆ ಸಂಬಂಧಿಸಿದ ಹಲವು ಪರಿಭಾಷೆಗಳನ್ನು, ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿಕೊಳ್ಳುವ ಈ ಕೃತಿಯು ಸಂಶೋಧಕನು ಯಾವ ಬಗೆಗಳಲ್ಲಿ ವೈಚಾರಿಕ ಅಥವಾ ಬೌದ್ಧಿಕ ಹತ್ಯಾರುಗಳನ್ನು ಬಳಸಿಕೊಳ್ಳಬೇಕಿದೆ ಎಂಬುದನ್ನು ಆಳವಾಗಿ ಚಿಂತಿಸುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಬಹುತೇಕ ಎಲ್ಲಾ ದೇಶಗಳು ಸಂಶೋಧನೆಗೆ ಬಹಳ ಪ್ರಾಮುಖ್ಯತೆಯನ್ನು ನೀಡುತ್ತಿವೆ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಸಂಶೋಧನೆಗಳಿಂದಾಗಿಯೇ ನಾವು ಕೃತಕ ಬುದ್ಧಿಮತ್ತೆಯ ಜಗತ್ತಿಗೆ ಬಂದಿದ್ದೇವೆ. ಆದರೆ ಸಮಾಜವಿಜ್ಞಾನ, ಸಾಹಿತ್ಯ, ಕಲೆ ಮುಂತಾದ ಮಾನವಿಕ ವಿಷಯಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳಿಂದ ಏನು ಲಾಭವಿದೆ ಎಂಬ ಪ್ರಶ್ನೆ ಎದುರಾದಾಗ ಅದಕ್ಕೆ ನಕಾರಾತ್ಮಕವಾದ ಪ್ರತಿಕ್ರಿಯೆಯೇ ಬರುತ್ತದೆ. ಈ ವಿಚಾರವನ್ನು ಚರ್ಚಿಸುವ ಸಂಶೋಧಕ ರಾಜಮಾರ್ಗ ಕೃತಿಯು 'ಮಾನವಿಕ ವಿಷಯಗಳಲ್ಲಿ ಸಂಶೋಧನೆಗಳು ನಡೆದಾಗಲೇ ಒಂದು ದೇಶದ ಸಾಂಸ್ಕೃತಿಕ ಪರಿಸರವು ಸಮೃದ್ಧವಾಗಿರುವುದಕ್ಕೆ ಸಾಧ್ಯವಾಗುತ್ತದೆ' ಎಂಬುದನ್ನು ಪ್ರತಿಪಾದಿಸುತ್ತದೆ. ವಿಜ್ಞಾನ ತಂತ್ರಜ್ಞಾನಗಳಲ್ಲಿನ ಸಂಶೋಧನೆಯ ಪ್ರಯೋಜನಗಳನ್ನು ಹಣದ ಮೂಲಕ ಖರೀದಿಸಿ ಉಪಯೋಗಿಸಲು ಸಾಧ್ಯವಾಗುತ್ತದೆ. ಆದರೆ ಮಾನವಿಕ ವಿಷಯಗಳಲ್ಲಿನ ಸಂಶೋಧನೆಯ ಫಲಿತಗಳನ್ನು ಹಾಗೆ ಹಣದ ಮೂಲಕ ಪಡೆದುಕೊಳ್ಳಲು ಸಾಧ್ಯವಾಗದು ಎಂಬುದನ್ನು ನೆನಪಿಸಿಕೊಡುತ್ತದೆ.



ಸಂಶೋಧಕ ರಾಜಮಾರ್ಗ
ಲೇ ಡಾ. ಅಜಕ್ಕಳ ಗಿರೀಶ ಭಟ್
ಪ್ರ: ಅಯೋಧ್ಯಾ ಪಬ್ಲಿಕೇಷನ್ಸ್, ಬೆಂಗಳೂರು
ಫೋ: 9620916996
ಬೆಲೆ: ರೂ. 230/-

ಇಂದಿನ ಕೆಲವು ಸಂಶೋಧನೆಗಳು ವೈಚಾರಿಕ ಪೂರ್ವಗ್ರಹಗಳು, ರಾಜಕೀಯದ ಐಡಿಯಾಲಜಿಗಳಿಗೆ ಸಿಲುಕಿ ತರ್ಕದ ಬದಲಿಗೆ ಕುತರ್ಕದ ಹಾದಿಯಲ್ಲಿ ಸಾಗುತ್ತಿರುವುದನ್ನು ಗಿರೀಶ ಭಟ್ಟರು ತಮ್ಮ ಕೃತಿಯಲ್ಲಿ ಉದಾಹರಣೆಗಳ ಮೂಲಕ ಗುರುತಿಸುತ್ತಾರೆ. ಹಾಗಾಗಿ ಅವರ ಈ ಮಾತು ಮುಖ್ಯದ್ದಾಗುತ್ತದೆ– 'ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ತರ್ಕಬದ್ಧ ಯೋಚನೆಯನ್ನು ಮಾಡುವ ತರಬೇತಿ ನೀಡುವುದು ಅತ್ಯಂತ ಅಗತ್ಯ. ಆದರೆ ನಮ್ಮ ಪ್ರಾಥಮಿಕ, ಪ್ರೌಢ ಅಥವಾ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೂಡ ತರ್ಕಬದ್ಧವಾದ ಯೋಚನೆಯನ್ನು ಮಾಡಲು ಹೇಗೆ ತರಬೇತಿಯಿಲ್ಲವೋ ಹಾಗೆಯೇ ತತ್ತ್ವದ ಆಳಕ್ಕಿಳಿಯುವ ತರಬೇತಿಯೂ ಇಲ್ಲ. ಒಟ್ಟಿನಲ್ಲಿ ಇಂದಿನ ಕನ್ನಡ ಸಂಶೋಧನೆಯಲ್ಲಿ ಅಥವಾ ಚಿಂತನೆಯಲ್ಲಿ ತರ್ಕ ಮತ್ತು ತತ್ತ್ವಜ್ಞಾನ ಎರಡೂ ಮಹತ್ತ್ವ ಪಡೆಯದಿರುವುದೇ ಬಹಳ ದೊಡ್ಡ ಸಮಸ್ಯೆ.' (ಪು.115)

ಒಟ್ಟಿನಲ್ಲಿ ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಗುಣಮಟ್ಟದ ಸಂಶೋಧನೆಗಳ ಪ್ರಮಾಣ ಹೆಚ್ಚಳವಾಗಬೇಕೆಂಬ ಆಶಯ ಈ ಕೃತಿಯುದ್ದಕ್ಕೂ ಕಾಣಿಸಿಕೊಂಡಿದೆ. ರಾಜಕೀಯ ಐಡಿಯಾಲಜಿಗಳಿಗೆ ಸಿಲುಕಿ ಸಂಶೋಧಕನು ಅಸತ್ಯ, ಅಪ್ರಮಾಣಿಕತೆಗಳ ದಾರಿಯಲ್ಲಿ ನಡೆಯಬಾರದು ಎಂಬುದನ್ನು ಪ್ರತಿಪಾದಿಸುತ್ತದೆ.

ಅಧ್ಯಯನದ ಹಿನ್ನೆಲೆ ಅಪಾರ ಮಾಹಿತಿ

ನಮ್ಮ ದಿನಚರಿಯಲ್ಲಿ ಹಾಸುಹೊಕ್ಕಾಗಿರುವ ಹಲವು ಹಬ್ಬ, ಸಂಪ್ರದಾಯಗಳ ಆಚರಣೆಯ ವಿವರವಾದ ದಾಖಲೆ ಮತ್ತು ಆ ಆಚರಣೆಗಳು ರೂಪುಗೊಂಡ ಹಿನ್ನೆಲೆಯ ಕುರಿತು ಉಪಯುಕ್ತ ಮಾಹಿತಿ – ಇದು ಈ ಪುಸ್ತಕದ ವೈಶಿಷ್ಟ್ಯ.

ಸಾಮಾನ್ಯವಾಗಿ ಸಾಹಿತ್ಯದಲ್ಲಿ ಆಸಕ್ತಿ ಉಳ್ಳ ಮಹಿಳೆಯರು ಸಾಹಿತ್ಯ ಲೋಕಕ್ಕೆ ಕಾಲಿಡುವುದು ಕವನಗಳ ಮೂಲಕ. ನಂತರ ಕತೆಗಳನ್ನು, ಇನ್ನೂ ಹೆಚ್ಚು ಆತ್ಮವಿಶ್ವಾಸ ಮೂಡಿದಲ್ಲಿ ಕಾದಂಬರಿಗಳನ್ನು ರಚಿಸುತ್ತಾರೆ. ಪ್ರವಾಸ ಹೋದಲ್ಲಿ ಅನುಭವ ಕಥನ ಬರೆಯುತ್ತಾರೆ. ಅಕಾಡೆಮಿಕ್ ವಲಯದಲ್ಲಿರುವವರು ವಿಮರ್ಶೆಗೆ ತೆರೆದುಕೊಳ್ಳುತ್ತಾರೆ. ಮಹಿಳೆಯರು ಮಾಹಿತಿ ಸಾಹಿತ್ಯದಲ್ಲಿ ತೊಡಗಿಸಿ ಕೊಳ್ಳುವುದು ಸ್ವಲ್ಪ ಕಡಿಮೆಯೇ. ಅಂತಹುದರಲ್ಲಿ, ಕಳೆದ ವಾರ ಮೈಸೂರಿನಲ್ಲಿ ಬಿಡುಗಡೆಯಾದ 'ಶುಭ ಮುಹೂರ್ತಗಳು' ಪುಸ್ತಕದ ಲೇಖಕಿ ಸುಜಯಾ ಸುರೇಶ್ ಅವರು ಆ ದಿಸೆಯಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದಾರೆ.

ಈಗಾಗಲೇ ಮೂರುಕೃತಿಗಳನ್ನು ರಚಿಸಿ ರುವ

» ನಿವೇದಿತಾ ಎಚ್

ಲೇಖಕಿಯ 'ಶುಭ ಮುಹೂರ್ತಗಳು' ಕೃತಿ 400 ಪುಟಗಳ ವಿಶಿಷ್ಟ ಪುಸ್ತಕ. ನಮ್ಮ ದೇಶದ ಜನರ ಜೀವನ ಪದ್ಧತಿಯಲ್ಲಿ ಬರುವ ಷೋಡಶ ಸಂಸ್ಕಾರಗಳ ಬಗ್ಗೆ ಸುಜಯಾ ಬರೆದಿದ್ದಾರೆ. ಶುಭಘಳಿಗೆಗಳ ಸಮಯಗಳಲ್ಲಿ ಆಚರಿಸಬೇಕಾದ ಶಾಸ್ತ್ರ ಸಂಪ್ರದಾಯಗಳು, ವಿಧಿ–ವಿಧಾನಗಳು, ಬಳಸಬೇಕಾದ ದ್ರವ್ಯ ಗಳು, ಫಲಗಳು, ಹೂವುಗಳು, ಅಡುಗೆಗಳು ಎಲ್ಲದರ ಬಗೆಗೂ ವಿವರವಾಗಿ ದಾಖಲಿಸಿ ದ್ದಾರೆ. ಒಟ್ಟಾರೆಯಾಗಿ ಹಿಂದೂ ಶಾಸ್ತ್ರ ಸಂಪ್ರದಾಯಗಳ ಬಗ್ಗೆ ಹೇಳುತ್ತಲೇ, ತಮ್ಮ ಜನಾಂಗದ ಆಚರಣೆಯಲ್ಲಿರುವ ರೀತಿಯ ಬಗ್ಗೆ ಸಣ್ಣ ಷರಾ ಸೇರಿಸುತ್ತಾ ಹೋಗುತ್ತಾರೆ. ಹಾಗಾಗಿ ಈ ಪುಸ್ತಕ ಎಲ್ಲ ಹಿಂದು ಸಮುದಾಯದವರಿಗೆ ಶಾಸ್ತ್ರ ಸಂಪ್ರದಾಯಗಳ ಕೈಪಿಡಿಯಾಗಬಹುದು.

ಪ್ರತೀ ಆಚರಣೆಯ ಬಗ್ಗೆ ವಿವರಗಳನ್ನು ನೀಡುವುದು ಮಾತ್ರವಲ್ಲದೆ, ಪ್ರತ್ಯೇಕ ಶಾಸ್ತ್ರ ಹುಟ್ಟಿಕೊಂಡಿದ್ದರ ಹಿಂದಿನ ಪುರಾಣ ಕತೆಯನ್ನೂ ಸುಜಯಾ ಅವರು ಹೇಳಿರುವು ಪುಸ್ತಕವನ್ನು ಸ್ವಾರಸ್ಯಕರವಾಗಿಸಿದೆ. ಬಾಗಿನ, ಕಂಕಣ, ಸಗಣಿ ಸಾರಣೆ, ತಾಳಿಯ ವಿನ್ಯಾಸದ ಕತೆ, ಕಾಶೀಯಾತ್ರೆಗಳಂತಹ ಸಂಪ್ರದಾಯಗಳ ಹಿಂದಿನ ಕತೆಗಳು ಅಚ್ಚರಿ ಮೂಡಿಸುತ್ತವೆ. ಸಾಂಪ್ರದಾ ಯಿಕ ಮದುವೆಯ ಬಗ್ಗೆ ಅಲ್ಲದೆ ಮಂತ್ರ, ಮಾಂಗಲ್ಯದ ಬಗೆಗೂ ಹೇಳುವ ಸುಜಯಾ ಅವರು ಜೊತೆ ಜೊತೆಗೆ, ಸಂಪ್ರದಾಯಗಳನ್ನು ಪಾಲಿಸುವುದರಿಂದ ಪರಂಪರೆಯ ಉಳಿವು ಆಗುತ್ತದೆ ಎನ್ನುವ ಕಳಕಳಿಯನ್ನೂ ವ್ಯಕ್ತ ಪಡಿಸುತ್ತಾರೆ.

ಶುಭ ಮುಹೂರ್ತಗಳು
ಲೇ : ಸುಜಯಾ ಸುರೇಶ್
ಪ್ರ: ವೆಂಕಟಾದ್ರಿ ಪಬ್ಲಿಕೇಷನ್ಸ್ ಮೈಸೂರು
ಬೆಲೆ ರು.400/-

ಇಂದು ನಾವು ಸಂಧಿಕಾಲದಲ್ಲಿದ್ದೇವೆ. ಅತ್ಯಾಧುನಿಕ ಜೀವನವನ್ನು ನಡೆಸುತಿದ್ದೇವೆ; ವಿದ್ಯಾಭ್ಯಾಸವೂ ಸೇರಿದಂತೆ, ನಮ್ಮ ದಿನಚ ರಿಯ ಮೇಲೆ ಪಾಶ್ಚಾತ್ಯ ಪ್ರಭಾವ ದಟ್ಟವಾ ಗಿದೆ. ಆಧುನಿಕತೆಗೆ ಹೊಸದಾಗಿ ತೆರೆದು ಕೊಂಡಾಗ ಸಂಪ್ರದಾಯ ಆಚರಣೆಗಳನ್ನು ಗೊಡ್ಡು ಎಂದು ಜರಿದು ಮರೆತೂ ಬಿಟ್ಟಿದ್ದೆವು. ಶಾಸ್ತ್ರ ಸಂಪ್ರದಾಯಗಳನ್ನು ಅರಿತ ಹಿರಿಯ ಜೀವಗಳೂ ಮನೆಯಲ್ಲಿ ಕಡಿಮೆ. ಇಂತಹ ಸಂದಿಗ್ಧದಲ್ಲಿ, ಸುಜಯಾ ಅವರ 'ಶುಭಮುಹೂರ್ತಗಳು' ಇಂದಿನ ಜನರಿಗೆ ದಾರಿದೀಪದಂತಿದೆ. ಜತೆಗೆ, ಸಂಪ್ರದಾಯ, ಪದ್ಧತಿಗಳ ಆಚರಣೆ ಮತ್ತು ಹಿನ್ನೆಲೆಯನ್ನು ವಿವರವಾಗಿ ಇಲ್ಲಿ ದಾಖಲಿಸಿರುವುದರಿಂದಾಗಿ, ಇದು ಅಧ್ಯಯನಶೀಲರಿಗೂ ಉಪಯುಕ್ತ ಎನಿಸಬಲ್ಲದು.

ಮತ್ತೆ ಮತ್ತೆ ಮಾಸ್ತಿ

ಹೊಸಗನ್ನಡ ಸಾಹಿತ್ಯ ನಿರ್ಮಾಪಕರಲ್ಲಿ ಒಬ್ಬರಾದ ಮಾಸ್ತಿಯವರು ರಚಿಸಿದ ನೂರು ಕಥೆಗಳನ್ನು ನಿಕಷಕ್ಕೆ ಒಡ್ಡುವ ಈ ಕೃತಿ, ಕಥೆಗಾರರಿಗೆ, ಸಾಹಿತ್ಯಾಸಕ್ತರಿಗೆ ಹೊಸ ಒಳನೋಟಗಳನ್ನು ನೀಡಬಲ್ಲದು.

ಮಾಸ್ತಿ ಕಥಾಲೋಕ – ಇದು ಎಲ್. ವಿ.ಶಾಂತಕುಮಾರಿ ಅವರ ಇತ್ತೀಚಿನ ವಿಮರ್ಶಾ ಕೃತಿ. ಹೊಸಗನ್ನಡ ಸಾಹಿತ್ಯ ನಿರ್ಮಾಪಕರಲ್ಲಿ ಮಾಸ್ತಿ ಅವರದು ಎದ್ದು ಕಾಣುವ ಹೆಸರು. ತಮ್ಮ ಬಹುಧಾನಕ ಪ್ರತಿಭೆಯಿಂದ ಆಧುನಿಕ ಕನ್ನಡ ಸಾಹಿತ್ಯಕ್ಕೆ ನೂತನ ಆಯಾಮ ನೀಡಿದ ಮಾಸ್ತಿಯವರು 'ಸಣ್ಣಕತೆಗಳ ಪಿತಾಮಹ' ಎಂಬ ಗೌರವಕ್ಕೂ ಭಾಜನರಾದವರು. ಅವರು ರಚಿಸಿರುವ ನೂರು ಸಣ್ಣಕತೆಗಳು ವಸ್ತುವೈವಿಧ್ಯ, ಅನನ್ಯವಾದ ಕಥನಕಲೆ, ತಂತ್ರ, ಸ್ವರೂಪ ನಿರೂಪಣ ವಿನ್ಯಾಸ, ಮಾಗಿದ ವಿಚಾರ ವಿವೇಕ ಮೊದಲಾದ ಕಾರಣಗಳಿಂದ ಇತರ ಲೇಖಕರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ.

» ಪ್ರೊ. ಜಿ. ಎನ್. ಉಪಾಧ್ಯ

'ಮಾಸ್ತಿ ಕಥಾಲೋಕ' ಕೃತಿಯಲ್ಲಿ ಮಾಸ್ತಿ ಅವರ ಅರವತ್ತು ಪ್ರಮುಖ ಕತೆಗಳನ್ನು ಕೇಂದ್ರವಾಗಿಟ್ಟುಕೊಂಡು ವಿಭಿನ್ನ ನೆಲೆಗಳಲ್ಲಿ ವಾಗಿ ವಿಶ್ಲೇಷಣೆ ಮಾಡಿರುವುದು ಗಮನೀಯ ಅಂಶ. ಮಾಸ್ತಿ ಅವರ ಆರಂಭದ ಕತೆಗಳು ಸಾಮಾನ್ಯ ಅನಿಸಿದರೂ ಬರವಣಿಗೆ ಮುಂದುವರಿದಂತೆ ಕಥಾ ರಚನೆಯ ತಂತ್ರ ಪಕ್ವಗೊಂಡಂತೆ ಅವು

ಅಸಾಮಾನ್ಯವಾಗಿ ಅನುಪಮವಾಗಿ ಮೈಪಡೆದ ಬಗೆಯನ್ನು ಸಹ ಇಲ್ಲಿ ಮುನ್ನೆಲೆಗೆ ತಂದು ಚರ್ಚಿಸಿರುವುದು ಔಚಿತ್ಯಪೂರ್ಣ ಉಪಕ್ರಮ.

ಈ ಕೃತಿ ಮೂರು ತೆನೆಗಳ ಗೊಂಚಲು. ಮೊದಲ ತೆನೆಯಲ್ಲಿನ ಹದಿನಾರು ಕತೆಗಳು ಭಾರತೀಯ ಪುರಾಣ, ಅಭಿಜಾತ ಸಾಹಿತ್ಯ, ಕರ್ನಾಟಕದ ಇತಿಹಾಸ, ಸಂಸ್ಕೃತಿ,ಭಾರತದ ಇತಿಹಾಸ ಇವುಗಳಿಗೆ ಸಂಬಂಧಿಸಿವೆ. ಎರಡನೆಯ ತೆನೆಯಲ್ಲಿ, ವಿದೇಶಗಳಲ್ಲಿನ ಅರಸರು, ಸಾಹಿತಿಗಳು, ತತ್ತ್ವಶಾಸ್ತ್ರಜ್ಞರು, ಅಲ್ಲಿಯ ಇತಿಹಾಸ ಇವನ್ನು ಆಧರಿಸಿ ಮಾಸ್ತಿಯವರು ಬರೆದಿರುವ ಇಪ್ಪತ್ತೆರಡು ಕತೆಗಳ ವಿಚಾರ ವಿಮರ್ಶೆ ಇದೆ . ಈ ಕತೆಗಳು ಮಾಸ್ತಿಯವರ ವ್ಯಾಪಕ ಅಧ್ಯಯನ ಮತ್ತು ಎಲ್ಲ ದೇಶ–ಕಾಲಗಳ ಮಾನುಷ ಸಂವೇದನೆಗಳನ್ನೂ ಅರ್ಥಮಾಡಿಕೊಳ್ಳಬಲ್ಲ ಸಹೃದಯ ಸ್ಪಂದನಕ್ಕೆ ಸಾಕ್ಷಿಯಾಗಿವೆ ಎಂಬುದನ್ನು ಸಾಧಾರವಾಗಿ ಇಲ್ಲಿ ಬೆಳಕಿಗೆ ಹಿಡಿಯಲಾಗಿದೆ.

ಮಾಸ್ತಿ ಕಥಾಲೋಕ
ಲೇ: ಎಲ್. ವಿ. ಶಾಂತಕುಮಾರಿ
ಪ್ರ: ವಸಂತ ಪ್ರಕಾಶನ ಬೆಂಗಳೂರು
080-40917099
ಬೆಲೆ ರೂ : 280/-



ಮೂರನೆಯ ತೆನೆಯಲ್ಲಿ ಸಮಕಾಲೀನ ಹಾಗೂ ಸಾಮಾಜಿಕ ಸಂದರ್ಭಗಳು ಮಾಸ್ತಿಯವರ ಪ್ರತಿಭೆ, ನಿರೂಪಣೆ, ಮತ್ತು ಕಥನ ವಿನ್ಯಾಸಗಳಲ್ಲಿ ಹೇಗೆ ಸಿದ್ಧಿ ಪಡೆದಿವೆ ಎನ್ನುವುದನ್ನು ಕಾಣಲು ಪ್ರಯತ್ನಿಸಲಾಗಿದೆ. ಈ ವಿಭಾಗದಲ್ಲಿಯ ಇಪ್ಪತ್ತೆರಡು ಕತೆಗಳಲ್ಲಿ ಎರಡನ್ನು ವಿದೇಶದ ಕತೆಗಳ ಗುಂಪಿಗೆ ಸೇರಿಸಿಕೊಳ್ಳಬಹುದು.

'ರಂಗನ ಮದುವೆ' ಮಾಸ್ತಿ ಅವರ ಮೊದಲ ಕತೆ. ಅಲ್ಲಿಂದ ತೊಡಗಿ ವಿಭಿನ್ನ ವಸ್ತು ವಿನ್ಯಾಸಗಳನ್ನು ತಮ್ಮಲ್ಲಿ ಅಡಗಿಸಿಕೊಂಡು ಭೂಮ್ಯಾಕಾಶಗಳನ್ನೆಲ್ಲ ಆವರಿಸಿ ತಾಳುವ ಅತ್ಯದ್ಭುತ ಸ್ವರೂಪ, ಮಾಸ್ತಿಯವರ ಕಲ್ಪನೆ–ಪ್ರತಿಭೆಗಳು ಒಗ್ಗೂಡಿ, ವಿಶ್ವದ ಮೂಲೆ ಮೂಲೆಯಲ್ಲಿನ, ವಿಸ್ಮೃತ ಪ್ರಾಯವೂ ಆದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ತಾತ್ವಿಕ ಸಾಂಸ್ಕೃತಿಕ ಸಂಗತಿಗಳನ್ನು, ಕಾಮ–ಪ್ರೇಮ, ಸ್ನೇಹದ ವಿವಿಧ ಮುಖಗಳನ್ನು ತ್ಯಾಗ, ಭೋಗಗಳ ಹಲವು ಆಯಾಮಗಳನ್ನು ತೋರಿಸುತ್ತಾ ವಿಶ್ವರೂಪಿಯಾಗಿ ಮೂಡುತ್ತವೆ. ಈ ಕತೆಗಳು ಒಂದು ಕಾದಂಬರಿಯ ವಸ್ತುವನ್ನೇ ತಮ್ಮ ಸಣ್ಣ ಒಡಲ ಚೌಕಟ್ಟಿನಲ್ಲಿ ಶಕ್ತವಾಗಿ ಹಿಡಿದಿಟ್ಟುಕೊಳ್ಳುತ್ತವೆ.

'ರಂಗನ ಮದುವೆ' ಎಂಬ ಮೊದಲ ಕತೆಯೊಡನೆ 'ಮಾಯಣ್ಣನ ಕನ್ನಡಿ' ಎಂಬ ಕೊನೆಯ ಕತೆಯನ್ನು ಹೋಲಿಸಿದಾಗ ಮಾಸ್ತಿಯವರು ಕಥನ ಕಲೆಯಲ್ಲಿ ಸಾಧಿಸಿರುವ ಅಪ್ರತಿಮ ಸಿದ್ಧಿಯ ಪರಿಚಯವಾಗುತ್ತದೆ. ಕೆಡುಕಿನ ಅನೇಕ ಮುಖಗಳು, ಸಾಮಾಜಿಕ ಕೋಭೆಗಳು, ಧಾರ್ಮಿಕ ವಿಪ್ಲವಗಳು, ನೈತಿಕ ಉಲ್ಲಂಘನೆಗಳು ಎಲ್ಲವನ್ನೂ ತಮ್ಮ ಅಂತರ್ದೃಷ್ಟಿಯ ಕ್ಷ–ಕಿರಣದಿಂದ ನೋಡುವ ಅವರ ಆ ನೋಟದಿಂದ ಯಾವುದೂ ತಪ್ಪಿಸಿಕೊಳ್ಳುವುದಿಲ್ಲ. ಎಲ್ಲವನ್ನು ತಾಳ್ಮೆಯಿಂದ ಕೇಳುತ್ತಾರೆ,ನೋಡುತ್ತಾರೆ. ಆದರೆ ಅವನ್ನು ಓದುಗನಿಗೆ ತಲುಪಿಸುವಾಗ ಅವರು ಸಾಧಿಸುವ ನಿರ್ಮಮತೆ, ಸಮಚಿತ್ತ, ನಿರ್ಲಿಪ್ತಿ, ನಿಷ್ಪಕ್ಷಪಾತ ಮತ್ತು ದೋಷ– ದೌರ್ಬಲ್ಯಗಳನ್ನು ಜಜ್‌ಮೆಂಟಲ್ ಆಗಿ ನೋಡದ ಅವರ ಮನೋಧರ್ಮ ಅನನ್ಯ ಅನುಕರಣೀಯ ಎಂಬುದನ್ನು ತಾಳೆಹಾಕಿ ಮಾಸ್ತಿ ಅವರ ಕತೆಗಳ ಗುಣಾತಿಶಯಗಳನ್ನು ವಿವೇಚಿಸಿರುವುದು ಈ ಕೃತಿಯ ಧನಾತ್ಮಕ ಅಂಶ. ಮಾಸ್ತಿ ಅವರ ಕತೆಗಳು ಇಟ್ಟ ಹೆಜ್ಜೆ ಹಾಗೂ ತೊಟ್ಟ ರೂಪ,ಅವರ ಸಣ್ಣ ಕತೆಗಳ ದೊಡ್ಡತನ,ಮಾಸ್ತಿ ಅವರ ಅಪಾರವಾದ ಜೀವನ ದರ್ಶನ ಮೊದಲಾದ ಮಹತ್ವದ ಸಂಗತಿಗಳತ್ತ ಈ ಕೃತಿ ಹೊಸ ಬೆಳಕು ಬೀರುವಲ್ಲಿ ಸಫಲವಾಗಿದೆ.

'ಕನ್ನಡದಲ್ಲಿ ಮಾಸ್ತಿಯವರ ಕತೆಗಳ ಅಧ್ಯಯನಕ್ಕೊಂದು ನಿಡಿದಾದ ಪರಂಪರೆಯಿದೆ. ಈ ಮಾಲೆಗೆ ಸೇರಿದ ಹೊಸತೊಂದು ಮಲರು ಮಾಸ್ತಿ ಕಥಾಲೋಕ' ಎಂಬ ಶತಾವಧಾನಿ ಡಾ. ಆರ್. ಗಣೇಶ್ ಅವರ ಮಾತಿನಲ್ಲಿ ಅತ್ಯುಕ್ತಿಯಿಲ್ಲ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1

ಕುಡಿಯೋಣು ಬಾರಾ
(ಗುಂಡಿನ ಕುರಿತ ಸ್ವಾರಸ್ಯಕರ ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-

2

ಜೀವ ಜಾತ್ರೆ
(ಬಡಿಗೇರರ ಹೊಸ ಕಾದಂಬರಿ)
ಲೇ: ಮೌನೇಶ ಬಡಿಗೇರ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 450/-

3

ತೇಜಸ್ವಿ ಕೆಲವು ಪ್ರಸಂಗಗಳು
(ತೇಜಸ್ವಿ ಕುರಿತ ಕೆಲವು ಬರಹಗಳು)
ಲೇ: ಡಾ। ಎಚ್. ಎಸ್. ಸತ್ಯನಾರಾಯಣ
ಪ್ರ: ಆಲಂಪು ಪ್ರಕಾಶನ, ಮಾಲೂರು
ಬೆಲೆ : ರೂ 150/-

4

ಅಟ್ರಾಸಿಟಿ
(ಗುರುಪ್ರಸಾದರ ಕಾದಂಬರಿ)
ಲೇ: ಗುರುಪ್ರಸಾದ್ ಕಂಟಲಗೆರೆ
ಪ್ರ: ಆದಿಜಂಬೂ ಪ್ರಕಾಶನ, ಕಂಟಲಗೆರೆ
ಬೆಲೆ : ರೂ 130/-

5

ಹಾಲು ಮತ್ತು ಹಂಸ
(ವಿಮರ್ಶಾ ಬರಹಗಳು)
ಲೇ: ಆರ್. ಲಕ್ಷ್ಮೀನಾರಾಯಣ
ಪ್ರ: ಕಾಮಧೇನು ಪುಸ್ತಕ, ಬೆಂಗಳೂರು
ಬೆಲೆ : ರೂ 300/-

6

ವ್ಯತಿರಿಕ್ತ
(ಕಾದಂಬರಿ)
ಲೇ: ವಿವೇಕಾನಂದ ಕಾಮತ್
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 285/-

7

ದಾರಿ ತಪ್ಪಿಸುವ ಗಿಡ
(ಪ್ರಶಸ್ತಿ ಪುರಸ್ಕೃತ ಕಥೆಗಳು)
ಲೇ: ಸ್ವಾಮಿ ಪೊನ್ನಾಚಿ
ಪ್ರ: ವೈಷ್ಣವಿ ಪ್ರಕಾಶನ, ಕೆ.ಗುಡದಿನ್ನಿ
ಬೆಲೆ : ರೂ 120/-

8

20ನೇ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು
(ಹಿರಿಯ ಸಾಹಿತಿಗಳ ಲೇಖನಗಳು)
ಸಂ : ಡಾ। ಬಸವರಾಜ ಸಾದರ
ಪ್ರ: ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ
ಬೆಲೆ : ರೂ 350/-

9

ಪಾಕಿಸ್ತಾನದ ಐ.ಎಸ್.ಐ
(ಪಾಕಿಸ್ತಾನದ ಬೇಹುಗಾರಿಕಾ ಇಲಾಖೆಯನ್ನು ಕುರಿತು)
ಲೇ: ಡಾ। ಡಿ.ವಿ.ಗುರುಪ್ರಸಾದ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 495/-

10

ಕನ್ನಡದಲ್ಲಿ ಶ್ರೀ ಶಂಕರ
(ಶಾಂಕರ ಸ್ತೋತ್ರಗಳ ಭಾವಾನುವಾದ)
ಲೇ: ಡಾ। ಗಣಪತಿ ಆರ್. ಭಟ್
ಪ್ರ: ಅಯೋಧ್ಯ ಪಬ್ಲಿಕೇಷನ್ ಪ್ರೈ.ಲಿ., ಬೆಂಗಳೂರು
ಬೆಲೆ : ರೂ 600/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಕನ್ನಡದ ಮೊದಲ ಬಾಂಡ್ ಚಿತ್ರ ಜೇಡರ ಬಲೆಯು ಜಯಂತಿಯವರಿಗೆ ಖ್ಯಾತಿಯನ್ನು, ಜನಪ್ರಿಯತೆಯನ್ನು ತಂದುಕೊಟ್ಟಿತು.

ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ವೀರರಮಣಿಯ ಚರಿತೆ

ನಾನು ಜಯಂತಿಯವರನ್ನು ಮೊದಲ ಸಲ ಭೇಟಿ ಮಾಡಿದ್ದು ಚಿತ್ರರಂಗದಲ್ಲಿ ಕಲಾವಿದೆಯರು ಎದುರಿಸೋ ಸಮಸ್ಯೆಗಳ ಕುರಿತ ಗಂಭೀರ ಸಂಶೋಧನೆಗೆ. 'ನನಗೆ ಅದಲ್ಲ ಗೊತ್ತಿಲ್ಲಪ್ಪ.. ಅನುಭವ ಹೇಳ್ತೀನಿ, ನಿನಗೆ ಏನನ್ನಿಸುತ್ತೋ ಬರೆದುಕೋ' ಎಂದರು. ಇದು ಅಚ್ಚರಿ ಎನ್ನಿಸಿತ್ತು, ಆಮೇಲೆ ಅವರು ಇರುವುದೇ ಹಾಗೆ ಎಂದು ಗೊತ್ತಾಯಿತು. ಮುಂದೆ ನೂರಾರು ಸಲ ಅವರನ್ನು ಭೇಟಿ ಮಾಡಿದ್ದೇನೆ, ಎಷ್ಟೋ ಸಲ ಅವರೇ ಕರೆಸಿ ಕೊಂಡಿದ್ದಾರೆ, ಸ್ಟಾರಡಂನ ಯಾವ ಸೋಂಕೋ ಇಲ್ಲದೆ ಸರಳವಾಗಿರುವುದು ಅವರ ಸ್ವಭಾವ. ಬೇರೆ ಕಲಾವಿದರ ರೀತಿ ಅನುಭವಕ್ಕೆ ಮಸಾಲೆ ಸೇರಿಸುವುದೋ, ಹಿಗ್ಗಿಸಿ ಹೇಳುವುದೋ ಅವರಲ್ಲಿ ಇರಲೇ ಇಲ್ಲ, ಅವರಾಡುವ ಪ್ರತಿ ಮಾತಿನಲ್ಲಿಯೂ ಪ್ರಾಮಾಣಿಕತೆ ತುಂಬಿ ತುಳುಕುತ್ತಿತ್ತು. 'ಏನೋ ಶ್ರೀಧರ, ಎಷ್ಟು ದಿನ ಆಯ್ತೋ ನಿನ್ನ ನೋಡಿ' ಎನ್ನುವ ಅವರ ಮಾತಿನಲ್ಲಿ ನನಗೆ ಅಮ್ಮನ ವಾತ್ಸಲ್ಯವೇ ಕಾಣುತ್ತಿತ್ತು.

ಜಯಂತಿಯವರ ಮೂಲ ಹೆಸರು ಕಮಲಾ ಕುಮಾರಿ. ಜನಿಸಿದ್ದು 1947ರ ಜನವರಿ 6ರಂದು. ತಂದೆ ಬಾಲಸುಬ್ರಹ್ಮಣ್ಯಂ, ಆಂಗ್ಲ ಭಾಷಾ ಉಪನ್ಯಾಸಕರಾಗಿದ್ದವರು. ತಾಯಿ ಸಂತಾನಲಕ್ಷ್ಮಿ ಭರತ ನಾಟ್ಯದ ಕಡೆ ಆಸಕ್ತಿಯುಳ್ಳವರು. ಮಗಳನ್ನು ಭರತ ನಾಟ್ಯದ ಕಡೆ ತರಬೇಕು ಎನ್ನುವುದು ಅವರ ಕನಸು; ತಂದೆಗಾದರೂ ಮಗಳು ಓದಿ ವೈದ್ಯಳಾಗ ಬೇಕು ಎನ್ನುವ ಕನಸು. ಆದರೆ ಹೆತ್ತವರು ಚಿಕ್ಕಂದಿನಿಂದಲೇ ಬೇರೆ ಆದರು. ಜಯಂತಿ ತಮ್ಮ ಬಾಲ್ಯವನ್ನು ಹೈದರಾಬಾದ್‌ನಲ್ಲಿ ತಾಯಿಯ ಜೊತೆ ಕಳೆಯ ಬೇಕಾಯಿತು. ತಾಯಿಯವರ ಅಪೇಕ್ಷೆಯಂತೆ ಭರತ ನಾಟ್ಯ ಶಾಲೆಗೆ ಸೇರಿದರು. ಆಗ ಕೊಂಚ ಸ್ಥೂಲದೇಹಿಯಾಗಿದ್ದ ಅವರನ್ನು ನೃತ್ಯಶಾಲೆಯ ವಿದ್ಯಾರ್ಥಿನಿಯರು ಅಪಹಾಸ್ಯ ಮಾಡುತ್ತಿದ್ದರಂತೆ. ಇದೇ ಅವರಲ್ಲಿ ಸ್ವಾಭಿಮಾನವನ್ನು ಮೂಡಿಸಿ ಕಲಾವಿದೆಯಾಗುವಂತೆ ಮಾಡಿತು.

ಈ ವಯಸ್ಸಿನಲ್ಲಿಯೇ ಅವರು ಕುಟುಂಬ ಸಹಿತ ಹೈದರಾಬಾದ್‌ಗೆ ಹೋಗಿದ್ದರು. ಹಾಗೆಯೇ ಎನ್.ಟಿ.ರಾಮರಾವ್ ಅವರನ್ನು ಭೇಟಿ ಮಾಡಿದ್ದರು. ಆಗಿನ್ನೂ ಚಿಕ್ಕ ಬಾಲಿಕೆಯಾಗಿದ್ದ ಅವರನ್ನು ಎನ್.ಟಿ.ಆರ್ ತೊಡೆಯ ಮೇಲೆ ಕೂಳ್ಳಿರಿಸಿ ಕೊಂಡು 'ಮುಂದೆ ಏನಾಗುತ್ತಿ?' ಎಂದಾಗ 'ನಿಮಗೆ ನಾಯಕಿಯಾಗಿ ಅಭಿನಯಿಸುತ್ತೇನೆ' ಎಂದು ಉತ್ತರಿಸಿದ್ದಳು! ಈ ಮಾತಿಗೆ ಅಲ್ಲಿ ನೆರೆದಿದ್ದವರೆಲ್ಲರೂ ಬಿದ್ದು ಬಿದ್ದು ನಕ್ಕಿದ್ದರು. ಆದರೆ ಕೆಲವೇ ವರ್ಷಗಳಲ್ಲಿ ಅದು ನಿಜವಾಯಿತು. 'ಜಗದೇಕವೀರುನಿ ಕಥಾ' ಚಿತ್ರದಲ್ಲಿನ ಎನ್.ಟಿ.ಆರ್ ಅವರ ನಾಲ್ವರು ನಾಯಕಿಯರಲ್ಲಿ ಒಬ್ಬರಾಗಿ ಜಯಂತಿ ಚಿತ್ರರಂಗವನ್ನು ಪ್ರವೇಶಿಸಿದರು.

ಅವರ ಚಿತ್ರರಂಗದ ಆರಂಭಿಕ ದಿನಗಳಲ್ಲಿ ಆಗಿನ ಖ್ಯಾತ ನಟಿ ಸಾವಿತ್ರಿ' ಜಯಂತಿಯವರಿಗೆ ಸಂಭಾಷಣೆ ಹೇಳಲು ಬರುವುದಿಲ್ಲ' ಎಂದು ಮುನಿಸಿಕೊಂಡು ಸೆಟ್‌ನಿಂದ ಹೊರ ನಡೆದಿದ್ದರಂತೆ. ಇದನ್ನೇ ಸವಾಲ್ ಆಗಿ ಸ್ವೀಕರಿಸಿದ ಜಯಂತಿ ಅಭಿನಯದಲ್ಲಿ ತಮ್ಮನ್ನು ತಿದ್ದಿಕೊಂಡು ಪರಿಪೂರ್ಣವಾಗಿ ಹೊರ ಹೊಮ್ಮಿದರು.

'ಜೇನುಗೂಡು' ಚಿತ್ರದ ಮೂಲಕ ಜಯಂತಿ ಕನ್ನಡ ಚಿತ್ರರಂಗಕ್ಕೆ ಬಂದರು. ಸಹಜಾಭಿನಯದಿಂದ ಗಮನ ಸೆಳೆದರು. ಟಿ.ವಿ.ಸಿಂಗ್ ಠಾಕೂರ್ ಅವರ 'ಚಂದವಳ್ಳಿಯ ತೋಟ' ಚಿತ್ರ ಅವರನ್ನು ಕನ್ನಡ ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಲ್ಲಿಸಿತು. ಜಯಂತಿಯವರು ರಾಜ್ ಕುಮಾರ್ ಅವರ ಜೊತೆಗೆ ಅಭಿನಯಿಸಿದ ಮೊದಲ ಚಿತ್ರ 'ಚಂದವಳ್ಳಿಯ ತೋಟ'. ಆಗ ಜಯಂತಿ ಇನ್ನೂ ಹೊಸ ಕಲಾವಿದೆ. ರಾಜ್ ಕುಮಾರ್ ಆಗಲೇ ಹೆಸರು ಮಾಡಿದ್ದ ಕಲಾವಿದರು.

ಚಿತ್ರದ ಮೊದಲ ಶಾಟ್‌ಗೂ ಮೊದಲು ಜಯಂತಿ ಎಲ್ಲಾ ಹಿರಿಯ ಕಲಾವಿದರಿಗೆ ನಮಸ್ಕರಿಸಿದಂತೆ ರಾಜ್ ಕುಮಾರ್ ಅವರಿಗೂ ನಮಸ್ಕರಿಸಲು ಹೋದರು. ಆದರೆ ರಾಜ್ ಕುಮಾರ್ ಅವರು ತಡೆದು 'ನೀವು ನಿಮ್ಮ ವೃತ್ತಿಯನ್ನು ಗೌರವಿಸಿದರೆ ಸಾಕು, ಅದೇ ನನಗೆ ಮಾಡುವ ನಮಸ್ಕಾರ' ಎಂದರು. ಈ ಚಿತ್ರದಲ್ಲಿಯೇ ಅವರಿಬ್ಬರು ಬಹಳ ಒಳ್ಳೆಯ ಸ್ನೇಹಿತರಾದರು. ಎಲ್ಲರೂ ಅಣ್ಣಾ ಎಂದು ಕರೆಯುತ್ತಿದ್ದ ರಾಜ್ ಕುಮಾರ್ ಅವರನ್ನು ಜಯಂತಿಯವರೊಬ್ಬರೇ 'ರಾಜ್' ಅಂತ ಕರೆಯುತ್ತಾ ಇದ್ದಿದ್ದು.

1964ರಲ್ಲಿ ಬಿಡುಗಡೆಯಾದ 19 ಚಿತ್ರಗಳಲ್ಲಿ 6 ಚಿತ್ರಗಳಲ್ಲಿ ಜಯಂತಿ ಇದ್ದರು. ಇದು ಪ್ರತಿ ವರ್ಷವೂ ಏರುತ್ತಾ ಹೋಗಿ 1967ರಲ್ಲಿ ಒಂಬತ್ತು ಚಿತ್ರಗಳಿಗೆ ಬಂದರೆ, 1969 ಮತ್ತು 1971ರಲ್ಲಿ ತಲಾ ಹತ್ತು ಚಿತ್ರಗಳಲ್ಲಿ ಜಯಂತಿ ಅಭಿನಯಿಸಿದರು. ಇದು ಅವರು ಹೇಗೆ ಬಹುಬೇಗ ಕನ್ನಡದ ಬೇಡಿಕೆಯ ನಟಿ ಎನ್ನಿಸಿ ಕೊಂಡರು ಎನ್ನುವುದನ್ನು ಸೂಚಿಸುತ್ತದೆ.

ಕೇವಲ ಸಂಖ್ಯೆಯಲ್ಲಿ ಏರಿಕೆ ಕಂಡಿದ್ದು ಮಾತ್ರವಲ್ಲ, ಜಯಂತಿಯವರು ಸದಾ ಸವಾಲಿನ ಪಾತ್ರಗಳನ್ನು ಆಯ್ಕೆ ಮಾಡಿ ಕೊಂಡರು. 'ಬೆಟ್ಟದ ಹುಲಿ' ಚಿತ್ರದಲ್ಲಿ ಸ್ವಿಮಿಂಗ್ ಸೂಟ್ ಹಾಕಿ ಎಲ್ಲರನ್ನೂ ಅಚ್ಚರಿಗೆ ಈಡು ಮಾಡಿದ್ದರು. ಎಂ.ಆರ್.ವಿಠಲ್ ಅವರ ನಿರ್ದೇಶನದ 'ಮಿಸ್ ಲೀಲಾವತಿ' ಬೋಲ್ಡ್ ನಾಯಕಿಯೊಬ್ಬಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯ ಮಾಡಿ ಕೊಟ್ಟಿತು. ಪ್ರತಿ ಹೆಜ್ಜೆಯಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆಗೆ ಸವಾಲು ಹಾಕುವ ಈ ಚಿತ್ರದಲ್ಲಿಯೂ ಬೋಲ್ಡ್ ಎನ್ನಿಸಬಲ್ಲ ದೃಶ್ಯಗಳಿದ್ದವು. ಎಂ.ಆರ್.ವಿಠಲ್ ಅವರ ಎರಡು ಮುಖ ಚಿತ್ರದಲ್ಲಿ ಸ್ಕಿಜೋಫ್ರೇನಿಯಾ ರೋಗಿಯಾಗಿ ಎರಡು ವಿಭಿನ್ನ ವ್ಯಕ್ತಿತ್ವದ ನಾಯಕಿಯಾಗಿ ಜಯಂತಿ ಗಮನ ಸೆಳೆದರು.

ಇದೇ ಸಾಲಿನಲ್ಲಿ ಕನ್ನಡದ ಮೊದಲ ಬಾಂಡ್ ಚಿತ್ರ 'ಜೇಡರ ಬಲೆ' ಬಂದಿತು. ಸಿಂಗಲ್ ಪೀಸ್ ತೊಟ್ಟ ಬಾಂಡ್ ಗರ್ಲ್ ಪಾತ್ರಕ್ಕೆ ದೊರೈ-ಭಗವಾನ್ ಜಯಂತಿಯವರನ್ನು ಒಪ್ಪಿಸಿದರು. ಇದು ಕೂಡ ಟ್ರೆಂಡ್ ಸೆಟರ್ ಆಯಿತು. ಜಯಂತಿ ಆ ವೇಳೆಗಾಗಲೇ ತೆಲುಗು ಮತ್ತು ತಮಿಳು ಚಿತ್ರರಂಗದಲ್ಲಿ ಕೂಡ ಜನಪ್ರಿಯ ನಾಯಕಿ ಎನ್ನಿಸಿ ಕೊಂಡಿದ್ದರು. ಇದೇ ಸಮಯದಲ್ಲಿಯೇ ಅವರಿಗೆ ಹಿಂದಿ ಚಿತ್ರರಂಗದಲ್ಲಿ ಕೂಡ ಅವಕಾಶ ಸಿಕ್ಕಿತು. 1966ರಲ್ಲಿ ತೆರೆ ಕಂಡ' ಕೇದಾರ್ ಕಪೂರ್' ಅವರ ದಾದಾ ಅವರು ಅಭಿನಯಿಸಿದ ಮೊದಲ ಹಿಂದಿ ಚಿತ್ರ. ದಾರಾ ಸಿಂಗ್ ನಾಯಕರಾಗಿದ್ದರು. ಆದರೆ ಅಲ್ಲಿಯ ವಾತಾವರಣ ಹಿಡಿಸದೆ ದಕ್ಷಿಣ ಭಾರತದ ಚಿತ್ರಗಳಿಗೆ ಹಿಂದಿರುಗಿದರು.

'ಪಾತ್ರದಲ್ಲಿ ಚಿಕ್ಕದು ದೊಡ್ಡ ಅಂತೇನು ಇಲ್ಲ, ಅದರ ಪರಿಣಾಮ ಅರಿತು ಅಭಿನಯ ಮಾಡ್ಬೇಕು' ಅಷ್ಟೇ ಎಂದು ಜಯಂತಿಯವರ ಯಾವಾಗ್ಲೂ ಹೇಳ್ತಾ ಇದ್ದರು. ಅದನ್ನು ಮಾಡಿ ತೋರಿಸಿದರೂ ಕೂಡ. 'ಕಸ್ತೂರಿ ನಿವಾಸ' ಚಿತ್ರದಲ್ಲಿ ನೀಲಾಳದ್ದು ಬಹಳ ಚಿಕ್ಕದಾದ ಪಾತ್ರ. ಆದರೆ ಜಯಂತಿ ಅದನ್ನು ಅದ್ಭುತವಾಗಿ ಅಭಿನಯಿಸಿ ಚಿತ್ರದ ಗೆಲುವಿಗೆ ತಮ್ಮ ಪಾಲನ್ನೂ ಕೂಡ ಸಲ್ಲಿಸಿದರು. ಇದೇ ರೀತಿಯಲ್ಲಿ 'ನಾಗರಹಾವು' ಚಿತ್ರದಲ್ಲಿ ಒನಕೆ ಓಬವ್ವನ ಪಾತ್ರವನ್ನು ಪುಟ್ಟಣ್ಣನವರು ಜಯಂತಿಯ ವರನ್ನು ಕೇಳಿದಾಗ ಚಿಕ್ಕದು ಎಂದು ಯೋಚಿಸದೆ ಸಂತೋಷ ದಿಂದಲೇ ಈ ಪಾತ್ರವನ್ನು ಮಾಡಿದರು. ಒಂದೇ ಹಾಡಿನ ದೃಶ್ಯದಲ್ಲಿ ಬಂದರೂ ಓಬವ್ವನಾಗಿ ಜಯಂತಿ ಕನ್ನಡಿಗರ ಮನಸ್ಸಿನಲ್ಲಿ ಅಮರರಾದರು.

ಜಯಂತಿಯವರನ್ನು ಅವರ ಮಗ ಕೆ.ಕೆ.(ಕೃಷ್ಣ ಕುಮಾರ್) ಬಹಳ ಪ್ರೀತಿಯಿಂದ ನೋಡಿ ಕೊಂಡರು. ಜಯಂತಿಯವರೂ ಕೂಡ ಮಗನನ್ನು ಬಹಳ ಹಚ್ಚಿಕೊಂಡಿದ್ದರು. ನಾನು ಕೆ.ಕೆ. ಯವರ ಜೊತೆಗೆ ಒಂದು ಪ್ರಾಜೆಕ್ಟ್ ಮಾಡಿದ್ದೆ, ಆಗ ಅಮ್ಮ-ಮಗನ ಅನುಬಂಧ ಹತ್ತಿರದಿಂದ ನೋಡುವ ಅವಕಾಶ ಸಿಕ್ಕಿತು. ಕೆಲಸ ಮುಗಿಯುವುದು ರಾತ್ರಿ ತಡ ಆಗುತ್ತಿತ್ತು ಎಂದು ಸಂಜೆ ಏಳು ಗಂಟೆ ಸುಮಾರಿಗೆ ಜಯಂತಿ ಬಂದು ಮಗನನ್ನು ನೋಡಿ ಕೊಂಡು ಹೋಗುತ್ತಿದ್ದರು. ಟಿ.ಎಸ್.ನಾಗಾಭರಣ ಅವರ ಎಪ್ಪತ್ತನೇ ವರ್ಷದ ಕಾರ್ಯಕ್ರಮದಲ್ಲಿ ನಾನು ಜಯಂತಿಯ ವರನ್ನು ಕೊನೆಯ ಸಲ ಭೇಟಿ ಮಾಡಿದ್ದು, ಆಗಲೇ ಕುಗ್ಗಿದ್ದರು. 2021ರ ಜುಲೈ 26ರಂದು ಅವರು ಅಗಲಿದಾಗ, ನನ್ನ ಜೀವನದ ಮಮತೆಯ ಸೆಲೆಯೊಂದು ಬತ್ತಿ ಹೋಯಿತು.

ಪಪ್ಪಾಯ ಮರದಲ್ಲಿ ಕೆಂಪು ಹಕ್ಕಿ

» ನವೀನಕೃಷ್ಣ ಎಸ್. ಉಪ್ಪಿನಂಗಡಿ



ಚುಮುಚುಮು ಚಳಿಯ ಉಲ್ಲಾಸಭರಿತ ವಾತಾವರಣ. ಆ ದಿನ ನಮ್ಮ ಪಪ್ಪಾಯ ಮರದಲ್ಲಿ ಕೆಂಪುಬಾಲದ ಪಿಕಳಾರವೊಂದು ಪಪ್ಪಾಯದ ಸವಿ ಉಣ್ಣುತ್ತಿತ್ತು. ಅದೇ ಸಮಯಕ್ಕೆ ಮೂರು ಹಸಿರು ಕುಟ್ರಗಳ ಪ್ರವೇಶವಾಗಿತ್ತು. ಇದನ್ನು ನೋಡುತ್ತಿದ್ದ ನನಗೆ ಈಗ ಹಸಿರುಕುಟ್ರಗಳು ಪಿಕಳಾರವನ್ನು ಓಡಿಸುವುದು ಖಂಡಿತ ಎಂಬ ಯೋಚನೆ ಬಂತು. ಈ ಯೋಚನೆ ಬರುವುದಕ್ಕೆ ನನ್ನ ಅನುಭವಗಳೇ ಕಾರಣ. ನಮ್ಮ ಪಪ್ಪಾಯ ಮರಕ್ಕೆ ಹಸಿರುಕುಟ್ರನೇ ಒಡೆಯ!

ಆದರೆ ನನ್ನ ಆಲೋಚನೆ ಬುಡಮೇಲಾಯಿತು. ಪಿಕಳಾರ ಹಕ್ಕಿ ಹಣ್ಣು ತಿನ್ನುವವರೆಗೆ ಪಕ್ಕದ ರೆಂಬೆಯಲ್ಲಿ ಕುಳಿತಿದ್ದ ಹಸಿರುಕುಟ್ರಗಳು ಅದು ಹಾರಿ ಹೋದ ನಂತರ, ಬಂದು ಪಪ್ಪಾಯ ಹಣ್ಣನ್ನು ತಿನ್ನತೊಡಗಿದವು. ಪಿಕಳಾರ ಹಕ್ಕಿಗಳ ಪ್ರಭೇದಲ್ಲೊಂದಾದ ಕೆಂಪು ಬಾಲದ ಪಿಕಳಾರ ವನ್ನು ಆಂಗ್ಲಭಾಷೆಯಲ್ಲಿ ರೆಡ್ ವೆಂಟೆಡ್ ಬುಲ್‌ಬುಲ್ ಎನ್ನುವರು. ಇದು ಗಾತ್ರದಲ್ಲಿ ಗೊರವಂಕ ಹಕ್ಕಿಯಷ್ಟು ದೊಡ್ಡದಾದ ಹಕ್ಕಿ. ಕೆಂಪು ಬಾಲದ ಪಿಕಳಾರ ಹೆಚ್ಚಾಗಿ ಜೋಡಿಗಳಲ್ಲಿ ಅಥವಾ ಚದುರಿದ ಗುಂಪುಗಳಲ್ಲಿ ಕಾಣ ಸಿಗುವ ಪಕ್ಷಿ. 'ಕ್ರೀಮ್' ಎನ್ನುವ ಮಧುರ ಧ್ವನಿಯಲ್ಲಿ ಕೂಗುತ್ತವೆ.ಬೇರೆ ಪಕ್ಷಿಗಳ ಧ್ವನಿಯನ್ನು ಅನುಕರಿಸ ಬಲ್ಲವು. ಹಾಗಾಗಿ ಕೆಲವೊಮ್ಮೆ ಪಕ್ಷಿವೀಕ್ಷಕರು ಮೋಸ ಹೋಗುವುದೂ ಇದೆ! ಕೆಂಪು ಬಾಲದ ಪಿಕಳಾರ ಮಿಶ್ರಾಹಾರಿ. ಹುಳುಹುಪ್ಪಟೆಗಳು, ಹಣ್ಣು-ಹಂಪಲು, ತರಕಾರಿ, ಹೂವುಗಳ ಮಕರಂದ ಈ ಹಕ್ಕಿಯ ಆಹಾರ. ಹಣ್ಣಿನ ಮರಗಳು ಹಣ್ಣು ಬಿಟ್ಟಾಗ ಅದನ್ನು ತಿನ್ನುವುದಕ್ಕಾಗಿ ಇವುಗಳ ಗುಂಪೇ ದೌಡಾಯಿಸುತ್ತದೆ.

ಈ ಹಕ್ಕಿಗೆ ಸಾಂಸ್ಕೃತಿಕ ಮಹತ್ವವೂ ಇದೆ. ಇವುಗಳನ್ನು ಕೆಲವು ಸಂಸ್ಕೃತಿಗಳಲ್ಲಿ ಅದೃಷ್ಟ ಮತ್ತು ಸಮೃದ್ಧಿಯ ಸಂಕೇತವೆಂದು ಪರಿಗಣಿಸಲಾಗಿದೆ.

ಲಹರಿ

» ಡಾ. ಕೆ. ಎಸ್. ಚೈತ್ರಾ

ಅವಮಾನದಲ್ಲೂ ಕಲಿತ ಪಾಠ

ಮಳೆಗಾಲದಲ್ಲಿ ವೇಗವಾಗಿ ವಾಹನ ಚಲಾಯಿಸಿ, ನೀರನ್ನು ಇನ್ನೊಬ್ಬರ ಮೇಲೆ ಸಿಡಿಸಿದಾಗ, ಕೆಸರು ನೀರನ್ನು ಮೈಗೆ ಸಿಂಪಡಿಸಿಕೊಂಡವರು ಅನುಭವಿಸುವ ಅವಮಾನ ಅಪಾರ.

ಜಿಟಿ ಜಿಟಿ ಸುರಿವ ಮಳೆ.. ಬಿಸಿಬಿಸಿ ಬೋಂಡಾ ತಿನ್ನುತ್ತಾ ಸುಡುವ ಕಾಫಿ ಗುಟುಕರಿಸುತ್ತಾ ಕೂತಾಗ ಮಳೆಹನಿಯೊಡನೆ ನೆನಪುಗಳೂ ಸುರಿಯುತ್ತವೆ ನೋಟು ಬುಕ್ಕಿನ ಹಾಳೆ ಹರಿದು ದೋಣಿ ಮಾಡಿ ತೇಲಿ ಬಿಟ್ಟಿದ್ದು, ಆಲಿಕಲ್ಲು ಆರಿಸಿ ತಿಂದಿದ್ದು, ಗುಡುಗಿಗೆ ಹೆದರಿ ಕಂಬಳಿ ಮುಸುಕು ಹಾಕಿ ಮಲಗಿದ್ದು ಹೀಗೆ. ಅಷ್ಟರಲ್ಲಿ ಹಳದಿ ಬಣ್ಣದ ಶಾಲೆಯ ಬಸ್ಸಿನಿಂದ ಛತ್ರಿ ಬಿಡಿಸಿ ಜಾಗರೂಕತೆಯಿಂದ ಇಳಿವ ಮಕ್ಕಳ ಅಸ್ಪಷ್ಟ ಚಿತ್ರ ಕಾಣುತ್ತಿದೆ. ಇದ್ದಕ್ಕಿದ್ದಂತೆ ನನ್ನ ಶಾಲಾ ದಿನಗಳಲ್ಲಿ ನಡೆದ ಘಟನೆಯ ನೆನಪು

ಮೂರೂವರೆ ದಶಕಗಳ ಹಿಂದೆ ಇಂಥದ್ದೇ ಒಂದು ಮಳೆಗಾಲ; ತವರೂರು ಶಿವಮೊಗ್ಗದಲ್ಲಿ ನಾನಾಗ ಹೈಸ್ಕೂಲ್ ಓದುತ್ತಿದ್ದೆ. ಮನೆಯಿಂದ ಸಾಕಷ್ಟು ದೂರವಿದ್ದ ಶಾಲೆಗೆ ಗೆಳತಿಯರೆಲ್ಲಾ ಗುಂಪಾಗಿ ಸೈಕಲ್ ತುಳಿಯುತ್ತಾ ಹೋಗುವ ದಿನಗಳಾಗಿದ್ದವು. ದಿನವೂ ಕಷ್ಟ ಸುಖ, ಗುಟ್ಟು- ಗಾಸಿಪ್ ಹಂಚಿಕೊಳ್ಳುತ್ತಾ, ಕೆಲವೊಮ್ಮೆ ಕಲಿಸಿದ ಪಾಠದ ಬಗ್ಗೆ ಚರ್ಚೆ ಮಾಡುತ್ತಾ ನಾಲ್ಕೈದು ಮೈಲಿಗಳ ಸೈಕಲ್ ಸವಾರಿ ಮಜವೇ ಆಗಿತ್ತು. ಆದರೆ ಕಷ್ಟವಾಗುತ್ತಿದ್ದದ್ದು ಮಳೆಗಾಲದಲ್ಲಿ! ಸುರಿವ ಮಳೆಯಲ್ಲಿ ಬಲಗೈಯ್ಯಲ್ಲಿ ಸೈಕಲ್ ಹ್ಯಾಂಡಲ್ ಸರಿಯಾಗಿ ಬ್ಯಾಲೆನ್ಸ್ ಮಾಡಿ, ಎಡಗೈಯಲ್ಲಿ ಛತ್ರಿ ಹಿಡಿದು, ಛತ್ರಿ ಮತ್ತು ರಸ್ತೆ ಎರಡರ ಮೇಲೂ ಕಣ್ಣಿಟ್ಟು ಸೈಕಲ್ ತುಳಿಯುವುದು ನಿಜಕ್ಕೂ ದೊಡ್ಡ ಸರ್ಕಸ್ !

ಆ ದಿನ ಶನಿವಾರ; ಶಾಲೆ ಅರ್ಧ ದಿನ ಮಾತ್ರ. ಬೇರೆ ದಿನಗಳಲ್ಲಿ ನೀಲಿ ಸ್ಕರ್ಟ್, ಬಿಳಿ ಶರ್ಟ್, ಬದನೆಕಾಯಿ ಜಡೆಗೆ ಕೆಂಪು ರಿಬ್ಬನ್ನಾದರೆ ಶನಿವಾರ ಮಾತ್ರ ಸ್ಕರ್ಟ್, ಶರ್ಟ್ ಮತ್ತು ರಿಬ್ಬನ್ ಎಲ್ಲವೂ ಬಿಳಿ. ಆವತ್ತು ಬೆಳಿಗ್ಗೆಯಿಂದಲೇ ಮಳೆ ಸುರಿಯುತ್ತಿತ್ತು. ಮಳೆ, ಛಳಿ, ಬಿಸಿಲು ಏನಿದ್ದರೂ ಶಾಲೆಗೆ ಹೋಗಲೇಬೇಕಿತ್ತು. ಗೆಳತಿಯರೆಲ್ಲರೂ ಮನೆ ಹತ್ತಿರವೇ ಸೇರಿ ಸ್ವಲ್ಪ ಹೊತ್ತು ಕಾದೆವು. ಮಳೆ ಚೂರು ಬಿಡುವು ಕೊಟ್ಟ ಕೂಡಲೇ ನಿಧಾನವಾಗಿ ಸೈಕಲ್ ಮೇಲೆ ಸರ್ಕಸ್ ಮಾಡಿಕೊಂಡು ಹೊರಟಿದ್ದಾಯಿತು. ಪುಣ್ಯಕ್ಕೆ ಜನಸಂಚಾರ ಕಡಿಮೆ ಇತ್ತು. ಆದರೆ ರಸ್ತೆ ಎರಡು ಬದಿ ಮಣ್ಣು ನೀರು ಸೇರಿ ಕೆಸರಾಗಿತ್ತು. ಅಲ್ಲಲ್ಲಿ ನೀರು ತುಂಬಿ ರಸ್ತೆಗೂ ಹರಿಯುತ್ತಿತ್ತು. ಹೆದರಿಕೆಯಲ್ಲಿ ನಿಧಾನವಾಗಿ ನಮ್ಮ ಮೆರವಣಿಗೆ ಸಾಗ್ತಾ ಇತ್ತು. ಅಷ್ಟರಲ್ಲಿ ಜೋರಾಗಿ ಹಾರ್ನ್ ಮಾಡುತ್ತಾ ಒಂದು ಕಾರು ಬಂದಿತ್ತು. ನಾವು ಹಗ್ಗದ ಮೇಲೆ ಹೋಗುವ ರೀತಿ ಸಾಲಾಗಿ ಒಬ್ಬರ ಹಿಂದೆ ಒಬ್ಬರು ಹುಷಾರಾಗಿ ಚಲಿಸುತ್ತಿದ್ದೆವು. ಈ ಕಾರಿನಲ್ಲಿದ್ದವರು ಹಿಂದೆ -ಮುಂದೆ ಅಕ್ಕ- ಪಕ್ಕ ಯಾವುದನ್ನು ಲೆಕ್ಕಿಸಿದೆ ಕರ್ಕಶವಾಗಿ ಶಬ್ದ ಮಾಡುತ್ತಾ ಬಂದಿದ್ದರು. ಅವರು ಹೋದ ಸ್ಪೀಡು ಎಷ್ಟಿತ್ತು ಎಂದರೆ ರಸ್ತೆ ಪಕ್ಕದಲ್ಲಿದ್ದ ಕೆಸರು, ಮಣ್ಣು ನೀರು ಎಲ್ಲವೂ ಒಳ್ಳೆ ಕಾರಂಜಿಯ ಹಾಗೆ ನಮ್ಮ ಮೇಲೆ ಚಿಮ್ಮಿತ್ತು. ಬಟ್ಟೆ, ಸೈಕಲ್, ಮೈ-ಕೈ ಎಲ್ಲವೂ ಒದ್ದೆ ಒದ್ದೆ!

ಏನೋ ಅವರಿಗೆ ಗೊತ್ತಾಗ್ಲಿಲ್ಲ ಅನ್ನುವ ಹಾಗಿರಲಿಲ್ಲ. ಏಕೆಂದರೆ, ಒಳಗಿದ್ದ ಸುಮಾರು 20ರಿಂದ 25 ವರ್ಷದ ಯುವಕರು ಸ್ವಲ್ಪ ಮುಂದೆ ಹೋಗಿ ಕಿಟಕಿಯಿಂದ ತಲೆ ಹೊರಹಾಕಿ ಜೋರಾಗಿ ನಕ್ಕಿದ್ದು, ಕೂಗಿದ್ದು ಎಲ್ಲವೂ ನಡೆಯಿತು. ಅವರೇನೋ ಕಾರಿನಲ್ಲಿ ಮುಂದೆ ಹೋದರು. ನಾವು ಕೆಸರಾದ ಬಟ್ಟೆ, ಒದ್ದೆಯಾದ ಮೈ ಕೈ ಜತೆ ಸಿಟ್ಟು ಬೇಸರ- ಅಪಮಾನ ದಿಂದ ಅಸಹಾಯಕರಾಗಿ ಸುಮ್ಮನೆ ಸೈಕಲ್ ತುಳಿಯುತ್ತಿದ್ದೆವು . ಮರಳಿ ಮನೆಗೆ ಹೋಗುವ ಹಾಗಿಲ್ಲ ; ಮುಕ್ಕಾಲು ಹಾದಿ ಕ್ರಮಿಸಿಯಾಗಿತ್ತು.

ಹೇಗೋ ಶಾಲೆ ತಲುಪಿದ್ದಾಯ್ತು. ಆಗೆಲ್ಲ ಬಾತ್ರೂಮ್‌ಗಳು ಅಷ್ಟೆಲ್ಲ ಚೆನ್ನಾಗಿರುತ್ತಿರಲಿಲ್ಲ. ಆದರೂ ಒಬ್ಬರಿಗೊಬ್ಬರು ಸಹಾಯ ಮಾಡಿ ಒಂದಷ್ಟು ನೀರು ಚಿಮುಕಿಸಿ ಬಟ್ಟೆ ಮೇಲಿದ್ದ ಕೆಸರು ತೊಳೆದುಕೊಂಡು, ಕೈ ಕಾಲು ಸ್ವಚ್ಛಗೊಳಿಸಿ, ಕರ್ಚೀಫ್ ನಲ್ಲಿ ಆದಷ್ಟೂ ಒರೆಸಿಕೊಂಡು ಕ್ಲಾಸಿನಲ್ಲಿ ಕುಳಿತೆವು. ಮಳೆಯಲ್ಲಿ ತೊಯ್ದು, ಚಳಿಗೆ ಮುದುರಿ ಕೂತ ಗುಬ್ಬಚ್ಚಿಗಳಂತಿದ್ದೆವು ನಾವು! ಸುರಿವ ಮಳೆ ಜೊತೆಗೆ ಚಳಿಗಾಳಿಗೆ ಮೈ- ಮನಸ್ಸು ಎರಡೂ ಸಿಟ್ಟು ಮತ್ತು ದುಃಖದಿಂದ ನಡುಗುತ್ತಿತ್ತು. ಸ್ವಲ್ಪ ಹೊತ್ತಿಗೆ ಬಟ್ಟೆ ಒಣಗಿತು, ಪಾಠ ಮುಂದುವರೆಯಿತು.

ನಂತರ ಮಳೆಗಾಲವೂ ಮುಗಿಯಿತು. ಆದರೆ ಆ ಘಟನೆ ಮಾತ್ರ ಮನದಲ್ಲಿ ಕಲೆಯಾಗಿ ಉಳಿಯಿತು. ಆ ಸಮಯದಲ್ಲಿ ಸಿಟ್ಟು-ದುಃಖ ಬಂದಿತ್ತು. ನಂತರ ನೆನೆದಾಗಲೆಲ್ಲಾ ಅದೆಷ್ಟು ಅಪಾಯಕಾರಿಯಾಗಿತ್ತು ಅವರ ವರ್ತನೆ ಎನಿಸುತ್ತದೆ. ಪ್ರಾಯದ ಆ ತರುಣರಿಗೆ ಅದೊಂದು ಚೇಷ್ಟೆ, ಆಟ, ಮಜಾ ನೀಡುವ ಕ್ರಿಯೆ ಆಗಿತ್ತು. ನಮ್ಮ ಬಟ್ಟೆ -ಮೈ ಕೆಸರಾಗುವುದರ ಜತೆ ಸೈಕಲ್‌ನಿಂದ ಬಿದ್ದಿದ್ದರೆ? ಗಾಯವಾಗಿ ಅಥವಾ ಮತ್ತೊಂದು ಗಾಡಿ ಬಂದು ಅಪಘಾತವಾಗಿದ್ದರೆ? ತಾವು ಮಾಡುವ ಕೆಲಸ ಎಂತಹ ಅನಾಹುತಕಾರಿ ಎಂಬುದರ ಅರಿವಿಲ್ಲದೆ ಅಂದೂ ಮತ್ತು ಇಂದು ಯುವ ಜನರು ಮಾಡುವ ಅವಿವೇಕದ ಕೆಲಸವಿದು !

ಜೀವನದಲ್ಲಿ ಪ್ರತಿಯೊಂದು ಘಟನೆಯು ಒಂದೊಂದು ಪಾಠವೇ! ಹುಡುಗರು ಹಾಗೆ ಮಾಡಿದಾಗ ಬೇಸರವಾಗಿದ್ದೇನೋ ನಿಜ; ಆದರೆ ಅದರಿಂದ ನಾನೊಂದು ಪಾಠವನ್ನು ಕಲಿತೆ. ಆಗ ಸೈಕಲ್ ನಂತರ ಲೂನಾ, ಸ್ಕೂಟಿ, ಕೈನೆಟಿಕ್ ಮತ್ತು ಈಗ ಕಾರು ಓಡಿಸುತ್ತಿದ್ದೇನೆ. ಅಂದರೆ ಜೀವನದ ಅನೇಕ ಹಂತಗಳನ್ನು ದಾಟಿದ್ದಾಗಿದೆ. ಮಳೆಗಾಲದಲ್ಲಿ ಶಾಲೆಯ ಮಕ್ಕಳು, ಪಾದಚಾರಿಗಳು ನಡೆಯುವಾಗ ಆದಷ್ಟು ನೀರು ಹಾರದಂತೆ ನಿಧಾನವಾಗಿ ಗಾಡಿ ಚಲಾಯಿಸುತ್ತೇನೆ. ಹಾಗೆಯೇ ಯಾರಾದರೂ ರಸ್ತೆಯನ್ನು ದಾಟುತ್ತಿದ್ದರೆ, ಹಾರ್ನ್ ಮಾಡಿ ಅವರಿಗೆ ಹೆದರಿಸದೆ ದಾಟುವ ತನಕ ಕಾಯುತ್ತೇನೆ. ಬೇರೆಯವರನ್ನು ತಿದ್ದಲು ಸಾಧ್ಯವಾಗದೇ ಇದ್ದರೂ ನನಗಾದ ಅನುಭವದಿಂದ ಪಾಠ ಕಲಿತಿದ್ದೇನೆ ಎನ್ನುವುದು ಸೂಕ್ತ.

ಮುಂಬಯಿಯ ಕೋಟೆ ಪ್ರದೇಶದಲ್ಲಿರುವ ವಿಕ್ಟೋರಿಯನ್ ಗಾಥಿಕ್ ಮತ್ತು ಇಂಡೋ ಸಾರ್ಸೆನಿಕ್ ಶೈಲಿಯ ಹಲವು ಕಟ್ಟಡಗಳು ವಿಶ್ವ ಪರಂಪರೆ ತಾಣದ ಪಟ್ಟಿಯಲ್ಲಿದ್ದು, ಅಲ್ಲಿನ ಐತಿಹಾಸಿಕ ಮಹತ್ವವನ್ನು ಸಾರುತ್ತಿವೆ.

ವಿಶ್ವ ಪರಂಪರೆಯ ಮೆರುಗು

ಮುಂಬಾಪುರಿ

» ಕಲಾ ಭಾಗ್ವತ್

ಸಪ್ತ ದ್ವೀಪಗಳ ಸಮೂಹವಾಗಿದ್ದುಕೊಂಡು ಕೋಲಿ ಮೀನುಗಾರ ಜನಾಂಗದವರಿಗೆ ಮೂಲ ನೆಲೆಯನ್ನು ಕಲ್ಪಿಸಿಕೊಟ್ಟ ನೆಲ ಸಂಸ್ಕೃತಿಯ ಮುಂಬಾಪುರಿಯು ಕನ್ನಡ, ಮರಾಠಿ, ಗುಜರಾತಿನ ರಾಜಮನೆತನಗಳ ಆಳ್ವಿಕೆಯಲ್ಲಿತ್ತು. ಮುಂದೆ ಬಂದರಿನ ನಗರವಾದ ಮುಂಬಾಪುರಿಯ ಮೇಲೆ ಪ್ರಾಬಲ್ಯವನ್ನು ಸಾಧಿಸಲು ಸ್ಪರ್ಧೆಗಿಳಿದ ಬ್ರಿಟಿಷರು ಹಾಗೂ ಡಚ್ಚರಲ್ಲಿ ನಗರವು ಒಲಿದದ್ದು ಬ್ರಿಟಿಷರಿಗೆ. ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್ ಮತ್ತು ಪೋರ್ಚುಗೀಸ್ ರಾಜಕುಮಾರಿ ಕ್ಯಾಥರಿನ್ ಬ್ರಗಾಂಜಾಳ ನಡುವಿನ ವಿವಾಹದ ಒಪ್ಪಂದದಲ್ಲಿ, ವರದಕ್ಷಿಣೆಯ ರೂಪದಲ್ಲಿ ಬಾಂಬೆಯು ಇಂಗ್ಲಿಷರ ಪಾಲಿಗೆ ಹೋಯಿತು. ಮುಂದೆ ಈಸ್ಟ್ ಇಂಡಿಯಾ ಕಂಪನಿ ಅದನ್ನು ಪಡೆದುಕೊಂಡಿತು. ಅವರ ಆಡಳಿತ ವಿಸ್ತರಣೆ, ಬೆಳವಣಿಗೆ, ವ್ಯಾಪಾರ ವಹಿವಾಟಿನ ಅಭಿವೃದ್ಧಿ, ಧರ್ಮಪ್ರಸಾರ ಇತ್ಯಾದಿಗಳ ಹೆಸರಿನಲ್ಲಿ ಮುಂಬೈ ಬೆಳವಣಿಗೆಯನ್ನು ಹೊಂದಿತು.

ಕುಛ್ ಖೋನಾ ಕುಛ್ ಪಾನಾ ಎನ್ನುವ ಆಟದಲ್ಲಿ ಮುಂಬೈ ಪಡೆದದ್ದೇ ಹೆಚ್ಚು ಎನ್ನಬಹುದು. ಬ್ರಿಟಿಷರ ಕಾಲದಲ್ಲಾದ ಬೆಳವಣಿಗೆಯು ಮುಂಬೈಗೆ ತಾತ್ಕಾಲಿಕವಾದ ಲಾಭ ಮಾತ್ರವಾಗಿರಲಿಲ್ಲ, ಬದಲಿಗೆ ಅದನ್ನು ಶಾಶ್ವತವಾಗಿ ಸದೃಢಗೊಳಿಸುವಲ್ಲಿ, ಅತಿದೊಡ್ಡ ಆರ್ಥಿಕ ಮತ್ತು ವ್ಯಾಪಾರ ಕೇಂದ್ರವಾಗಿಸುವಲ್ಲಿ ಸಹಕಾರಿಯಾಯಿತು. ಬಹುಸಂಸ್ಕೃತಿಯ ಬೀಡಾಗಲು ಅನುವು ಮಾಡಿಕೊಟ್ಟಿತು. ಬ್ರಿಟಿಷರು, ಗುಜರಾತಿಗಳು, ಪಾರ್ಸಿಗಳು, ಯಹೂದಿಗಳು, ದಾವುದಿ ಬೋಹ್ರಾಗಳು ಇನ್ನೂ ಮುಂತಾದ ವ್ಯಾಪಾರಿ ಗುಂಪುಗಳಿಗೆ ಮುಂಬೈ ಆಕರ್ಷಣೆಯಾಯಿತು. ಇಡಿಯಾದ ಒಂದು ನೈಸರ್ಗಿಕ ಬಂದರಾಗಿ ಮಾರ್ಪಡಿಸಬೇಕು ಎನ್ನುವ ಯೋಜನೆಯ ಅಡಿಯಲ್ಲಿ ಮುಂಬೈ ಬೃಹತ್ತಾದ ಒಂದು ಭೂಮಿಯಾಯಿತು. ಹತ್ತಿಯ ವ್ಯಾಪಾರಕ್ಕೆ ವಿಶ್ವಮಟ್ಟದ ಮಾರುಕಟ್ಟೆಯಾಯಿತು. ಇಲ್ಲಿ ರೈಲು ಮಾರ್ಗವು ಮೊಟ್ಟ ಮೊದಲಿಗೆ ರಚನೆಯಾಯಿತು. ಹಲವಾರು ಶೈಕ್ಷಣಿಕ ಮತ್ತು ಆಡಳಿತ ಸಂಸ್ಥೆಗಳು ಹುಟ್ಟಿಕೊಂಡವು. ಭಾರತದ ಸಿರಿವಂತಿಕೆಯ ಯಜಮಾನರಾದ ಬ್ರಿಟಿಷರಿಗೆ 'ಹತ್ತೋಕೆ ಕುದುರೆ ಬಿತ್ತೋಕೆ ನೆಲ' ಎರಡೂ ಸಿಕ್ಕಾಗ ಮಾಡಲಿಚ್ಛಿಸಿದ ಅಭಿವೃದ್ಧಿ ಯೋಜನೆಗಳು ಹಲವು. ಕೇವಲ ವ್ಯಾಪಾರದಲ್ಲಷ್ಟೇ ಅಲ್ಲದೇ ಕಲೆ, ವಾಸ್ತುಶಿಲ್ಪಗಳಲ್ಲೂ ಮುಂಬೈಯೊಂದಿಗೆ ಅವರು ಅನುಸಂಧಾನ ಮಾಡಿಕೊಂಡರು. ಬೃಹತ್ತಾದ ಕಟ್ಟಡಗಳನ್ನು ಕಟ್ಟಿ ಆಡಳಿತ ಕಚೇರಿಗಳನ್ನಾಗಿ ಮಾಡಿಕೊಂಡರು. ಈ ನಡುವೆ ಅವರು ಅಳವಡಿಸಿದ್ದು ಗಾಥಿಕ್, ವಿಕ್ಟೋರಿಯನ್ ಮತ್ತು ಆರ್ಟ್ ಡೆಕೋ ಶೈಲಿಯ ವಾಸ್ತುಶಿಲ್ಪಗಳನ್ನು.

ವಿಕ್ಟೋರಿಯನ್ ಗಾಥಿಕ್ ಆರ್ಟ್ ಡೆಕೋ ಶೈಲಿ

ದಕ್ಷಿಣ ಮುಂಬಯಿಯ ಬಂದರು, ಅಝಾದ್ ಮೈದಾನ, ಸಿಎಸ್‌ಟಿ ಹಾಗೂ ಕಾಲಾಗೋಡಾ ಪ್ರದೇಶಗಳ ನಡುವೆ ಇರುವ ಫೋರ್ಟ್ ಪ್ರದೇಶವು ವಿಶೇಷ ವಿನ್ಯಾಸದ ಕಟ್ಟಡಗಳಿಂದಾಗಿ ಮನಸೆಳೆಯುತ್ತದೆ. ಮುಂಬೈ ದರ್ಶನ್ ಬಸ್ಸು ಈ ಭಾಗದಲ್ಲಿ ಹಾಯುವಾಗ ದಾಂಯೇ ದೇಖೋ ಬಾಂಯೇ ಮೋಡೋ ಎಂದು ಗೈಡ್‌ನ ಧ್ವನಿ ಕೇಳುವ ಪ್ರವಾಸಿಗರಿಗೆ ತಲೆಯ ವ್ಯಾಯಾಮವು ತನ್ನಷ್ಟಕ್ಕೇ ಆಗುವುದು. ವಿಕ್ಟೋರಿಯನ್, ಗಾಥಿಕ್ ಹಾಗೂ ಆರ್ಟ್ ಡೆಕೊ ವಿನ್ಯಾಸದ ಕಟ್ಟಡಗಳನ್ನು ಶಾಂತವಾಗಿ ನಿಂತು ನೋಡುವ ಅನುಭವವೇ ಬೇರೆ.

ಮುಂಬೈಯಿಯ ಮಹಾನಗರಪಾಲಿಕೆಯ ಕಟ್ಟಡ, ಮುಂಬೈ ಹೈಕೋರ್ಟ್, ಏಷ್ಯಾಟಿಕ್ ಸೊಸೈಟಿ ಕಟ್ಟಡ, ಡೇವಿಡ್ ಸಸೂನ್ ಲೈಬ್ರರಿ ಇವೆಲ್ಲವೂ ವಿಕ್ಟೋರಿಯನ್ ವಾಸ್ತುಶಿಲ್ಪದಿಂದ ಕಟ್ಟಿರುವ ಕಟ್ಟಡಗಳು. ಅಲಂಕಾರಿಕ ಸಂಕೀರ್ಣ ಕೆತ್ತನೆಗಳು, ಮರದ ಸೂಕ್ಷ್ಮ ಕುಸುರಿಗಳು, ಬಾಲ್ಕನಿಗಳು ಇತ್ಯಾದಿಗಳಿಂದ ಇವು ವಿಶಿಷ್ಟವಾಗಿವೆ. ಗಾಥಿಕ್ ಶೈಲಿಯಲ್ಲಿ ಚೂಪಾದ ಕಮಾನಗಳು, ಪಕ್ಕೆಲುಬಿನಂತಹ ವಿನ್ಯಾಸವುಳ್ಳ ಒಳಛಾವಣಿಯ ರಚನೆಗಳು, ವಿಶೇಷವಾದ ಬಣ್ಣದ ಚಿತ್ರಗಳು ಇತ್ಯಾದಿಗಳನ್ನು ಕಾಣಬಹುದು. ಸೇಂಟ್ ಜಾನ್ಸ್ ಚರ್ಚ್, ಸೇಂಟ್ ಥಾಮಸ್ ಕೆಥಡ್ರಲ್, ಮುಂಬೈ ವಿಶ್ವವಿದ್ಯಾಲಯದ ರಾಜಾಬಾಯಿ ಟವರ್, ಇವೆಲ್ಲವೂ ಗಾಥಿಕ್ ವಿನ್ಯಾಸದಿಂದ ಕಂಗೊಳಿಸುತ್ತವೆ. ವಿಶ್ವವಿದ್ಯಾಲಯದ ಗ್ರಂಥಾಲಯ ಹಾಗೂ ಘಟಿಕೋತ್ಸವ ಸಭಾಂಗಣವು ಎತ್ತರವಾದ ಕಮಾನಿನ ಛಾವಣಿಗಳು ಮತ್ತು ಬಣ್ಣದ ಗಾಜಿನ ಕಿಟಕಿಗಳಿಂದಾಗಿ ಅದ್ಭುತವೆನಿಸುತ್ತದೆ. ಗ್ರಂಥಾಲಯದಲ್ಲಿ ಕನ್ನಡ ಪುಸ್ತಕಗಳೂ ಗಮ್ಮತ್ತಾಗಿ ಕುಳಿತಿರುವುದನ್ನು ಕಂಡಾಗ ಅಭಿಮಾನವು ಸಹಜವಾಗಿಯೇ ಮೂಡುವುದು.

ದಿನವೂ ಲಕ್ಷೋಪಲಕ್ಷ ಪ್ರಯಾಣಿಕರು ಅಡಿಯೂರುವ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್ ಒಂದು ಐತಿಹಾಸಿಕ ರೈಲು ನಿಲ್ದಾಣ. ಇದನ್ನು ವಿಕ್ಟೋರಿಯನ್, ಇಟಾಲಿಯನ್ ಗೋಥಿಕ್ ಶೈಲಿಯಲ್ಲಿ ಬ್ರಿಟಿಷ್ ವಾಸ್ತುಶಿಲ್ಪದ ಎಂಜಿನಿಯರ್ ಫ್ರೆಡ್ರಿಕ್ ವಿಲಿಯಂ ಸ್ಟೀವನ್ಸ್ ವಿನ್ಯಾಸಗೊಳಿಸಿದ್ದಾನೆ. ಇದರ ನಿರ್ಮಾಣವು 1878ರಲ್ಲಿ ಹಳೆಯ ಬೋರಿ ಬಂದರ್ ರೈಲು ನಿಲ್ದಾಣದ ಸಮೀಪ ಪ್ರಾರಂಭವಾಗಿ ಸುಮಾರು ಒಂಬತ್ತು ವರ್ಷಗಳಲ್ಲಿ ಪೂರ್ಣಗೊಂಡಿತು. ರಾಣಿ ವಿಕ್ಟೋರಿಯಾ ಆಳ್ವಿಕೆಯ ಅರ್ಧ ಶತಮಾನಗಳ ನೆನಪಿಗಾಗಿ ಕಟ್ಟಡಕ್ಕೆ 'ವಿಕ್ಟೋರಿಯಾ ಟರ್ಮಿನಸ್' ಎಂದು ಹೆಸರಿಸಲಾಯಿತು. ಈಗ ಇದರ ಹೆಸರು ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್ ಎಂದು ಬದಲಾಗಿದೆಯಾದರೂ ಅನೇಕರು ವಿ ಟಿ ಎಂತಲೇ ಕರೆಯುತ್ತಾರೆ.

ಮುಂಬೈಯ ಮಹಾತ್ಮ ಜ್ಯೋತಿಬಾಫುಲೆ ಮಾರುಕಟ್ಟೆ (ಕ್ರಾಫರ್ಡ್ ಮಾರ್ಕೆಟ್) ಕಟ್ಟಡವು ನಾರ್ಮನ್, ಫ್ಲೆಮಿಶ್ ಮತ್ತು ಗೋಥಿಕ್ ವಾಸ್ತುಶಿಲ್ಪದ ಶೈಲಿಗಳ ಮಿಶ್ರಣವಾಗಿದೆ. ಗೇಟ್ ವೇ ಆಫ್ ಇಂಡಿಯಾ



ಮತ್ತು ಛತ್ರಪತಿ ಶಿವಾಜಿ ಮಹಾರಾಜ್ ವಸ್ತು ಸಂಗ್ರಹಾಲಯ, ಚರ್ಚ್ ಗೇಟ್ ಸ್ಟೇಷನ್ ಇವು ಇಂಡೋ ಸಾರ್ಸೆನಿಕ್ ಶೈಲಿಯ ಕಟ್ಟಡಗಳಾಗಿವೆ. ಮುಂಬೈ ಮತ್ತು ಅದರ ಉಪನಗರಗಳು ಬಹಳಷ್ಟು ಆರ್ಟ್ ಡೆಕೊ ಕಟ್ಟಡಗಳನ್ನು ಹೊಂದಿರುವುದು ವಿಶೇಷ. ಇಪ್ಪತ್ತನೆಯ ಶತಮಾನದಲ್ಲಿ ನಿರ್ಮಿತವಾದ ಕೆಲವು ಚಿತ್ರಮಂದಿರಗಳು, ಫ್ಲೋರಾ ಫೌಂಟೇನ್ ಇತ್ಯಾದಿ ಅನೇಕ ಕಟ್ಟಡಗಳಲ್ಲಿ ಈ ಶೈಲಿಯನ್ನು ಕಾಣಬಹುದು. ಇವುಗಳ ನಿರ್ಮಾಣಕ್ಕೆ ಕಪ್ಪು ಬಸಾಲ್ಟ್ ಕಲ್ಲು, ಕೆಂಪು ಇಟ್ಟಿಗೆ, ಸುಣ್ಣದ ಗಾರೆ ಹಾಗೂ ಗಾಥಿಕ್ ವಿನ್ಯಾಸವನ್ನು ಮಾಡಲು ಬಿಳಿ ಸುಣ್ಣದ ಕಲ್ಲು, ಕಬ್ಬಿಣದ ಎರಕ ಇತ್ಯಾದಿಗಳನ್ನು ಬಳಸಲಾಗಿದೆ. ಇಂದಿಗೂ ಶಿಥಿಲವಾಗದಂತೆ ನಿಂತ ಕಟ್ಟಡಗಳು ನಿರ್ಮಾಣ ಕಾಲದಲ್ಲಿ ಬಳಸಿದ ತಂತ್ರಜ್ಞಾನ, ವಿನ್ಯಾಸಕಾರರ ತಾಳ್ಮೆ, ಶ್ರಮಗಳ ದ್ಯೋತಕವಾಗಿವೆ.

ಭಾರತದ ಭಾಗ್ಯನಗರಿ ಎಂಬ ಕೀರ್ತಿಗೆ ಭಾಜನವಾಗಿರುವ ಮುಂಬಯಿಗೆ ಹೊಸ ಮೆರುಗನ್ನು ನೀಡುವಲ್ಲಿ ಇಲ್ಲಿನ ವಾಸ್ತುಶಿಲ್ಪದ ಪಾತ್ರವು ಗಣನೀಯ. ಶತಮಾನಗಳ ಕೆಳಗೆ ನಿರ್ಮಾಣಗೊಂಡ ಈ ಕುಸುರಿ ಕಲಾವೈಭವವು ಇಂದಿಗೂ ನೋಡುಗರ ಕಣ್ಮನ ತಣಿಸುವಲ್ಲಿ ಯಶಸ್ವಿಯಾಗಿದೆ; ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸೇರಿದೆ. ಈ ಪಾರಂಪರಿಕ ರಚನೆಗಳಿಂದ ದಕ್ಷಿಣ ಮುಂಬೈ ವರ್ಣರಂಜಿತವಾಗಿ ಕಂಗೊಳಿಸುತ್ತಿದೆ.

ಪಾಪ್ ಕಲೆಯ ರಾಜ

ತನ್ನ ಚಿತ್ರಗಳಿಂದ ಪ್ರಸಿದ್ಧಿಗಳಿಸಿರುವ ಈ ಕಲಾವಿದನು, ತನ್ನ ಬಡತನದ ಬಾಲ್ಯವನ್ನು ಮರೆತಿಲ್ಲ; ಇಂದು ಬಡಮಕ್ಕಳ ಕಲ್ಯಾಣಕ್ಕಾಗಿ ತನ್ನ ಆದಾಯದ ಬಹುಭಾಗವನ್ನು ಧಾರೆ ಎರೆಯುತ್ತಿದ್ದಾನೆ.

ಕಲಾತ್ಮಕತೆ

» ಜಯಶ್ರೀ ಭಟ್ ಸಿಂಗಪುರ

ಬ್ರೆಝಿಲ್ ದೇಶದ ರೆಸಿಫ್ ಎಂಬಲ್ಲಿ ಹುಟ್ಟಿದ ರೊಮೆರೊ ಬ್ರಿಟ್ಟೊ(ಜನನ1963)ನದು ಬಡತನದ ಕುಟುಂಬ. ಮನೆ ತುಂಬಾ ಮಕ್ಕಳು. ಆದರೆ ಇವನ ಕಣ್ಣ ತುಂಬಾ ಕನಸು, ಎಲ್ಲವನ್ನೂ ತನ್ನ ಕನಸುಗಣ್ಣಿನಿಂದ ನೋಡುತ್ತಾ ಅದನ್ನು ಚಿತ್ರವಾಗಿಸಬಲ್ಲ ಜಾದೂ ವಿದ್ಯೆ ಇವನಿಗೆ ಎಳೆವೆಯಲ್ಲೇ ಒಲಿದಿತ್ತು. ಒಂಭತ್ತು ಜನ ಮಕ್ಕಳಲ್ಲಿ ಎಂಟನೆಯವನಾದ ರೊಮೆರೋನಿಗೆ ಚಿತ್ರ ಬಿಡಿಸಿ ಬಣ್ಣ ತುಂಬಲು ಬೇಕಾದ ಪರಿಕರಗಳೇ ಇರಲಿಲ್ಲ. ಹಳೆಯ ಪತ್ರಿಕೆಗಳು, ಇದ್ದಲಿನ ಚೂರು, ಕೈಗೆ ಸಿಕ್ಕಿದ ಬಳಪ, ಬಣ್ಣ ಬಳಸಿ ತನ್ನ ತಲೆಯಲ್ಲಿ ಕುಣಿಯುತ್ತಿದ್ದ ಚಿತ್ರಗಳಿಗೆಲ್ಲ ಬಣ್ಣ ತುಂಬುತ್ತಲೇ ಹೋದ.

ಅಮ್ಮನ ಸಂಸಾರ ನಿರ್ವಹಣೆಗೆ ಸಹಾಯ ಮಾಡಬೇಕೆಂಬ ಮನಸ್ಸಾಯಿತೋ ಏನೋ, ಒಮ್ಮೆ ತಾನು ಬಿಡಿಸಿದ ಹೂಗುಚ್ಛವೊಂದರ ಚಿತ್ರವನ್ನು ತನ್ನ ನೆರೆಮನೆಯವನಿಗೆ ಹತ್ತು ಡಾಲರ್‌ಗೆ ಮಾರಾಟ ಮಾಡಿದ. ಆಗ ಅವನ ವಯಸ್ಸು ಕೇವಲ ಹತ್ತು. ತನ್ನ ಹದಿನಾಲ್ಕನೇ ವಯಸ್ಸಿನಲ್ಲೇ ಅಮೆರಿಕನ್ ರಾಜ್ಯಗಳ ಒಕ್ಕೂಟವು ಆಯೋಜಿಸಿದ್ದ ಕಲಾಮೇಳದಲ್ಲಿ ಭಾಗವಹಿಸಿ ಗೌರವವನ್ನೂ ಪಡೆದ ಬ್ರಿಟ್ಟೋ ಓದಿನಲ್ಲಿ ಎಂದೂ ಹಿಂದೆ ಬೀಳಲಿಲ್ಲ. ಬಡತದಿಂದ ಮೇಲೆ ಬರಲು ಓದಿನ ಅವಶ್ಯಕತೆಯನ್ನು ಅರಿತಿದ್ದ ಬ್ರಿಟ್ಟೋ ಚೆನ್ನಾಗಿ ಓದಿ ವಕೀಲನೂ ಆದ. ಆದರೆ ಕೇವಲ ಎರಡು ವರ್ಷ ಆ ವೃತ್ತಿಯಲ್ಲಿದ್ದ ಅವನಿಗೆ ಬಹಳ ಬೇಗ ಅರಿವಾಗಿದ್ದು ಬಣ್ಣ ಹಾಗೂ ಕುಂಚಗಳೇ ತನ್ನ ಅಸ್ತಿತ್ವ ಎಂದು. ಕಲಾ ಜಗತ್ತಿಗೆ ಮರಳಿದ ಈ ದೈತ್ಯ ಪ್ರತಿಭೆ ನಂತರ ಹಿಂದಿರುಗಿ ನೋಡಲಿಲ್ಲ.

1983ರಲ್ಲಿ ಬ್ರಿಟ್ಟೊ ಯುರೋಪ್‌ಗೆ ಹೋಗಿ ಪಿಕಾಸೊ ಹಾಗೂ ಮತಿಸ್ಸ್ ಎಂಬ ಇಬ್ಬರು ಮಹಾನ್ ಕಲಾವಿದರ ಚಿತ್ರಗಳನ್ನು ಅಭ್ಯಸಿಸಿದ. ಇವರಿಬ್ಬರ ಶೈಲಿಯನ್ನು ತನ್ನ ಕಲೆಯಲ್ಲಿ ಅಳವಡಿಸಿಕೊಂಡ ಬ್ರಿಟ್ಟೋ ತನ್ನ ಕಲೆಯನ್ನು ಜರ್ಮನಿ ಹಾಗೂ ಇಂಗ್ಲೆಂಡ್ ನಲ್ಲಿ ಪ್ರದರ್ಶಿಸಿದ. 1988 ರಲ್ಲಿ ಅಮೆರಿಕದ ಮಯಾಮಿಗೆ ತೆರಳಿದ ಈ ಯುವ ಕಲಾವಿದ ಅಲ್ಲಿಯೇ ತನ್ನ ಕಲಾ ಕೃಷಿ ಮುಂದುವರೆಸಿದ.

ಆಬ್ಸಲ್ಯೂಟ್ ವೋಡ್ಕಾ ದವರು ಆಯೋಜಿಸಿದ್ದ 'ಆಬ್ಸಲ್ಯೂಟ್ ಆರ್ಟ್' ಎಂಬ ಕಲಾ ಪ್ರದರ್ಶನದಲ್ಲಿ ಇಬ್ಬರು ದಿಗ್ಗಜ ಕಲಾವಿದರಾದ ಆಂಡಿ ವರಾಲ್ ಹಾಗೂ ಕೀತ್ ಹೇರಿಂಗ್ ಜೊತೆ ಈ ಯುವ ಪ್ರತಿಭೆಗೂ ಅವಕಾಶ ಸಿಕ್ಕಿತು. ಫಿಫಾ ವರ್ಲ್ಡ್ ಕಪ್, ಡಿಸ್ನಿ ಸಿನೆಮಾ, ಏವಿಯನ್, ಸೂಪರ್ ಬೌಲ್, ಫೆರಾರಿ, ಆಡಿ ಮುಂತಾದ ದೈತ್ಯ ಕಂಪೆನಿಗಳು, ಕ್ರೀಡಾ ಒಕ್ಕೂಟಗಳು ಇವನಿಂದ ಜಾಹೀರಾತು ಚಿತ್ರ, ಶಿಲ್ಪ ಮಾಡಿಸಿಕೊಳ್ಳಲು ಮುಗಿಬಿದ್ದವು. ಇವನ ಅಭೂತಪೂರ್ವ ಯಶಸ್ಸನ್ನು ಕಂಡು ಹುಟ್ಟೂರಾದ ಬ್ರೆಝಿಲ್ ನಲ್ಲಿ ಇವನ ಗೌರವಾರ್ಥ ವಿಶ್ವಪ್ರಸಿದ್ಧ ಬ್ರೆಝಿಲ್ ಕಾರ್ನಿವಲ್‌ನಲ್ಲಿ ಅವನನ್ನು ಸನ್ಮಾನಿಸಿ ಇಡೀ ಉತ್ಸವವನ್ನು ಅವನ ಚಿತ್ರಗಳ ಥೀಮ್‌ನಂತೆ ಆಯೋಜಿಸಿದರು. ಈ ಉತ್ಸವದಲ್ಲಿ ಪಾಲ್ಗೊಂಡು ಖುಶಿಪಟ್ಟ ಕಲಾವಿದ ಬ್ರಿಟ್ಟೋ ತನ್ನ ದೇಶ ಬ್ರೆಝಿಲ್‌ಗಾಗಿ ಸದಾ ಮಿಡಿಯುತ್ತಾನೆ. ಅಲ್ಲಿನ ಮಳೆಕಾಡುಗಳ ಸಂರಕ್ಷಣೆಗಾಗಿ, ಏಡ್ಸ್ ಖಾಯಿಲೆ ಬಗ್ಗೆ ಸಂಶೋಧನೆಗಾಗಿ, ಬಡಮಕ್ಕಳ, ಶಿಕ್ಷಣ, ಆರೋಗ್ಯ, ಕಲ್ಯಾಣಕ್ಕಾಗಿ ತನ್ನ ಅಪಾರವಾದ ಸಂಪತ್ತನ್ನು ದೇಣಿಗೆಯಾಗಿ ಕೊಡುತ್ತಿದ್ದಾನೆ.



ಕ್ಯೂಬಿಸಮ್, ಗ್ರಾಫಿಟಿ ಹಾಗೂ ಪಾಪ್ ಎಂಬ ಮೂರು ವಿಧದ ಕಲಾ ಪ್ರಕಾರಗಳನ್ನು ಒಳಗೊಂಡ ಇವನ ಚಿತ್ರಗಳನ್ನು ನೋಡುವುದೆಂದರೆ ವಿಶೇಷ ಅನುಭವ. ಸಂತೋಷ, ಸಂಭ್ರಮ, ಆಶಾವಾದ ಹೊರಹೊಮ್ಮಿಸುವ ಇವನ ಚಿತ್ರಗಳು, ಶಿಲ್ಪಗಳು, ಮಕ್ಕಳಿಂದ ಮುದುಕರವರೆಗೆ, ಶಾಲೆಯಿಂದ, ಆಸ್ಪತ್ರೆಯವರೆಗೆ ಎಲ್ಲರಿಗೂ, ಎಲ್ಲ ಆವರಣಕ್ಕೂ ಒಪ್ಪುವ ಬಲು ಸರಳ, ಸುಂದರ ಪ್ರತಿಮೆಗಳು.

ನನಗನಿಸುವುದೆಂದರೆ ಇಂತಹ ಸುಂದರ ಕಲೆಯ ಸೃಷ್ಟಿಕರ್ತನ ಮನಸ್ಸೂ ಅಷ್ಟೇ ಕೋಮಲವಾಗಿರಬೇಕೆಂದು. ಅದು ನಿಜವೂ ಹೌದು. ಯಾಕೆಂದರೆ ಇವನ ಮಾತಿನಲ್ಲೇ ಹೇಳುವುದಾದರೆ 'ನನ್ನ ಕಲೆಯ ಉದ್ದೇಶವೇ ನೋಡುಗನನ್ನು ಸಂತೋಷಗೊಳಿಸುವುದು. ಅವರಿಗೆ ಕಷ್ಟಗಳನ್ನು ಮರೆಸಿ, ಹೊಸ ಚೈತನ್ಯ ತುಂಬಿಸುವುದು, ಸಮಾಜದಲ್ಲಿ ನೊಂದವರಿಗೆ ಸಾಂತ್ವನ ಹೇಳುವುದೇ ನನ್ನ ಕಲೆಯ ಉದ್ದೇಶ.'

ಬಡ ಮಕ್ಕಳಿಗೆ ಸಹಾಯ

ಈತ ರಚಿಸಿದ ಆಳೆತ್ತರದ ಶಿಲ್ಪಗಳು ಲಂಡನ್‌ನ ಹೈಡ್ ಪಾರ್ಕಿನಲ್ಲಿ, ಓ2 ಡೋಮ್ ಜರ್ಮನಿಯಲ್ಲಿ, ನ್ಯೂಯಾರ್ಕಿನ ಜೆ ಎಫ್ ಕೆ ವಿಮಾನ ನಿಲ್ದಾಣದಲ್ಲಿ ಹೀಗೆ ಅನೇಕ ಸ್ಥಳಗಳಲ್ಲಿ ಸ್ಥಾನ ಪಡೆದಿವೆ.

ಹುಡುಗನಾಗಿದ್ದಾಗ ಬಡತನದ ಬದುಕಿನಲ್ಲಿ ಅವನು ಸುತ್ತಮುತ್ತಲೂ ಕಷ್ಟಯನ್ನೇ ಕಂಡುಂಡವನು. ಹಾಗಾಗಿ ಬಡವರಿಗಾಗಿ ಅವನ ಹೃದಯ ಸದಾ ಮಿಡಿಯುತ್ತದೆ. ಬ್ರಿಟ್ಟೋ ಫೌಂಡೇಶನ್ ಬಡಮಕ್ಕಳ ಕಲ್ಯಾಣಕ್ಕಾಗಿಯೇ ಸ್ಥಾಪಿಸಲ್ಪಟ್ಟಿದೆ. ಅಮೆರಿಕನ್ ರೆಡ್ ಕ್ರಾಸ್, ಸೈಂಟ್ ಜೂಡ್ ಮಕ್ಕಳ ಆಸ್ಪತ್ರೆ, ಮೊದಲಾದ ಸಂಘ, ಸಂಸ್ಥೆಗಳಲ್ಲಿ ಕೇವಲ ತನ್ನ ಹಣವಷ್ಟೇ ಅಲ್ಲದೆ ಸಮಯವನ್ನೂ, ಕಲೆಯನ್ನೂ ಧಾರೆಯೆರೆಯುತ್ತಾನೆ ಈ ಜನಾನುರಾಗಿ ಕಲಾವಿದ.

ಪುರಸ್ಕಾರಗಳು

ಬ್ರೆಝಿಲ್ ಕಾರ್ನಿವಲ್ ನ ರಾಯಭಾರಿ ಕಲಾವಿದ, ಸ್ವಿಟ್ಜರ್ಲೆಂಡ್ ನ ಮಾಂಟ್ರೆಕ್ ಜ್ಯಾಝ್ ಫೆಸ್ಟಿವಲ್ ನ ರಾಯಭಾರಿ ಕಲಾವಿದ, ಸಿ ಎನ್ ಎನ್ ಸುದ್ದಿ ಸಂಸ್ಥೆಯ ಐಕಾನ್ ಗೌರವ, ರಾಯಲ್ ಕೆರಿಬಿಯನ್ ಕ್ರೂಸ್ ಶಿಪ್ ನಲ್ಲಿ ಬ್ರಿಟ್ಟೋ ಥೀಮ್ ಸ್ಟೋರ್, ಇಸ್ರೇಲ್ ಶೇಬಾ ಮೆಡಿಕಲ್ ಸೆಂಟರ್ ನ ಎದುರು ಬ್ರಿಟ್ಟೋನ ಶಿಲ್ಪದ ಪ್ರತಿಷ್ಠಾಪನೆ, ಟೈಮ್ ವಾರ್ನರ್ ಸೆಂಟರ್ ನ್ಯೂಯಾರ್ಕ್ ನಲ್ಲಿ ಬ್ರಿಟ್ಟೋನ ಫ್ರೆಂಡ್ ಶಿಪ್ ಕರಡಿಯ ಶಿಲ್ಪ , ಇನ್ನೂ ಹಲವು ದೇಶಗಳಲ್ಲಿ ಈ ಮಹಾನ್ ಚಿತ್ರಗಳು ಪ್ರದರ್ಶನಗೊಂಡಿವೆ.

ಬೇಂದ್ರೆ, ನನಗೆಂದೇ ಬರೆದ ಕವಿತೆ!

» ಗೊರೂರು ಶಿವೇಶ್



ಮಳೆಯ ನೆನೆಸುತ್ತಾ ಬೇಂದ್ರೆಯವರು ಬರೆದ ಈ ಕವಿತೆಯ ಸೊಗಸು, ಭಾವವು, ಮಳೆ ಬೀಳುವ ಈ ದಿನಗಳಲ್ಲಿ ನಮಗೆಂದೇ ಬರೆದದ್ದಿರಬೇಕು ಎಂದು ನಾವು ಸಂಭ್ರಮಿಸುವ ಪರಿಗೆ ಏನೆನ್ನೋಣ?

ಎಸ್ ಎಸ್ ಎಲ್ ಸಿ ನಂತರ ಸುಮಾರು 15 ವರ್ಷಗಳ ಕಾಲ ಉನ್ನತ ವಿದ್ಯಾಭ್ಯಾಸ – ಉದ್ಯೋಗ ಎಂದು ಊರಿನಿಂದ ಹೊರಗೆ ಕಳೆದು, ಊರಿಗೆ ಅಂಟಿಯೂ ಅಂಟದಂತಿದ್ದ ನನಗೆ ಊರಿನಲ್ಲೇ ಕರ್ತವ್ಯ ವಹಿಸುವ ಅವಕಾಶ ಬಂದಿತು. ಅದೇ ಸಂದರ್ಭದಲ್ಲಿ 'ವಾರ', ಗುತ್ತಿಗೆಗೆ ಬೇರೆಯವರ ಗದ್ದೆ ಉಳುಮೆ ಮಾಡುತ್ತಿದ್ದ ಅಣ್ಣ ತನ್ನ ಬಹುದಿನದ ಆಸೆಯಂತೆ ಸ್ವಂತ ಗದ್ದೆಯನ್ನು ಕೊಂಡು ಉಳುಮೆ ಮಾಡುತ್ತಿದ್ದ ಸಂದರ್ಭ. ಆಸಕ್ತಿ ಇಲ್ಲದಿದ್ದರೂ ಕೆಲವು ಸಮಯದಲ್ಲಿ ಅನಿವಾರ್ಯವಾಗಿ ಗದ್ದೆ ಕಡೆ ಹೋಗುತ್ತಿದ್ದ ನಾವು ಗದ್ದೆ ಉಳುವ, ಪಟ ಮಾಡುವ, ಬಿತ್ತನೆಯ ಸಸಿಗೆ ದನಗಳು ಬೀಳದಂತೆ ತಂತಿ ಬೇಲಿ ಹಾಕುವ ಕಾಯಕಕ್ಕೆ ಸಾಕ್ಷಿಯಾಗುವ ಒಮ್ಮೊಮ್ಮೆ ಜೊತೆಯಾಗುವ ಅನಿವಾರ್ಯತೆ.

ಗದ್ದೆ ನಾಟಿ ಸಂದರ್ಭ. ನಮ್ಮ ಗದ್ದೆಗೆ ಎದುರಾಗಿ ಹೇಮಾವತಿ ಅಣೆಕಟ್ಟು. ಜುಲೈ ಅಂತ್ಯ ಅಥವಾ ಅಗಸ್ಟ್ ಮೊದಲ ವಾರದಲ್ಲಿ ಈ ಬಿತ್ತನೆ ಕ್ರಿಯೆ ನಡೆಯುವ ಸಮಯದಲ್ಲಿ ಅಣೆಕಟ್ಟೆ ತುಂಬಿ ಹೆಚ್ಚುವರಿ ನೀರನ್ನು ಬಿಟ್ಟಾಗ, ಒಮ್ಮೆಲೆ ಹೊರ ನುಗ್ಗಿ ಧುಮುಕಿದ ಪ್ರವಾಹ, ಮೇಲೆ ಚಿಮ್ಮಿದಂತೆ ಅದರ ಹನಿಗಳು ಡ್ಯಾಮಿನಿಂದ ಸಿಡಿದು ಬಂದು, ಸುಮಾರು ಒಂದು ಕಿಲೋಮೀಟರ್ ದೂರದಲ್ಲಿದ್ದ ನಮ್ಮ ಗದ್ದೆಯ ಮೇಲೆ ಬೀಳುತ್ತಿದ್ದವು.

ಆಗ ಆಕಸ್ಮಿಕವಂತೆ ನೆನಪಾಗುತ್ತಿದ್ದುದು ಬೇಂದ್ರೆಯವರ 'ಬಾರೋ ಸಾಧನಕೇರಿಗೆ' ಗೀತೆಯ 'ಮಳೆಯು ಎಳೆಯುವ ತೇರಿಗೆ' ಸಾಲು. 14 ವರ್ಷಗಳ ಕಾಲ ಧಾರವಾಡದಿಂದ ದೂರವಿದ್ದ ಬೇಂದ್ರೆಯವರು ಪುಣೆಯ ಅಧ್ಯಾಪಕ ವೃತ್ತಿಯನ್ನು ಬಿಟ್ಟು ಊರಿಗೆ ಬಂದ ಸಂದರ್ಭದಲ್ಲಿ ರಚಿಸಿದ ಕವಿತೆ ಇದಾಗಿದೆ ಎಂದು ಹೇಳಲಾಗುತ್ತದೆ. ಬಹಳ ವರ್ಷಗಳ ನಂತರ ಊರಿಗೆ ಬಂದಾಗ ಆ ಊರಿನ ಸೊಬಗಿನ ಸೆಳೆತ, ಊರಿಗೆ ಹಿಂತಿರುಗಿ ಬಂದಾಗ ಅನುಭವಿಸಿದ ಧನ್ಯತೆಯು ಕವಿತೆಯಾಗಿ ಮೂಡಿದೆ. ಅಂತದ್ದೇ ಭಾವ ನನ್ನಲ್ಲಿ ಅನುರಣಿಸಲು ಕಾರಣ ಪ್ರತಿ ವರ್ಷ ರಥಸಪ್ತಮಿಯಂದು ನಮ್ಮೂರಿನಲ್ಲಿ ಎಳೆಯುತ್ತಿದ್ದ ತೇರು. ಚಳಿಗಾಲ ಮುಗಿಯುತ್ತಾ ವಸಂತಕಾಲದ ಆಗಮನದ ಮುನ್ನ ಸ್ವಾಮಿಯ ರಥೋತ್ಸವ. ಎಂತಹ ಸಾದೃಶ್ಯದ ಕಲ್ಪನೆ–

ಬಾರೊ ಸಾಧನಕೇರಿಗೆ ।
ಮರಳಿ ನಿನ್ನೀ ಊರಿಗೆ ॥
ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಸೇರಿದೆ ಊರಿಗೆ
ಹಸಿರು ಚಾಚಿದೆ ದಾರಿಗೆ
ನಂದನದ ತುಣುಕೊಂದು ಬಿದ್ದಿದೆ
ನೋಟ ಸೇರದು ಯಾರಿಗೆ? ॥ ಬಾರೊ॥

ಒಂದೆಡೆ ಹೇಮಾವತಿ ನದಿ, ಮತ್ತೊಂದೆಡೆ ಚಂಗರವಳ್ಳಿ ಕಾಲುವೆ ಊರನ್ನು ಬಳಸಿ ಹರಿಯುತ್ತಿರಲು ನಡುವೆ ನಮ್ಮ ಊರು ದ್ವೀಪದ ರೀತಿ ಕಾಣುತ್ತಿದೆ. ಕಲ್ಲು ಅಣೆಕಟ್ಟೆಯ ಪಕ್ಕದ ಮಣ್ಣಿನ ಏರಿ ಹಸಿರಾಗಿ ಕಂಗೊಳಿಸುತ್ತಿದೆ. ಅಣೆಕಟ್ಟೆಯ ಮುಂಭಾಗಕ್ಕೆ ಉದ್ಯಾನಕ್ಕೆ ಮೀಸಲಾದ ಇಡೀ ವಲಯವು ಹಸಿರಮುಕ್ಕಳಿಸುತ್ತಿರಲು 'ಮಹಾ ಕವಿ ಬೇಂದ್ರೆಯವರು ಈ ಕವಿತೆಯನ್ನು ನನಗಾಗಿ ಬರೆದರೇನು!' ಎನ್ನಿಸಲಾರಂಭಿಸಿತು. ಕವಿತೆಯ ಕಡೆ ಸಾಲುಗಳು ಹೀಗಿವೆ:

ಹೇಳು ಗೆಳೆಯಾ ಬೇರೆ ಎಲ್ಲೀ
ತೆರೆದ ನೋಟವ ನೋಡಿದೆ?

ನಿಜ .ದೇವರು ನಮಗೆ ಹೊರಗಣ್ಣನ್ನು ನೀಡಿದರೆ ಕವಿ ನಮ್ಮ ಒಳಗಣ್ಣು ತೆರೆಯುತ್ತಾನೆ.

ಬುದ್ಧಿ ಇರುವುದು ತಲೆಯಲ್ಲಿ ಹೊರತು ತಲೆಕೂದಲಿನಲ್ಲಿ ಅಲ್ಲ!

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಕೆ.ಜಿ.ವಿಶ್ವನಾಥ, ಮದ್ದೂರು

● ಭಟ್ರೇ, ನಾನು ಪದವೀಧರ. ಖಾಸಗಿ ಕಂಪನಿಯಲ್ಲಿ ನೌಕರ. ನಾನು ಕಳೆದ ಎರಡು ವರ್ಷಗಳಿಂದ ಕೂದಲನ್ನು ಕತ್ತರಿಸಿಕೊಂಡಿಲ್ಲ. ಇದೇ ಕಾರಣಕ್ಕೆ ನನ್ನ ನೌಕರಿಗೆ ಸಂಚಕಾರ ಬಂದಿದೆ. ಆದರೆ ನನಗೆ ಕೂದಲನ್ನು ಕತ್ತರಿಸಲು ಮನಸ್ಸಿಲ್ಲ. ಇನ್ನು ಒಂದು ತಿಂಗಳೊಳಗೆ ಕೂದಲನ್ನು ಕತ್ತರಿಸಿಕೊಂಡು ಬರದಿದ್ದರೆ ನೌಕರಿಯಿಂದ ತೆಗೆದು ಹಾಕುವುದಾಗಿ ಹೇಳಿದ್ದಾರೆ. ನಾನೇನು ಮಾಡಲಿ?

– ವಿಶ್ವನಾಥ ಅವರೇ, ಕೂದಲನ್ನು ಬಿಡುವುದು ಅಥವಾ ಕತ್ತರಿಸಿಕೊಳ್ಳದಿರುವುದು ಶ್ರೇಷ್ಠತೆಯಲ್ಲ. ತಲೆಗೂದಲು ಎಷ್ಟಿರಬೇಕೋ ಅಷ್ಟಿರಬೇಕು. ಮೈತುಂಬ ಕೂದಲಿದ್ದರೆ ಕರಡಿಗಷ್ಟೇ ಶೋಭೆ. ತಲೆಗೂದಲು ಬಿಡುವುದು ಅಥವಾ ಕತ್ತರಿಸಿಕೊಳ್ಳುವುದು ನಿಮ್ಮ ವೈಯಕ್ತಿಕ ವಿಷಯವೇ ಇರಬಹುದು. ಆದರೆ ನೀವು ಒಂದು ಸಂಸ್ಥೆಯಲ್ಲಿ ನೌಕರಿಗಿದ್ದರೆ, ಅಲ್ಲಿನ ಕೆಲವು ನಿಬಂಧನೆಗಳಿಗೆ ಒಳಪಡಬೇಕಾಗುತ್ತದೆ. ನಾನು ಯುನಿಫಾರ್ಮ್ ಧರಿಸುವುದಿಲ್ಲ, ಮನಸ್ಸಿಗೆ ಬಂದ ಡ್ರೆಸ್ ಧರಿಸುತ್ತೇನೆ ಎಂದು ಹೇಳಲಾಗುವುದಿಲ್ಲ.

ಕೆಲವು ವರ್ಷಗಳ ಹಿಂದೆ, ಭಾರತ ಬ್ಲೇಡ್ ಕಂಪನಿಯಲ್ಲಿ ಗಡ್ಡ ಬಿಡಲು ಅವಕಾಶವಿರಲಿಲ್ಲ. ಇದನ್ನು ವಿರೋಧಿಸಿ ಅಲ್ಲಿನ ನೌಕರರು ಕೋರ್ಟಿಗೆ ಹೋಗಿದ್ದರು. ಈ ವಿಷಯದಲ್ಲಿ ತಾನು ಮಧ್ಯಪ್ರವೇಶಿಸುವುದಿಲ್ಲ ಎಂದು ಕೋರ್ಟ್ ಹೇಳಿತ್ತು. ಕೆಲವು ಸಂಸ್ಥೆಗಳಲ್ಲಿ ಮಿಲಿಟರಿ ಕಟ್ ಕಡ್ಡಾಯ. ಅದು ಆಯಾ ಸಂಸ್ಥೆಗೆ ಸೇರಿದ್ದು. ಇನ್ನು ಕೆಲವು ಸಂಸ್ಥೆಗಳು ನೀವು ಸಿನಿಮಾ ಸಂಗೀತ ನಿರ್ದೇಶಕ ಗುರುಕಿರಣ್ ಥರ ತಲೆಗೂದಲು ಬಿಟ್ಟರೂ ಏನೂ ಹೇಳುವುದಿಲ್ಲ.

I'm a queen, my hair is my crown ಎಂದು ಹುಡುಗಿಯರು ಹೇಳಿದರೆ ಪರವಾಗಿಲ್ಲ. ಗಂಡಸರಿಗೆ ತಲೆಗೂದಲು ಆಭರಣವಲ್ಲ. ಹೆಂಗಸರಿಗೆ ತಲೆಗೂದಲು ಉದ್ದವಿದ್ದಷ್ಟೂ ಅಂದವಂತೆ. ಈ ಮಾತು ಗಂಡಸರಿಗೆ ಅನ್ವಯಿಸುವುದಿಲ್ಲ. ತಮ್ಮ ತಲೆಗೂದಲು ಅಂದವನ್ನು ಹೆಚ್ಚಿಸುತ್ತವೆ ಎಂದು ಗಂಡಸರು ಭಾವಿಸಿದರೆ, ಅದು ಎಷ್ಟು ಚಿಕ್ಕದಿರಬೇಕು ಎಂದು ನಿರ್ಧರಿಸಬೇಕಂತೆ. ನಿಮ್ಮ ತಲೆಗೂದಲಿನ ಉದ್ದ ನಿಮ್ಮ ನೌಕರಿ, ಪದೋನ್ನತಿ ಅಥವಾ ಭವಿಷ್ಯವನ್ನು ನಿರ್ಧರಿಸಬಾರದು. ಅದು ನಿಮ್ಮ ನೌಕರಿಗೆ ಸಂಚಕಾರವನ್ನೂ ತರುವಂತಾಗಬಾರದು. ಬುದ್ಧಿ ಇರುವುದು ತಲೆಯಲ್ಲಿಯೇ ಹೊರತು ತಲೆಗೂದಲಿನಲ್ಲಿ ಅಲ್ಲ. ಹಣ್ಣೆಲೆಯಂತೆ ಒಂದು ದಿನ ತಲೆಗೂದಲೂ ಸಹ ಉದುರಿ ಹೋಗುತ್ತದೆ. ಐನ್‌ಸ್ಟೈನ್, ಕಾರ್ಲ್ ಮಾರ್ಕ್ಸ್ ಕೂದಲು ಬಿಟ್ಟರೆ ಚೆಂದ. ಅವರನ್ನು ಅನುಕರಿಸ ಹೊರಟರೆ ಅದು ಆರ್.ಜಿ.ಹಳ್ಳಿ (ರಾಮಗೊಂಡನಹಳ್ಳಿ) ನಾಗರಾಜನ ತದ್ರೂಪ! Happiness is a new haircut ಎಂಬುದು ಗೊತ್ತಿರಲಿ.

ಸುಧೀರ ಆಚಾರ್ಯ, ಬೆಳಗಾವಿ

● ಭಟ್ರೇ, ನಾನು ನನ್ನ ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡು ಕಳೆದ ಎರಡು ವರ್ಷಗಳಿಂದ ಕಾಲೇಜಿಗೆ ಹೋಗುತ್ತಿದ್ದೇನೆ. ಫೈನಲ್ ವರ್ಷದಲ್ಲಿದ್ದೇನೆ. ನನ್ನನ್ನು ಹಾಸ್ಟೆಲ್‌ನಲ್ಲಿ ಬಿಡಲು ನನ್ನ ತಂದೆ-ತಾಯಿಗೆ ಮನಸ್ಸಿಲ್ಲ. ಆದರೆ ಸಂಬಂಧಿಕರ ಮನೆಯಲ್ಲಿ ಇರುವುದು ನನಗೆ ಬಹಳ ಹಿಂಸೆ ಆಗುತ್ತಿದೆ. ಈ ವಿಷಯದಲ್ಲಿ ನಾನು ಏನೇ ಹೇಳಿದರೂ ಅವರು ಕೇಳುತ್ತಿಲ್ಲ. ಮುಂದಿನ ಹತ್ತು ತಿಂಗಳು ಕಳೆಯುವುದು ಹೇಗೋ ತಿಳಿಯುತ್ತಿಲ್ಲ.

– ಸುಧೀರ ಅವರೇ, ಇಂಥ ಸಣ್ಣ ವಿಷಯಕ್ಕೆ ನೀವು ಅಧೀರರಾದರೆ ಹೇಗೆ? ನೀವು ನಿಮ್ಮ ಸಂಬಂಧಿಕರ ಮನೆಯಲ್ಲಿ ಉಳಿಯುವಂಥ ಸಂದರ್ಭ ಹೇಗೆ ಬಂತು ಎಂಬುದನ್ನು ತಿಳಿಸಬೇಕಿತ್ತು, ಇರಲಿ. ನೀವು ಈಗಾಗಲೇ ಎರಡು ವರ್ಷಗಳನ್ನು ನಿಮ್ಮ ಸಂಬಂಧಿಕರ ಮನೆಯಲ್ಲಿ ಕಳೆದಿದ್ದೀರಿ. ಇನ್ನು ಹತ್ತು ತಿಂಗಳು ಕಳೆದರೆ, ನಿಮ್ಮ ಕಾಲೇಜು ವಿದ್ಯಾಭ್ಯಾಸ ಮುಗಿಯುತ್ತದೆ. ಮಧ್ಯದಲ್ಲಿ ಅಲ್ಲಿಂದ ಬಿಟ್ಟು ಬಂದರೆ, ತಪ್ಪು ಭಾವನೆ ಮೂಡಲು ಕಾರಣವಾಗಬಹುದು ಎಂಬ ಕಾರಣಕ್ಕೆ ಅಲ್ಲಿಯೇ ಉಳಿಯುವಂತೆ ನಿಮ್ಮ ತಂದೆ-ತಾಯಿ ಒತ್ತಾಯಿಸುತ್ತಿರಬಹುದು. ಬೇರೆಯವರ ಮನೆಯಲ್ಲಿ ಉಳಿಯುವುದು ಸುಲಭವೇನಲ್ಲ. ನಮಗೆ ಅಲ್ಲಿ ಸಂಪೂರ್ಣ ಸ್ವಾತಂತ್ರ್ಯ ಇರುವುದಿಲ್ಲ. ಪ್ರತಿಯೊಂದಕ್ಕೂ ಆ ಮನೆಯವರನ್ನು ಕೇಳಬೇಕಾಗುತ್ತದೆ, ಪರಾಧೀನರಾಗಿರಬೇಕಾಗುತ್ತದೆ.

ಆದರೆ ಇದು ನಿಮ್ಮ ಬದುಕಿಗೆ ಉತ್ತಮ ಪಾಠವೂ ಹೌದು. ಪರಾಧೀನರಾಗಿ ಬಾಳ್ವೆ ನಡೆಸುವ ಅವಕಾಶ ಅಂಬಾನಿ, ಅದಾನಿ ಮಕ್ಕಳಿಗೆ ಸಿಗುವುದಿಲ್ಲ. ಆ ಅನುಭವವೇನು ಎಂಬುದು ಅವರ ಮಕ್ಕಳಿಗೆ ಜೀವನದಲ್ಲಿ ಆಗುವುದೇ ಇಲ್ಲ. ಆದರೆ ಆ ಅವಕಾಶ ನಿಮಗೆ ಸಿಕ್ಕಿದೆ. ಇದನ್ನು ಒಂದು ಜೀವನ ಪಾಠವಾಗಿ ಪರಿಗಣಿಸಿ. ಅಷ್ಟಕ್ಕೂ ನೀವು ನಿಮ್ಮ ಸಂಬಂಧಿಕರ ಮನೆಯಲ್ಲಿ ಜೀವನಪೂರ್ತಿ ಇರುತ್ತಿಲ್ಲವಲ್ಲ. ಇನ್ನು ಹತ್ತು ತಿಂಗಳು ಮಾತ್ರ.

ಇಡೀ ದಿನವನ್ನು ಕಾಲೇಜು, ಲೈಬ್ರರಿಯಲ್ಲಿ ಕಳೆದು ರಾತ್ರಿ ಮಲಗಲು ಮಾತ್ರ ನಿಮ್ಮ ಸಂಬಂಧಿಕರ ಮನೆಗೆ ಹೋಗಬಹುದಲ್ಲ? ನಿಮ್ಮ ಆದ್ಯತೆ ಕಾಲೇಜು, ಕ್ಲಾಸು, ಓದು, ಉತ್ತಮ ಅಂಕವಾದರೆ, ಉಳಿದುದೆಲ್ಲ ನಗಣ್ಯ. ಸಂಬಂಧಿಕರ ಮನೆಯಲ್ಲಿ ಉಳಿದಾಗ ಆಗುವ ಅನುಭವ ನಿಮಗೆ ಬಾಳಬುತ್ತಿಯಾಗಬಹುದು. ಇದು ಸಹಬಾಳ್ವೆ, ಸಾಮರಸ್ಯ, ಹೊಂದಾಣಿಕೆ, ಕೂಡು ಜೀವನವನ್ನು ಕಲಿಸುತ್ತದೆ. ನೀವು ನಿಮ್ಮ ಮನೆಯಲ್ಲಿ ತಂದೆ-ತಾಯಿಯೊಂದಿಗೆ ಇದ್ದಿದ್ದರೆ, ಆಗ ಕಲಿಯುವುದಕ್ಕಿಂತ ಹೆಚ್ಚಿನ ಅನುಭವ ಈಗ ಸಂಬಂಧಿಕರ ಮನೆಯಲ್ಲಿ ಉಳಿದಾಗ ಆಗುತ್ತಿದೆ. ಪರಾಧೀನರಾಗಿದ್ದಾಗ ಮಾತ್ರ ಸ್ವಾತಂತ್ರ್ಯದ ಮಹತ್ವ ತಿಳಿಯಲು ಸಾಧ್ಯ. ನಿಮ್ಮ ಮನೆಯಲ್ಲಿ ಇರುವುದಕ್ಕಿಂತ ಹೆಚ್ಚಿನ ಅನುಭವ, ಸಂಬಂಧಿಕರ ಮನೆಯಲ್ಲಿ ಆಗುತ್ತದೆ.

ನೋಡ್ತಾ ನೋಡ್ತಾ ಇರುವಂತೆ ಹತ್ತು ತಿಂಗಳು ಕಳೆದು ಹೋಗುತ್ತದೆ. ಅದೇ ರೀತಿ ಎರಡು ವರ್ಷಗಳನ್ನು ಈಗಾಗಲೇ ಅಲ್ಲಿ ಕಳೆದಿದ್ದೀರಿ. ಮದುವೆಯಾದ ತಪ್ಪಿಗೆ ಕೆಲ ಗಂಡಸರು ತಮ್ಮ ಇಡೀ ಜೀವನವನ್ನು ಮಾವನ ಮನೆಯಲ್ಲಿ ವ್ಯಕ್ತಿತ್ವಹೀನರಾಗಿ ಕಳೆಯುತ್ತಾರಂತೆ. ಅದಕ್ಕಿಂತ ನೀವೇ ವಾಸಿ!

ವಿದ್ಯಾ ಹೆಗಡೆ (ಇಮೇಲ್ ಮೂಲಕ)

● ಭಟ್ರೇ, ನನಗೆ ಹೆಣ್ಣು ಮಗಳು ಹುಟ್ಟಿ ಏಳೂವರೆ ತಿಂಗಳುಗಳಾದವು. ಇನ್ನೂ ಹೆಸರಿಟ್ಟಿಲ್ಲ. ಎಲ್ಲರೂ ಮನಸ್ಸಿಗೆ ಬಂದ ಹೆಸರಿನಿಂದ ಕರೆಯುತ್ತಿದ್ದಾರೆ. ಒಳ್ಳೆಯ ಹೆಸರನ್ನು ಹುಡುಕಿ ಹುಡುಕಿ ಸೋತು ಹೋಗಿದ್ದೇನೆ. ನೀವಾದರೂ ಒಂದು ಒಳ್ಳೆಯ ಹೆಸರನ್ನು ಸೂಚಿಸಬಾರದೇ?

– ವಿದ್ಯಾ ಅವರೇ, ಸಾಮಾನ್ಯವಾಗಿ ಈಗಿನ ಹೆಂಗಸರು ಗರ್ಭವತಿಯಾಗುತ್ತಿದಂತೆ, ನಾಲ್ಕು-ಐದನೇ ತಿಂಗಳಿಗೇ ಗಂಡಾದರೆ ಇದು, ಹೆಣ್ಣಾದರೆ ಇದು ಎಂದು ಹೆಸರನ್ನು ನಿರ್ಧರಿಸಿರುತ್ತಾರೆ. ಹುಟ್ಟುವ ತನಕ ಸಹ ಕಾಯುವುದಿಲ್ಲ. ಈಗಂತೂ ಸೀಮಂತದ ವೇಳೆ, ಬಂದವರಿಗೆಲ್ಲ ಚೀಟಿ ನೀಡಿ, ಹುಟ್ಟಲಿರುವ ಮಗುವಿಗೆ ಹೆಸರನ್ನು ಸೂಚಿಸಿ ಎಂದು ಹೇಳುತ್ತಾರೆ. ಜತೆಗೆ 'ಹೆಸರು ಸೂಚಿಸುವ ದಿನ' ಎಂದು ಸ್ನೇಹಿತರನ್ನೆಲ್ಲ ಕರೆದು ಪಾರ್ಟಿ ಮಾಡುತ್ತಾರೆ. ಹೀಗಿರುವಾಗ ನೀವು ಮಗು ಹುಟ್ಟಿ ಏಳೂವರೆ ತಿಂಗಳಾದರೂ ಹೆಸರಿಡದಿರುವುದು ಆಶ್ಚರ್ಯವೇ ಸರಿ.

ನೀವು ಹುಟ್ಟಿದ ಒಂದು ಮಗುವಿಗೆ ಹೆಸರಿಡಲು ಇಷ್ಟು ಕಷ್ಟಪಡುತ್ತಿದ್ದೀರಿ. ಮಗು ಹುಟ್ಟಿಸಲು ಇಷ್ಟು ಕಷ್ಟಪಟ್ಟಿರಲಿಲ್ಲವೇನೋ? ನನಗೆ ಆರು ಅಕ್ಕ-ತಂಗಿಯರು, ಒಬ್ಬ ತಮ್ಮ. ನಮ್ಮ ತಂದೆ-ತಾಯಿಗೆ ಹೆಸರಿಡುವುದು ಒಂದು ಸಮಸ್ಯೆಯೇ ಆಗಲಿಲ್ಲ. ಇನ್ನು ನಾಲ್ಕು ಮಕ್ಕಳು ಹುಟ್ಟಿದ್ದರೂ ಹೆಸರಿಡುವುದು ಅವರಿಗೆ ಸಮಸ್ಯೆ ಆಗುತ್ತಿರಲಿಲ್ಲ.

ವಿದ್ಯಾ ಅವರೇ, ಹುಟ್ಟಿಸಿದ ಮಗುವಿಗೆ ಹೆಸರಿಡಬೇಕಾದವರು ಹುಟ್ಟಿಸಿದ ಅಪ್ಪ-ಅಮ್ಮ. ಅದು ಬಿಟ್ಟು ಆ ಅಧಿಕಾರವನ್ನು ಬೇರೆಯವರಿಗೆ ಕೊಡಬೇಡಿ. ಅಪ್ಪ-ಅಮ್ಮ ಏನೇ ಹೆಸರಿಟ್ಟರೂ ಅದು ಚೆನ್ನಾಗಿಯೇ ಇರುತ್ತದೆ. ಕೆಟ್ಟ ಹೆಸರು ಎಂಬುದು ಇಲ್ಲ. ಎಲ್ಲ ಹೆಸರುಗಳೂ ಒಳ್ಳೆಯವೇ. ಆ ಪೈಕಿ ಒಂದನ್ನು ಇಟ್ಟರಾಯಿತು. ಆದಷ್ಟು ಬೇಗ ಹೆಸರಿಡುವ ಶಾಸ್ತ್ರ ಮುಗಿಸಿ. ಮತ್ತೊಬ್ಬಳು ಬರುವ ದಿನವಾಯಿತು. ಅವಳಿಗೂ ಹೆಸರಿಡಬೇಕಲ್ಲ?

ವಿ.ಪೂರ್ಣಿಮಾ, (ಇಮೇಲ್ ಮೂಲಕ)

● ಭಟ್ರೇ, ಕಿರಣ್ ಉಪಾಧ್ಯಾಯ ಅವರು ನಿಮ್ಮ ಕುರಿತು ಬರೆದ 'ವಿಶ್ವತೋಮುಖ' ಪುಸ್ತಕವನ್ನು ಓದಿದೆ. ನೀವು ಬ್ರಾಂಡೆಡ್ ವಸ್ತುಗಳನ್ನು ಮಾತ್ರ ಬಳಸುತ್ತೀರಿ ಎಂದು ಅವರು ಬರೆದಿದ್ದಾರೆ. ಇದು ನಿಜವಾ?

– ಪೂರ್ಣಿಮಾ ಅವರೇ, 'ನಾನು ಬ್ರಾಂಡೆಡ್ ವಸ್ತುಗಳನ್ನು ಮಾತ್ರ ಬಳಸುತ್ತೇನೆ' ಎಂದು ಅವರು ಬರೆದಿರಲಿಕ್ಕಿಲ್ಲ. ಆದರೆ ಬ್ರಾಂಡೆಡ್ ವಸ್ತುಗಳೆಂದರೆ ಇಷ್ಟ ಎಂದು ಬರೆದಿರಬಹುದು. A brand is a voice and a product is a souvenir ಎಂಬ ಮಾತನ್ನು ಕೇಳಿರಬಹುದು. ಯಾವುದೇ ಬ್ರಾಂಡ್ ಇರಬಹುದು, ಅದು ಕೇವಲ ಹೆಸರಲ್ಲ. ಅದು ಒಂದಷ್ಟು ಮೌಲ್ಯ, ಆಶಯ, ಧೋರಣೆ, ಸಿದ್ಧಾಂತವನ್ನು ಪ್ರತಿನಿಧಿಸುತ್ತದೆ. ಪ್ರತಿ ಬ್ರಾಂಡೆಡ್ ವಸ್ತುವಿನ ಹಿಂದೆಯೂ ಒಂದು ಬಲವಾದ ಧ್ವನಿ ಇರುತ್ತದೆ. Branding is the art of differentiation. ಒಂದರಿಂದ ಮತ್ತೊಂದನ್ನು ಪ್ರತ್ಯೇಕಿಸಲು ಬ್ರಾಂಡಿಂಗ್ ಬೇಕೇ ಬೇಕು. ಇಲ್ಲದಿದ್ದರೆ ಎಲ್ಲವೂ ಗ್ಯಾಸ್ ಸಿಲಿಂಡರ್ ಥರಾನೇ ಕಾಣುತ್ತಿದ್ದವು.

ಬ್ರಾಂಡೆಡ್ ವಸ್ತುಗಳನ್ನು ಯಾಕೆ ಇಷ್ಟಪಡುತ್ತಾರೆ ಎನ್ನುವಾಗ, ಮಾರ್ಕೆಟಿಂಗ್ ಗುರುವೊಬ್ಬರು ಹೇಳಿದ Products are made in a factory, but brands are created in the mind ಎಂಬ ಮಾತಿನ ಮರ್ಮವನ್ನು ಅರಿಯಬೇಕು. ಒಂದು ಬ್ರಾಂಡ್‌ನ್ನು ಸೃಷ್ಟಿಸಲು ಮತ್ತು ಗ್ರಾಹಕರ ಮನಸಿನಲ್ಲಿ ಭದ್ರವಾಗಿ ಕುಳ್ಳಿರಿಸಲು ಬಹುದೊಡ್ಡ ಚಿಂತನೆ, ತಂತ್ರಗಾರಿಕೆ ನಡೆದಿರುತ್ತದೆ. ಅದಕ್ಕೆ ಸಾಕಷ್ಟು ಬುದ್ಧಿವಂತ ಮನಸ್ಸುಗಳು ಕೆಲಸ ಮಾಡಿರುತ್ತವೆ. ಹೀಗಾಗಿ ಪ್ರತಿ ಬ್ರಾಂಡೆಡ್ ವಸ್ತುವೂ ನಿರ್ದಿಷ್ಟ ಗುರುತು, ಮೌಲ್ಯವನ್ನು ಪ್ರತಿನಿಧಿಸುತ್ತದೆ. 'ರೇಮಾಂಡ್ಸ್' ಬಟ್ಟೆಯನ್ನು ಧರಿಸಿದರೆ, Complete Man ಎಂಬ ಭಾವನೆಯನ್ನು ಗಂಡಸರಲ್ಲಿ ಬಿತ್ತುವುದು ಸುಲಭವಲ್ಲ. ಅದರ ಹಿಂದೆ ಬಹು ದೊಡ್ಡ ಮಾನಸಿಕ ಕಸರತ್ತಿದೆ. ಮಾರ್ಕೆಟಿಂಗ್ ತಂತ್ರವಿದೆ. ಜತೆಯಲ್ಲಿ ಆ ವಸ್ತುವಿನ ಗುಣಮಟ್ಟವನ್ನು ಹೆಚ್ಚಿಸುವ ಮತ್ತು ಕಾಪಾಡುವ ಆಶಯ ಹಾಗೂ ಬದ್ಧತೆಯಿದೆ. ಹೀಗಾಗಿ ಬ್ರಾಂಡೆಡ್ ವಸ್ತುಗಳ ವಿಶ್ವಾಸಾರ್ಹತೆ, ಗುಣಮಟ್ಟ ಯಾವತ್ತೂ ಉತ್ತಮವಾಗಿರುತ್ತದೆ.

ಈ ಕಾರಣದಿಂದ ನಾನು ಬ್ರಾಂಡೆಡ್ ವಸ್ತುಗಳನ್ನು ಇಷ್ಟಪಡುತ್ತೇನೆ. ಬ್ರಾಂಡೆಡ್ ವಸ್ತುಗಳನ್ನು ಧರಿಸುವುದು ಅಥವಾ ಬಳಸುವುದೆಂದರೆ, ನಾವು ಅದರೊಂದಿಗೆ ಗುರುತಿಸಿಕೊಳ್ಳುವುದು ಎಂದರ್ಥ. ನಮಗೆ ಇಷ್ಟವಾದ ಬ್ರಾಂಡ್ ಜತೆಗೆ ಮಾತ್ರ ನಾವು ಗುರುತಿಸಿಕೊಳ್ಳಲು ಬಯಸುತ್ತೇವೆ. ಪ್ರತಿ ಬ್ರಾಂಡೂ ನಿರ್ದಿಷ್ಟ ವೈಶಿಷ್ಟ್ಯ ಮತ್ತು ಮೌಲ್ಯಗಳನ್ನು ಹೊಂದಿರುವುದರಿಂದ, ಅದರೊಂದಿಗೆ ನಮ್ಮ ಆಶಯಗಳನ್ನು ಬೆಸೆಯಲು ಇಷ್ಟಪಡುತ್ತೇವೆ. ಹೀಗಾಗಿ ಯಾವುದಾದರೂ ಬ್ರಾಂಡ್ ಜತೆಗೆ ಹೆಮ್ಮೆಯಿಂದ, ಅಭಿಮಾನದಿಂದ ಗುರುತಿಸಿಕೊಳ್ಳುತ್ತೇವೆ. ಬ್ರಾಂಡ್ ರಹಿತ (Unbranded)ವಾದ ಐದು ಶರ್ಟುಗಳನ್ನು ಖರೀದಿಸುವ ಬದಲು ಒಂದು ಬ್ರಾಂಡೆಡ್ ಶರ್ಟ್ ಹೊಂದುವುದು ವಾಸಿ. ಈ ಮನಸ್ಥಿತಿ ನಾನು ಬ್ರಾಂಡೆಡ್ ವಸ್ತುಗಳನ್ನು ಖರೀದಿಸುವ ಹಿಂದೆ ಕೆಲಸ ಮಾಡುತ್ತದೆ. ಅಮೆಜಾನ್ ಸಂಸ್ಥೆ ಸಂಸ್ಥಾಪಕ ಜೆಫ್ ಬಿಜೋಸ್ ಎಂದೋ ಹೇಳಿದ ಒಂದು ಮಾತು ನನ್ನ ಮನಸ್ಸಿನಲ್ಲಿ ಕೂತುಬಿಟ್ಟಿದೆ – ""Your brand is what people say about you when you're not in the room"

ವಿ.ಎಂ.ಸಂಜೀವ, (ಇಮೇಲ್ ಮೂಲಕ)

● ಭಟ್ರೇ, ಮದುವೆಯಾದಾಗ ನಾನು ಮತ್ತು ನನ್ನ ಪತ್ನಿ ಒಟ್ಟಿಗೆ ಪತ್ರಿಕೆಯನ್ನು ಓದುತ್ತಿದ್ದೆವು. ಈಗ ಒಂದು ವರ್ಷವಾಯಿತು. ಪತ್ರಿಕೆ ಓದುವಾಗ ಬಾ ಅಂದರೂ ಬರುವುದಿಲ್ಲ. 'ನನ್ನ ಕೆಲಸಕ್ಕೆ ಸಹಾಯ ಮಾಡಲು ನೀವು ಬರ್ತೀರಾ? ಇಲ್ಲವಲ್ಲ.. ನನಗೆ ಟೈಮ್ ಇಲ್ಲ' ಎಂದು ನೇರವಾಗಿ ಹೇಳುತ್ತಾಳೆ. ಅವಳಿಗೆ ನನ್ನ ಮೇಲಿನ ಆಕರ್ಷಣೆಯೇನಾದರೂ ಕಮ್ಮಿಯಾಯ್ತಾ ಎಂಬ ಸಂದೇಹ ನನ್ನ ಮನದೊಳಗೆ ಸುಳಿಯುತ್ತಿದೆ. ಏನಂತೀರಾ ಸಾರ್?

–ಸಂಜೀವ್ ಅವರೇ, ಮದುವೆ ಆರಂಭದಲ್ಲಿ ಇದ್ದ ದಿನಗಳನ್ನೇ ಮಾನದಂಡವಾಗಿ ಇಟ್ಟುಕೊಂಡು ಎಲ್ಲವನ್ನೂ ಅಳೆಯಬೇಡಿ. ಆರಂಭದ ಆಕರ್ಷಣೆಗಳೇ ಬೇರೆ. ಆಗ ಪರಸ್ಪರ ಬಿಟ್ಟು ಇರುತ್ತಿರಲಿಲ್ಲ. ಜೀವನವಿಡೀ ಹಾಗೆ ಇರಲು ಸಾಧ್ಯವಿಲ್ಲ. ಸಾಧ್ಯವಿದ್ದರೂ ಪರಿಸ್ಥಿತಿ ಅದಕ್ಕೆ ಆಸ್ಪದ ನೀಡಲಿಕ್ಕಿಲ್ಲ. ದಿನ ಕಳೆದಂತೆ, ಇಬ್ಬರಿಗೂ ಆದ್ಯತೆಗಳು ಬದಲಾಗುತ್ತಾ ಹೋಗುತ್ತವೆ. ಬೆಳಗ್ಗೆ ಒಟ್ಟಿಗೆ ಪತ್ರಿಕೆಯನ್ನು ಓದಲು ಅವಳು ಜತೆಯಾಗುತ್ತಿಲ್ಲ ಎಂದ ಮಾತ್ರಕ್ಕೆ ನಿಮ್ಮ ಮೇಲಿನ ಆಕರ್ಷಣೆ ಕಮ್ಮಿಯಾಯಿತು ಎಂದು ಭಾವಿಸಬೇಕಿಲ್ಲ.

ಬೆಳಗಾಗುತ್ತಿದ್ದಂತೆ ಹೆಂಗಸರಿಗೆ ಅವರದ್ದೇ ಆದ ಕೆಲಸಗಳಿರುತ್ತವೆ. ಮನೆಯನ್ನು ಒಪ್ಪವಾಗಿಡಬೇಕು, ಕಸ ಗುಡಿಸಬೇಕು, ಮನೆ ಮುಂದೆ ನೀರು ಹಾಕಿ, ರಂಗೋಲಿ ಹಾಕಬೇಕು, ಗಂಡನಿಗೆ ಕಾಫಿ ಮಾಡಿಕೊಡಬೇಕು, ನಂತರ ಉಪಾಹಾರ ಸಿದ್ಧಗೊಳಿಸಬೇಕು, ಆಫೀಸಿಗೆ ಹೋಗುವ ಗಂಡನಿಗೆ ಊಟದ ಡಬ್ಬ ಸಿದ್ಧಪಡಿಸಬೇಕು, ತಾನೂ ಕೆಲಸಕ್ಕೆ ಹೋಗುವವವಳಾದರೆ, ಆಫೀಸಿಗೆ ಸಿದ್ಧಳಾಗಬೇಕು... ಹೀಗೆ ಬಿಡುವಿಲ್ಲದ ಹತ್ತಾರು ಸಾಲು ಸಾಲು ಕೆಲಸಗಳಿರುತ್ತವೆ. ಆಗ ಪತ್ರಿಕೆ ಓದುತ್ತಾ ಕುಳಿತುಕೊಂಡರೆ, ಆ ಕೆಲಸಗಳನ್ನು ಮಾಡುವವರು?

ನೀವು ಮನೆಯಲ್ಲಿ ಕೈಗೆ, ಕಾಲಿಗೆ ಆಳುಗಳನ್ನಿಟ್ಟರೆ, ಅಡುಗೆಭಟ್ಟ ಎಲ್ಲ ಸಿದ್ಧಪಡಿಸಿ ಡೈನಿಂಗ್ ಟೇಬಲ್ ಮೇಲೆ ಇಟ್ಟರೆ, ಆಗ ಇಬ್ಬರೂ ಒಂದೇ ಪತ್ರಿಕೆಯನ್ನು ಓದಬಹುದು. ಪ್ರತಿ ಸುದ್ದಿಯನ್ನೂ ವಿಶ್ಲೇಷಿಸಬಹುದು. ಮುದ್ದಣ-ಮನೋರಮೆಯಂತೆ ಸಲ್ಲಾಪ ಹೊಡೆಯಬಹುದು. ಇದ್ಯಾವವನ್ನೂ ಮಾಡದೇ, 'ನನ್ನ ಮೇಲೆ ಆಕರ್ಷಣೆ ಕಮ್ಮಿಯಾಗಿರಬಹುದಾ?' ಎಂದು ಸಂದೇಹಪಡುವುದು ಸರಿಯಲ್ಲ. ಪತ್ನಿಯಿದ್ದಾಳಲ್ಲ, ಅವಳು ಹಸಿ ಜೇಡಿಮಣ್ಣಿದ್ದಂತೆ. ಅವಳಿಗೆ ಪ್ರೀತಿ ಕೊಟ್ಟರೆ, ಯಾವ ರೂಪ, ಆಕಾರವನ್ನಾದರೂ ಕೊಡಬಹುದು. ಒಟ್ಟಿಗೆ ಪತ್ರಿಕೆ ಓದಲು ಬರುವುದಿಲ್ಲ ಎನ್ನುವ ನೀವು, ಅವಳ ಕೆಲಸದಲ್ಲಿ ಒಟ್ಟಿಗೆ ಜತೆಯಾಗಬಹುದಲ್ಲ?